ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

5 ಗ್ರಾಂ ಡ್ರಗ್ಸ್ ಪ್ರಕರಣ • ಪೊಲೀಸ್ ವಶದಲ್ಲಿದ್ದ ಆರೋಪಿ • ಸಿಐಡಿ ತನಿಖೆ ಆರಂಭ

ಆಫ್ರಿಕಾ ಪ್ರಜೆ 'ಕಸ್ಟಡಿ'ಯಲ್ಲಿ ಸಾವು

ಮೃತ ಜೋಯೆಲ್ ಅವರ ಫೋಟೊ ಪ್ರದರ್ಶಿಸಿದ ಆಫ್ರಿಕಾ ಪ್ರಜೆ (ಎಡಚಿತ್ರ) ತಲೆಯಿಂದ ರಕ್ತ ಸೋರುತ್ತಿದ್ದ ಆಫ್ರಿಕಾ ಪ್ರಜೆಯನ್ನು ವಶಕ್ಕೆ ಪಡೆದ ಪೊಲೀಸರು ವಾಹನ ಹತ್ತಿಸಿದರು – ಪ್ರಜಾವಾಣಿ ಚಿತ್ರಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾದಕ ವಸ್ತು ಮಾರಾಟ ಪ್ರಕರಣದಲ್ಲಿ ಪೊಲೀಸರು ವಶಕ್ಕೆ ಪಡೆದಿದ್ದ ಆಫ್ರಿಕಾ ಪ್ರಜೆ ಜೋಯೆಲ್ ಶಿಂದನಿ ಮಲು (27) ಎಂಬುವರು ಅನುಮಾನಾಸ್ಪದ ರೀತಿಯಲ್ಲಿ ಸೋಮವಾರ ಸಾವನ್ನಪ್ಪಿದ್ದು, ಅದನ್ನು ಖಂಡಿಸಿ ಪ್ರತಿಭಟನೆಗೆ ಮುಂದಾಗಿದ್ದ ಆಫ್ರಿಕಾ ಪ್ರಜೆಗಳ ಮೇಲೆ ಪೊಲೀಸರು ಲಾಠಿ ಪ್ರಹಾರ ನಡೆಸಿದರು.

ಕಾಂಗೊ ದೇಶದ ಜೋಯೆಲ್ ಅವರನ್ನು ಭಾನುವಾರ ತಡರಾತ್ರಿ 2.15ರ ಸುಮಾರಿಗೆ ಜೆ.ಸಿ.ನಗರ ಪೊಲೀಸರು ವಶಕ್ಕೆ ಪಡೆದು ವಿಚಾರಣೆಗಾಗಿ ಠಾಣೆಗೆ ಕರೆತಂದಿದ್ದರು. ಸೋಮವಾರ

ಠಾಣೆ ಎದುರು ಪೊಲೀಸರ ಮೇಲೆಯೇ ಕೆಲವರು ಹಲ್ಲೆ ಮಾಡಲು ಯತ್ನಿಸಿದರು. ಹೀಗಾಗಿ, ಲಘು ಲಾಠಿ ಪ್ರಹಾರ ಮಾಡಬೇಕಾಯಿತು

ಸೌಮೆಂದು ಮುಖರ್ಜಿ, ಬೆಂಗಳೂರಿನ ಹೆಚ್ಚುವರಿ ಪೊಲೀಸ್ ಕಮಿಷನರ್

ಬೆಳಿಗ್ಗೆ 5.10ರ ಸುಮಾರಿಗೆ ಅವರಿಗೆ ಎದೆ ನೋವು ಕಾಣಿಸಿತ್ತು. ಕೂಡಲೇ ಅವರನ್ನು ಸಮೀಪದ ಚಿರಾಯು ಆಸ್ಪತ್ರೆಗೆ ಕರೆದೊಯ್ಯಲಾಗಿತ್ತು. ಚಿಕಿತ್ಸೆಗೆ ಸ್ಪಂದಿಸದೇ ಬೆಳಿಗ್ಗೆ 6.45ರ ಸುಮಾರಿಗೆ ಅವರು ಮೃತಪಟ್ಟರು.

ಸಾವಿನ ಸುದ್ದಿ ತಿಳಿಯುತ್ತಿದ್ದಂತೆ ಆಫ್ರಿಕಾದ 30ಕ್ಕೂ ಹೆಚ್ಚು ಪ್ರಜೆಗಳು, ಜೆ.ಸಿ.ನಗರ ಠಾಣೆ ಎದುರು ಸೇರಿದ್ದರು. 'ಜೋಯೆಲ್ ಸಾವಿಗೆ ಪೊಲೀಸರೇ ಕಾರಣ' ಎಂದು ಘೋಷಣೆ ಕೂಗಿ ಪ್ರತಿಭಟನೆಗೆ ಮುಂದಾದರು. ಸ್ಥಳಕ್ಕೆ ಬಂದ ಹಿರಿಯ ಪೊಲೀಸ್ ಅಧಿಕಾರಿಗಳು, 'ಸಾವಿನ ಬಗ್ಗೆ ತನಿಖೆ ನಡೆಯುತ್ತಿದೆ. ಸಹಕರಿಸಿ' ಎಂದಿದ್ದರು. ಅದಕ್ಕೆ ಒಪ್ಪದ ಪ್ರಜೆಗಳು, ಠಾಣೆ ಮುಂಭಾಗದಲ್ಲೇ ಕುಳಿತು ಪ್ರತಿಭಟನೆ ಮುಂದುವರಿಸಿದರು. ಜೋಯೆಲ್ ಫೋಟೊ ಇದ್ದ ಭಿತ್ತಿಪತ್ರಗಳನ್ನು ಪ್ರದರ್ಶಿಸಿದರು. ಆಫ್ರಿಕಾ ಮಹಿಳೆಯರು ಹಾಗೂ ಮಕ್ಕಳು ಸಹ ಇದ್ದರು.

ವಿದ್ಯಾರ್ಥಿ ವೀಸಾ ಅವಧಿ ಮುಕ್ತಾಯ

'ಆರೋಪಿ ಜೋಯೆಲ್, ವಿದ್ಯಾರ್ಥಿ ವೀಸಾದಡಿ ನಗರಕ್ಕೆ ಬಂದಿದ್ದರು. ಅದರ ಅವಧಿ 2015ಕ್ಕೆ, ಪಾಸ್‌ಪೋರ್ಟ್ ಅವಧಿ 2017ಕ್ಕೆ ಕೊನೆಯಾಗಿದೆ' ಎಂದೂ ಪೊಲೀಸರು ಹೇಳಿದರು.

'ಆರೋಪಿ ಸಾವನ್ನಪ್ಪುತ್ತಿದ್ದಂತೆ 'ಪ್ಯಾನ್ ಆಫ್ರಿಕನ್ ಫೆಡರೇಷನ್' ಅಧ್ಯಕ್ಷ ಬಾಸ್ಕೊ ಅವರನ್ನು ಸಂಪರ್ಕಿಸಿ ವಿಷಯ ತಿಳಿಸಲಾಯಿತು. ಅವರೇ ಆರೋಪಿ ಗುರುತಿಸಲು ಸಹಾಯ ಮಾಡಿದರು' ಎಂದೂ ತಿಳಿಸಿದರು.

3ನೇ ಪುಟ ನೋಡಿ

ಕೋವಿಡ್: ನಿರೀಕ್ಷೆಯಷ್ಟು ಲಸಿಕೆ ಪೂರೈಕೆ ಆಗಿಲ್ಲ– ಬಿಬಿಎಂಪಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಜುಲೈ ತಿಂಗಳಿನಲ್ಲಿ ಕೋವಿಡ್ ಲಸಿಕಾ ಅಭಿಯಾನ ನಿರೀಕ್ಷಿತ ಪ್ರಮಾಣದಲ್ಲಿ ನಡೆದಿಲ್ಲ ಎಂಬುದನ್ನು ಮುಖ್ಯ ಆಯುಕ್ತ ಗೌರವ್ ಗುಪ್ತ ಒಪ್ಪಿಕೊಂಡರು.

ಸುದ್ದಿಗಾರರ ಜೊತೆ ಸೋಮವಾರ ಮಾತನಾಡಿದ ಅವರು, 'ಜುಲೈ ತಿಂಗಳಿನಲ್ಲಿ ನಾವು ನಿರೀಕ್ಷೆ ಮಾಡಿದಷ್ಟು ಪ್ರಮಾಣದಲ್ಲಿ ಲಸಿಕೆಗಳು ಪೂರೈಕೆ ಆಗಿಲ್ಲ. ಆದರೆ, ಆಗಸ್ಟ್ ತಿಂಗಳಿನಲ್ಲಾದರೂ ಬೇಡಿಕೆಯಷ್ಟು ಲಸಿಕೆ ಪೂರೈಕೆ ಆಗಬಹುದು ಎಂಬ ವಿಶ್ವಾಸ ಇದೆ. ಸರ್ಕಾರ ಲಸಿಕೆ ಪೂರೈಕೆ ಮಾಡಿದರೆ ನಿತ್ಯ 1.5 ಲಕ್ಷದಷ್ಟು ಮಂದಿಗೆ ಲಸಿಕೆ ನೀಡಲು ಪಾಲಿಕೆ ಸಜ್ಜಾಗಿದೆ' ಎಂದು ತಿಳಿಸಿದರು.

'ನಗರದಲ್ಲಿ ಲಸಿಕೆ ಪಡೆಯಲು ಅರ್ಹತೆ ಪಡೆದಿರುವ ಶೇ 67ರಷ್ಟು ಮಂದಿ ಈಗಾಗಲೇ ಲಸಿಕೆಯ ಒಂದು

ಡೋಸ್ ಪಡೆದಿದ್ದಾರೆ. ಶೇ 17ರಷ್ಟು ಮಂದಿ ಎರಡೂ ಡೋಸ್‌ಗಳನ್ನು ಪಡೆದಿದ್ದಾರೆ. ನಾವು ಈಗ ಲಸಿಕೆಯ ಮೊದಲ ಡೋಸ್ ಹಾಗೂ ಎರಡನೇ ಡೋಸ್‌ಗಳನ್ನೂ ನೀಡಬೇಕಾಗಿದೆ. ಬೇಡಿಕೆ ಇರುವಷ್ಟು ಪ್ರಮಾಣದಲ್ಲಿ ಲಸಿಕೆ ಪುರೈಕೆ ಆದರೆ ಲಸಿಕಾ ಕಾರ್ಯಕ್ರಮವನ್ನು ಇನ್ನಷ್ಟು ಪರಿಣಾಮಕಾರಿಯಾಗಿ ನಡೆಸಬಹುದು' ಎಂದು ಅವರು ಅಭಿಪ್ರಾಯಪಟ್ಟರು.

ತಿಂಗಳಲ್ಲಿ 45 ಲಕ್ಷಕ್ಕೂ ಅಧಿಕ ಮಂದಿಗೆ ಲಸಿಕೆ ನೀಡುವಷ್ಟು ಸೌಕರ್ಯವನ್ನು ಹೊಂದಿದ್ದರೂ ಬಿಬಿಎಂಪಿ ವ್ಯಾಪ್ತಿಯಲ್ಲಿ ಜುಲೈ ತಿಂಗಳಿನಲ್ಲಿ 19,25,739 ಡೋಸ್ ಲಸಿಕೆಗಳನ್ನು ನೀಡಲಾಗಿದೆ.

13 ಸಾವಿರ ಲಸಿಕಾ ಕೇಂದ್ರಗಳನ್ನು ಹೊಂದಿರುವ ರಾಜ್ಯವು ದಿನದಲ್ಲಿ 10 ಲಕ್ಷ ಡೋಸ್ ಲಸಿಕೆ ನೀಡುವಷ್ಟು ಸಾಮರ್ಥ್ಯ ಹೊಂದಿದೆ. ತಿಂಗಳಿಗೆ 1.5 ಕೋಟಿ ಲಸಿಕೆ ಪೂರೈಸುವಂತೆ ರಾಜ್ಯ ಸರ್ಕಾರವು ಕೇಂದ್ರವನ್ನು ಕೋರಿತ್ತು. ಆದರೂ ರಾಜ್ಯ ಸರ್ಕಾರಕ್ಕೆ ಜುಲೈ ತಿಂಗಳ ಕೋಟಾದಲ್ಲಿ 42 ಲಕ್ಷ ಡೋಸ್‌ಗಳಷ್ಟು ಲಸಿಕೆಗಳನ್ನು ಮಾತ್ರ ಹಂಚಿಕೆಯಾಗಿತ್ತು. ಅದರಲ್ಲಿ, 40 ಲಕ್ಷ ಡೋಸ್‌ಗಳು ಮಾತ್ರ ಪೂರೈಕೆ ಆಗಿದ್ದವು. 15 ಲಕ್ಷ ಡೋಸ್‌ಗಳಷ್ಟು ಲಸಿಕೆಗಳನ್ನು ರಾಜ್ಯದ ಖಾಸಗಿ ಆಸ್ಪತ್ರೆಗಳಿಗೆ ಹಂಚಿಕೆ ಮಾಡಲಾಗಿತ್ತು. ಆದರೆ, 6.5 ಲಕ್ಷ ಡೋಸ್‌ಗಳಿಗೆ ಮಾತ್ರ ಖಾಸಗಿ ಆಸ್ಪತ್ರೆಗಳು ಹಣ ಪಾವತಿಸಿದ್ದವು. ಆದರೆ, ಪೂರೈಕೆ ಆಗಿದ್ದು 4.51 ಲಕ್ಷ ಡೋಸ್‌ಗಳು ಮಾತ್ರ.

ಮದ್ಯ ಮಾರಾಟದಲ್ಲಿ ಶೇ 9ರಷ್ಟು ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜುಲೈ ತಿಂಗಳ ಅವಧಿಯಲ್ಲಿ ರಾಜ್ಯದಲ್ಲಿ 53.41 ಲಕ್ಷ ಪೆಟ್ಟಿಗೆಗಳಷ್ಟು ದೇಶೀಯವಾಗಿ ತಯಾರಾದ ಮದ್ಯ (ಐಎಂಎಲ್) ಮಾರಾಟವಾಗಿದೆ. ಜೂನ್‌ಗೆ ಹೋಲಿಸಿದರೆ ಮದ್ಯ ಮಾರಾಟದಲ್ಲಿ ಶೇಕಡ 9.16ರಷ್ಟು ಹೆಚ್ಚಳವಾಗಿದೆ.

ಏಪ್ರಿಲ್ ತಿಂಗಳಿನಲ್ಲಿ 55.99 ಲಕ್ಷ ಪೆಟ್ಟಿಗೆಯಷ್ಟು ಐಎಂಎಲ್ ಮಾರಾಟವಾಗಿತ್ತು. ಮೇ ತಿಂಗಳಿನಲ್ಲಿ ಮದ್ಯ ಮಾರಾಟ ಕುಸಿದಿತ್ತು. ಆಗ 43.67 ಲಕ್ಷ ಪೆಟ್ಟಿಗೆಯಷ್ಟು ಮಾತ್ರ ಮಾರಾಟವಾಗಿತ್ತು. ಜೂನ್‌ನಲ್ಲಿ 54.53 ಲಕ್ಷ ಪೆಟ್ಟಿಗೆಗಳಷ್ಟು ಐಎಂಎಲ್ ಬಿಕರಿಯಾಗಿತ್ತು.

ಕಳೆದ ಆರ್ಥಿಕ ವರ್ಷಕ್ಕೆ ಹೋಲಿಸಿದರೆ ಏಪ್ರಿಲ್‌ನಲ್ಲಿ ಐಎಂಎಲ್ ಮಾರಾಟ ಸಮನಾಗಿತ್ತು. ಮೇ ತಿಂಗಳಲ್ಲಿ ಶೇ 1.78ರಷ್ಟು ಕುಸಿದರೆ, ಜೂನ್‌ನಲ್ಲಿ ಶೇ 3.14ರಷ್ಟು ಕುಸಿದಿತ್ತು. ಜುಲೈ ತಿಂಗಳಲ್ಲಿ ಶೇ 9.16ರಷ್ಟು ಏರಿಕೆಯಾಗಿರುವುದು ಅಬಕಾರಿ ಇಲಾಖೆಯ ಅಂಕಿಅಂಶಗಳಿಂದ ಗೊತ್ತಾಗಿದೆ.

ರಾತ್ರಿ ಕರ್ಫ್ಯೂ: ಕಟ್ಟುನಿಟ್ಟಿನ ಜಾರಿಗೆ ನಿರ್ಧಾರ

ಕೋವಿಡ್ ನಿಯಮ ಪಾಲನೆ • ಪಾಲಿಕೆ– ಪೊಲೀಸ್ ಇಲಾಖೆ ಸಮನ್ವಯ ಸಭೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಕೋವಿಡ್ ಪ್ರಕರಣಗಳು ನಿಧಾನಗತಿಯಲ್ಲಿ ಹೆಚ್ಚಳ ಕಾಣುತ್ತಿರುವಂತೆಯೇ ರಾತ್ರಿ ವೇಳೆ ಕೋವಿಡ್ ಕರ್ಫ್ಯೂವನ್ನು ಕಟ್ಟುನಿಟ್ಟಾಗಿ ಜಾರಿಗೆ ತರಲು ಬಿಬಿಎಂಪಿ ಹಾಗೂ ಪೊಲೀಸ್ ಇಲಾಖೆ ಸಿದ್ಧತೆ ನಡೆಸಿವೆ.

ನಗರದಲ್ಲಿ ಕೋವಿಡ್ ನಿಯಂತ್ರಣ ನಿಯಮಗಳ ಅನುಷ್ಠಾನ ಸಂಬಂಧ ಸೋಮವಾರ ನಡೆದ ಬಿಬಿಎಂಪಿ ಮತ್ತು ಪೊಲೀಸ್ ಇಲಾಖೆಯ ಸಮನ್ವಯ ಸಮಿತಿ ಸಭೆಯಲ್ಲಿ ಈ ಕುರಿತು ನಿರ್ಧಾರ ಕೈಗೊಳ್ಳಲಾಗಿದೆ.

ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ, 'ನಗರದಲ್ಲಿ ಕೋವಿಡ್ ನಿಯಂತ್ರಿಸಲು ಕಠಿಣ ಕ್ರಮಗಳನ್ನು ಕೈಗೊಳ್ಳಬೇಕಾಗಿದೆ. ರಾತ್ರಿ 10 ಗಂಟೆಯಿಂದ ಮುಂಜಾನೆ 5 ಗಂಟೆಯವರೆಗೆ ಕರ್ಫ್ಯೂ ಈಗಲೂ ಜಾರಿಯಲ್ಲಿದೆ. ಆದರೆ, ಅದು ಕಟ್ಟುನಿಟ್ಟಾಗಿ ಅನುಷ್ಠಾನ ಆಗುತ್ತಿಲ್ಲ. ಅದನ್ನು ಸಮರ್ಪಕವಾಗಿ ಜಾರಿಗೊಳಿಸಲು ಪೊಲೀಸ್ ಇಲಾಖೆಯ ಸಹಕಾರ ಅಗತ್ಯ' ಎಂದು ಸಭೆಯಲ್ಲಿ ತಿಳಿಸಿದರು.

ಬಿಬಿಎಂಪಿ ಆಡಳಿತಾಧಿಕಾರಿ ರಾಕೇಶ್ ಸಿಂಗ್, 'ನಗರದಲ್ಲಿ ಕೋವಿಡ್ ಹರಡುವಿಕೆಯನ್ನು ಪರಿಣಾಮಕಾರಿಯಾಗಿ ನಿಯಂತ್ರಿಸಲು ಪಾಲಿಕೆ ಹಾಗೂ ಪೊಲೀಸ್ ಇಲಾಖೆಗಳು ಸಮನ್ವಯದಿಂದ ಕೆಲಸ ಮಾಡಬೇಕು. ಕೋವಿಡ್ ನಿಯಂತ್ರಣ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸುವಂತೆ ಜನರಲ್ಲಿ ಜಾಗೃತಿ ಮೂಡಿಸಬೇಕು. ಆ ಬಳಿಕವೂ ನಿಯಮ ಪಾಲಿಸದಿದ್ದಲ್ಲಿ ದಂಡ ವಿಧಿಸಬೇಕು. ಅಗತ್ಯ ಬಿದ್ದರೆ, ಪ್ರಕರಣಗಳನ್ನು ದಾಖಲಿಸುವುದಕ್ಕೂ ಹಿಂದೇಟು ಹಾಕಬಾರದು' ಎಂದು ಸೂಚನೆ ನೀಡಿದರು.

'ಕೇರಳ, ಮಹಾರಾಷ್ಟ್ರದಿಂದ ಸಾಕಷ್ಟು ಪ್ರಯಾಣಿಕರು ನಗರಕ್ಕೆ ಬರುತ್ತಿದ್ದಾರೆ. ಈ ಎರಡೂ ರಾಜ್ಯಗಳಿಂದ ಬರುವವರು 72 ಗಂಟೆಯೊಳಗೆ ಮಾಡಿಸಿರುವ ಆರ್‌ಟಿಪಿಸಿಆರ್ ನೆಗೆಟಿವ್ ವರದಿ ತರುವುದು ಕಡ್ಡಾಯ. ಒಂದು ವೇಳೆ ಅವರು ಆರ್‌ಟಿಪಿಸಿಆರ್ ಪರೀಕ್ಷಾ ವರದಿ ಹೊಂದಿಲ್ಲದಿದ್ದರೆ ಪಾಲಿಕೆಯ ಆರೋಗ್ಯ ತಂಡವು ಅವರನ್ನು ಕೋವಿಡ್ ಪರೀಕ್ಷೆಗೆ ಒಳಪಡಿಸಲಿದೆ. ಪರೀಕ್ಷಾ ವರದಿ ಬರುವವರೆಗೆ ಅವರನ್ನು ಸಾಂಸ್ಥಿಕ ಕ್ವಾರಂಟೈನ್‌ನಲ್ಲಿ ಇರಿಸಲಾಗುವುದು. ಬಸ್, ರೈಲು ಅಥವಾ ವಿಮಾನಗಳ ಮೂಲಕ ಬರುವವರನ್ನು ಕಡ್ಡಾಯವಾಗಿ ಪರಿಶೀಲನೆಗೆ ಒಳಪಡಿಸಬೇಕು' ಎಂದು ಗೌರವ್ ಗುಪ್ತ ಅಧಿಕಾರಿಗಳಿಗೆ ಸೂಚನೆ ನೀಡಿದರು.

'ಗಡಿ ತಪಾಸಣೆ ಠಾಣೆಗಳಲ್ಲೂ ಪರಿಶೀಲನೆ'

'ಕೇರಳ ಹಾಗೂ ಮಹಾರಾಷ್ಟ್ರ ರಾಜ್ಯಗಳಿಂದ ನಗರಕ್ಕೆ ರಸ್ತೆಗಳ ಮೂಲಕ ಬರುವವರನ್ನು ಗಡಿ ತಪಾಸಣಾ ಠಾಣೆಗಳ ಬಳಿ ಪರಿಶೀಲನೆಗೆ ಒಳಪಡಿಸಲಾಗುತ್ತಿದೆ. ಈ ರಾಜ್ಯಗಳ ಪ್ರಯಾಣಿಕರು 72 ಗಂಟೆಗಳ ಒಳಗೆ ಮಾಡಿಸಿರುವ ಆರ್‌ಟಿಪಿಸಿಆರ್ ಪರೀಕ್ಷಾ ವರದಿಯನ್ನು ಪರಿಶೀಲಿಸಲು ತಪಾಸಣಾ ತಂಡಗಳನ್ನು ನಿಯೋಜನೆ ಮಾಡಲಾಗಿದೆ. ತಪಾಸಣಾ ಕಾರ್ಯವನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲಿದ್ದೇವೆ' ಎಂದು ಬೆಂಗಳೂರು ನಗರ ಜಿಲ್ಲೆಯ ಜಿಲ್ಲಾಧಿಕಾರಿ ಜೆ.ಮಂಜುನಾಥ್ ತಿಳಿಸಿದರು.

'ಆರ್‌ಟಿಪಿಸಿಆರ್ ವರದಿ ಇಲ್ಲದ ಪ್ರಯಾಣಿಕರನ್ನು ಕೋವಿಡ್ ಪರೀಕ್ಷೆ ನಡೆಸಲು ಹಾಗೂ ವರದಿ ಬರುವವರೆಗೆ ಸಾಂಸ್ಥಿಕ ಕ್ವಾರಂಟೈನ್‌ಗೆ ಒಳಪಡಿಸಲು ಕ್ರಮ ಕೈಗೊಂಡಿದ್ದೇವೆ. ಈ ಸಂಬಂಧ ಗ್ರಾಮಾಂತರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯವರ ಜೊತೆಗೂ ಚರ್ಚಿಸಿದ್ದೇವೆ' ಎಂದರು.

3ನೇ ಪುಟ ನೋಡಿ

ನಿವೇಶನ ಮಾರಾಟ ಹೆಸರಿನಲ್ಲಿ ವಂಚನೆ: 1800 ಮಂದಿ ದೂರು

'ಬೃಂದಾವನ ಪ್ರಾಪರ್ಟಿಸ್' ನಿರ್ದೇಶಕ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿವೇಶನ ಮಾರಾಟ ಹೆಸರಿನಲ್ಲಿ ಕೋಟ್ಯಂತರ ರೂಪಾಯಿ ವಂಚಿಸಿ ಪರಾರಿಯಾಗಿದ್ದ 'ಬೃಂದಾವನ ಪ್ರಾಪರ್ಟಿಸ್' ಕಂಪನಿ ನಿರ್ದೇಶಕ ದಿನೇಶ್ ಎಸ್. ಗೌಡ (38) ಅವರನ್ನು ರಾಜಾಜಿನಗರ ಪೊಲೀಸರು ಬಂಧಿಸಿದ್ದಾರೆ.

'ರಾಜಾಜಿನಗರದ 3ನೇ ಹಂತದಲ್ಲಿರುವ ಕಚೇರಿಗೆ ಬೀಗ ಹಾಕಿ ಪರಾರಿಯಾಗಿದ್ದ ಆರೋಪಿ ದಿನೇಶ್, ತಮ್ಮೂರಾದ ಅರಕಲಗೂಡಿಗೆ ಹೋಗಿ ತಲೆಮರೆಸಿಕೊಂಡಿದ್ದರು. ಈ ಬಗ್ಗೆ ಮಾಹಿತಿ ಬರುತ್ತಿದ್ದಂತೆ ಪೊಲೀಸರ ವಿಶೇಷ ತಂಡ ಅರಕಲಗೂಡಿಗೆ ಹೋಗಿ ಆರೋಪಿಯನ್ನು ಬಂಧಿಸಿ ನಗರಕ್ಕೆ ಕರೆತಂದಿದೆ' ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.



ದಿನೇಶ್ ಗೌಡ

'ಬಿಬಿಎ ಪದವೀಧರರಾದ ದಿನೇಶ್, ಪರಿಚಯಸ್ಥರನ್ನು ಸೇರಿಸಿಕೊಂಡು ಬೃಂದಾವನ ಪ್ರಾಪರ್ಟಿಸ್ ಕಂಪನಿ ಸ್ಥಾಪಿಸಿದ್ದರು. ತಾವರೆಕೆರೆ, ಹೆಸರಘಟ್ಟ, ನೆಲಮಂಗಲ ಹಾಗೂ ಇತರೆಡೆ ಕಂಪನಿಯ ಜಾಗವಿರುವುದಾಗಿ ಹೇಳುತ್ತಿದ್ದರು. ಅದೇ ಜಾಗದಲ್ಲಿ ನಿವೇಶಗಳನ್ನು ಅಭಿವೃದ್ಧಿಪಡಿಸಿ ಕಡಿಮೆ ದರಕ್ಕೆ ಮಾರಾಟ ಮಾಡುವುದಾಗಿ ಜಾಹೀರಾತು ನೀಡುತ್ತಿದ್ದರು.'

'ಕೂಲಿ ಕಾರ್ಮಿಕರು, ಆಟೊ–ಟ್ಯಾಕ್ಸಿ ಚಾಲಕರು, ಖಾಸಗಿ ಕಂಪನಿ ಉದ್ಯೋಗಿಗಳು ಹಾಗೂ ಇತರರು ಕಂಪನಿಗೆ ಹಣ ತುಂಬಿ ನಿವೇಶನ ಕಾಯ್ದಿರಿಸಿದ್ದರು. ನಿಗದಿತ ಸಮಯಕ್ಕೆ ನಿವೇಶನ ನೀಡದೇ ಆರೋಪಿ ಸತಾಯಿಸಲಾರಂಭಿಸಿದ್ದರು. ಇದನ್ನು ಸಾರ್ವಜನಿಕರು ಪ್ರಶ್ನಿಸುತ್ತಿದ್ದಂತೆ ಕಚೇರಿಗೆ ಬೀಗ ಹಾಕಿಕೊಂಡು ಪರಾರಿಯಾಗಿದ್ದರು' ಎಂದೂ ಅಧಿಕಾರಿ ತಿಳಿಸಿದರು.

ಪೊಲೀಸರಿಂದಲೂ ಹಣ ಹೂಡಿಕೆ: 'ಬೃಂದಾವನ ಪ್ರಾಪರ್ಟಿಸ್ ಕಂಪನಿಯಲ್ಲಿ ಕೆಲ ಪೊಲೀಸರು, ನಿವೇಶನ ಖರೀದಿಗಾಗಿ ಹಣ ಹೂಡಿಕೆ ಮಾಡಿದ್ದರು. ಅಂಥ ಪೊಲೀಸರು ಸಹ ದೂರು ನೀಡಿದ್ದಾರೆ' ಎಂದು ಮೂಲಗಳು ಹೇಳಿವೆ.

'₹ 50 ಕೋಟಿ ವಂಚನೆ'

'ನಿವೇಶನ ಖರೀದಿಗಾಗಿ ಹಣ ಪಾವತಿಸಿದ್ದ 1,800 ಮಂದಿ ಠಾಣೆಗೆ ದೂರು ನೀಡಿದ್ದಾರೆ. ₹ 50 ಕೋಟಿ ವಂಚನೆ ಆಗಿರುವ ದಾಖಲೆಗಳು ಸಿಕ್ಕಿವೆ. ಈ ಮೊತ್ತ ಹೆಚ್ಚಾಗುವ ಸಾಧ್ಯತೆ ಇದೆ' ಎಂದು ಪೊಲೀಸ್ ಅಧಿಕಾರಿ ಹೇಳಿದರು.

'ನಿವೇಶನಕ್ಕಾಗಿ ತುಂಬಿದ ಹಣವನ್ನು ವಾಪಸು ನೀಡುವಂತೆ ಕೆಲ ಗ್ರಾಹಕರು ಒತ್ತಾಯಿಸಿದ್ದರು. ಅಂಥವರಿಗೆ ಆರೋಪಿ ಚೆಕ್ ನೀಡಿದ್ದರು. ಬ್ಯಾಂಕ್‌ನಲ್ಲಿ ಪರಿಶೀಲಿಸಿದಾಗ, ಇಲ್ಲದ ಖಾತೆ ಹೆಸರಿನಲ್ಲಿ ಚೆಕ್ ನೀಡಿರುವುದು ಗೊತ್ತಾಗಿದೆ. ಈ ಬಗ್ಗೆಯೂ ಗ್ರಾಹಕರು ಮಾಹಿತಿ ನೀಡಿದ್ದಾರೆ' ಎಂದೂ ತಿಳಿಸಿದರು.

ಮರ ಆಧಾರಿತ ಕೃಷಿ ಉತ್ತೇಜನಕ್ಕೆ ಈಶ ಪ್ರತಿಷ್ಠಾನದ ಯೋಜನೆ

ಗ್ರಾಮ ಸಂಪರ್ಕ ಅಭಿಯಾನ ಪ್ರಾರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಾವೇರಿ ಕೂಗು' ಅಭಿಯಾನದ ಪ್ರಗತಿಯ ನಡುವೆಯೇ, ಜಗ್ಗಿ ವಾಸುದೇವ್ ನೇತೃತ್ವದ ಈಶ ಪ್ರತಿಷ್ಠಾನವು ಗ್ರಾಮ ಸಂಪರ್ಕ ಅಭಿಯಾನವನ್ನು ಸೋಮವಾರದಿಂದ ಪ್ರಾರಂಭಿಸಿದೆ. ಮರ ಆಧಾರಿತ ಕೃಷಿಯನ್ನು ಉತ್ತೇಜಿಸುವ ನಿಟ್ಟಿನಲ್ಲಿ ಈ ಅಭಿಯಾನ ಹಮ್ಮಿಕೊಳ್ಳಲಾಗಿದೆ.


ಸದ್ಗುರು ಜಗ್ಗಿ ವಾಸುದೇವ್

'ರಾಜ್ಯದ ಕಾವೇರಿ ಜಲಾನಯನ ಪ್ರದೇಶದುದ್ದಕ್ಕೂ ಬರುವ ಒಂಬತ್ತು ಜಿಲ್ಲೆಗಳಲ್ಲಿನ 1,785 ಗ್ರಾಮ ಪಂಚಾಯಿತಿಗಳಲ್ಲಿ 24 ಲಕ್ಷ ರೈತರನ್ನು ತಲುಪುವ ಗುರಿಯನ್ನು ಹೊಂದಲಾಗಿದೆ' ಎಂದು ಸದ್ಗುರು ಜಗ್ಗಿ ವಾಸುದೇವ್ ಸೋಮವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'2020ರಲ್ಲಿ ಪ್ರಾರಂಭಿಸಲಾಗಿರುವ 'ಕಾವೇರಿ ಕೂಗು' ಅಭಿಯಾನದ ಅಡಿ ಕರ್ನಾಟಕ ಮತ್ತು ತಮಿಳುನಾಡು ಸೇರಿದಂತೆ ಜಲಾನಯನ ಪ್ರದೇಶದಲ್ಲಿ ಅಂದಾಜು 1.10 ಕೋಟಿ ಸಸಿಗಳನ್ನು ನೆಡುವಲ್ಲಿ ಯಶಸ್ವಿಯಾಗಿದ್ದೇವೆ. ಕಾವೇರಿ ಕೊಳ್ಳದ 28 ಜಿಲ್ಲೆಗಳ 189 ತಾಲ್ಲೂಕುಗಳಲ್ಲಿ 33 ಸಾವಿರ ರೈತರು ಅಭಿಯಾನಕ್ಕೆ ಕೈಜೋಡಿಸಿದ್ದಾರೆ' ಎಂದರು.

'ಇದರ ಮುಂದುವರಿದ ಭಾಗವಾಗಿ 'ಮರ ಆಧಾರಿತ ಕೃಷಿ' ಅಭಿಯಾನದಡಿ ಐದುಪಟ್ಟು ಅಂದರೆ 5 ಕೋಟಿ ಸಸಿಗಳನ್ನು ನೆಡುವ ಗುರಿ ಇದೆ. ರಾಜ್ಯದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ಅರಣ್ಯ, ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆಗಳ ಸಹಯೋಗದಲ್ಲಿ ಇದನ್ನು ಹಮ್ಮಿಕೊಳ್ಳಲಾಗುತ್ತಿದೆ ಎಂದು ಮಾಹಿತಿ ನೀಡಿದರು.

'ಮರ ಮಿತ್ರರ' ನೇಮಕ: ಇದಕ್ಕಾಗಿ 890 'ಮರ ಮಿತ್ರ'ರನ್ನು ನೇಮಿಸಲಾಗಿದ್ದು, ಪಂಚಾಯಿತಿ ಮಟ್ಟದಲ್ಲಿ ಇವರು ರೈತರನ್ನು ಉತ್ತೇಜಿಸಲಿದ್ದಾರೆ. ಈಗಾಗಲೇ ವಿವಿಧ ಪಂಚಾಯಿತಿಗಳಲ್ಲಿ ಮರ ಆಧಾರಿತ ಕೃಷಿ ಅಭಿಯಾನಕ್ಕೆ ಸಂಬಂಧಿಸಿದ 1,800 ಕಾರ್ಯಕ್ರಮಗಳನ್ನು ನಡೆಸಲಾಗಿದೆ. ಉತ್ತಮ ಸ್ಪಂದನೆಯೂ ದೊರಕಿದೆ. ಈ ಅಭಿಯಾನದಿಂದ ರೈತರ ಆದಾಯ ಶೇ 300ರಿಂದ ಶೇ 800ರಷ್ಟು ಹೆಚ್ಚಾಗಲಿದೆ ಎಂದು ಜಗ್ಗಿ ವಾಸುದೇವ್ ಹೇಳಿದರು.

'ಸ್ಟೇಟ್ ಆಫ್ ದಿ ಆರ್ಟ್' ಮೊಬೈಲ್ ಆ್ಯಪ್‌ವೊಂದನ್ನು ಅಭಿವೃದ್ಧಿಪಡಿಸಿದ್ದು, ಇದರಲ್ಲಿ ಹೆಸರು ನೋಂದಾಯಿಸಿಕೊಳ್ಳುವ ರೈತರ ಮನೆ ಬಾಗಿಲಿಗೇ 'ಮರ ಮಿತ್ರ'ರು ಸಸಿಗಳನ್ನು ತಲುಪಿಸಲಿದ್ದಾರೆ ಎಂದೂ ಅವರು ಮಾಹಿತಿ ನೀಡಿದರು.

'ಸರ್ಕಾರಿ ಜಾಗದಲ್ಲಿ ಒಂದೇ ಒಂದು ಸಸಿಯನ್ನು ನಾವು ನೆಟ್ಟಿಲ್ಲ. ರೈತರ ಖಾಸಗಿ ಭೂಮಿಯಲ್ಲಿ, ಅವರ ಒಪ್ಪಿಗೆ ಪಡೆದೇ ಸಸಿಗಳನ್ನು ನೆಟ್ಟಿದ್ದೇವೆ. ಅಲ್ಲದೆ, ಅವರಿಗೆ ಯಾವುದೇ ಬಲವಂತ ಮಾಡಿ ಈ ಅಭಿಯಾನದಲ್ಲಿ ತೊಡಗಿಸಿಕೊಳ್ಳುತ್ತಿಲ್ಲ' ಎಂದು ಅವರು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಹಿರಿಯ ವಿಜ್ಞಾನಿ ಎ.ಎಸ್. ಕಿರಣ್ ಕುಮಾರ್ ಇದ್ದರು.

'ಯೋಜನೆಗಿಂತ ನದಿ ಸಂರಕ್ಷಣೆಗೆ ಆದ್ಯತೆ'

'ಕಾವೇರಿ ನದಿ ಸಂರಕ್ಷಣೆಗೆ ನಮ್ಮ ಮೊದಲ ಆದ್ಯತೆ. ಮೇಕೆದಾಟು ಯೋಜನೆಯಾಗಲಿ, ಮತ್ತೊಂದು ಯೋಜನೆಯಾಗಲಿ ಅದು ಆಯಾ ಸರ್ಕಾರಗಳು ಅಥವಾ ಜನಪ್ರತಿನಿಧಿಗಳ ವಿವೇಚನೆಗೆ ಬಿಟ್ಟದ್ದು' ಎಂದು ಜಗ್ಗಿ ವಾಸುದೇವ್ ಹೇಳಿದರು.

ಮೇಕೆದಾಟು ಯೋಜನೆಗೆ ಸಂಬಂಧಿಸಿದಂತೆ ತಮ್ಮ ನಿಲುವೇನು ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, 'ಯೋಜನೆಗಳು ಮತ್ತು ಅವುಗಳ ಅನುಷ್ಠಾನ ವಿಚಾರದಲ್ಲಿ ಆಯಾ ರಾಜ್ಯ ಸರ್ಕಾರಗಳು ಸೂಕ್ತ ತೀರ್ಮಾನ ಕೈಗೊಳ್ಳುತ್ತವೆ. ನಮ್ಮ ಗುರಿ ಏನಿದ್ದರೂ ಕಾವೇರಿ ನದಿ ಮತ್ತು ಅದರ ವ್ಯಾಪ್ತಿಗೆ ಬರುವ ಜಲಾನಯನ ಪ್ರದೇಶದ ಮಣ್ಣಿನ ಸಂರಕ್ಷಣೆ ಹಾಗೂ ರೈತರ ಅಭಿವೃದ್ಧಿಯಷ್ಟೇ' ಎಂದರು.

'ಒಂದು ತಂಬಿಗೆಯಲ್ಲಿ ನೀರಿದ್ದರೆ ಮಾತ್ರ ಅದನ್ನು ಯಾರು ಕುಡಿಯಬೇಕು ಎಂಬ ಪ್ರಶ್ನೆ ಉದ್ಭವಿಸುತ್ತದೆ. ಆದರೆ, ತಂಬಿಗೆಯಲ್ಲಿ ನೀರೇ ಇಲ್ಲದಿದ್ದರೆ ಎಲ್ಲರಿಗೂ ಕಷ್ಟವೇ. ಕಾವೇರಿ ನದಿಯನ್ನು ಸಂಪದ್ಭರಿತವಾಗಿಸುವ ಕಡೆಗೆ ಮಾತ್ರ ನಮ್ಮ ಗಮನವಿದೆ' ಎಂದು ಪುನರುಚ್ಚರಿಸಿದರು.

ಬಿಜೆಪಿ ಎಸ್‌ಸಿ ಮೋರ್ಚಾಗೆ ಪ್ರಭಾರಿಗಳ ನೇಮಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಕ್ಷಿಣದ ಮೂರು ರಾಜ್ಯಗಳ ಬಿಜೆಪಿ ಎಸ್‌ಸಿ ಮೋರ್ಚಾದ ಪ್ರಭಾರಿಗಳನ್ನಾಗಿ ಕರ್ನಾಟಕದ ಮೂವರನ್ನು ನೇಮಕ ಮಾಡಲಾಗಿದೆ.

ಕೋಲಾರ ಸಂಸದ ಮುನಿಸ್ವಾಮಿ ಅವರನ್ನು ಕೇರಳಕ್ಕೆ, ವೆಂಕಟೇಶ್ ಮೌರ್ಯ ಅವರನ್ನು ತಮಿಳುನಾಡು ಮತ್ತು ಜಯಕುಮಾರ್ ಕಾಂಗೆ ಅವರನ್ನು ತೆಲಂಗಾಣ ರಾಜ್ಯದ ಎಸ್‌ಸಿ ಮೋರ್ಚಾಗಳ ಪ್ರಭಾರಿಯನ್ನಾಗಿ ನೇಮಿಸಲಾಗಿದೆ ಎಂದು ರಾಜ್ಯ ಎಸ್‌ಸಿ ಮೋರ್ಚಾ ರಾಜ್ಯ ಅಧ್ಯಕ್ಷ ಛಲವಾದಿ ನಾರಾಯಣಸ್ವಾಮಿ ಅವರು ತಿಳಿಸಿದ್ದಾರೆ.

ಬಸವನಪುರ ಕೆರೆಗೆ ಬಾಗಿನ ಅರ್ಪಣೆ

ಕೆ.ಆರ್.ಪುರ: ಪುನರುಜ್ಜೀವನಗೊಂಡು ಐದು ವರ್ಷಗಳ ಬಳಿಕ ಬಸವನಪುರ ಕೆರೆ ಮೈತುಂಬಿ ಹರಿಯುತ್ತಿರುವುದು ಖುಷಿ ಇಮ್ಮಡಿಗೊಳಿಸಿದೆ ಎಂದು ಶಾಸಕ ಬೈರತಿ ಬಸವರಾಜ ಹೇಳಿದರು.

ಕೆ.ಆರ್.ಪುರ ಸಮೀಪದ ಬಸವನಪುರದ ಕೆರೆ ಭರ್ತಿಯಾಗಿ ಕೋಡಿ ಹರಿದಿರುವುದರಿಂದ ಸ್ಥಳೀಯ ಕೆರೆ ಅಭಿಮಾನಿಗಳು ಪಾಲಿಕೆ ಮಾಜಿ ಸದಸ್ಯ ಬಿ.ಎನ್. ಜಯಪ್ರಕಾಶ್ ನೇತೃತ್ವದಲ್ಲಿ ಹಮ್ಮಿಕೊಂಡಿದ್ದ ಕೆರೆಗೆ ಬಾಗಿನ ಅರ್ಪಿಸುವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಜನರ ಬೇಡಿಕೆ ಅನುಗುಣವಾಗಿ ₹3.5 ಕೋಟಿ ವೆಚ್ಚದಲ್ಲಿ ಕೆರೆ ಅಭಿವೃದ್ಧಿಪಡಿಸಲಾಗಿದೆ. 18 ಎಕರೆ ವಿಸ್ತೀರ್ಣದ ವಿಶಾಲವಾದ ಕೆರೆ ಇದಾಗಿದ್ದು ಕೆರೆ ಸ್ವಚ್ಛ ನೀರಿನಿಂದ ಕಂಗೊಳಿಸುತ್ತಿರುವುದು ಸಂತಸ ತಂದಿದೆ. ಮುಂದಿನ ಪೀಳಿಗೆಗೆ ನೀರು ದೊರೆಯಲು ಪ್ರತಿಯೊಬ್ಬರೂ ಪಣತೊಡಬೇಕಿದೆ ಎಂದು ಅವರು ಹೇಳಿದರು.

ಬೈರತಿ ಬಸವರಾಜ ಹಾಗೂ ಬಿ.ಎನ್.ಜಯಪ್ರಕಾಶ್ ಬಸವನಪುರ ಕೆರೆಗೆ ಬಾಗಿನ ಅರ್ಪಿಸಿದರು. ಕೆರೆ ಅಭಿಮಾನಿ ಬಾಲಾಜಿ ಪುರುಷೋತ್ತಮ, ಮುಖಂಡರಾದ ಉದಯಕುಮಾರ್, ರಾಮಕೃಷ್ಣ, ಶ್ರೀರಾಮುಲು, ಶಿವಕುಮಾರ್, ಕೇಬಲ್ ರಾಜು, ಸುಂದರ್ ಇದ್ದರು.

ಹಿರಿಯರ ಬಗ್ಗೆ ಎಂದೂ ಗೌರವ ತೋರದ ಸಿದ್ದರಾಮಯ್ಯ: ಬಿಜೆಪಿ ವಾಗ್ದಾಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಆಗಿದ್ದಾಗ ಅವರದೇ ಸಂಪುಟದ ಹಿರಿಯ ಸಚಿವರ ಬಗ್ಗೆ ಪರಮ ಅಸಡ್ಡೆ ಮತ್ತು ಅಗೌರವ ಹೊಂದಿದ್ದರು. ಅಲ್ಲದೆ, ಅವರನ್ನು ಸಚಿವ ಸ್ಥಾನದಿಂದ ಕಿತ್ತು ಹಾಕಿ ಅಪಮಾನಗೊಳಿಸಿದ್ದರು. ಈಗ ತುಂಬಾ ಸಂಭಾವಿತರಂತೆ ಮಾತನಾಡುತ್ತಿದ್ದಾರೆ' ಎಂದು ಬಿಜೆಪಿ ತಿರುಗೇಟು ನೀಡಿದೆ.

ಬಿಜೆಪಿ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಅಶ್ವತ್ಥನಾರಾಯಣ ಅವರು ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 'ನಿಮ್ಮ ಅವಧಿಯಲ್ಲಿ ಶಾಮನೂರು ಶಿವಶಂಕರಪ್ಪ, ವಿ.ಶ್ರೀನಿವಾಸ್ ಪ್ರಸಾದ್, ಅಂಬರೀಷ್ ಅವರನ್ನು ಅವಮಾನಗೊಳಿಸಿ ಸಂಪುಟದಿಂದ ಕಿತ್ತು ಹಾಕಿದ್ದಿರಿ. ಇದಕ್ಕೇನು ಕಾರಣ, ಉತ್ತರ ಕೊಟ್ಟಿದ್ದೀರಾ' ಎಂದು ಪ್ರಶ್ನಿಸಿದರು.

'ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷವನ್ನು ಕಟ್ಟಿ ಬೆಳೆಸಿದ ಪ್ರಮುಖರಲ್ಲಿ ಒಬ್ಬರಾದ ಹಿರಿಯ ನಾಯಕ ಜನಾರ್ದನ ಪೂಜಾರಿ ಅವರನ್ನು ಮೂಲೆಗುಂಪು ಮಾಡಿ ಅತ್ಯಂತ ಕೆಟ್ಟದಾಗಿ ನಡೆಸಿಕೊಂಡಿರಿ. ಮೈಸೂರು ಭಾಗದ ಹಿರಿಯ ನಾಯಕ ಶ್ರೀನಿವಾಸ್ ಪ್ರಸಾದ್ ಅವರನ್ನು ನಡೆಸಿಕೊಂಡ ರೀತಿಯನ್ನು ನೆನಪಿಸಿಕೊಳ್ಳಿ. ಮುಖ್ಯಮಂತ್ರಿ ಸ್ಥಾನಕ್ಕೆ ಅಡ್ಡಿ ಆಗುತ್ತಾರೆ ಎಂಬ ಕಾರಣಕ್ಕೆ ಜಿ.ಪರಮೇಶ್ವರ ಅವರು ಚುನಾವಣೆಯಲ್ಲಿ ಗೆಲ್ಲದಂತೆ ನೋಡಿಕೊಂಡಿದ್ದು ನೀವೇ ಅಲ್ಲವೇ' ಎಂದು ಅವರು ಪ್ರಶ್ನಿಸಿದರು.

'ರಾಜ್ಯ ಸರ್ಕಾರವು ಉತ್ತಮವಾಗಿ ಕೆಲಸ ಮಾಡಲಿದೆ. ವಿರೋಧ ಪಕ್ಷಗಳು ಕಾಲೆಳೆಯುವ ಪ್ರವೃತ್ತಿಯನ್ನು ಕೈಬಿಟ್ಟು ಜವಾಬ್ದಾರಿಯುತವಾಗಿ ಕೆಲಸ ಮಾಡಬೇಕು. ಸುರ್ಜೇವಾಲ, ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್ ಅವರು ಆಧಾರರಹಿತ ಮತ್ತು ಬೇಜವಾಬ್ದಾರಿ ಹೇಳಿಕೆ ಕೊಡುವುದು ಬಿಡಬೇಕು' ಎಂದು ತಿಳಿಸಿದರು.

'ಕಾಂಗ್ರೆಸ್ ಪಕ್ಷವು ಸರ್ದಾರ್ ಪಟೇಲ್, ಬಿ.ಆರ್. ಅಂಬೇಡ್ಕರ್, ಪಿ.ವಿ. ನರಸಿಂಹರಾವ್, ಸೀತಾರಾಮ್ ಕೇಸರಿ ಅವರನ್ನು ಹೇಗೆ ನಡೆಸಿಕೊಂಡಿದೆ ಎಂಬುದನ್ನು ಸಿದ್ದರಾಮಯ್ಯ ನೆನಪಿಸಿಕೊಳ್ಳಬೇಕು' ಎಂದು ಬಿಜೆಪಿ ಮುಖ್ಯ ವಕ್ತಾರ ಗಣೇಶ್ ಕಾರ್ಣಿಕ್ ಟೀಕಿಸಿದರು.

ಸಂಕ್ಷಿಪ್ತ ಸುದ್ದಿ

ಆರ್ಥಿಕ ನೆರವು: ಅರ್ಜಿ ಆಹ್ವಾನ

ನಗರದ ಮಹಿಳಾ ದಕ್ಷತಾ ಸಮಿತಿಯು ಬಡ ವಿದ್ಯಾರ್ಥಿನಿಯರಿಗೆ ಆರ್ಥಿಕ ನೆರವು ನೀಡಲು ಅರ್ಜಿ ಆಹ್ವಾನಿಸಿದೆ.

9ನೇ ತರಗತಿಯಿಂದ ಪದವಿ, ಡಿಪ್ಲೊಮಾ ಹಾಗೂ ವೃತ್ತಿಪರ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವವರು ಅರ್ಜಿ ಸಲ್ಲಿಸಬಹುದು.

ವಿಳಾಸ: ಮಹಿಳಾ ದಕ್ಷತಾ ಸಮಿತಿ, ಎಚ್‌ಬಿಸಿಎಸ್ ಬಡಾವಣೆ, 1ನೇ ಬ್ಲಾಕ್, ವಿದ್ಯಾರಣ್ಯಪುರ.

ಸಂಪರ್ಕ ಸಂಖ್ಯೆ:080–2364 1814

ಅಂಗವಿಕಲರಿಗೆ ಉಚಿತ ಶಿಕ್ಷಣ

ಸಮರ್ಥನಂ ಅಂಗವಿಕಲರ ಸಂಸ್ಥೆಯ ಸಮರ್ಥನಂ ಕನ್ನಡ ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲೆಯಲ್ಲಿ ಅಂಗವಿಕಲರು ಹಾಗೂ ಆರ್ಥಿಕವಾಗಿ ಹಿಂದುಳಿದವರಿಗೆ ವಸತಿ ಸಹಿತ ಶಿಕ್ಷಣವನ್ನು ಉಚಿತವಾಗಿ ನೀಡಲಾಗುವುದು.

ಈ ಶೈಕ್ಷಣಿಕ ಸಾಲಿಗೆ 1ರಿಂದ 10ನೇ ತರಗತಿಗಳಿಗೆ ದಾಖಲಾತಿಗಳು ಆರಂಭಗೊಂಡಿದ್ದು, ಆಸಕ್ತರು ಸಂಸ್ಥೆಯನ್ನು ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.

ಸಂಪರ್ಕ ಸಂಖ್ಯೆ: 94808 12122 (ಪ್ರಾಥಮಿಕ), 94498 64776 (ಪ್ರೌಢಶಾಲೆ).

ಪಿಇಎಸ್: ನವೋದ್ಯಮಗಳ ಆರಂಭಕ್ಕೆ ಬೆಂಬಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪಿಇಎಸ್ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿ ಹೊಸ ವಿಚಾರ ಮತ್ತು ಕೌಶಲಗಳೊಂದಿಗೆ ಮುಂದೆ ಬಂದರೆ, ಅದಕ್ಕೆ ಉತ್ಪನ್ನದ ರೂಪ ನೀಡುವ ಮೂಲಕ ನವೋದ್ಯಮ ಆರಂಭಿಸಲು ಎಲ್ಲ ರೀತಿಯ ಬೆಂಬಲ ನೀಡಲಾಗುವುದು' ಎಂದು ಪಿಇಎಸ್ ವಿಶ್ವವಿದ್ಯಾಲಯದ ವೆಂಚರ್ ಲ್ಯಾಬ್ಸ್‌ನ ಸುರೇಶ್ ನರಸಿಂಹ ತಿಳಿಸಿದರು.

ವಿಶ್ವವಿದ್ಯಾಲಯದ ಔಷಧೀಯ ವಿಜ್ಞಾನಗಳ ವಿಭಾಗದ ವತಿಯಿಂದ ಆಯೋಜಿಸಿದ್ದ 'ನಿಮ್ಮ ಸ್ವಂತ ನವೋದ್ಯಮಗಳನ್ನು ನಿರ್ಮಿಸುವುದು ಹೇಗೆ ಮತ್ತು ಯಾಕೆ?' ಕುರಿತು ವೆಬಿನಾರ್‌ನಲ್ಲಿ ಅವರು ಮಾತನಾಡಿದರು.

'ಫಾರ್ಮಾ ಸೇರಿದಂತೆ ವಿವಿಧ ಕ್ಷೇತ್ರದ ನವೋದ್ಯಮಗಳು ವಿಶ್ವವಿದ್ಯಾಲಯಗಳ ಕ್ಯಾಂಪಸ್ ಒಳಗೆ ಶುರುವಾಗಿ ಇಂದು ಜಾಗತಿಕವಾಗಿ ಬೆಳೆದಿವೆ. ಉದ್ಯಮಶೀಲತೆಯು ಆವಿಷ್ಕಾರಕ್ಕೆ ಹಲವಾರು ಆಯ್ಕೆ ಮತ್ತು ಅವಕಾಶಗಳನ್ನು ನೀಡುತ್ತದೆ. ಅಲ್ಲಿ ನಿಮಗೆ ಹೆಚ್ಚು ಸ್ವಾತಂತ್ರ್ಯ ಇರುತ್ತದೆ' ಎಂದು ತಿಳಿಸಿದರು.

'ಹೊಸ ವಿಚಾರಗಳಿಗೆ ಇಂದು ಉದ್ಯಮಗಳು ವೇದಿಕೆ ಕಲ್ಪಿಸುತ್ತಿವೆ. ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿಗಳ ಕೌಶಲಗಳಿಗೆ ಅಗತ್ಯವಿರುವ ಸಂಪನ್ಮೂಲಗಳು, ಆರ್ಥಿಕ ಸಹಾಯ ಸೇರಿದಂತೆ ಎಲ್ಲ ರೀತಿಯ ಬೆಂಬಲ ನೀಡಲಾಗುವುದು. ಇದರಿಂದ ಉತ್ತಮ ನವೋದ್ಯಮಿಗಳಾಗಿ ಯಶಸ್ವಿ ಕಾಣಬಹುದು' ಎಂದು ಹೇಳಿದರು.

ಜಿ.ಎನ್.ಉಪಾಧ್ಯಗೆ 'ನರಹಳ್ಳಿ ಪ್ರಶಸ್ತಿ'

ಬೆಂಗಳೂರು: ನರಹಳ್ಳಿ ಪ್ರತಿಷ್ಠಾನ ನೀಡುವ 2021ನೇ ಸಾಲಿನ 'ನರಹಳ್ಳಿ ಪ್ರಶಸ್ತಿ'ಗೆ ವಿಮರ್ಶಕ ಹಾಗೂ ಸಂಶೋಧಕ ಜಿ.ಎನ್.ಉಪಾಧ್ಯ ಅವರನ್ನು ಆಯ್ಕೆ ಮಾಡಲಾಗಿದೆ.

ಉಡುಪಿಯವರಾದ ಉಪಾಧ್ಯ ಅವರು ಮುಂಬೈ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ವಿಭಾಗದ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಪ್ರಶಸ್ತಿಯು ₹15 ಸಾವಿರ ನಗದು ಹಾಗೂ ಫಲಕ ಒಳಗೊಂಡಿವೆ ಎಂದು ಪ್ರಕಟಣೆ ತಿಳಿಸಿದೆ.

ರಾಜಕೀಯ ಪ್ರವೇಶ ಇಲ್ಲ: ವಿಜೇತಾ ಅನಂತಕುಮಾರ್

ಬೆಂಗಳೂರು: 'ಯಾವುದೇ ವ್ಯಕ್ತಿ ರಾಜಕೀಯ ನಾಯಕನಾಗಬೇಕಾದರೆ ಮೊದಲು ಪಕ್ಷಕ್ಕಾಗಿ ಕೆಲಸ ಮಾಡಬೇಕು ಮತ್ತು ಕಾರ್ಯಕರ್ತನಾಗಿ ಕೆಲಸ ಮಾಡಬೇಕು. ರಾಜಕೀಯ ಯಾನದ ಆರಂಭ ಈ ರೀತಿಯೇ ಆಗಬೇಕು' ಎಂದು ವಿಜೇತಾ ಅನಂತಕುಮಾರ್ ಹೇಳಿದ್ದಾರೆ.

ರಾಜ್ಯದಲ್ಲಿ ಜೆಡಿಎಸ್ ಶಕ್ತಿಶಾಲಿಯಾಗಿದೆ ಎಂದು ಟ್ವೀಟ್ ಮಾಡಿ ರಾಜ್ಯದ ಗಮನ ಸೆಳೆದಿದ್ದರು. ಇದು ನಾನಾ ರೀತಿಯ ವ್ಯಾಖ್ಯಾನಗಳಿಗೆ ಕಾರಣವಾಗಿತ್ತು. ಇದಕ್ಕೆ ಅವರು ಸಮಜಾಯಿಷಿ ನೀಡಿದ್ದಾರೆ.

'ಈಗಲೇ ರಾಜಕೀಯ ಪ್ರವೇಶ ಮಾಡುತ್ತೀರಾ ಎಂದು ಕೆಲವರು ಪ್ರಶ್ನಿಸಿದ್ದರು. ನನ್ನ ಪ್ರಕಾರ ದಿಢೀರ್ ಆಗಿ ರಾಜಕೀಯ ಪ್ರವೇಶ ಮತ್ತು ನಾಯಕರಾಗಲು ಸಾಧ್ಯವಿಲ್ಲ. ಪಕ್ಷ ಮತ್ತು ಕಾರ್ಯಕರ್ತರೊಂದಿಗೆ ಬೆಳೆದು, ಅವರ ಬೆಂಬಲದೊಂದಿಗೆ ಮತ್ತು ಅಲ್ಲಿ ಪಡೆದ ಬೋಧನೆಗಳೇ ನಾಯಕರನ್ನಾಗಿ ಬೆಳೆಸಬಲ್ಲದು' ಎಂದಿರುವ ಅವರು ತಕ್ಷಣದ ರಾಜಕೀಯ ಪ್ರವೇಶ ನಿರಾಕರಿಸಿದ್ದಾರೆ.

'ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಯಾರೂ ಶತ್ರುಗಳಲ್ಲ. ಪರಸ್ಪರ ಗೌರವ ನೀಡುವುದೇ ಈ ವ್ಯವಸ್ಥೆಯ ಮೂಲ ತತ್ವ ಎಂಬುದನ್ನು ನನ್ನ ಅಪ್ಪ ಕಲಿಸಿದ್ದರು. ಈ ನೆಲೆಯಲ್ಲಿ ನಾನು ಬೇರೆಯವರ ಬಗ್ಗೆ ತೋರಿಸಿರುವ ಗೌರವವನ್ನು ಯಾವುದೇ ರಾಜಕೀಯ ಪಕ್ಷಕ್ಕೆ ಸೇರುತ್ತೇನೆ ಎಂದು ತಪ್ಪಾಗಿ ಭಾವಿಸಬಾರದು. ಸುದೀರ್ಘ ಪಯಣ ಮುಂದಿದೆ. ದೇಶಕ್ಕಾಗಿ ಸೇವೆ ಮಾಡಲು ಸಾಕಷ್ಟು ವಿಷಯಗಳನ್ನು ಕಲಿಯಬೇಕಾಗಿದೆ' ಎಂದು ತಿಳಿಸಿದ್ದಾರೆ.

'ನನ್ನ ತಂದೆಯವರು 35 ವರ್ಷಗಳ ಅವಧಿಯಲ್ಲಿ ಲಕ್ಷಾಂತರ ಕಾರ್ಯಕರ್ತರ ಜತೆ ಸೇರಿ ಪಕ್ಷವನ್ನು ಒಂದೊಂದು ಇಟ್ಟಿಗೆಯನ್ನು ಜೋಡಿಸಿದಂತೆ ಕಟ್ಟಿ ಬೆಳೆಸಿದರು. ಅಮ್ಮ ಬಿಡುವಿಲ್ಲದೇ ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಹಸಿವು, ಪೌಷ್ಟಿಕತೆ, ಪರಿಸರ ಬಗ್ಗೆ ಕೆಲಸ ಮಾಡುತ್ತಲೇ ಪಕ್ಷದ ಬಗ್ಗೆಯೂ ಬದ್ಧತೆ ಮತ್ತು ಸಮಗ್ರತೆಯ ಭಾವನೆ ಹೊಂದಿದ್ದಾರೆ' ಎಂದೂ ವಿಜೇತಾ ಹೇಳಿದ್ದಾರೆ.

ವಿದ್ಯುತ್ ವ್ಯತ್ಯಯ ನಾಳೆಯಿಂದ

ಬೆಂಗಳೂರು: ನಗರದ ವಿವಿಧ ಪ್ರದೇಶಗಳಲ್ಲಿ ಇದೇ 4ರಿಂದ 13ರವರೆಗೆ ಬೆಳಿಗ್ಗೆ 10ರಿಂದ ಸಂಜೆ 6ರ ತನಕ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಹೇಳಿದೆ.

ಬನಶಂಕರಿ, ಶ್ರೀನಗರ, ಬ್ಯಾಂಕ್ ಕಾಲೊನಿ, ಗಿರಿ ನಗರ, ಸ್ಟರ್ಲಿಂಗ್ ಅಪಾರ್ಟ್‌ಮೆಂಟ್, ಹೊಸ ಟಿಂಬರ್ ಯಾರ್ಡ್ ಬಡಾವಣೆ, ಹನುಮಂತ ನಗರ, ಮುನೇಶ್ವರ ಬ್ಲಾಕ್, ಬನಶಂಕರಿ ಎರಡನೇ ಹಂತ, ವಿದ್ಯಾಪೀಠ ವೃತ್ತ, ಸೀತಾ ವೃತ್ತ, ನಾಗೇಂದ್ರ ಬ್ಲಾಕ್, ಬಸವನಗುಡಿ ರಸ್ತೆ, ಪ್ರಮೋದ್ ಬಡಾವಣೆ, ಪಿಇಎಸ್ ಎಂಜಿನಿಯರಿಂಗ್ ಕಾಲೇಜು, ಕತ್ರಿಗುಪ್ಪೆ, ಆವಲಹಳ್ಳಿ, ವೀರಭದ್ರ ನಗರ, ತ್ಯಾಗರಾಜನಗರ, ಬಸವನಗುಡಿ.

ಜಯನಗರ, ತಿಲಕ್ ನಗರ, ಬಿಟಿಎಂ ಬಡಾವಣೆ, ಐಎಎಸ್ ಕಾಲೊನಿ, ಸೆಂಟ್ರಲ್ ಸಿಲ್ಕ್ ಬೋರ್ಡ್, ಜೆ.ಪಿ. ನಗರ, ಕೆಇಬಿ ಬಡಾವಣೆ, ಹುಳಿಮಾವು, ಬಿ.ಜಿ. ರಸ್ತೆ, ವಿಜಯ ಬ್ಯಾಂಕ್ ಕಾಲೊನಿ, ಸುಬ್ರಮಣ್ಯ ಆರ್ಕೇಡ್, ಜಯದೇವ ಆಸ್ಪತ್ರೆ, ಮಂತ್ರಿ ಗಾರ್ಡನ್, ದಿವ್ಯಶ್ರೀ ಟವರ್ಸ್, ಐಬಿಎಂ ಮಡಿವಾಳ, ಮಾರುತಿ ನಗರ, ಬಿಸ್ಮಿಲ್ಲಾ ನಗರ, ವಕೀಲ್ ಸ್ಕ್ವೇರ್, ಶೋಭಾ ಡೆವಲಪರ್ಸ್, ಗುರುಪ್ಪನ ಪಾಳ್ಯ, ಜೈ ಭೀಮಾನಗರ, ಮಹದೇಶ್ವರ ನಗರ, ಅರಕೆರೆ, ತಾವರೆಕೆರೆ, ಮದಿನಾ ನಗರ, ಖೋಡೇಸ್ ಗ್ಲಾಸ್ ಫ್ಯಾಕ್ಟರಿ.

ಕೋಣನಕುಂಟೆ ಅಡ್ಡರಸ್ತೆ, ತಲಘಟ್ಟಪುರ, ದೊಡ್ಡಕಲ್ಲಸಂದ್ರ, ಶ್ರೀನಿಧಿ ಬಡಾವಣೆ, ಚುಂಚನಘಟ್ಟ, ಕೋಡಿಚಿಕ್ಕನಹಳ್ಳಿ, ಆರ್‌ಬಿಐ ಬಡಾವಣೆ, ಗೌರವ ನಗರ, ಪಾಂಡುರಂಗ ನಗರ, ಪುಟ್ಟೇನಹಳ್ಳಿ, ಜೆ.ಪಿ. ನಗರ, ಶ್ರೇಯಸ್ ಕಾಲೊನಿ, ಕೊತ್ತನೂರು, ನಟರಾಜ ಬಡಾವಣೆ, ಈಶ್ವರಿ ಬಡಾವಣೆ, ಆಡುಗೋಡಿ, ಬಾಷ್, ಫೋರಂ ಮತ್ತು ಸುತ್ತಮುತ್ತಲಿನ ಪ್ರದೇಶಗಳು.

ಡಿಜಿಟಲ್ ಮಾಧ್ಯಮ ಕೋರ್ಸ್ ಪ್ರವೇಶ

ಬೆಂಗಳೂರು: ಆಲ್ಮಾ ಮೀಡಿಯಾ ಸ್ಕೂಲ್ ಸಂಸ್ಥೆಯು ಡಿಜಿಟಲ್ ಮಾಧ್ಯಮಕ್ಕೆ ಸಂಬಂಧಿಸಿದಂತೆ 'ಪ್ರಾಕ್ಟಿಕಲ್ ಜರ್ನಲಿಸಂ ಆ್ಯಂಡ್ ಮೀಡಿಯಾ ಮ್ಯಾನೇಜ್‌ಮೆಂಟ್' ಪಿಜಿ ಡಿಪ್ಲೊಮಾ ಕೋರ್ಸ್ ಪ್ರಾರಂಭಿಸಿದ್ದು, ಪ್ರವೇಶ ಪ್ರಕ್ರಿಯೆ ಆರಂಭವಾಗಿದೆ.

ಯಾವುದೇ ವಿಷಯದಲ್ಲಿ ಪದವಿ ಅಥವಾ ಪಿಯು ಮುಗಿಸಿರುವ ವಿದ್ಯಾರ್ಥಿಗಳು ಕೋರ್ಸ್ ಆಯ್ಕೆ ಮಾಡಿಕೊಳ್ಳಬಹುದು. ಇದು 1 ವರ್ಷದ ಕೋರ್ಸ್ ಆಗಿದ್ದು, ಶೇ 70ರಷ್ಟು ಪ್ರಾಯೋಗಿಕ ಕಲಿಕೆ ಇರುತ್ತದೆ ಎಂದು ಸಂಸ್ಥೆಯ ಮುಖ್ಯಸ್ಥ, ಪತ್ರಕರ್ತ ಗೌರೀಶ್ ಅಕ್ಕಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗೆ, almamediaschool365@gmail.com ಇ–ಮೇಲ್ ಅಥವಾ 76187 46667 ಸಂಖ್ಯೆಗೆ ಕರೆ ಮಾಡಬಹುದು.

www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮ ಕುಶಲ
ಕೊರೊನಾ ಅಲೆಗಿಂತ ಬಹಳ ವೇಗವಾಗಿ ಹರಡಿದ್ದು ಉಪದೇಶಗಳ ಅಲೆ! ಆರೋಗ್ಯದ ವಿಷಯವಾಗಿ ಇನ್ನೊಬ್ಬರಿಗೆ ಉಪದೇಶವನ್ನು ಕೊಡುವ ಮೊದಲು ಸಾವಿರ ಸಲ ಯೋಚಿಸಬೇಕು.

'ಮಹಿಳಾ ಪ್ರಾತಿನಿಧ್ಯ: ಸಾಂಕೇತಿಕ ಆಗದಿರಲಿ' 9

ಆಳ-ಅಗಲ ಸನಿಹದಲ್ಲಿದೆಯೇ ಮತ್ತೊಂದು ಅಲೆ? 'ಗಡುವಿನೊಳಗೆ ಗಡಿ ವಿವಾದ ಪರಿಹಾರ' 8

ಸೆನ್ಸೆಕ್ಸ್	ನಿಫ್ಟಿ	₹/$
52,950 ▲	15,885 ▲	74.34 ▲

ಭಾರತ ನಾರಿಶಕ್ತಿಯ ಚಾರಿತ್ರಿಕ ಸಾಧನೆ

ಹಾಕಿ TOKYO 2020

ಭಾರತ 1
ಆಸ್ಟ್ರೇಲಿಯಾ 0

ತಂಡದ ಸಾಧನೆ		
ವರ್ಷ	ಸ್ಥಳ	ಸ್ಥಾನ
1980	ಮಾಸ್ಕೊ	4
2016	ರಿಯೊ ಡಿ ಜನೈರೊ	12
2021	ಟೋಕಿಯೊ 2020	ಸೆಮಿಫೈನಲ್*

*ಸೆಮಿಯಲ್ಲಿ ಆಡಲಿದೆ

ಟೋಕಿಯೊ (ಪಿಟಿಐ): ಭಾರತ ಮಹಿಳಾ ಹಾಕಿ ತಂಡವು ಒಲಿಂಪಿಕ್ಸ್‌ನಲ್ಲಿ ಇದೇ ಮೊದಲ ಬಾರಿ ಸೆಮಿಫೈನಲ್ ಪ್ರವೇಶಿಸಿ ಚಾರಿತ್ರಿಕ ಸಾಧನೆ ಮಾಡಿತು. ರಾಣಿ ರಾಂಪಾಲ್ ನಾಯಕತ್ವದ ಬಳಗವು ಎಂಟರ ಘಟ್ಟದಲ್ಲಿ ಬಲಿಷ್ಠ ಆಸ್ಟ್ರೇಲಿಯಾ ಎದುರು ಜಯಭೇರಿ ಬಾರಿಸಿತು.

ಟೋಕಿಯೊದಲ್ಲಿ ದಾಖಲೆಗಳ ಅಲೆ...

ಮಿಜೈನ್ ಲೊಪೆಜ್‌ಗೆ ನಾಲ್ಕನೇ ಚಿನ್ನ | ಸ್ಪರ್ಧೆ: **ಗ್ರೀಕೊ ರೋಮನ್** ಕುಸ್ತಿ | ವಿಭಾಗ: **130 ಕೆಜಿ, ಸೂಪರ್ ಹೆವಿವೇಟ್** | ದೇಶ: **ಕ್ಯೂಬಾ** | ಸಾಧನೆ: **ಸತತ ನಾಲ್ಕನೇ ಒಲಿಂಪಿಕ್ಸ್‌ನಲ್ಲಿ ಚಿನ್ನ ಜಯಿಸಿದರು.**

ಜೇಡ್ ಕ್ಯಾರಿಗೆ ಚಿನ್ನ
ದೇಶ: **ಅಮೆರಿಕ** | ಸ್ಪರ್ಧೆ: **ಜಿಮ್ನಾಸ್ಟಿಕ್ಸ್ ಬ್ಯಾಲೆನ್ಸ್ ಭೀಮ್**
ಪಾಯಿಂಟ್: 14.366
ಬೆಳ್ಳಿ: **ವನೆಸಾ ಫೆರಾರಿ** (ಇಟಲಿ; 14.200)
ಕಂಚು: **ಮೇ ಮುರಾಕಮಿ** (ಜಪಾನ್; 14.166)

ಲೀ ವೆನ್ ವೆನ್ ಒಲಿಂಪಿಕ್ ದಾಖಲೆ, **ಮಹಿಳೆಯರ ವೇಟ್‌ಲಿಫ್ಟಿಂಗ್**
ದೇಶ: **ಚೀನಾ** | ಎತ್ತಿದ ಒಟ್ಟು ತೂಕ: 320ಕೆಜಿ
ಬೆಳ್ಳಿ: **ಎಮಿಲಿ ಕ್ಯಾಂಪ್‌ಬೆಲ್** (ಬ್ರಿಟನ್ 283 ಕೆಜಿ)
| ಕಂಚು: **ಸಾರಾ ರೊಬೆಲ್ಸ್** (ಅಮೆರಿಕ; 282 ಕೆಜಿ)

ಅಂತಿಮ ಕಸರತ್ತು; ಬೊಮ್ಮಾಯಿ ಸಂಪುಟಕ್ಕೆ ಬುಧವಾರ ಹೊಸಬರು ಸೇರುವ ಸಾಧ್ಯತೆ

ಸಂಪುಟ ಸಂಕಟಕ್ಕೆ ಸು'ಸೂತ್ರ'?

• ಸಿದ್ದಯ್ಯ ಹಿರೇಮಠ

ನವದೆಹಲಿ: ಸಚಿವ ಸಂಪುಟ ರಚನೆಗಾಗಿ ಕಳೆದ ಶುಕ್ರವಾರದಿಂದ ಆರಂಭವಾಗಿರುವ 'ಕಸರತ್ತು' ಸೋಮವಾರ ಅಂತಿಮ ಘಟ್ಟ ತಲುಪಿದೆ. ರಚನೆ ಪ್ರಕ್ರಿಯೆ ಸಾಂಗವಾಗಿ ನಡೆಯಬೇಕೆಂಬ ಕಾರಣಕ್ಕೆ ಬಿಜೆಪಿ ವರಿಷ್ಠರು 'ಸೂತ್ರ'ವೊಂದನ್ನು ರೂಪಿಸಿದ್ದಾರೆ.

ಸಂಪುಟ ರಚನೆಗೆ ಒಪ್ಪಿಗೆ ಪಡೆಯಲು ಭಾನುವಾರ ರಾತ್ರಿ ದಿಢೀರ್ ಇಲ್ಲಿಗೆ ಧಾವಿಸಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರೊಂದಿಗೆ ತಡರಾತ್ರಿ ವರೆಗೂ ಚರ್ಚೆಯಲ್ಲಿ ತೊಡಗಿದ್ದರು.

ಸೋಮವಾರ ಬೆಳಿಗ್ಗೆಯಿಂದ ಕೆಲವು ಮುಖಂಡರನ್ನು ಭೇಟಿ ಮಾಡಿ ಈ ಸಂಬಂಧ ಮಾತುಕತೆ ನಡೆಸಿದ ಬಳಿಕ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರೊಂದಿಗೆ ರಾತ್ರಿ ಎರಡು ಗಂಟೆಗಳ ಕಾಲ ಸುದೀರ್ಘ ಚರ್ಚೆ ನಡೆಸಿದರು. ಮಂಗಳವಾರ ಸಂಜೆಯೊಳಗೆ ವರಿಷ್ಠರಿಂದ ಹಸಿರು ನಿಶಾನೆ ದೊರೆಯುವ ಸಾಧ್ಯತೆ ಇದ್ದು, ಬುಧವಾರ ಪ್ರಮಾಣ ವಚನ ಸಮಾರಂಭ ನಡೆಯಲಿದೆ.

ಏನದು ಸೂತ್ರ?: ಬಿ.ಎಸ್. ಯಡಿಯೂರಪ್ಪ ಅವರ ಸಂಪುಟದಲ್ಲಿದ್ದ ಕೆಲವು ಹಿರಿಯರನ್ನು ಕೈಬಿಟ್ಟು ಯುವಕರಿಗೆ ಅವಕಾಶ ನೀಡುವುದು ವರಿಷ್ಠರು ಸಿದ್ಧಪಡಿಸಿರುವ ಸೂತ್ರದ ಪ್ರಮುಖ ಅಂಶ.

ಸಂಪುಟದಿಂದ ಹೊರಗುಳಿಯಲಿರುವ ಹಿರಿಯರು ಹಾಗೂ ಅವಕಾಶ ದೊರೆಯದ ಕೆಲವು ಆಕಾಂಕ್ಷಿಗಳಲ್ಲಿ ಉಂಟಾಗಬಹುದಾದ 'ಸಂಭವನೀಯ' ಅಸಮಾಧಾನ ತಣಿಸುವುದಕ್ಕೆಂದೇ 8ರಿಂದ 10 ಸ್ಥಾನಗಳನ್ನು ಖಾಲಿ ಇರಿಸಿ, ಮೊದಲ ಹಂತದ ರಚನೆಯಲ್ಲಿ 21ರಿಂದ 24 ಸ್ಥಾನಗಳನ್ನು ಭರ್ತಿ ಮಾಡುವುದೂ ಈ ಸೂತ್ರದ ಮತ್ತೊಂದು ಅಂಶ.

ಯಡಿಯೂರಪ್ಪ ಸಂಪುಟದಲ್ಲಿದ್ದ ಕೆಲವು ಪ್ರಮುಖರನ್ನು ಬೊಮ್ಮಾಯಿ ಅವರ ಸಂಪುಟದಲ್ಲಿ ಮುಂದುವರಿಸುವ ಮೂಲಕ ಸಮತೋಲನ ಕಾಯ್ದುಕೊಳ್ಳುವ ನಿಟ್ಟಿನಲ್ಲಿಯೂ ಚರ್ಚೆ ನಡೆಸಲಾಗಿದೆ.

ಇದರೊಂದಿಗೆ ಪ್ರಾದೇಶಿಕತೆ, ಜಾತಿ, ಮತ್ತು ಪಕ್ಷ ನಿಷ್ಠೆಯನ್ನು ಹೊಂದಿರುವ ಯುವಪಡೆಗೆ ಒತ್ತು ನೀಡುವುದೂ ವರಿಷ್ಠರು ಸಿದ್ಧಪಡಿಸಿರುವ 'ಸೂತ್ರ'ದ ಮತ್ತೊಂದು ಪ್ರಮುಖ ಆಶಯ ಎಂದು ಪಕ್ಷದ ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

4ನೇ ಪುಟ ನೋಡಿ

ಮುಂದುವರಿಯುವ ಸಂಭವನೀಯರು

ಗೋವಿಂದ ಕಾರಜೋಳ, ಬಿ. ಶ್ರೀರಾಮುಲು, ಸಿ.ಎನ್. ಅಶ್ವತ್ಥ ನಾರಾಯಣ, ಆರ್.ಅಶೋಕ, ಜೆ.ಸಿ.ಮಾಧುಸ್ವಾಮಿ, ಉಮೇಶ ಕತ್ತಿ

ಸೇರ್ಪಡೆಗೊಳ್ಳಲಿರುವ ಸಂಭವನೀಯರು

ಎಸ್.ಎ. ರಾಮದಾಸ್, ಅಭಯ ಪಾಟೀಲ್, ಸುನಿಲ್‌ಕುಮಾರ್, ಪೂರ್ಣಿಮಾ ಶ್ರೀನಿವಾಸ್, ದತ್ತಾತ್ರೇಯ ಪಾಟೀಲ ರೇವೂರ, ರಾಜುಗೌಡ/ಹಾಲಪ್ಪ ಆಚಾರ್, ನೆಹರೂ ಓಲೇಕಾರ್/ ಬಿ.ಹರ್ಷವರ್ಧನ್, ಮುನಿರತ್ನ/ಮಹೇಶ ಕುಮಠಳ್ಳಿ, ಅರವಿಂದ ಬೆಲ್ಲದ/ ಬಸನಗೌಡ ಪಾಟೀಲ ಯತ್ನಾಳ, ಶಂಕರ ಪಾಟೀಲ ಮುನೇನಕೊಪ್ಪ/ ಕಳಕಪ್ಪ ಬಂಡಿ, ಸತೀಶ್ ರೆಡ್ಡಿ, ಎನ್.ರವಿಕುಮಾರ್/ ಎಸ್. ರುದ್ರೇಗೌಡ (ವಿಧಾನ ಪರಿಷತ್)

ಹೊರಬೀಳುವ ಸಂಭವನೀಯರು

ಜಗದೀಶ ಶೆಟ್ಟರ್, ವಿ.ಸೋಮಣ್ಣ ಸಿ.ಸಿ. ಪಾಟೀಲ, ಶಶಿಕಲಾ ಜೊಲ್ಲೆ, ಕೋಟ ಶ್ರೀನಿವಾಸ ಪೂಜಾರಿ, ಪ್ರಭು ಚೌಹಾಣ

ವಿಜಯೇಂದ್ರ ಪರ ಬಿಎಸ್‌ವೈ ಒತ್ತಡ

ನವದೆಹಲಿ: ಕಿರಿಯ ಪುತ್ರ ಬಿ.ವೈ. ವಿಜಯೇಂದ್ರಗೆ ಉಪ ಮುಖ್ಯಮಂತ್ರಿ ಸ್ಥಾನ ನೀಡುವಂತೆ ಬಿ.ಎಸ್.ಯಡಿಯೂರಪ್ಪ ಒತ್ತಡ ಹೇರಿದ್ದಾರೆ.

ಉಪ ಮುಖ್ಯಮಂತ್ರಿ ಸ್ಥಾನ ಕೊಡದೇ ಇದ್ದರೆ, ಸಚಿವ ಸ್ಥಾನ ನೀಡಿ ಬೃಹತ್ ಕೈಗಾರಿಕೆ ಮತ್ತು ಗ್ರಾಮೀಣಾಭಿವೃದ್ಧಿ ಖಾತೆಗಳನ್ನು ಕೊಡಬೇಕು ಎಂಬ ಬೇಡಿಕೆ ಮುಂದಿಟ್ಟಿದ್ದಾರೆ ಎಂದು ಗೊತ್ತಾಗಿದೆ. ಮಧು ಬಂಗಾರಪ್ಪ ಜೆಡಿಎಸ್ ತೊರೆದು ಕಾಂಗ್ರೆಸ್ ಸೇರಿರುವುದರಿಂದ ಸೊರಬದ ಶಾಸಕ ಕುಮಾರ್ ಬಂಗಾರಪ್ಪಗೆ ಸಂಪುಟದಲ್ಲಿ ಸ್ಥಾನ ನೀಡಬೇಕು ಎಂಬುದೂ ಯಡಿಯೂರಪ್ಪ ಒತ್ತಾಸೆ. ಈ ಬೇಡಿಕೆಗೆ ಸಮ್ಮತಿ ನೀಡುವುದು ಅಥವಾ ನೀಡದೇ ಇರುವುದು ವರಿಷ್ಠರಿಗೆ ಬಿಟ್ಟ ವಿಚಾರ. ನಾಯಕರ ಜತೆಗಿನ ಚರ್ಚೆಯ ವೇಳೆ ಬೊಮ್ಮಾಯಿ, ಈ ವಿಷಯ ಪ್ರಸ್ತಾಪಿಸಿದ್ದಾರೆ ಎನ್ನಲಾಗಿದೆ.

ವಲಸೆ ಬಂದ ಎಲ್ಲ ಶಾಸಕರಿಗೂ ಸಚಿವ ಸ್ಥಾನ ಇಲ್ಲ: ಈಶ್ವರಪ್ಪ ಸುಳಿವು

ಶಿವಮೊಗ್ಗ: ಸಚಿವ ಸಂಪುಟದಲ್ಲಿ ಯಾರು ಇರುತ್ತಾರೆ, ಇರುವುದಿಲ್ಲ ಎನ್ನುವುದು ಭಗವಂತ ಹಾಗೂ ಹೈಕಮಾಂಡ್‌ಗೆ ಗೊತ್ತಿದೆ. ಬಿಜೆಪಿಗೆ ವಲಸೆ ಬಂದು ಸರ್ಕಾರ ರಚನೆಗೆ ಕಾರಣರಾಗಿದ್ದ ಕೆಲವು ಶಾಸಕರಿಗೆ ಈ ಬಾರಿ ಅವಕಾಶ ಸಿಗದೆ ಇರಬಹುದು' ಎಂದು ಶಾಸಕ ಕೆ.ಎಸ್.ಈಶ್ವರಪ್ಪ ಹೇಳಿದರು.

ಸೋಮವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಯುವಕರು ಹಾಗೂ ಹಳಬರಿಗೆ ಸಮಾನ ಅವಕಾಶ ಸಿಗುವ ಸಾಧ್ಯತೆ ಇದೆ. ವಿಧಾನಸಭೆಯ ಮುಂದಿನ ಚುನಾವಣೆ ಗಮನದಲ್ಲಿ ಇಟ್ಟುಕೊಂಡು ಪಕ್ಷದ ವರಿಷ್ಠರು ಕೃಷ್ಣನ ತಂತ್ರಗಾರಿಕೆ ಮಾಡುತ್ತಿದ್ದಾರೆ. ಯಾವುದೇ ಲಾಬಿ, ಒತ್ತಡಕ್ಕೆ ಮಣೆ ಹಾಕುವುದಿಲ್ಲ' ಎಂದರು.

ಲಾಕ್‌ಡೌನ್ ಅವಧಿಯ ತೆರಿಗೆ: ಬಿಬಿಎಂಪಿಗೆ ನೋಟಿಸ್

ಬೆಂಗಳೂರು: ಲಾಕ್‌ಡೌನ್ ಅವಧಿಯಲ್ಲಿ ಪಾಲಿಕೆಯ ಜಾಗ ಮತ್ತು ಕಟ್ಟಡಗಳಿಗೆ ತೆರಿಗೆ ವಿಧಿಸಿದ್ದ ಕ್ರಮ ಪ್ರಶ್ನಿಸಿ ಸಲ್ಲಿಕೆಯಾಗಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಆಧರಿಸಿ ರಾಜ್ಯ ಸರ್ಕಾರ ಮತ್ತು ಬಿಬಿಎಂಪಿಗೆ ಹೈಕೋರ್ಟ್ ನೋಟಿಸ್ ನೀಡಿದೆ.

ನಗರದಲ್ಲಿ ಶಾಪಿಂಗ್ ಮಾಲ್ ಹೊಂದಿರುವ ಜಿ.ಟಿ. ಸಿನಿಮಾಸ್ ಪ್ರೈವೇಟ್ ಲಿಮಿಟೆಡ್ ಕಂಪನಿ ಈ ಅರ್ಜಿ ಸಲ್ಲಿಸಿದ್ದು, 'ಪಾಲಿಕೆಯ ಆಸ್ತಿ ಉಪಯೋಗಿಸಲು ಲಾಕ್‌ಡೌನ್ ಅವಧಿಯಲ್ಲಿ ನಿರ್ಬಂಧ ಇತ್ತು. ಆ ಅವಧಿಯ ತೆರಿಗೆ ಪಾವತಿಸುವುದು ಹೇಗೆ' ಎಂದು ಪ್ರಶ್ನಿಸಿದೆ.

2019–20, 2020–21 ಮತ್ತು 2021–22 ಹಣಕಾಸು ವರ್ಷಗಳಲ್ಲಿ ಲಾಕ್‌ಡೌನ್ ಕಾರಣಕ್ಕೆ ಹಲವು ದಿನ ಮುಚ್ಚಲಾಗಿತ್ತು. ಆದರೂ, ತೆರಿಗೆ ವಿಧಿಸಲಾಗುತ್ತಿದೆ ಎಂದು ಅರ್ಜಿಯಲ್ಲಿ ಆರೋಪಿಸಲಾಗಿದೆ.

ಆಸ್ತಿ ತೆರಿಗೆ ಪಾವತಿಗೆ ಬಲವಂತದ ಕ್ರಮಗಳನ್ನು ಕೈಗೊಳ್ಳದಂತೆ ಮಧ್ಯಂತರ ಆದೇಶ ಹೊರಡಿಸುವಂತೆ ಅರ್ಜಿದಾರರ ಪರ ವಕೀಲರು ಕೋರಿದರು. ಬಿಬಿಎಂಪಿ ಕ್ರಮಕ್ಕೆ ಮುಂದಾದರೆ ಕಾನೂನಿನ ಅಡಿಯಲ್ಲಿ ಮುಂದುವರಿಯಲು ಅರ್ಜಿದಾರರು ಸ್ವತಂತ್ರರು ಎಂದು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಪೀಠ ತಿಳಿಸಿತು.

ಪ್ರಜಾವಾಣಿ DH DECCAN HERALD
21 ಸರ್ಕಾರೇತರ ಸಂಸ್ಥೆಗಳಿಗೆ 'ಡಿಎಚ್-ಪಿವಿ ಕೋವಿಡ್ ಪರಿಹಾರ ನಿಧಿ' ನೆರವು

ಕರ್ನಾಟಕದ ವಿವಿಧೆಡೆ ಕೋವಿಡ್ ಪಿಡುಗಿನಿಂದ ಸಂಕಷ್ಟಕ್ಕೆ ಒಳಗಾದವರಿಗೆ ಪರಿಹಾರ ಮತ್ತು ಪುನರ್ವಸತಿ ಹಾಗೂ ಜೀವನೋಪಾಯಕ್ಕೆ ನೆರವು ಕಲ್ಪಿಸುವ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವ ಸರ್ಕಾರೇತರ ಸಂಘಟನೆಗಳಿಗೆ (ಎನ್‌ಜಿಒ) 'ಡೆಕ್ಕನ್ ಹೆರಾಲ್ಡ್-ಪ್ರಜಾವಾಣಿ ಕೋವಿಡ್–19 ಪರಿಹಾರ ನಿಧಿ'ಯಿಂದ ನೆರವು ನೀಡಲಾಗುತ್ತಿದೆ. ಈಗ ಮೂರನೇ ಮತ್ತು ಅಂತಿಮ ಹಂತದಲ್ಲಿ ಮೂರು ಸರ್ಕಾರೇತರ ಸಂಸ್ಥೆಗಳಿಗೆ ಹಣಕಾಸಿನ ನೆರವು ನೀಡಲು 'ಡೆಕ್ಕನ್ ಹೆರಾಲ್ಡ್-ಪ್ರಜಾವಾಣಿ ರಿಲೀಫ್ ಟ್ರಸ್ಟ್' ನಿರ್ಧರಿಸಿದೆ.

ಈ ಮೂರು ಸಂಸ್ಥೆಗಳು ತಲಾ ₹5 ಲಕ್ಷ ಪಡೆಯಲಿವೆ. 1) ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ 2) ಯೂತ್ ಫಾರ್ ಸೇವಾ 3) ದಿ ಸೊಸೈಟಿ ಫಾರ್ ಎಂಪವರ್ಮೆಂಟ್ ಥ್ರೂ ವಾಲೆಂಟರಿ ಆಕ್ಷನ್ ಇನ್ ಕರ್ನಾಟಕ (ಸೇವಕ್) ಆಯ್ಕೆಯಾದ ಸಂಸ್ಥೆಗಳು. ಈ ಸಂಸ್ಥೆಗಳು ಕೈಗೊಂಡಿರುವ ಚಟುವಟಿಕೆಗಳ ಸಂಕ್ಷಿಪ್ತ ವಿವರ ಪುಟ 8 ರಲ್ಲಿ ಇದೆ.

'ಡೆಕ್ಕನ್ ಹೆರಾಲ್ಡ್-ಪ್ರಜಾವಾಣಿ ಕೋವಿಡ್–19 ಪರಿಹಾರ ನಿಧಿ'ಯಡಿ ₹1.27 ಕೋಟಿ ಸಂಗ್ರಹಿಸಲಾಗಿದೆ. ಒಟ್ಟಾರೆಯಾಗಿ ನಾವು ಮೂರು ಹಂತಗಳಲ್ಲಿ 21 ಸರ್ಕಾರೇತರ ಸಂಸ್ಥೆಗಳಿಗೆ ತಲಾ ₹5 ಲಕ್ಷ ನೆರವು ನೀಡಿ ಬೆಂಬಲಿಸಿದ್ದೇವೆ. ಉಳಿದಿರುವ ಮೊತ್ತ ₹22.05 ಲಕ್ಷವನ್ನು ಈ 21 ಸಂಸ್ಥೆಗಳಿಗೆ ಸಮಾನಾಗಿ ಹಂಚಲಾಗುವುದು (ತಲಾ ₹1.05 ಲಕ್ಷ).
ನಿಧಿಗೆ ಉದಾರವಾಗಿ ದೇಣಿಗೆ ನೀಡಿದ ನಮ್ಮ ಓದುಗರಿಗೆ ಹೃತ್ಪೂರ್ವಕ ಧನ್ಯವಾದಗಳು.

ಪೆಗಾಸಸ್ ತನಿಖೆಗೆ ನಿತೀಶ್ ಒತ್ತಾಯ

ಪ್ರಜಾವಾಣಿ ವಾರ್ತೆ

ನವದೆಹಲಿ: ಪೆಗಾಸಸ್ ಕುತಂತ್ರಾಂಶ ಬಳಸಿ ಗೂಢಚರ್ಯೆ ನಡೆಸಿದ್ದಾರೆ ಎನ್ನಲಾದ ಪ್ರಕರಣದ ಬಗ್ಗೆ ತನಿಖೆ ನಡೆಸಬೇಕು ಎಂಬ ವಿರೋಧ ಪಕ್ಷಗಳ ಬೇಡಿಕೆಗೆ ಆಡಳಿತಾರೂಢ ಎನ್‌ಡಿಎಯ ಅಂಗವಾಗಿರುವ ಜೆಡಿಯುನ ಮುಖ್ಯಸ್ಥ ಮತ್ತು ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ದನಿಗೂಡಿಸಿದ್ದಾರೆ.

ನಿತೀಶ್

'ದೂರವಾಣಿ ಕದ್ದಾಲಿಕೆಯ ಬಗ್ಗೆ ಬಹಳ ದಿನಗಳಿಂದ ಮಾತುಗಳು ಕೇಳಿ ಬರುತ್ತಿವೆ. ಈ ಬಗ್ಗೆ ಚರ್ಚೆ (ಸಂಸತ್ತಿನಲ್ಲಿ) ನಡೆಯಲೇಬೇಕು. ಆರಂಭದ ದಿನದಿಂದಲೇ ನಾನು ಇದನ್ನು ಹೇಳುತ್ತಿದ್ದೇನೆ. ಈಗಿನ ದಿನಗಳಲ್ಲಿ ಇಂತಹುದನ್ನು (ಗೂಢಚರ್ಯೆ) ಯಾರು ಬೇಕಿದ್ದರೂ ವಿವಿಧ ರೀತಿಯಲ್ಲಿ ಮಾಡಬಹುದು. ಹಾಗಾಗಿ, ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕು. ಇಡೀ ಪ್ರಕರಣದ ಎಲ್ಲ ಆಯಾಮಗಳನ್ನೂ ಪರಿಶೀಲನೆಗೆ ಒಳಪಡಿಸಬೇಕು' ಎಂದು ನಿತೀಶ್ ಹೇಳಿದ್ದಾರೆ.

ನಿತೀಶ್ ಹೇಳಿಕೆಯ ಬಗ್ಗೆ ಹಲವಾರು ಪ್ರತಿಕ್ರಿಯೆಗಳು ಬಂದಿವೆ. ಲಾಲು ಪ್ರಸಾದ್ ನೇತೃತ್ವದ ಆರ್‌ಜೆಡಿ ಈ ಹೇಳಿಕೆಯನ್ನು ಸ್ವಾಗತಿಸಿದೆ. ನಿತೀಶ್ ಅವರು ಈ ಹೇಳಿಕೆಯನ್ನು ಹಿಂದಕ್ಕೆ ಪಡೆಯಲಿಕ್ಕಿಲ್ಲ ಎಂಬ ವಿಶ್ವಾಸವನ್ನು ಪಕ್ಷವು ವ್ಯಕ್ತಪಡಿಸಿದೆ. 'ಬಿಜೆಪಿಗಿಂತ ಭಿನ್ನವಾದ ಹಲವು ನಿಲುವುಗಳನ್ನು ನಿತೀಶ್ ವ್ಯಕ್ತಪಡಿಸಿದ್ದಾರೆ. ಪ್ರಧಾನಿ ಆಗಬೇಕು ಎಂದು ಅವರು ಹೊಂದಿರುವ ಆಕಾಂಕ್ಷೆಯ ಭಾಗ ಇದು' ಎಂದು ಎಲ್‌ಜೆಪಿಯ ಚಿರಾಗ್ ಪಾಸ್ವಾನ್ ಹೇಳಿದ್ದಾರೆ.

ನಿತೀಶ್ ಅವರನ್ನು ಲೇವಡಿ ಮಾಡುವುದಕ್ಕೂ ಈ ಸಂದರ್ಭವನ್ನು ಆರ್‌ಜೆಡಿ ಬಳಸಿಕೊಂಡಿದೆ. ನಿತೀಶ್ ಅವರು ತಮ್ಮ ನಿಲುವಿಗೆ ಬದ್ಧರಾಗಬೇಕು ಎಂದಿದೆ. ಒತ್ತಡ ಬಂದ ಬಳಿಕ, ತಮ್ಮ ಹೇಳಿಕೆಯನ್ನು ತಿರುಚಲಾಗಿದೆ ಎಂಬ ಹೇಳಿಕೆಯನ್ನು ಅವರು ನೀಡಬಾರದು ಎಂದು ಆರ್‌ಜೆಡಿ ಹೇಳಿದೆ.

ಆದರೆ, ನಿತೀಶ್ ಅವರ ಹೇಳಿಕೆಯನ್ನು ಜೆಡಿಯು ಮುಖಂಡರು ಸಮರ್ಥಿಸಿಕೊಂಡಿದ್ದಾರೆ. ಬಿಜೆಪಿಯ ನಿಲುವಿಗಿಂತ ಭಿನ್ನವಾದ ನಿಲುವನ್ನು ಜೆಡಿಯು ಹಿಂದೆಯೂ ತೆಗೆದುಕೊಂಡಿದೆ. ಇದು ಬಿಹಾರದ ಎನ್‌ಡಿಎ ಮೈತ್ರಿಕೂಟ ನೇತೃತ್ವದ ಸರ್ಕಾರದ ಮೇಲೆ ಪರಿಣಾಮ ಬೀರದು ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ಇನ್ನೊಂದು ಸುದ್ದಿ 7

ರಾಜ್ಯ ಕೋವಿಡ್ ಅಂಕಿ–ಅಂಶ

- **29,08,284** ▲ ಒಟ್ಟು ಪ್ರಕರಣಗಳು (29,06,999 ನಿನ್ನೆಯ ವಿವರ)
- **24,021** ▼ ಸಕ್ರಿಯ ಪ್ರಕರಣಗಳು
- **28,47,627** ▲ ಗುಣಮುಖರಾದವರು
- **36,612** ▲ ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	1,285 ▼
ಗುಣಮುಖ	1,383 ▼
ಸಾವು	25

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

'ಪತ್ಯ ಕಡಿತ: ತೀರ್ಮಾನ ಆಗಿಲ್ಲ' 4

ಇಂದಿನ ಪಾಡ್‌ಕಾಸ್ಟ್ ವಿಶೇಷ
ಪ್ರಜಾವಾಣಿ ಕನ್ನಡ ಧ್ವನಿ
ಸುದ್ದಿ ಸ್ವಾರಸ್ಯ
ಪ್ರತೀ ದಿನ: ದಿನದ ಸೂಕ್ತಿ, ವಚನವಾಣಿ ಸಂಪಾದಕೀಯ, ಪ್ರಚಲಿತ
Prajavani.net/podcast

ಪರೀಕ್ಷಾ ಕೇಂದ್ರ ಬಂದ್: ಗಡಿಯಲ್ಲಿ ತಪಾಸಣೆ ಬಿಗಿ

ನೆಗೆಟಿವ್ ವರದಿ ತಂದರಷ್ಟೇ ಪ್ರವೇಶ

ಪ್ರಜಾವಾಣಿ ವಾರ್ತೆ

ಮಂಗಳೂರು: ಕೇರಳ-ಕರ್ನಾಟಕ ಗಡಿಯಲ್ಲಿ ಸೋಮವಾರದಿಂದ ಮತ್ತಷ್ಟು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗಿದ್ದು, ರಾಜ್ಯ ಸರ್ಕಾರದ ಸೂಚನೆ ಬೆನ್ನಲ್ಲೇ ತಲಪಾಡಿ ಗಡಿಯನ್ನು ಜಿಲ್ಲಾಡಳಿತ ಸಂಪೂರ್ಣ ಬಂದ್ ಮಾಡಿದೆ.

ಗಡಿಭಾಗದ ತಲಪಾಡಿಗೆ ಜಿಲ್ಲಾಧಿಕಾರಿ ಡಾ.ಕೆ.ವಿ. ರಾಜೇಂದ್ರ ಮತ್ತು ಮಂಗಳೂರು ನಗರ ಪೊಲೀಸ್ ಕಮಿಷನರ್ ಎನ್. ಶಶಿಕುಮಾರ್ ಭೇಟಿ ನೀಡಿ, ತಪಾಸಣೆ ಕಾರ್ಯ ಪರಿಶೀಲಿಸಿದರು.

'ಆರ್‌ಟಿ-ಪಿಸಿಆರ್ ನೆಗೆಟಿವ್ ವರದಿ ಇಲ್ಲದಿದ್ದರೆ ವಾಪಸು ಕಳುಹಿಸಲಾಗುತ್ತಿದೆ. ತಲಪಾಡಿ ಗಡಿ ಚೆಕ್‌ಪೋಸ್ಟ್‌ನಲ್ಲಿ ಆರ್‌ಟಿ-ಪಿಸಿಆರ್ ಪರೀಕ್ಷಾ ಕೇಂದ್ರವನ್ನು ಬಂದ್ ಮಾಡಿದ್ದು, ಕೇರಳದಿಂದಲೇ ವರದಿ ತರಲು ಸೂಚನೆ ನೀಡಲಾಗಿದೆ. ವರದಿ ಇದ್ದವರಿಗಷ್ಟೇ ಪ್ರವೇಶಿಸಲು ಅವಕಾಶ ನೀಡಲಾಗುವುದು' ಎಂದು ಡಾ.ರಾಜೇಂದ್ರ ತಿಳಿಸಿದರು.

ಕಾಸರಗೋಡಿನಿಂದ ಬರುವ ವಾಹನ ಸವಾರರನ್ನು ಸೋಮವಾರ ತಲಪಾಡಿ ಗಡಿಯಲ್ಲಿ ಪೊಲೀಸರು ತಡೆದರು

ಕೇರಳಿಗರ ಅಸಮಾಧಾನ: ಚೆಕ್‌ಪೋಸ್ಟ್‌ನಲ್ಲಿದ್ದ ಪರೀಕ್ಷಾ ಕೇಂದ್ರ ಬಂದ್ ಮಾಡಿದ್ದರಿಂದ, ತಪಾಸಣೆಗಾಗಿ ಸಾಲಿನಲ್ಲಿ ನಿಂತಿದ್ದ ಜನರು ಅಸಮಾಧಾನ ವ್ಯಕ್ತಪಡಿಸಿದರು. 'ಏಕಾಏಕಿ ಟೆಸ್ಟಿಂಗ್ ಸ್ಥಗಿತಗೊಳಿಸಿದ್ದು ಸರಿಯಲ್ಲ. ಲಸಿಕೆಯ ಎರಡು ಡೋಸ್ ಪಡೆದವರಿಗೆ ಮಂಗಳೂರು ಪ್ರವೇಶಕ್ಕೆ ಅನುಮತಿ ಕೊಡಿ' ಎಂದು ಒತ್ತಾಯಿಸಿದರು.

ಚಿಕ್ಕಮಗಳೂರು, ಉಡುಪಿ ಜಿಲ್ಲೆಗಳಲ್ಲಿ ಪ್ರವಾಸಿಗರಿಗೆ ಆರ್‌ಟಿ-ಪಿಸಿಆರ್ ನೆಗೆಟಿವ್ ವರದಿ ಕಡ್ಡಾಯ ಮಾಡಲಾಗಿದೆ. ಉಡುಪಿ, ದಕ್ಷಿಣ ಕನ್ನಡ ಜಿಲ್ಲೆಯ ರೈಲು ನಿಲ್ದಾಣಗಳಲ್ಲಿ ಸ್ಥಳದಲ್ಲಿಯೇ ಆರ್‌ಟಿ-ಪಿಸಿಆರ್ ಪರೀಕ್ಷೆ ಆರಂಭಿಸಲಾಗಿದೆ.

ನವಿಲುಗಳ ಸಾವು

ಹಾಸನ: ಜಿಲ್ಲೆಯಲ್ಲಿ ಮಂಗಗಳ ಮಾರಣಹೋಮದ ಬೆನ್ನಲ್ಲೇ ಮೂರು ಗಂಡು ನವಿಲುಗಳು ಅನುಮಾನಾಸ್ಪದ ರೀತಿಯಲ್ಲಿ ಅರಸೀಕೆರೆ ತಾಲ್ಲೂಕಿನ ಚಿಕ್ಕ ಗಂಡಸಿಯಲ್ಲಿ ಭಾನುವಾರ ಮೃತಪಟ್ಟಿವೆ.

ಗ್ರಾಮದ ನಂಜೇಗೌಡ ಅವರ ಜಮೀನಿನ ಸಮೀಪವಿರುವ ಹಳ್ಳದ ಬಳಿ ನವಿಲುಗಳ ಕಳೇಬರಗಳು ಪತ್ತೆಯಾಗಿವೆ. ಅರಣ್ಯ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿದ್ದರು.

'ವಿಷ ಹಾಕಿರುವ ಸಾಧ್ಯತೆ ಇದೆ. ಪಶು ವೈದ್ಯಕೀಯ ಕಾಲೇಜಿನಲ್ಲಿ ಮರಣೋತ್ತರ ಪರೀಕ್ಷೆ ನಡೆಸಲಾಗುವುದು. ಅಂಗಾಂಗ ಮಾದರಿಯನ್ನು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ' ಎಂದು ಉಪ ಅರಣ್ಯ ಸಂರಕ್ಷಣಾಧಿಕಾರಿ ಕೆ.ಬಸವರಾಜ್ ತಿಳಿಸಿದರು.

ನೇರ ನಗದು ವರ್ಗಾವಣೆ ಪರಿಣಾಮಕಾರಿ ಜಾರಿಗೆ ನೆರವು: ಪ್ರಧಾನಿ

ಇ-ರುಪಿ ಡಿಜಿಟಲ್ ವೋಚರ್ ಬಿಡುಗಡೆ

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ಇ-ರುಪಿಯನ್ನು ಸೋಮವಾರ ಬಿಡುಗಡೆ ಮಾಡಿದರು. 'ಇದು ವ್ಯಕ್ತಿ ಮತ್ತು ನಿಗದಿತ ಉದ್ದೇಶ ಸೂಚಿತ ಡಿಜಿಟಲ್ ಪಾವತಿ ವ್ಯವಸ್ಥೆ' ಎಂದು ಮೋದಿ ಹೇಳಿದರು.

'ವಿವಿಧ ಯೋಜನೆಗಳ ಫಲಾನುಭವಿಗಳಿಗೆ ಸವಲತ್ತುಗಳು ನೇರವಾಗಿ ಮತ್ತು ಪರಿಣಾಮಕಾರಿಯಾಗಿ ತಲುಪುವಂತೆ ಸರ್ಕಾರವು ಈಚಿನ ವರ್ಷಗಳಲ್ಲಿ ಹಲವು ಕ್ರಮಗಳನ್ನು ತೆಗೆದುಕೊಂಡಿದೆ. ಇ-ರುಪಿ ಸಹ ಫಲಾನುಭವಿಗಳಿಗೆ ಸವಲತ್ತುಗಳು ಯಾವುದೇ ಸೋರಿಕೆಯಿಲ್ಲದೆ ತಲುಪುವಂತೆ ಮಾಡುತ್ತದೆ' ಎಂದು ಅವರು ಹೇಳಿದರು.

'ಆರಂಭದಲ್ಲಿ ಇದನ್ನು ಆರೋಗ್ಯ ಸೇವೆಗಳಿಗೆ ಮಾತ್ರವೇ ಬಳಸಲಾಗುತ್ತದೆ. ನಂತರದ ದಿನಗಳಲ್ಲಿ ಸರ್ಕಾರದ ಇತರ ನೇರ ನಗದು ವರ್ಗಾವಣೆ (ಡಿಬಿಟಿ) ಕಾರ್ಯಕ್ರಮಗಳಿಗೂ ವಿಸ್ತರಿಸಲಾಗುವುದು' ಎಂದು ಅವರು ಹೇಳಿದ್ದಾರೆ.

'ಸಂಘಸಂಸ್ಥೆಗಳೂ ತಾವು ಸಹಾಯ ಮಾಡುವ ಜನರಿಗೆ ನಗದು ನೀಡುವ ಬದಲಿಗೆ ಇ-ರುಪಿ ವೋಚರ್ ನೀಡಬಹುದು. ಆಗ ಆ ವ್ಯಕ್ತಿಯು, ಹಣ ನೀಡಿದ ಉದ್ದೇಶಕ್ಕೆ ಮಾತ್ರವೇ ಆ ಹಣವನ್ನು ಬಳಸಿಕೊಳ್ಳುವಂತೆ ಮಾಡಬಹುದು' ಎಂದು ಮೋದಿ ಹೇಳಿದರು.

ಬಳಕೆ ಹೇಗೆ...

- ಇದೊಂದು ಡಿಜಿಟಲ್ ರೂಪದ ಪಾವತಿ ವ್ಯವಸ್ಥೆ. ಫಲಾನುಭವಿಗಳ ಮೊಬೈಲ್‌ಗೆ ಕ್ಯುಆರ್ ಕೋಡ್ ಅಥವಾ ಎಸ್‌ಎಂಎಸ್ ಆಧರಿತ ಇ-ವೋಚರ್ ರೂಪದಲ್ಲಿ ಇದನ್ನು ರವಾನಿಸಲಾಗುತ್ತದೆ
- ಸೇವಾದಾರರಿಗೆ ಶುಲ್ಕ ಪಾವತಿ ವೇಳೆ ಯಾವುದೇ ರೀತಿಯ ಡೆಬಿಟ್ ಕಾರ್ಡ್, ಡಿಜಿಟಲ್ ಪಾವತಿ ಅಪ್ಲಿಕೇಷನ್ ಅಥವಾ ಇಂಟರ್ನೆಟ್ ಬ್ಯಾಂಕಿಂಗ್ ಇಲ್ಲದೆಯೂ ಈ ಇ-ವೋಚರ್‌ಗಳನ್ನು ಬಳಸಬಹುದಾಗಿದೆ
- ಕೇಂದ್ರ ಸರ್ಕಾರದ ವಿವಿಧ ಕಲ್ಯಾಣ ಕಾರ್ಯಕ್ರಮಗಳನ್ನು ಒದಗಿಸಲು ಇ-ರುಪಿಯನ್ನು ಬಳಸಿಕೊಳ್ಳಬಹುದಾಗಿದೆ. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಕಾರ್ಯಕ್ರಮಗಳಲ್ಲಿ, ಕ್ಷಯ ನಿರ್ಮೂಲನೆ ಕಾರ್ಯಕ್ರಮ, ಆಯುಷ್ಮಾನ್ ಕಾರ್ಯಕ್ರಮ, ರಸಗೊಬ್ಬರಗಳ ಸಹಾಯಧನಗಳಲ್ಲಿ ಈ ಇ-ವೋಚರ್ ಅನ್ನು ಬಳಸಬಹುದಾಗಿದೆ

ಗೊಂದಲ

ನೇರ ನಗದು ವರ್ಗಾವಣೆ ಕಾರ್ಯಕ್ರಮಗಳಿಗೆ ಇ-ರುಪಿಯನ್ನು ವಿಸ್ತರಿಸಲಾಗುವುದು ಎಂದು ಪ್ರಧಾನಿ ಹೇಳಿದ್ದಾರೆ. 'ಫಲಾನುಭವಿಗಳ ಮೊಬೈಲ್‌ಗಳಿಗೆ ಇ-ರುಪಿ ವೋಚರ್‌ಗಳನ್ನು ಕ್ಯುಆರ್ ಕೋಡ್ ಮತ್ತು ಎಸ್‌ಎಂಎಸ್ ವೋಚರ್ ರೂಪದಲ್ಲಿ ಕಳುಹಿಸಲಾಗುತ್ತದೆ. ವಿವಿಧ ಸೇವೆ ಪಡೆದುಕೊಳ್ಳುವಾಗ ಇವುಗಳನ್ನು ಬಳಸಿಕೊಳ್ಳಬಹುದು' ಎಂದು ಪ್ರಧಾನಿ ಕಾರ್ಯಾಲಯವು ಪತ್ರಿಕಾ ಪ್ರಕಟಣೆಯಲ್ಲಿ ಭಾನುವಾರ ವಿವರಿಸಿತ್ತು. ಆದರೆ, ಯಾವ ಕಾರ್ಯಕ್ರಮದಲ್ಲಿ ಇ-ರುಪಿ ಬಳಕೆಯನ್ನು ಜಾರಿಗೆ ತರಲಾಗುವುದು ಎಂಬುದನ್ನು ಸರ್ಕಾರ ಸ್ಪಷ್ಟಪಡಿಸಿಲ್ಲ. ಸಂಘಸಂಸ್ಥೆಗಳು ಇ-ರುಪಿಯನ್ನು ಖರೀದಿಸುವುದು ಅಥವಾ ಪಡೆದುಕೊಳ್ಳುವುದು ಎಲ್ಲಿ ಮತ್ತು ಹೇಗೆ ಎಂಬುದನ್ನು ಸರ್ಕಾರ ಸ್ಪಷ್ಟಪಡಿಸಿಲ್ಲ. ಸಾರ್ವಜನಿಕರು ಇದನ್ನು ಪಡೆದುಕೊಳ್ಳಬಹುದೇ ಇಲ್ಲವೇ ಎಂಬುದನ್ನು ಸಹ ಸರ್ಕಾರ ತಿಳಿಸಿಲ್ಲ.

ಚಿನಕುರಳಿ

ಪ್ರಕಾಶ್ ಶೆಟ್ಟಿ

ಲಸಿಕೆಗಾಗಿ ನೂಕುನುಗ್ಗಲು

ಪ್ರಜಾವಾಣಿ ವಾರ್ತೆ

ಶಿರಸಿ/ಕುಮಟಾ/ದಾಂಡೇಲಿ: ಕೋವಿಶೀಲ್ಡ್ ಹಾಗೂ ಕೋವ್ಯಾಕ್ಸಿನ್ ಲಸಿಕೆಯ 2ನೇ ಡೋಸ್ ಪಡೆಯಲು ಉತ್ತರ ಕನ್ನಡ ಜಿಲ್ಲೆಯಲ್ಲಿ ವಿವಿಧೆಡೆ ಜನರು ಗಾಳಿ, ಮಳೆ, ನಿದ್ದೆ ಲೆಕ್ಕಿಸದೇ ಬೆಳಗಿನ ಜಾವವೇ ಸಾಲುಗಟ್ಟಿ ನಿಂತಿದ್ದರು.

ಗ್ರಾಮೀಣ ಭಾಗದ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಲಸಿಕೆ ವಿತರಣೆಗೆ ಗಲಾಟೆಯಾಗುತ್ತಿವೆ. ಶಿರಸಿ, ಕುಮಟಾ, ದಾಂಡೇಲಿಗಳಲ್ಲಿ ಲಸಿಕೆ ಟೋಕನ್‌ಗಾಗಿ ಇಲ್ಲಿನ ಪುರಭವನದ ಎದುರು ಸೋಮವಾರ ನೂರಾರು ಜನರು ಸಾಲುಗಟ್ಟಿದ್ದರು. ಸೀಮಿತ ಪ್ರಮಾಣದ ಲಸಿಕೆ ಪೂರೈಕೆಯಾಗಿದ್ದು ಹೆಚ್ಚಿನ ಸಂಖ್ಯೆಯಲ್ಲಿ ಜನರು ಬಂದಿದ್ದರಿಂದ ನೂಕುನುಗ್ಗಲು ಉಂಟಾಯಿತು.

ಶಿರಸಿಯಲ್ಲಿ ಅಂಬೇಡ್ಕರ್ ಭವನ ಹಾಗೂ ವಿದ್ಯಾಧಿರಾಜ ಕಲಾಕ್ಷೇತ್ರದಲ್ಲಿ ತಲಾ 400 ಡೋಸ್ ಲಸಿಕೆ ನೀಡುವ ಗುರಿ ಇತ್ತು. ಎರಡೂ ಕಡೆ ನಸುಕಿನ ಜಾವದಿಂದಲೆ ಜನರು ಸಾಲುಗಟ್ಟಿ ನಿಂತಿದ್ದರು. ಇದರಿಂದ ಗೊಂದಲ ನಿರ್ಮಾಣವಾಯಿತು. ವಿದ್ಯಾಧಿರಾಜ ಕಲಾಕ್ಷೇತ್ರದಲ್ಲಿ ಮೊದಲೇ ಟೋಕನ್ ನೀಡಲಾಗಿತ್ತು ಎಂಬ ಆರೋಪ ವ್ಯಕ್ತವಾಯಿತು.

ಕುಮಟಾದಲ್ಲಿ ಕೋವಿಶೀಲ್ಡ್ ಎರಡನೇ ಡೋಸ್ ಪಡೆಯಲು ಸರ್ಕಾರಿ ಆಸ್ಪತ್ರೆಯಲ್ಲಿ ಹಾಗೂ ಕೋವ್ಯಾಕ್ಸಿನ್ ಲಸಿಕೆ ಪಡೆಯಲು ರಾಷ್ಟ್ರೀಯ ಹೆದ್ದಾರಿ 66 ಬದಿಯ ಪುರಭವನದಲ್ಲಿ ಸಾರ್ವಜನಿಕರಿಗೆ ಅವಕಾಶ ಕಲ್ಪಿಸಲಾಗಿದೆ.

ಕೋವಿಡ್ 2ನೇ ಡೋಸ್ ಲಸಿಕೆಯ ಟೋಕನ್ ಪಡೆಯಲು ಜನರು ಸೋಮವಾರ ಕುಮಟಾ ಪುರಭವನದ ಎದುರು ಸಾಲುಗಟ್ಟಿ ನಿಂತಿದ್ದರು

8ನೇ ಪುಟ ನೋಡಿ

ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳಿಗಾಗಿ ಆ್ಯಪ್

ಬೆಂಗಳೂರು: ರಿಫೈನಿಂಗ್ ಸ್ಕಿಲ್ಸ್ ಅಕಾಡೆಮಿಯು ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳಿಗಾಗಿ ಮೊಬೈಲ್ ಆ್ಯಪ್ ಒಂದನ್ನು ಅಭಿವೃದ್ಧಿ ಪಡಿಸಿದೆ. ಹತ್ತನೇ ತರಗತಿಯ ಎಲ್ಲ ಆರು ವಿಷಯಗಳಿಗೆ ಸಂಬಂಧಿಸಿದ ವಿಭಾಗಗಳನ್ನು ಒಳಗೊಂಡಿರುವ ಈ ಆ್ಯಪ್‌ಗೆ 'ಎಸ್ಸೆಸ್ಸೆಲ್ಸಿ ಕನೆಕ್ಟ್' (SSLC CONNECT) ಎಂದು ಹೆಸರಿಡಲಾಗಿದೆ.

ನೋಡಿ, ಓದಿ ಮತ್ತು ಅಭ್ಯಾಸ ಮಾಡಿ ಕಲಿಯುವಂತಹ, ಪರೀಕ್ಷೆ ಮತ್ತು ಮಕ್ಕಳ ಬೆಳವಣಿಗೆಗೆ ಪೂರಕವಾದ ಅಂಶಗಳು ಇದರಲ್ಲಿ ಇದ್ದು, ಲೈವ್ ವಿಡಿಯೊಗಳೂ ಲಭ್ಯ ಇವೆ. ಎಲ್ಲ ವಿಷಯಗಳ ಪ್ರತಿ ಅಧ್ಯಾಯಕ್ಕೆ ಸಂಬಂಧಿಸಿದ ಮಾಹಿತಿ, ಪಠ್ಯಪುಸ್ತಕದ ವಿವರ, ಹಿಂದಿನ ವರ್ಷಗಳ ಪ್ರಶ್ನೆಪತ್ರಿಕೆ ಮತ್ತು ಉತ್ತರಗಳು ಇದರಲ್ಲಿ ಇವೆ. ಮೊಬೈಲ್ ಪ್ಲೇ ಸ್ಟೋರ್‌ನಲ್ಲಿ ಈ SSLC CONNECT ಆ್ಯಪ್ ಉಚಿತವಾಗಿ ಲಭ್ಯ ಇದೆ ಎಂದು ಅಕಾಡೆಮಿಯು ಪ್ರಕಟಣೆಯಲ್ಲಿ ತಿಳಿಸಿದೆ.

ನಗರದಲ್ಲಿ ಇಂದು

ಬನಶಂಕರಿ ಬ್ಲಾಕ್ ಕಾಂಗ್ರೆಸ್ ಸಮಿತಿ ವತಿಯಿಂದ ದಿನಸಿ ಕಿಟ್ ವಿತರಣೆ: ಭಾಗವಹಿಸುವವರು–ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾರೆಡ್ಡಿ, ಸಲೀಂ ಅಹಮ್ಮದ್, ವಿಧಾನಪರಿಷತ್ ಸದಸ್ಯ ಬಿ.ಕೆ.ಹರಿಪ್ರಸಾದ್, ಸ್ಥಳ–ಕಾರ್ಮೆಲ್ ಶಾಲೆ ಹತ್ತಿರ, ಪದ್ಮನಾಭನಗರ ಆಟದ ಮೈದಾನ, ಬೆಳಿಗ್ಗೆ 11

ವಿಶ್ವ ಮಿದುಳು ದಿನ–ಮಲ್ಟಿಪಲ್ ಸ್ಕ್ಲೆರೋಸಿಸ್ ರೋಗದ ಕುರಿತು ವೆಬಿನಾರ್: ಭಾಗವಹಿಸುವವರು–ಪ್ರತಿಮಾ ಮೂರ್ತಿ, ಬಿ.ಎಸ್.ಶಂಕರನಾರಾಯಣ ರಾವ್, ಸಂಜೀಬ್ ಸಿನ್ಹಾ, ಪ್ರಮೋದ್ ಪಾಲ್, ಎಂ.ನೇತ್ರಾವತಿ, ಆಯೋಜನೆ–ನರವಿಜ್ಞಾನ ವಿಭಾಗ, ನಿಮ್ಹಾನ್ಸ್, ಮಧ್ಯಾಹ್ನ 3 (ಆನ್‌ಲೈನ್ ಕಾರ್ಯಕ್ರಮ)

ಪ್ರಾಚೀನ ಕವಿಗಳ ಮತ್ತು ವಚನಕಾರರ ಭಾವಚಿತ್ರಗಳ ಅನಾವರಣ: ಅತಿಥಿ–ಲೀಲಾದೇವಿ ಆರ್.ಪ್ರಸಾದ್, ಅಧ್ಯಕ್ಷತೆ–ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮನು ಬಳಿಗಾರ್, ಆಯೋಜನೆ–ಕನ್ನಡ ಸಾಹಿತ್ಯ ಪರಿಷತ್ತು, ಸ್ಥಳ–ಅಕ್ಕಮಹಾದೇವಿ ಸಭಾಂಗಣ, ಪರಿಷತ್ತಿನ ಕಟ್ಟಡ, ಚಾಮರಾಜಪೇಟೆ, ಮಧ್ಯಾಹ್ನ 3.30

ವರಿಷ್ಠರೊಂದಿಗೆ ದೆಹಲಿಯಲ್ಲಿ ನಾಳೆ ಶಿವಕುಮಾರ್ ಚರ್ಚೆ

ಪದಾಧಿಕಾರಿಗಳ ಪಟ್ಟಿ ಶೀಘ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಪಿಸಿಸಿ ಮುಂಚೂಣಿ ಘಟಕಗಳ ಪುನರ್‌ರಚನೆ ಮತ್ತು ನೂತನ ಪದಾಧಿಕಾರಿಗಳ ಪಟ್ಟಿ ಅಂತಿಮಗೊಳಿಸುವ ಕುರಿತು ಪಕ್ಷದ ವರಿಷ್ಠರ ಜೊತೆ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಬುಧವಾರ ದೆಹಲಿಯಲ್ಲಿ ಸಮಾಲೋಚನೆ ನಡೆಸಲಿದ್ದಾರೆ.

ಪಕ್ಷದ ನಾಯಕ ರಾಹುಲ್ ಗಾಂಧಿ, ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಮತ್ತು ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರನ್ನು ಭೇಟಿ ಮಾಡಲಿರುವ ಶಿವಕುಮಾರ್, ಕೆಪಿಸಿಸಿಗೆ ಪದಾಧಿಕಾರಿಗಳನ್ನು ಆಯ್ಕೆ ಮಾಡುವ ಕುರಿತು ಮಹತ್ವದ ಚರ್ಚೆ ನಡೆಸಲಿದ್ದಾರೆ. ಆಗಸ್ಟ್ 10ರ ಒಳಗೆ ಪಟ್ಟಿ ಅಂತಿಮಗೊಳ್ಳುವ ಸಾಧ್ಯತೆ ಇದೆ ಎಂದು ಕಾಂಗ್ರೆಸ್ ಮೂಲಗಳು ಹೇಳಿವೆ.

ವಿಶೇಷ ವಿಮಾನದಲ್ಲಿ ಮಂಗಳವಾರ ಬೆಳಿಗ್ಗೆ ಜೈಪುರಕ್ಕೆ ತೆರಳಲಿರುವ ಶಿವಕುಮಾರ್, ರಾಜಸ್ಥಾನದ ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಅವರನ್ನು ಭೇಟಿ ಮಾಡಲಿದ್ದಾರೆ. ಕಾಂಗ್ರೆಸ್ ಆಡಳಿತದ ರಾಜಸ್ಥಾನದಲ್ಲಿ ಮುಖ್ಯಮಂತ್ರಿ ಮತ್ತು ಪಕ್ಷದ ಯುವ ನಾಯಕ ಸಚಿನ್ ಪೈಲಟ್ ನಡುವೆ ಅಂತರ ಹೆಚ್ಚಿ, ಪಕ್ಷ ಇಬ್ಭಾಗವಾಗುವ ಹಂತ ತಲುಪಿದಾಗ ರಾಷ್ಟ್ರೀಯ ನಾಯಕರ ಮಧ್ಯಸ್ಥಿಕೆಯಲ್ಲಿ ಸಮಸ್ಯೆ ಬಗೆಹರಿದಿತ್ತು. ಇದೀಗ ಮತ್ತೆ ಸಮಸ್ಯೆ ಉಲ್ಬಣಗೊಂಡಿದೆ ಎನ್ನಲಾಗಿದೆ. ಈ ಮಧ್ಯೆ, ಅಲ್ಲಿ ಸಂಪುಟ ಪುನರ್ ರಚನೆಯ ಕಸರತ್ತು ನಡೆಯುತ್ತಿದೆ. ಈ ಬೆಳವಣಿಗೆಗಳ ನಡುವೆ ಅಲ್ಲಿನ ಗೆಹಲೋತ್ ಅವರನ್ನು ಶಿವಕುಮಾರ್ ಭೇಟಿ ಮಾಡುತ್ತಿರುವುದು ಕುತೂಹಲ ಮೂಡಿಸಿದೆ.

ಜೈಪುರದಿಂದ ಸಂಜೆ ದೆಹಲಿಗೆ ಶಿವಕುಮಾರ್ ತೆರಳಲಿದ್ದಾರೆ. ಎಐಸಿಸಿ ನಾಯಕರನ್ನು ಅವರು ಬುಧವಾರ ಭೇಟಿ ಮಾಡಲಿದ್ದಾರೆ. ರಾಜಸ್ಥಾನದ ರಾಜಕೀಯ ವಿದ್ಯಮಾನಗಳ ಕುರಿತು ಗೆಹಲೋತ್ ಜೊತೆ ನಡೆಸಿದ ಚರ್ಚೆಯ ವಿವರವನ್ನು ವರಿಷ್ಠರ ಜೊತೆ ಹಂಚಿಕೊಳ್ಳುವ ಜೊತೆಗೆ, ರಾಜ್ಯದಲ್ಲಿ ಪಕ್ಷ ಸಂಘಟನೆಗೆ ಕೈಗೊಂಡಿರುವ ಕಾರ್ಯಕ್ರಮಗಳ ಕುರಿತು ವರದಿ ನೀಡಲಿದ್ದಾರೆ ಎಂದೂ ಮೂಲಗಳು ಹೇಳಿವೆ.

ಆಪ್ತ ಕಾರ್ಯದರ್ಶಿಗಳ ಬಿಡುಗಡೆ

ಬೆಂಗಳೂರು: ಯಡಿಯೂರಪ್ಪ ಸರ್ಕಾರದಲ್ಲಿ ಉಪಮುಖ್ಯಮಂತ್ರಿಗಳು, ಸಚಿವರಿಗೆ ಆಪ್ತ ಕಾರ್ಯದರ್ಶಿ ಮತ್ತು ವಿಶೇಷ ಕರ್ತವ್ಯಾಧಿಕಾರಿಗಳಾಗಿದ್ದ ಕೆಎಎಸ್ ಅಧಿಕಾರಿಗಳು ಮತ್ತು ನಿವೃತ್ತ ಕೆಎಎಸ್ ಅಧಿಕಾರಿಗಳನ್ನು ಕರ್ತವ್ಯದಿಂದ ಬಿಡುಗಡೆ ಮಾಡಿ ಆದೇಶ ಹೊರಡಿಸಲಾಗಿದೆ. ವಿವಿಧ ಸಚಿವರ ಜತೆಗಿದ್ದ ಕೆಎಎಸ್ ಅಧಿಕಾರಿಗಳಾದ ಪ್ರಕಾಶ್.ಜಿ.ಟಿ ನಿಟ್ಟಾಲಿ, ಪ್ರಶಾಂತ್ ಆರ್.ಕೆ, ಯೋಗೀಶ್.ಟಿ, ಸತೀಶ್‌ಕುಮಾರ್, ರಾಘವೇಂದ್ರ ಟಿ, ಬಿ.ಉದಯ ಕುಮಾರ್ ಶೆಟ್ಟಿ, ರವಿ ಎಂ ತಿರ್ಲಾಪುರ, ನಾಗರಾಜು ಸಿ, ಸಿದ್ರಾಮಪ್ಪ ಶ್ರೀಶೈಲ ಬಿರಾದಾರ, ಮಂಜುನಾಥ ಸಿ.ಎನ್, ಸೂರಜ್ ಎ.ಆರ್ ಮತ್ತು ಕ್ಯಾಪ್ಟನ್ ಶ್ರೀನಿವಾಸಗೌಡ, ನಿವೃತ್ತ ಕೆಎಎಸ್ ಅಧಿಕಾರಿಗಳಾದ ವಿಜಯಕುಮಾರ್ ಎನ್. ತೋರಗಲ್, ಜಿ.ಜಯರಾಮ್ ಮತ್ತು ಎ.ವಿ.ಪ್ರಸನ್ನ ಅವರನ್ನು ಕರ್ತವ್ಯದಿಂದ ಬಿಡುಗಡೆಗೊಳಿಸಲಾಗಿದೆ.

ಸುದ್ದಿ 2 ನಿಮಿಷ

ಶಾಸಕರ ನಿಧಿ ಕಡಿತ: ಹೊರಟ್ಟಿ ನೇತೃತ್ವದಲ್ಲಿ ಸಭೆ ಇಂದು

ಬೆಂಗಳೂರು: ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ ವಾರ್ಷಿಕ ನೀಡಲಾಗುತ್ತಿದ್ದ ₹ 2 ಕೋಟಿ ಅನುದಾನವನ್ನು ಕಳೆದ ಮೂರು ವರ್ಷಗಳಿಂದ ರಾಜ್ಯ ಸರ್ಕಾರ ಕಡಿತಗೊಳಿಸಿರುವ ಬಗ್ಗೆ ವಿಧಾನ ಪರಿಷತ್ತಿನ ಕೆಲವು ಸದಸ್ಯರು ಅಸಮಾಧಾನ ವ್ಯಕ್ತಪಡಿಸಿದ ಬೆನ್ನಲ್ಲೆ, ಈ ಬಗ್ಗೆ ಚರ್ಚಿಸಲು ಪರಿಷತ್ತಿನ ಎಲ್ಲ 75 ಸದಸ್ಯರ ಸಭೆಯನ್ನು ಸಭಾಪತಿ ಬಸವರಾಜ ಹೊರಟ್ಟಿ ಆಯೋಜಿಸಿದ್ದಾರೆ.

ವಿಧಾನಸೌಧದಲ್ಲಿ ಮಂಗಳವಾರ ನಡೆಯಲಿರುವ ಈ ಸಭೆಯಲ್ಲಿ ಆರ್ಥಿಕ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ಯೋಜನಾ ಮತ್ತು ಸಾಂಖ್ಯಿಕ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಸೇರಿದಂತೆ ಹಿರಿಯ ಅಧಿಕಾರಿಗಳು ಭಾಗವಹಿಸಲಿದ್ದಾರೆ.

'ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಲ್ಲಿ 2018-19, 2019-20 ಮತ್ತು 2020-21ನೇ ಸಾಲಿನಲ್ಲಿ ಶಾಸಕರಿಗೆ ನೀಡುತ್ತಿದ್ದ ₹ 2 ಕೋಟಿ ಅನುದಾನ ಕಡಿತಗೊಳಿಸಲಾಗಿದೆ. ಅಲ್ಲದೆ, ಬಯಲು ಸೀಮೆ ಪ್ರದೇಶಾಭಿವೃದ್ಧಿ ಮಂಡಳಿ ವ್ಯಾಪ್ತಿಯಲ್ಲಿ ಬರುವ ಶಾಸಕರು ಲೋಕಸಭೆ, ರಾಜ್ಯಸಭೆ ಸದಸ್ಯರಿಗೆ ಅವರ ಕ್ಷೇತ್ರದ ಅಭಿವೃದ್ಧಿಗೆ 2018-19ನೇ ಸಾಲಿನ ಬಜೆಟ್‌ನಲ್ಲಿ ಮುಖ್ಯಮಂತ್ರಿ ಘೋಷಿಸಿದ್ದ ₹ 95 ಕೋಟಿ ಅನುದಾನವನ್ನು ಕೂಡಾ ಬಿಡುಗಡೆ ಆಗಿಲ್ಲ. ಅನುದಾನಕ್ಕೆ ಪೂರಕವಾಗಿ ಕೈಗೊಳ್ಳಬಹುದಾದ ಕಾಮಗಾರಿಗಳು ಬಹುತೇಕ ಸ್ಥಗಿತಗೊಂಡಿವೆ. ಕೆಲವು ಕಾಮಗಾರಿಗಳಿಗೆ ಆಡಳಿತಾತ್ಮಕ ಮಂಜೂರಾತಿ ಪಡೆದಿದ್ದರೂ ಅನುಷ್ಠಾನಗೊಂಡಿಲ್ಲ ಎಂದು ವಿಧಾನ ಪರಿಷತ್ತಿನ ಹಲವು ಸದಸ್ಯರು ಅಭಿಪ್ರಾಯ ಹಂಚಿಕೊಂಡ ಕಾರಣ ಈ ಸಭೆಯನ್ನು ಕರೆಯಲಾಗಿದೆ' ಎಂದು ಹೊರಟ್ಟಿ ತಿಳಿಸಿದ್ದಾರೆ.



ವಂಡರ್‌ಲಾ ಮನರಂಜನಾ ಪಾರ್ಕ್ 12ರಿಂದ ಪುನರಾರಂಭ

ರಾಮನಗರ: ಬಿಡದಿಯ ವಂಡರ್‌ಲಾ ಮನರಂಜನಾ ಪಾರ್ಕ್ ಅನ್ನು ಇದೇ 12ರಿಂದ ಪುನರಾರಂಭ ಮಾಡುವುದಾಗಿ ವಂಡರ್‌ಲಾ ಹಾಲಿಡೇಸ್ ಕಂಪನಿಯು ಪ್ರಕಟಣೆಯಲ್ಲಿ ತಿಳಿಸಿದೆ.

ಕೋವಿಡ್ ನಿಯಮಗಳ ಕಾರಣಕ್ಕೆ ಕೆಲ ತಿಂಗಳಿನಿಂದ ವಂಡರ್‌ಲಾ ಪಾರ್ಕ್ ಅನ್ನು ಮುಚ್ಚಲಾಗಿತ್ತು. ಆದರೆ ಇದೀಗ ಸರ್ಕಾರ ಪಾರ್ಕ್ ಆರಂಭಕ್ಕೆ ಅನುಮತಿ ನೀಡಿದೆ. ಅದರಂತೆ ಇದೇ 12ರಿಂದ ಶೇ 50ರಷ್ಟು ಸಾಮರ್ಥ್ಯದೊಂದಿಗೆ ಕಾರ್ಯಾರಂಭ ಮಾಡಲಾಗುವುದು. ಪ್ರತಿ ಗುರುವಾರದಿಂದ ಭಾನುವಾರದವರೆಗೆ ಬೆಳಗ್ಗೆ 11 ಗಂಟೆ ನಂತರ ಪಾರ್ಕ್ ತೆರೆದಿರಲಿದೆ ಎಂದು ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ಕೆ.ಅರುಣ್ ಚಿಟ್ಟಿಲಪಲ್ಲಿ ತಿಳಿಸಿದ್ದಾರೆ.

ಜನರ ಆರೋಗ್ಯದ ದೃಷ್ಟಿಯಿಂದ ಕೋವಿಡ್ ಮಾರ್ಗಸೂಚಿಯನ್ನು ಕಟ್ಟುನಿಟ್ಟಿನಿಂದ ಅನುಸರಿಸುತ್ತಿದ್ದೇವೆ. ನಮ್ಮೆಲ್ಲಾ ಸಿಬ್ಬಂದಿಗೂ ಲಸಿಕೆ ಹಾಕಿಸಲಾಗಿದ್ದು, ಎಲ್ಲಾ ಸುರಕ್ಷಿತ ಮುನ್ನೆಚ್ಚರಿಕೆಯನ್ನು ತೆಗೆದುಕೊಳ್ಳಲಾಗಿದೆ. ಆನ್‌ಲೈನ್ ಮೂಲಕ ಟಿಕೆಟ್‌ಗಳನ್ನು ಕಾಯ್ದಿರಿಸಿಕೊಳ್ಳಬಹುದು. 1500 ಕೋವಿಡ್ ವಾರಿಯರ್‌ಗಳಿಗಾಗಿ ಉಚಿತ ಟಿಕೆಟ್ ನೀಡಲಾಗುತ್ತಿದ್ದು, ಇದೇ 8ರವರೆಗೆ ನೋಂದಣಿ ಮಾಡಿಕೊಳ್ಳಬಹುದು. ವಿವರಗಳಿಗೆ ದೂರವಾಣಿ 080– 37230333, 080– 35073966 ಸಂಪರ್ಕಿಸಬಹುದು ಎಂದು ಹೇಳಿದ್ದಾರೆ.

ಒತ್ತುವರಿಯಲ್ಲಿ ಅರವಿಂದ ಲಿಂಬಾವಳಿ ಭಾಗಿ: ಎಎಪಿ

ಬೆಂಗಳೂರು: 'ಮಹದೇವಪುರ ವ್ಯಾಪ್ತಿಯಲ್ಲಿ ಗೋದ್ರೆಜ್ ಪ್ರಾಪರ್ಟೀಸ್ ಒತ್ತುವರಿ ಪ್ರಕರಣದಲ್ಲಿ ಶಾಸಕ ಅರವಿಂದ ಲಿಂಬಾವಳಿ ಅವರ ನೇರ ಕೈವಾಡವಿದ್ದು, ಈ ಬಗ್ಗೆ ತನಿಖೆ ನಡೆಸಬೇಕು' ಎಂದು ಆಮ್ ಆದ್ಮಿ ಪಕ್ಷದ ಜಂಟಿ ಕಾರ್ಯದರ್ಶಿ ದರ್ಶನ್ ಜೈನ್ ಆಗ್ರಹಿಸಿದರು.

ಸೋಮವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಗೋದ್ರೆಜ್ ಪ್ರಾಪರ್ಟೀಸ್ ಹಾಗೂ ವಂಡರ್ ಪ್ರಾಜೆಕ್ಟ್ ಡೆವೆಲಪ್ಮೆಂಟ್ ಪ್ರೈವೇಟ್ ಲಿಮಿಟೆಡ್ ನಿರ್ಮಿಸಿರುವ ಬಹುಮಹಡಿ ಕಟ್ಟಡವನ್ನು ಕೆಡವಿ, ₹31 ಕೋಟಿ ದಂಡ ಕಟ್ಟಲು ಆದೇಶಿಸಿರುವ ರಾಷ್ಟ್ರೀಯ ಹಸಿರು ಪೀಠದ ಆದೇಶ ಸ್ವಾಗತಾರ್ಹ. ಆದರೆ, ಸ್ಥಳೀಯ ಶಾಸಕರ ಅರಿವಿಗೆ ಬಾರದೆ ಇಷ್ಟೊಂದು ದೊಡ್ಡ ಅಕ್ರಮ ನಡೆದಿರಲು ಸಾಧ್ಯವಿಲ್ಲ' ಎಂದರು.

'ಅರವಿಂದ ಲಿಂಬಾವಳಿ ಅವರು ಚುನಾವಣೆಗಳಲ್ಲಿ ಗೆಲ್ಲಲು ಈ ಪ್ರಭಾವಿ ಕಾರ್ಪೊರೇಟ್ ಕಂಪನಿಗಳ ಬೆಂಗಾವಲಿದೆ. ಅದಕ್ಕಾಗಿ ಇಂತಹ ಅವೈಜ್ಞಾನಿಕ ಯೋಜನೆಗಳಿಗೆ ಅನುಮತಿ ನೀಡಿದ್ದಾರೆ' ಎಂದು ದೂರಿದರು.

'ಮಹದೇವಪುರ ಕ್ಷೇತ್ರದಲ್ಲಿ ಸರ್ಕಾರಿ ಜಾಗಗಳ ಒತ್ತುವರಿ ಬಗ್ಗೆ ಸರ್ಕಾರ ಕೂಡಲೇ ಪರಿಶೀಲನೆ ನಡೆಸಬೇಕು. ಅಕ್ರಮಗಳಲ್ಲಿ ಅರವಿಂದ ಲಿಂಬಾವಳಿ ಅವರ ಪಾತ್ರದ ಬಗ್ಗೆ ತನಿಖೆಗೆ ಆದೇಶಿಸಬೇಕು. ಈ ಯೋಜನೆಗೆ ಸಹಕರಿಸಿ, ಭ್ರಷ್ಟಾಚಾರ ಎಸಗಿರುವ ಬಿಬಿಎಂಪಿ ಮತ್ತು ಸಂಬಂಧಪಟ್ಟ ಎಲ್ಲ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು' ಎಂದು ಆಗ್ರಹಿಸಿದರು.

ಈ ಸಂಬಂಧ ಶಾಸಕ ಅರವಿಂದ ಲಿಂಬಾವಳಿ ಅವರು ಪ್ರತಿಕ್ರಿಯೆಗೆ ಸಿಗಲಿಲ್ಲ.

ಚುನಾವಣೆಯಲ್ಲಿ ನಿವೃತ್ತ ಸೈನಿಕರಿಗೆ ಮೀಸಲಾತಿ: ಮನವಿ

ಬೆಂಗಳೂರು: ನಿವೃತ್ತ ಸೈನಿಕರಿಗೆ ಚುನಾವಣೆಗಳಲ್ಲಿ ಸ್ಪರ್ಧಿಸಲು ಪ್ರತ್ಯೇಕ ಮೀಸಲಾತಿ ಕಲ್ಪಿಸುವಂತೆ ಅಖಿಲ ಕರ್ನಾಟಕ ಮಾಜಿ ಸೈನಿಕರ ಸಂಘವು ಚುನಾವಣಾ ಆಯೋಗಕ್ಕೆ ಮನವಿ ಮಾಡಿದೆ.

ಸೋಮವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ಅಧ್ಯಕ್ಷ ಎನ್.ಕೆ.ಶಿವಣ್ಣ, 'ಸೇನೆಯಿಂದ ಮರಳಿದ ಸೈನಿಕರಿಗೆ ಚುನಾವಣೆಗಳಲ್ಲಿ ಯಾವುದೇ ಮೀಸಲಾತಿ ಕಲ್ಪಿಸದೇ ಇರುವುದು ವಿಪರ್ಯಾಸ. ರಾಜ್ಯದ ಅಭಿವೃದ್ಧಿ ಕುಂಠಿತವಾಗಲು ಇದೂ ಕಾರಣ' ಎಂದರು.

'ಉದ್ಯೋಗ ಅರ್ಹತೆ ಹೆಚ್ಚಿಸುವ ಭಾಷಾ ಕಲಿಕೆ'

ಬೆಂಗಳೂರು: ಬೆಂಗಳೂರು ನಗರ ವಿಶ್ವವಿದ್ಯಾಲಯದ ವತಿಯಿಂದ 'ವಿದೇಶಿ ಭಾಷೆಗಳು' ಕುರಿತು ಮೂರು ವಾರ ನಡೆದ ಅಂತರರಾಷ್ಟ್ರೀಯ ವೆಬಿನಾರ್ ಶನಿವಾರ ಮುಕ್ತಾಯವಾಯಿತು.

'ವಿದೇಶಿ ಭಾಷೆಗಳ ಕಲಿಕೆ ಎಷ್ಟು ಉಪಯೋಗಿ' ಎಂಬ ಕುರಿತು ನಡೆದ ಅಂತರರಾಷ್ಟ್ರೀಯ ವೆಬಿನಾರ್‌ನಲ್ಲಿ ದೇಶ–ವಿದೇಶಗಳ ಭಾಷಾ ತಜ್ಞರು ಉಪನ್ಯಾಸ ನೀಡಿದರು. 10 ವಿದೇಶಿ ಭಾಷೆಗಳ ಪರಿಚಯ, ಮಹತ್ವ ಮತ್ತು ವ್ಯಾಪ್ತಿಯ ಕುರಿತು ಭಾಷಾ ವಿದ್ವಾಂಸರು ಚರ್ಚಿಸಿದರು. 'ಹೆಚ್ಚು ಭಾಷೆಗಳನ್ನು ಕಲಿತಷ್ಟೂ ಹೆಚ್ಚು ಉದ್ಯೋಗಾವಕಾಶಗಳು ಇರುತ್ತವೆ' ಎಂದು ಉಪನ್ಯಾಸಕರು ಹೇಳಿದರು.

ಫ್ರೆಂಚ್, ಜರ್ಮನ್, ಇಟಾಲಿಯನ್, ಸ್ಪ್ಯಾನಿಷ್, ಹೆಬ್ರ್ಯೂ, ಕೊರಿಯನ್, ಜಪಾನಿ ಹಾಗೂ ಚೀನಿ ಭಾಷೆಗಳ ಕುರಿತು ಚರ್ಚೆ ನಡೆಯಿತು.

ಬೆಂಗಳೂರು ನಗರ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಲಿಂಗರಾಜ ಗಾಂಧಿ ಉದ್ಘಾಟಿಸಿದರು. ಪ್ರೊ. ಅಶೋಕ ಕುಮಾರ್ ಚಾವ್ಲಾ, ಜಯಂತಿ ಶ್ರೀನಿವಾಸನ್, ಪ್ರೀತಿ ವಿದ್ಯಾನಂದ ಅಲ್ಲದೆ, ಜಪಾನ್, ಫ್ರಾನ್ಸ್, ಜರ್ಮನಿಯ ವಿಶ್ವವಿದ್ಯಾಲಯಗಳ ಭಾಷಾ ವಿಭಾಗದ ಮುಖ್ಯಸ್ಥರು ಪಾಲ್ಗೊಂಡಿದ್ದರು.

'ಚರಣ್ ಬಿ.ಇಡಿ ಕಾಲೇಜು: ಪ್ರವೇಶ ಪಡೆಯಬೇಡಿ'

ಬೆಂಗಳೂರು: ಹಲಸೂರಿನ ಕೇಂಬ್ರಿಜ್ ಬಡಾವಣೆಯಲ್ಲಿರುವ ಚರಣ್ ಬಿ.ಇಡಿ ಕಾಲೇಜಿನಲ್ಲಿ ಯಾವ ವಿದ್ಯಾರ್ಥಿಗಳೂ ಪ್ರವೇಶ ಪಡೆಯಬಾರದು ಎಂದು ಬೆಂಗಳೂರು ನಗರ ವಿಶ್ವವಿದ್ಯಾಲಯವು ಪ್ರಕಟಣೆಯಲ್ಲಿ ತಿಳಿಸಿದೆ.

'ಈ ಕಾಲೇಜು ಎನ್‌ಸಿಟಿಇಯಿಂದ ಅನುಮೋದನೆ ಪಡೆದಿರುವುದಾಗಿ ಸುಳ್ಳು ಪ್ರಮಾಣ ಪತ್ರವನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದೆ. ಕಾಲೇಜಿನ ಸಂಯೋಜನೆಯನ್ನು ರದ್ದುಗೊಳಿಸುವಂತೆ ವಿವಿಧ ಪ್ರಾಧಿಕಾರಗಳಿಗೆ ಶಿಫಾರಸು ಮಾಡಲಾಗಿದ್ದು, ಸರ್ಕಾರದ ಗಮನಕ್ಕೂ ತರಲಾಗಿದೆ' ಎಂದು ವಿಶ್ವವಿದ್ಯಾಲಯದ ಕುಲಪತಿ ಹೇಳಿದ್ದಾರೆ.

'ಈ ಕಾಲೇಜಿನಲ್ಲಿ ಓದುತ್ತಿದ್ದ ವಿದ್ಯಾರ್ಥಿಗಳನ್ನು ವಿಶ್ವವಿದ್ಯಾಲಯದಲ್ಲಿ ಸಂಯೋಜನೆಗೊಂಡಿರುವ ಇತರೆ ಐದು ಕಾಲೇಜುಗಳಿಗೆ ವರ್ಗಾವಣೆ ಮಾಡಲು ಸೂಚಿಸಲಾಗಿದೆ' ಎಂದೂ ಅವರು ಹೇಳಿದ್ದಾರೆ.

EMPLOYMENT NOTIFICATION

1 Applications are invited by the Commandant, 56 Coy ASC (Sup) Type 'G' to fill 01 (One) Tinsmith (Skilled) posts in Group 'C' in 56 Coy ASC (Sup) Type 'G'.

2 For further detailed information please refer to EMPLOYMENT NEWS weekly issue of 17-23 Jul 2021 and 31 Jul - 06 Aug 2021

Commandant
56 Coy ASC (Sup) Type 'G'

ಖಜಾನೆ ಆಯುಕ್ತರು, ಖಜಾನೆ ಇಲಾಖೆ,
5ನೇ ಮತ್ತು 6ನೇ ಮಹಡಿ, ಕೆ.ಪಿ.ಸಿ.ಎಲ್.ಗ್ರೀನ್ ಕಟ್ಟಡ, ಅರಮನೆ ರಸ್ತೆ, ಬೆಂಗಳೂರು-560 001.
ದೂ: 080-22867700, ಫ್ಯಾಕ್ಸ್: 080-22860142
ಸಂಖ್ಯೆ:ಖ.ಆ/ಸಂಗ್ರಹಣೆ/23/2021-22 ದಿನಾಂಕ:31.07.2021

ರಾಜ್ಯಾದ್ಯಂತ ಖಜಾನೆಗಳಲ್ಲಿನ ಯು.ಪಿ.ಎಸ್.ಗಳಿಗೆ ಸಮಗ್ರ ಎ.ಎಂ.ಸಿ. ಒದಗಿಸುವ ಏಜೆನ್ಸಿ ಆಯ್ಕೆಗಾಗಿ ಆರ್.ಎಫ್.ಪಿ.

ಖಜಾನೆ ಇಲಾಖೆಯು ''ರಾಜ್ಯಾದ್ಯಂತ ಖಜಾನೆಗಳಲ್ಲಿನ ಯು.ಪಿ.ಎಸ್.ಗಳಿಗೆ ಸಮಗ್ರ ಎ.ಎಂ.ಸಿ. ಒದಗಿಸುವ ಏಜೆನ್ಸಿ ಆಯ್ಕೆಗಾಗಿ ಆರ್.ಎಫ್.ಪಿ'' ಟೆಂಡರನ್ನು ಆಹ್ವಾನಿಸಿದೆ. ಟೆಂಡರ್ ವಿವರಗಳು ಇ-ಪ್ರೊಕ್ಯೂರ್‌ಮೆಂಟ್ ವೇದಿಕೆ www.eproc.karnataka.gov.in ನಲ್ಲಿ ಲಭ್ಯವಿದ್ದು, ಟೆಂಡರ್‌ಗಳನ್ನು ವಿದ್ಯುನ್ಮಾನವಾಗಿ www.eproc.karnataka.gov.in ಇಲ್ಲಿ ಸಲ್ಲಿಸಬಹುದು.

ವಾಸಾಸಂಇ/ಉನಿ.ನ/12/ಎಂಸಿಎ/2021-22

STAY PROTECTED FROM COVID-19, NO CARELESSNESS UNTIL THERE IS A CURE.
Wear Mask | 6 Feet Follow Physical Distancing | Maintain Hand Hygiene

ನಗರಸಭೆ ಕಾರ್ಯಾಲಯ, ಕನಕಪುರ
ನಂ: ಕನಸ/ತಾಂ.ಶಾ–1/ನ.ನಿ/ಸಿಆರ್/10/2021–22 ದಿನಾಂಕ: 29.07.2021

ಟೆಂಡರ್ ಪ್ರಕಟಣೆ

2021–22ನೇ ಸಾಲಿನ ನಗರಸಭಾ ನಿಧಿಯಡಿ ಈ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸಲು ಸಂಬಂಧಪಟ್ಟ ಟೆಂಡರ್ ಡಾಕ್ಯೂಮೆಂಟ್‌ನ ಷರತ್ತು ಹಾಗೂ ಸೂಚನೆಗೊಳಪಟ್ಟು ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಟೆಂಡರ್‌ಗಳ ಟೆಂಡರ್ ಆಹ್ವಾನಿಸಲಾಗಿದೆ. DMA/2021-22/OW/WORK_INDENT118364, 2021-22ನೇ ಸಾಲಿನ ನಗರಸಭಾ ನಿಧಿಯಡಿ ಕನಕಪುರ ನಗರಸಭಾ ವ್ಯಾಪ್ತಿಯಲ್ಲಿ ಬರುವ ಒಳಚರಂಡಿ ಜಾಲ, ವೆಟ್‌ವೆಲ್ (2 ಸಂಖ್ಯೆ), STP ಗಳನ್ನು ನಿರ್ವಹಣೆ ಮಾಡಲು ಹೊರಗುತ್ತಿಗೆ ಸಿಬಂದಿಗಳನ್ನು ಒದಗಿಸಲು ಹಾಗೂ ನಗರಸಭಾ ವಾಟರ್ ಟ್ಯಾಂಕ್‌ಗಳಿಗೆ ಚಾಲಕರನ್ನು ಒದಗಿಸಲು ಹೊರಗುತ್ತಿಗೆ ವಾರ್ಷಿಕ ಟೆಂಡರ್ ಅಂದಾಜು ಮೊತ್ತ ರೂ. 40.85 ಲಕ್ಷ DMA/2021-22/OW/WORK_INDENT118365, 2021-22ನೇ ಸಾಲಿನ ನಗರಸಭಾ ನಿಧಿಯಡಿ ಕನಕಪುರ ನಗರಸಭಾ ವ್ಯಾಪ್ತಿಯ ಕಾನಕಾನಹಳ್ಳಿ ಪಾರ್ಕ್‌ನ ವಾರ್ಷಿಕ ನಿರ್ವಹಣೆ ಟೆಂಡರ್ ಅಂದಾಜು ಮೊತ್ತ ರೂ. 70.00 ಲಕ್ಷ. DMA/2021-22/OW/WORK_INDENT118366, 2021-22ನೇ ಸಾಲಿನ ನಗರಸಭಾ ನಿಧಿಯಡಿ ಕನಕಪುರ ನಗರಸಭಾ ವ್ಯಾಪ್ತಿಯಲ್ಲಿ ಬರುವ ಕನಕ ಕಾವೇರಿ ಉದ್ಯಾನವನ ನಿರ್ವಹಣೆಯ ವಾರ್ಷಿಕ ಟೆಂಡರ್ ಅಂದಾಜು ಮೊತ್ತ ರೂ. 11.00 ಲಕ್ಷ ಮತ್ತು DMA/2021-22/OW/WORK_INDENT118385, 2021-22ನೇ ಸಾಲಿಗೆ ಕನಕಪುರ ನಗರಸಭೆಯ ನೀರು ಸರಬರಾಜು ಶಾಖೆಗೆ ಅಗತ್ಯವಿರುವ ನೀರು ಸರಬರಾಜು ಸಾಮಗ್ರಿಗಳನ್ನು ವಾರ್ಷಿಕವಾಗಿ ಖರೀದಿಸುವುದು ಅಂದಾಜು ಮೊತ್ತ ರೂ. 20.00 ಲಕ್ಷ. ಇ.ಎಂ.ಡಿಯನ್ನು ದೃಢೀಕೃತ ಪತ್ರದ ಮೂಲಕ ಸಲ್ಲಿಸುವುದು. ಟೆಂಡರ್ ದಿನಾಂಕದ ವಿವರಗಳು ಹಾಗೂ ಇತರೆ ಮಾಹಿತಿಗಳು ಕೆಳಕಂಡಂತಿವೆ. ಟೆಂಡರ್‌ನ್ನು ಸಲ್ಲಿಸಲು ಕೊನೆಯ **ದಿನಾಂಕ: 12.08.2021ರ ಸಂಜೆ 16:00 ಗಂಟೆಯವರೆಗೆ.** ಟೆಂಡರ್‌ಗಳನ್ನು ತೆರೆಯುವ **ದಿನಾಂಕ: 13.08.2021ರ ಸಂಜೆ 16:30 ಗಂಟೆಗೆ.** ಯಾವುದೇ ದಿನಾಂಕಗಳಲ್ಲಿನ ಮುಂದೂಡಿಕೆ ಮತ್ತು ತಿದ್ದುಪಡಿಗಳಿದ್ದಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಪ್ರಕಟಿಸಲಾಗುವುದು. ಯಾವುದೇ ವಾರ್ತಾ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಹೆಚ್ಚಿನ ವಿವರಗಳನ್ನು ಕಛೇರಿ ತಾಂತ್ರಿಕ ಶಾಖೆಯಿಂದ ಪಡೆಯಬಹುದಾಗಿದೆ.

ಸಹಿ/–
ಪೌರಾಯುಕ್ತರು, ನಗರಸಭೆ, ಕನಕಪುರ
ವಾಸಾಸಂಇ/ರಾನ/ಬ್ರಾಂಜ್/172/2021–22

ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತ
ಜಿಲ್ಲಾ ವ್ಯವಸ್ಥಾಪಕರ ಕಛೇರಿ, ಬೆಂಗಳೂರು (ನಗರ & ಗ್ರಾಮಾಂತರ) ಜಿಲ್ಲೆ.
4ನೇ ಮುಖ್ಯ ರಸ್ತೆ, 16ನೇ ಅಡ್ಡ ರಸ್ತೆ, ಸಂಪಂಗಿರಾಮನಗರ, ಬೆಂಗಳೂರು–560027
ದೂರವಾಣಿ ಸಂಖ್ಯೆ.080–40936621, dmkmvstdc.banglore@gmail.com

2021–22ನೇ ಸಾಲಿನ ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ, ಬೆಂಗಳೂರು ನಗರ & ಗ್ರಾಮಾಂತರ ಜಿಲ್ಲೆಯ ವತಿಯಿಂದ ವಿವಿಧ ಯೋಜನೆಗಳಿಗೆ ಪರಿಶಿಷ್ಟ ಪಂಗಡದ ಫಲಪೇಕ್ಷಿಗಳಿಂದ ಅರ್ಜಿಗಳ ಆಹ್ವಾನ

ನಿಗಮದಿಂದ ಅನುಷ್ಠಾನಗೊಳಿಸುತ್ತಿರುವ ಯೋಜನೆಗಳು :
1. ಸ್ವಯಂ ಉದ್ಯೋಗ ಕಾರ್ಯಕ್ರಮಗಳು
   ಅ) ಸ್ವಯಂ ಉದ್ಯೋಗ ನೇರ ಸಾಲ ಯೋಜನೆ
   ಆ) ಉದ್ಯಮ ಶೀಲತಾ ಅಭಿವೃದ್ಧಿ ಯೋಜನೆ
2. ಪ್ರೇರಣಾ (ಮೈಕ್ರೋ ಕ್ರೆಡಿಟ್ ಫೈನಾನ್ಸ್) ಯೋಜನೆ (ನೋಂದಾಯಿತ ಸ್ವ–ಸಹಾಯ ಮಹಿಳಾ ಸಂಘದವರಿಗೆ)
3. ಭೂ ಒಡೆತನ ಯೋಜನೆ
4. ಸಮಗ್ರ ಗಂಗಾ ಕಲ್ಯಾಣ ಯೋಜನೆ

ಪರಿಶಿಷ್ಟ ಪಂಗಡದ ಅಲೆಮಾರಿ, ಅರೆಅಲೆಮಾರಿ, ಸೂಕ್ಷ್ಮ ಮತ್ತು ಅತಿಸೂಕ್ಷ್ಮ ಹಾಗೂ ಆದಿವಾಸಿ ಜನಾಂಗದವರಿಗಾಗಿ ಅನುಷ್ಠಾನಗೊಳಿಸುತ್ತಿರುವ ಯೋಜನೆಗಳು.
1. ಸ್ವಯಂ ಉದ್ಯೋಗ ಕಾರ್ಯಕ್ರಮಗಳು
   ಅ) ಸ್ವಯಂ ಉದ್ಯೋಗ ನೇರ ಸಾಲ ಯೋಜನೆ
   ಆ) ಉದ್ಯಮ ಶೀಲತಾ ಅಭಿವೃದ್ಧಿ ಯೋಜನೆ
2. ಪ್ರೇರಣಾ (ಮೈಕ್ರೋ ಕ್ರೆಡಿಟ್ ಫೈನಾನ್ಸ್) ಯೋಜನೆ (ನೋಂದಾಯಿತ ಸ್ವ–ಸಹಾಯ ಮಹಿಳಾ ಸಂಘದವರಿಗೆ)

ಅರ್ಜಿ ಸಲ್ಲಿಸಲು ಪ್ರಾರಂಭಿಕ ದಿನಾಂಕ:30.07.2021
ಅಂತಿಮ ದಿನಾಂಕ:25.08.2021

ಫಲಾಪೇಕ್ಷಿಗಳು ಆನ್‌ಲೈನ್ ಮೂಲಕ ಅರ್ಜಿಗಳನ್ನು ಮತ್ತು ದಾಖಲೆಗಳನ್ನು ನಿಗಮದ ವೆಬ್‌ಸೈಟ್ https://kmvstdcl.karnataka.gov.in ಮೂಲಕ ಅಪ್‌ಲೋಡ್ ಮಾಡಬಹುದು.
ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ : 080–40936621 ಅಥವಾ ಜಿಲ್ಲಾ ವ್ಯವಸ್ಥಾಪಕರ ಕಛೇರಿ, ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತ ಬೆಂಗಳೂರು ನಗರ ಜಿಲ್ಲೆ. 4ನೇ ಮುಖ್ಯ ರಸ್ತೆ, 16ನೇ ಅಡ್ಡ ರಸ್ತೆ, ಸಂಪಂಗಿರಾಮನಗರ, ಬೆಂಗಳೂರು–560027 ಸಂಪರ್ಕಿಸಬಹುದಾಗಿದೆ.

ಸಹಿ/–
ಜಿಲ್ಲಾ ವ್ಯವಸ್ಥಾಪಕರು, ಬೆಂಗಳೂರು (ನ & ಗ್ರಾ) ಜಿಲ್ಲೆ
ವಾಸಾಸಂಇ/ಬೆಂನ/980/2021–22

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಅಧೀನ ಉದ್ದಿಮೆ)
ಹಟ್ಟಿ – 584 115, ಲಿಂಗಸುಗೂರು-ತಾ., ರಾಯಚೂರು ಜಿಲ್ಲೆ , ಕರ್ನಾಟಕ. ದೂರವಾಣಿ: 08537-275740/ 276339/275463, ಇ-ಮೇಲ್: material276339@gmail.com ವೆಬ್‌ಸೈಟ್: www.huttigold.co.in

ಟೆಂಡರ್ ಪ್ರಕಟಣೆ ನಂ.19/2021-22 ದಿನಾಂಕ: 03.08.2021

(ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಮಾತ್ರ)
ಪ್ರಭಾರಿ ಉಪ ಪ್ರಧಾನ ವ್ಯವಸ್ಥಾಪಕರು(ಸರಕು) ಇವರಿಂದ ಈ ಕೆಳಗಿನ ಟೆಂಡರ್‌ಗಳನ್ನು ಇ-ಪ್ರೋಕ್ಯೂರ್‌ಮೆಂಟ್ ಮುಖಾಂತರ ತಯಾರಕರು ಮತ್ತು ಪರಿಗಣಿಸಲ್ಪಟ್ಟ ವಿತರಕರಿಂದ ಆಹ್ವಾನಿಸಲಾಗಿದೆ.

ಕ್ರ. ಸಂ.	ಸಾಮಾಗ್ರಿ ವಿವರ	ಪ್ರಮಾಣ	ಅಂದಾಜು ವೆಚ್ಚ (ಕೋಟಿ ರೂಗಳಲ್ಲಿ)
1.	ಸೋಡಿಯಂ ಸೈನೈಡ್ ಪೂರೈಕೆ [(NaCN) 98% Min] HGML/2021-22/IND3130	4,50,000 ಕೆ.ಜಿ.	10.44

(1) ಪ್ರಿ–ಬಿಡ್ ಸಭೆ (Zoom)18.08.2021 ಬೆಳಿಗ್ಗೆ 11.30 ಗಂಟೆಗೆ. (2) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: 03.09.2021 ಸಂಜೆ 4.00 ಗಂಟೆಗೆ. (3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: 06.09.2021 ಬೆಳಿಗ್ಗೆ 10.00 ಗಂಟೆಗೆ. ಟೆಂಡರ್ ನಮೂನೆಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್‌ನಲ್ಲಿ ನೋಡಬಹುದು ಹಾಗೂ ಡೌನ್‌ಲೋಡ್ ಮಾಡಿಕೊಳ್ಳಬಹುದು. ಟೆಂಡರ್ ಪ್ರೋಸೆಸ್ಸಿಂಗ್ ಫೀ ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಟೆಂಡರ್ ನಿಯಮದ ಅನುಸಾರ. ಹೆಚ್ಚಿನ ಮಾಹಿತಿಗಾಗಿ ಖರೀದಿ ಕಾರ್ಯಾಲಯದ ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/- ಪ್ರಭಾರಿ ಉಪ ಪ್ರಧಾನ ವ್ಯವಸ್ಥಾಪಕರು (ಸರಕು)

ಭಾರತದ ಅತಿ ಹೆಚ್ಚು ಚಿನ್ನದ ಉತ್ಪಾದಕರು

ಪ್ರಜಾವಾಣಿ **ಕ್ಲಾಸಿಫೈಡ್ಸ್** ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080 - 45557160 /161/ 162/ 163/ 164 9845114560 / 9731810277/ 9886213331

REAL ESTATE SELLING

Sites

Jayanagar

SITE NO 868 WITH OLD HOUSE ON SALE 4 TBLOCK JAYANAGARA 38 A CROSS 40X52 SF CONTACT AGENT KRISHNAMURTHY-82773 05783

BUSINESS

Business to Business

Finance

NRI'S INVESTMENT And Finance AvailableOn LowInterest AgainstProperties, Land & Building,Sites,Flats, Converted& AgricultureLandsCall: 7411265189

Business

WANTED BUSINESS Partner, Lahab Veg Hotel, Investment Rs 5 Lakhs, Income 50:50. Contact: 8892501007/ 9606701007

JOB OPPORTUNITIES

Teachers/ Professors

ಪಾಂಚಜನ್ಯಾ ವಿದ್ಯಾಪೀಠ ವೆಲ್‌ಫೇರ್ ಟ್ರಸ್ಟ್,
1ನೇ, 'ಎನ್' ಬ್ಲಾಕ್, ರಾಜಾಜಿನಗರ, ಬೆಂಗಳೂರು–10
ಶಾಖಾ ಕಛೇರಿ: ಪಿ.ವಿ.ಪಿ ಕಲ್ಯಾಣಧತ್ತಿ, ಡಾ.ಅಂಬೇಡ್ಕರ್ ತಾಂತ್ರಿಕ ಮಹಾವಿದ್ಯಾಲಯ, ಮಲ್ಲತ್ತಹಳ್ಳಿ, ಬೆಂ–56 ದೂರವಾಣಿ ಸಂಖ್ಯೆ : 9741940511
PVPWT/ 2020–21 Dtd. 2–8–2021

ಎರಡನೇ ಪ್ರಕಟಣೆ

ದಿನಾಂಕ 21–03–2020 ರಲ್ಲಿ ಪ್ರಕಟಣೆ ಯಾದ ಖಾಲಿ ಹುದ್ದೆಗಳಿಗೆ ಸಂಬಂಧಪಟ್ಟಂತೆ ಆಂಗ್ಲ ಭಾಷಾ ಶಿಕ್ಷಕರ ಹುದ್ದೆಗೆ ಅರ್ಹ ಅರ್ಜಿಗಳು ಬಾರದ ಕಾರಣ ಎರಡನೇ ಬಾರಿ ಪ್ರಕಟಿಸುತ್ತಿದ್ದೇವೆ.

ಈ ಧತ್ತಿಯ ಆಶ್ರಯದಲ್ಲಿ ನಡೆಯುತ್ತಿರುವ ಪಿ.ವಿ.ಪಿ ಅನುದಾನಿತ ಪ್ರೌಢಶಾಲೆ, ಅಗ್ರಹಾರದಾಸರಹಳ್ಳಿ ಮತ್ತು ಮತ್ತಿಕೆರೆ ಇಲ್ಲಿ ಖಾಲಿ ಇರುವ ಈ ಕೆಳಕಂಡ ಹುದ್ದೆಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಹುದ್ದೆಯ ಹೆಸರು	ಸಂಖ್ಯೆ	ಮೀಸಲಾತಿ
ಆಂಗ್ಲ ಭಾಷಾ ಶಿಕ್ಷಕರು	01 + 01	ಪ್ರವರ್ಗ– 2ಎ, ಸಾಮಾನ್ಯ ಅಂಗವಿಕಲ

ಸೂಚನೆ: ಶೈಕ್ಷಣಿಕ ಅರ್ಹತೆ, ಅನುಭವ ಮತ್ತು ವಯಸ್ಸು ಕರ್ನಾಟಕ ಸರ್ಕಾರದ ನಿಯಮಗಳ ಪ್ರಕಾರ. ಇಚ್ಛೆವುಳ್ಳ ಅಭ್ಯರ್ಥಿಗಳು ಶಾಖಾ ಕಛೇರಿಯಿಂದ ಅರ್ಜಿಗಳನ್ನು ಪಡೆದು, ಕಾರ್ಯದರ್ಶಿ ಪಿ.ವಿ.ಪಿ ವೆಲ್‌ಫೇರ್ ಟ್ರಸ್ಟ್– ಹೆಸರಿನಲ್ಲಿ, ಡಿ.ಡಿ ರೂ. 500/– ಪಡೆದು ಸಂಬಂಧಪಟ್ಟ ದಾಖಲಾತಿಗಳೊಡನೆ ಪ್ರಕಟಣೆಯಾದ 21 ದಿನಗಳಲ್ಲಿ ಅರ್ಜಿಯನ್ನು ಮೇಲ್ಕಂಡ ಶಾಖಾ ಕಛೇರಿ ವಿಳಾಸಕ್ಕೆ ಕಳುಹಿಸತಕ್ಕದ್ದು.

ಕಾರ್ಯದರ್ಶಿ
ಪಿ.ವಿ.ಪಿ. ಕಲ್ಯಾಣಧತ್ತಿ

Multiple Vacancy

REQUIRED IMMEDIATELY HR, Administration, Manager, Accounts, Supervisor, technical Mechanical, Electronics, Electrical, Computer Engineers -7676760299/ 7676760399

DH Classifieds
BOOK YOUR AD FOR SUNDAY & GET 50% OFF ON WEEKDAYS
For Lineage & Single/ Multi Column Classifieds Display ads
For more information contact: 9880856233 /9845114560 9886213331

PERSONAL

Change of Name

I, SANGEETHA have changed my name to SANGEETHA PAMADI KIRAN vide affidavit dated: 2/8/2021 Before Notary C.Srinivas Bangalore

I LALIT PRASAD S/o. S Shivaprasad, R/at #485, 1st A Main, 16th Cross, CQAL Layout, Kodigehalli Main Road, Sahakarnagar, Bangalore-92, have changed my name from LALITESHA. S to LALIT PRASAD, affidavit 04/09/2020 before notary M.S. Satish Baangalore. Henceforth I shall be know as LALIT PRASAD only.

I, K.SWETHA KUMARI, Residing at Flat-S-201, SaiShakthi Avhni, No.343/35,Srirampura, Jakkur Post, Bangalore-64 have changed my name to SWETHA RAO. vide affidatit dated 31-07-2021, before H.G.Venkataramu,Notary, Bangalore.

GURU BASAPPA, Father/o, 6496358M, HAV/ASH, IRANNA TADAHAL, VILL-BANAHATTI, NARAGUND, GADAG, KARNATAKA., have changed my name from GURU BASAPPA to GURUBASAPPA R TADAHAL, 30/07/2021, Notary K.V. Mani, Bangalore

I,VIJAY S, legal heir of Senthur Pandian aged 23 Years, Currently R/at #75/76 Flat #102, Shakeel Ahmed Nest, Abubakar Masjid Road, Sinthan Nagar, Bengaluru-45 Have Changed my name from Vijay. S to Viji Senthur Pandian and Gender from Male to FEMALE vide affidavit dated 02/08/2021 before notary K.Venkateshan, Bangalore.

I, MARY W/o Suresh Kumar S residing No. 105, Sai Sannidhi Apartment, 2nd Cross, Ananth Nagar, Phase 2 Huskur Gate Bangalore-560100 have changed my name to MARY SURESH KUMAR Vide Affidavit dated 22-06-2021 before B.M.Chandrashekar, Notary

I, DEVISHI BHARTIA, W/o Ronak Mittal, R/A 'Mittal Basera' #10, 1st floor, 1st cross,10th main, Sadashivanagar, Bangalore-560080 have changed my name to DEVISHI MITTAL, after my marriage vide affidavit dated 30/7/2021 before Notary N.Mahesh, Bangalore. Hence forth I shall called DEVISHI MITTAL only

CHANNAWA, MOTHER/O, 6496358M, HAV/ASH, IRANNA TADAHAL, VILL-BANAHATTI, NARAGUND, GADAG, KARNATAKA., have changed my name from CHANNAWA to CHANNAVVA TADAHAL, 30/07/2021, Notary K.V. Mani, Bangalore

I,KULANDAI THERESA MAHEMAI DAS Resinding-at Somanathapura Village, Sosale-Hobli, T.Narasipura Taluk-VTC, Mysore-571120 have-changed my-Name-to THEJASWINI BHARANI vide-Affidavt Dated:30-07-2021 Sworn-before-Notary, Ambreshappa,Bangalore

RUBI KUMARI, Wife/o, 6496383L, HAV/ASH, RAVINDRA KUMAR, VILL-RAMDHIYA(ARA), VALIGANJ, ARA, BHOJPUR, BIHAR, have changed my name from RUBI KUMARI to RUBI DEVI, 31/07/2021, Notary K.V. Mani, Bangalore

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

Lost

ಕಳೆದಿದೆ
ಸೇಲ್ ಡೀಡ್ ಡಾಕ್ಯೂಮೆಂಟ್ ನಂ. 1235/2007, ಎಸ್‌ಎಸ್ ನಂ.: 3452/07, ಸಿಸಿ ನಂ.: 2771/07 ದಿ: 28–11–2007, ಹೆಚ್‌ಐಜಿ, ಬ್ಲಾಕ್ ನಂ. ಸಿ–7, ಫ್ಲ್ಯಾಟ ನಂ. 502, ಸರ್ವೆ ನಂ. 2 ಪಾರ್ಟ್ & 10 ಪಾರ್ಟ್ ಹೊಂದಿರುವ ಪೊಚರಾಮ್ ಗ್ರಾಮ, ಎ.ಪಿ. ಹೌಸಿಂಗ್ ಬೋರ್ಡ್, ಸಿಂಗಾಪೂರ್ ಕ್ಲಾಸ್ ಟೌನ್‌ಶಿಪ್, ಪೊಚರಾಮ್, ಹೈದರಾಬಾದ್.' ಯಾರಿಗಾದರೂ ಸಿಕ್ಕಿದ್ದಲ್ಲಿ ದಯವಿಟ್ಟು ಕೆಳಕಂಡ ನನ್ನ ವಿಳಾಸಕ್ಕೆ ಮಾಹಿತಿ ನೀಡಿ: ಸತ್ತಿರಾಜು ಶೇಷಗಿರಿ ರಾವ್ ಇ–111, 8ನೇ ಅಡ್ಡರಸ್ತೆ, ಮಾನ್ಯತಾ ರೆಸಿಡೆನ್ಸಿ, ಹೊರ ವರ್ತುಲ ರಸ್ತೆ, ಮಾನ್ಯತಾ ಟೆಕ್ ಪಾರ್ಕ್, ಬೆಂಗಳೂರು–560045

PUBLIC NOTICE

ಸಾರ್ವಜನಿಕರ ಗಮನಕ್ಕೆ
ಬೆಂಗಳೂರು–2, ಕಬ್ಬನ್ ಪೇಟೆ ಮುಖ್ಯ ರಸ್ತೆ, ಮನೆ ಸಂಖ್ಯೆ 18 ರಿಂದ 22, (ಬ್ಯಾಟಪ್ಪ ಬಿಲ್ಡಿಂಗ್) ಬೆಂಗಳೂರು ಗ್ರಾಮಾಂತರ ಜಿಲ್ಲೆ, ನೆಲಮಂಗಲ ಟೌನ್, ದೇವಾಂಗ ಬೀದಿಯಲ್ಲಿರುವ ಮನೆಯ ಸಂಖ್ಯೆ 483/437 ಮತ್ತು 452/409, ಬೆಂಗಳೂರು ಗ್ರಾಮಾಂತರ ಜಿಲ್ಲೆ, ನೆಲಮಂಗಲ ತಾಲ್ಲೂಕು, ಕಸಬಾ ಹೋಬಳಿ, ಜಕ್ಕಸಂದ್ರ ಗ್ರಾಮಕ್ಕೆ ಸೇರಿರುವ ಸರ್ವೆ ನಂಬರು 49/2, 49/3ರಲ್ಲಿ (ಮಹಾಲಕ್ಷ್ಮಿ ಎನ್‌ಕ್ಲೇವ್ ಎಂಬ ಹೆಸರಿನಲ್ಲಿ) ವಿಂಗಡಿಸಿರುವ ನಿವೇಶನಗಳನ್ನು ಸಾರ್ವಜನಿಕರು ಖರೀದಿಸಬಾರದು ಕಾರಣ ಮೇಲೆ ತಿಳಿಸಿರುವ ಸರ್ವೆ ನಂಬರುಗಳ ಜೊತೆಯಲ್ಲಿ ಅದೇ ಗ್ರಾಮಕ್ಕೆ ಸೇರಿರುವ ಬೇರೆ ಸರ್ವೆ ನಂಬರುಗಳು ಆಂದರೆ ಸರ್ವೆ ನಂಬರ 29ರಲ್ಲಿ ವಿಸ್ತೀರ್ಣ 2 ಎಕರೆ 32 ಗುಂಟೆ, ಸರ್ವೆ ನಂಬರ 19/4 ರಲ್ಲಿ ವಿಸ್ತೀರ್ಣ 03 ಗುಂಟೆ ಮತ್ತು ಸರ್ವೆ ನಂಬರ 54/1 ರಲ್ಲಿ ವಿಸ್ತೀರ್ಣ 01 ಗುಂಟೆ ಜಮೀನುಗಳು ಹಾಗೂ ನಿವೇಶನಗಳು ಮೇಲೆ ವಿಭಾಗಕ್ಕಾಗಿ ಉಚ್ಚ ನ್ಯಾಯಾಲಯದಲ್ಲಿ RFA No. 718/2012 (O.S. No. 8311/ 2010) ರಲ್ಲಿ ವಾಜ್ಯ ಚಾಲ್ತಿಯಲ್ಲಿರುತ್ತದೆ. ಮೇಲ್ಕಂಡ ಆಸ್ತಿಗಳಲ್ಲಿ ನನ್ನ ಕಕ್ಷಿದಾರರಾದ ಶ್ರೀ ಪಿ ಆರ್. ಬಲರಾಮು ರವರು ಹಕ್ಕು ಹೊಂದಿರುತ್ತಾರೆ ಈ ನೋಟೀಸು ಗಮನಕ್ಕೆ ಬಂದಿದ್ದರು ಸಹ ನಿವೇಶನಗಳನ್ನು ಖರೀದಿಸಿರುವ ಪಕ್ಷದಲ್ಲಿ ಅವರೆ ಕಾರಣ ಹೊರತು ನನ್ನ ಕಕ್ಷಿದಾರರಲ್ಲ.

ಆರ್. ನಾರಾಯಣಸ್ವಾಮಿ, ವಕೀಲರು
ನಂ. 28, 1ನೇ ಮಹಡಿ, 13ನೇ ಅಡ್ಡ ರಸ್ತೆ, ಕಬ್ಬನ್‌ಪೇಟೆ, ಬೆಂಗಳೂರು – 02.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ, ಬಸವನಗುಡಿ ವಿಭಾಗ, ಚನ್ನಮ್ಮನಕೆರೆ, ಸಿ.ಟಿ. ಬೆಡ್, ಬೆಂಗಳೂರು.
ಸಂಖ್ಯೆ: ಕಾಅ/ಬವಿ/ಟೆಂ/04/2021–22 ದಿನಾಂಕ: 31–07–2021

ಅಲ್ಪಾವಧಿ ಟೆಂಡರ್ ಆಹ್ವಾನ
(ಜಿಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ) (ಎರಡು ಲಕೋಟೆ ಪದ್ಧತಿ)

ಕಾರ್ಯಪಾಲಕ ಅಭಿಯಂತರರು, ಬಸವನಗುಡಿ ವಿಭಾಗ, ಬಿಬಿಎಂಪಿ, ಬೆಂಗಳೂರು ಇವರು ಅರ್ಹ ದರ್ಜೆ–1 ಗುತ್ತಿಗೆದಾರರಿಂದ ಈ ಕೆಳಗಿನ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು	ಟೆಂಡರ್‌ಗಿಟ್ಟ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)
1	ವಾರ್ಡ್ ಸಂಖ್ಯೆ. 164, ವಿದ್ಯಾಪೀಠ ಇಲ್ಲಿನ ವಿನಾಯಕ ನಗರದ 4ನೇ ಮತ್ತು 5ನೇ ಅಡ್ಡರಸ್ತೆಯಲ್ಲಿ ಚರಂಡಿಗಳಿಗೆ ಅಭಿವೃದ್ಧಿ ಕಾಮಗಾರಿ. (2ನೇ ಕರೆ).	70.00
2	ವಾರ್ಡ್ ಸಂಖ್ಯೆ. 154ರಲ್ಲಿನ ಬ್ಯೂಗಲ್ ರಾಕ್ ಪಾರ್ಕ್ ಮತ್ತು ಇತರೆ ಪಾರ್ಕ್‌ಗಳಲ್ಲಿ ಹೈಡ್ರಾಲಿಕ್ ಜಿಮ್ ಉಪಕರಣ, ಮಕ್ಕಳ ಆಟದ ಉಪಕರಣ ಒದಗಿಸುವುದು ಹಾಗೂ ಇತರೆ ಅಭಿವೃದ್ಧಿ ಕಾಮಗಾರಿಗಳು. (3ನೇ ಕರೆ).	75.00

ಇಎಂಡಿ: ಸರ್ಕಾರದ ಆದೇಶ ಸಂಖ್ಯೆ:ಆಇ675 ವೆಚ್ಚ–12/2020, ದಿನಾಂಕ: 22–12–2020 ಬೆಂಗಳೂರು ಅನುಸಾರ ವಿನಾಯಿತಿ ನೀಡಲಾಗಿದೆ. (ಇಎಂಡಿ ಘೋಷಣೆ ನಮೂನೆ ಸಲ್ಲಿಸಿದ್ದಲ್ಲಿ)

ಟೆಂಡರ್ ವೇಳಾಪಟ್ಟಿ: 1) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಜಿಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: https://eproc.karnataka.gov.in ಮೂಲಕ ದಿನಾಂಕ: 11–08–2021 ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ದಿನಾಂಕ: 01–09–2021ರಂದು ಸಂಜೆ 4.00 ಗಂಟೆಯೊಳಗೆ ಸಲ್ಲಿಸಬಹುದು. 3) ಬಿಡ್ ಪೂರ್ವಭಾವಿ ಸಭೆಯು ಮುಖ್ಯ ಅಭಿಯಂತರರು–ದಕ್ಷಿಣ ಕಛೇರಿ, 9ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ, ಜಯನಗರ 2ನೇ ಬ್ಲಾಕ್, ಬೆಂಗಳೂರು – 560011 ಇಲ್ಲಿ ದಿನಾಂಕ: 19–08–2021ರಂದು ಸಂಜೆ 4.00 ಗಂಟೆಗೆ ನಡೆಯಲಿದೆ. 4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 06–09–2021ರಂದು ಸಂಜೆ 4.00 ಗಂಟೆಗೆ.

ಸಹಿ/– ಕಾರ್ಯಪಾಲಕ ಅಭಿಯಂತರರು, ಬಸವನಗುಡಿ ವಿಭಾಗ.

ಅಭಿವೃದ್ಧಿ ಶುಲ್ಕ ಪಾವತಿಸಿ, ಬೆಂಗಳೂರು ಅಭಿವೃದ್ಧಿಗೆ ಸಹಕರಿಸಿ.
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಅಪರಾಧ ಹಿನ್ನೆಲೆಯವರ ನಂಟು; ಪೊಲೀಸರಿಗೆ ಎಚ್ಚರಿಕೆ ಕೊಟ್ಟ ಡಿಜಿಪಿ

ಬೆಂಗಳೂರು: ಸಮಾಜದಲ್ಲಿ ಅಶಾಂತಿಯನ್ನುಂಟು ಮಾಡುವ ಹಾಗೂ ಅಪರಾಧ ಹಿನ್ನೆಲೆಯುಳ್ಳವರ ಜೊತೆ ಕೆಲ ಪೊಲೀಸರು ನಂಟು ಹೊಂದಿರುವ ಸಂಗತಿಯನ್ನು ಗಂಭೀರವಾಗಿ ಪರಿಗಣಿಸಿರುವ ರಾಜ್ಯ ಪೊಲೀಸ್ ಮಹಾನಿರ್ದೇಶಕ ಪ್ರವೀಣ್ ಸೂದ್, ಕೆಲ ನಿಯಮಗಳನ್ನು ರೂಪಿಸಿ ಎಚ್ಚರಿಕೆ ರವಾನಿಸಿದ್ದಾರೆ.

'ಯಾವುದೇ ವ್ಯಕ್ತಿ ಜೊತೆ ಒಡನಾಟ ಹೊಂದುವ ಮುನ್ನ ಆತನ ಹಿನ್ನೆಲೆ ಪರಿಶೀಲಿಸಿ ಮುಂದುವರಿಯಬೇಕು. ಸಂಘ–ಸಂಸ್ಥೆ ಹಾಗೂ ಇತರೆ ಕಾರ್ಯಕ್ರಮಗಳನ್ನು ಪಾಲ್ಗೊಳ್ಳುವ ಮುಂಚೆ, ಅದರ ಉದ್ದೇಶವೇನು ಎಂಬುದನ್ನು ತಿಳಿದು ಎಚ್ಚರದಿಂದ ಇರಬೇಕು. ಪೊಲೀಸ್ ಇಲಾಖೆ ಗೌರವಕ್ಕೆ ಧಕ್ಕೆ ತರುವ ಯಾವುದೇ ಕೆಲಸ ಮಾಡಬಾರದು' ಎಂದೂ ಪ್ರವೀಣ್ ಸೂದ್ ಹೇಳಿರುವುದಾಗಿ ಗೊತ್ತಾಗಿದೆ.

'ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿ, ಅಪರಾಧ ಹಿನ್ನೆಲೆಯುಳ್ಳ ಹಾಗೂ ರೌಡಿಗಳ ಜೊತೆ ಒಡನಾಟವಿಟ್ಟುಕೊಳ್ಳಬಾರದು. ವೈಯಕ್ತಿಕ ಹುಟ್ಟುಹಬ್ಬ, ಮದುವೆ ವಾರ್ಷಿಕೋತ್ಸವ ಹಾಗೂ ಇತರೆ ಕಾರ್ಯಕ್ರಮಗಳನ್ನು ಠಾಣೆಯಲ್ಲಿ ಆಯೋಜಿಸಬಾರದು' ಎಂದೂ ಅವರು ಎಚ್ಚರಿಸಿದ್ದಾರೆ.

ಕೋವಿಡ್: ಗಾಳಿಯ ಮೂಲಕ, ಶೌಚಾಲಯದ ಕೊಳವೆ ಮೂಲಕ ಸೋಂಕು ಹರಡುವ ಸಾಧ್ಯತೆ

ಅಪಾರ್ಟ್‌ಮೆಂಟ್ ಸಮುಚ್ಚಯಗಳಲ್ಲಿ ಹೆಚ್ಚು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಮೂರಕ್ಕಿಂತ ಹೆಚ್ಚು ಕೋವಿಡ್ ಪ್ರಕರಣಗಳು ಇರುವ ಒಟ್ಟು 136 ಪ್ರದೇಶಗಳನ್ನು ಕಂಟೈನ್‌ಮೆಂಟ್ ವಲಯಗಳೆಂದು ಗುರುತಿಸಲಾಗಿದೆ. ಇವುಗಳಲ್ಲಿ ಶೇ 25ಕ್ಕೂ ಅಧಿಕ ಕಂಟೈನ್ಮೆಂಟ್ ವಲಯಗಳು ಅಪಾರ್ಟ್‌ಮೆಂಟ್ ಸಮುಚ್ಚಯಗಳಲ್ಲೇ ಇವೆ.

ಬಿಬಿಎಂಪಿ ಬಿಡುಗಡೆ ಮಾಡಿದ ಅಂಕಿ ಅಂಶಗಳ ಪ್ರಕಾರ ಕೋವಿಡ್ ಪ್ರಕರಣಗಳು ಹೆಚ್ಚಿನ ಸಂಖ್ಯೆಯಲ್ಲಿರುವ 35 ಕಂಟೈನ್‌ಮೆಂಟ್ ವಲಯಗಳಲ್ಲಿ 13 ಅಪಾರ್ಟ್‌ಮೆಂಟ್ ಸಮುಚ್ಚಯಗಳು. ಇನ್ನುಳಿದ ಕಂಟೈನ್‌ಮೆಂಟ್ ವಲಯಗಳು ಬಡಾವಣೆಗಳಲ್ಲಿ, ಸೈನಿಕರ ವಸತಿಗಳಲ್ಲಿವೆ.

ನಗರದಲ್ಲಿ ಒಂದೇ ಕಡೆ ಮೂರಕ್ಕಿಂತ ಹೆಚ್ಚು ಮಂದಿಗೆ ಸೋಂಕು ಕಾಣಿಸಿಕೊಂಡಿದ್ದು ಅಪಾರ್ಟ್‌ಮೆಂಟ್ ಸಮುಚ್ಚಯಗಳಲ್ಲೇ ಹೆಚ್ಚು. ಸೋಂಕಿತರಲ್ಲಿ ಕೆಲವರು, ಕೋವಿಡ್ ಪ್ರಕರಣಗಳ ಸಂಖ್ಯೆ ಏರಿಕೆಯಾಗುತ್ತಿರುವ ಕೇರಳ ಹಾಗೂ ಮಹಾರಾಷ್ಟ್ರ ರಾಜ್ಯಗಳಿಗೆ ಪ್ರಯಾಣ ಬೆಳೆಸಿದ್ದರು ಎಂದು ಬಿಬಿಎಂಪಿ ಮೂಲಗಳು ತಿಳಿಸಿವೆ.

'ಅಪಾರ್ಟ್‌ಮೆಂಟ್ ಸಮುಚ್ಚಯಗಳಲ್ಲಿ ಕೋವಿಡ್ ಕಾಣಿಸಿಕೊಂಡರೆ, ಅಲ್ಲಿನ ಇತರ ನಿವಾಸಿಗಳಿಗೂ ಸೋಂಕು ಪಸರಿಸುವ ಅಪಾಯವಿದೆ. ಏಕೆಂದರೆ ಇಂತಹ ಕಟ್ಟಡಗಳಲ್ಲಿ ಒಂದೇ ಕಡೆ ಹೆಚ್ಚಿನ ಸಂಖ್ಯೆಯಲ್ಲಿ ಜನ ವಾಸಿಸುತ್ತಾರೆ. ಕೆಲವು ಕಟ್ಟಡಗಳಲ್ಲಿ ವಾತಾಯನ ವ್ಯವಸ್ಥೆಯೂ ಸಮರ್ಪಕವಾಗಿರುವುದಿಲ್ಲ' ಎನ್ನುತ್ತಾರೆ ತಜ್ಞರು.

ಪಶ್ಚಿಮ ವಲಯದ ನಿರ್ದಿಷ್ಟ ಅಪಾರ್ಟ್‌ಮೆಂಟ್ ಸಮುಚ್ಚಯಗಳ ಕೆಲವೊಂದು ಘಟಕಗಳಲ್ಲಿ ಗಾಳಿಯ ಮೂಲಕವೂ ಸೋಂಕು ಹರಡಿರುವ ಶಂಕೆ ಇದೆ. ಇತರ ಬಹುಮಹಡಿ ವಸತಿಗಳಲ್ಲೂ ಇದೇ ಮಾದರಿಯಲ್ಲಿ ಸೋಂಕು ಹರಡಬಹುದು ಎಂಬ ಆತಂಕ ಇದರಿಂದ ಸೃಷ್ಟಿಯಾಗಿದೆ.

ಬೊಮ್ಮನಹಳ್ಳಿ ವಲಯದಲ್ಲಿ ಐದು ಕಡೆ ಅತಿಹೆಚ್ಚು ಪ್ರಕರಣಗಳು ವರದಿಯಾಗಿದ್ದು, ಅವುಗಳಲ್ಲಿ ನಾಲ್ಕು ಅಪಾರ್ಟ್‌ಮೆಂಟ್ ಸಮುಚ್ಚಯಗಳು. ಯಲಹಂಕ ವಲಯದಲ್ಲಿ ಅತಿ ಹೆಚ್ಚು ಪ್ರಕರಣಗಳು ವರದಿಯಾಗಿರುವ ನಾಲ್ಕು ಕಂಟೈನ್‌ಮೆಂಟ್ ವಲಯಗಳಲ್ಲಿ ಎರಡು ಅಪಾರ್ಟ್‌ಮೆಂಟ್ ಸಮುಚ್ಚಯಗಳು ಸೇರಿವೆ. ಮಹದೇವಪುರ ವಲಯದಲ್ಲಿ ಅತಿ ಹೆಚ್ಚು ಪ್ರಕರಣಗಳಿರುವ ಐದು ಕಂಟೈನ್‌ಮೆಂಟ್ ವಲಯಗಳಲ್ಲಿ ಎರಡು ಅಪಾರ್ಟ್‌ಮೆಂಟ್ ಸಮುಚ್ಚಯಗಳು. ಆರ್.ಆರ್.ನಗರ ವಲಯದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕೊರೊನಾ ಸೋಂಕು ಇರುವ ಐದು ಕಂಟೈನ್‌ಮೆಂಟ್ ವಲಯಗಳಲ್ಲಿ ಒಂದು ಅಪಾರ್ಟ್‌ಮೆಂಟ್ ಸಮುಚ್ಚಯ. ಪಶ್ಚಿಮ ವಲಯದಲ್ಲಿ 21 ಪ್ರಕರಣಗಳು ಒಂದೇ ಅಪಾರ್ಟ್‌ಮೆಂಟ್ ಸಮುಚ್ಚಯದಲ್ಲಿ ಕಾಣಿಸಿಕೊಂಡಿದೆ. ಇಲ್ಲಿ ಒಟ್ಟು ನಾಲ್ಕು ಕಂಟೈನ್‌ಮೆಂಟ್ ವಲಯಗಳಲ್ಲಿ ಪ್ರಕರಣಗಳ ಸಂಖ್ಯೆ ಹೆಚ್ಚು ಇದೆ.

'ಪಶ್ಚಿಮ ವಲಯದ ಅಪಾರ್ಟ್‌ಮೆಂಟ್ ಸಮುಚ್ಚಯವೊಂದರಲ್ಲಿ ಗಾಳಿಯ ಮೂಲಕ ವೈರಸ್ ಹರಡಿದೆ ಎನ್ನಲಾದ ಪ್ರಕರಣವನ್ನು ಹೆಚ್ಚಿನ ಅಧ್ಯಯನಕ್ಕೆ ಒಳಪಡಿಸಬೇಕಾದ ಅಗತ್ಯ ಇದೆ. ಏಕೆಂದರೆ 2003ರಲ್ಲಿ ಸಾರ್ಸ್–1 ವೈರಾಣು ಕಾಣಿಸಿಕೊಂಡ ಸಮಯದಿಂದಲೂ ಎಲ್ಲೂ ಇಂತಹ ಪ್ರಕರಣ ವರದಿಯಾಗಿಲ್ಲ' ಎನ್ನುತ್ತಾರೆ ತ್ರಿವೇದಿ ಬಯೋಸೈನ್ಸ್ ಸ್ಕೂಲ್‌ನ ವೈರಾಣು ತಜ್ಞ ಡಾ.ಶಾಹಿದ್ ಜಮೀಲ್.

'ಹಾಂಕ್‌ಕಾಂಗ್‌ನ ಅಪಾರ್ಟ್‌ಮೆಂಟ್ ಸಮುಚ್ಚಯವೊಂದರಲ್ಲಿ ಶೌಚಾಲಯದ ಕೊಳವೆ ಮೂಲಕ ವೈರಾಣು ಹರಡಿತ್ತು. ಕೊರೋನಾ ವೈರಾಣು ಕಾಣಿಸಿಕೊಂಡ ಎಲ್ಲೂ ಗಾಳಿಯ ಮೂಲಕ ಸೋಂಕು ಹರಡಿದ ಉದಾಹರಣೆ ಇಲ್ಲ. ಬೆಂಗಳೂರಿನ ಈ ಪ್ರಕರಣ ಹೊಸತು' ಎಂದು ಅವರು ಅಭಿಪ್ರಾಯಪಟ್ಟರು.

ಬೆಂಗಳೂರು ಅಪಾರ್ಟ್‌ಮೆಂಟ್ ಸಮುಚ್ಚಯಗಳ ಸಂಘಟನೆಯ ಸದಸ್ಯ ವಿಕ್ರಮ್ ರೈ, 'ಈ ಅಪಾರ್ಟ್‌ಮೆಂಟ್ ಸಮುಚ್ಚಯದಲ್ಲಿ ಗಾಳಿಯ ಮೂಲಕ ಅಥವಾ ಶೌಚಾಲಯದ ಕೊಳವೆ ಮೂಲಕ ಸೋಂಕು ಹರಡುವ ಸಾಧ್ಯತೆ ಇದೆಯೇ ಎಂಬ ಬಗ್ಗೆ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯವರ ಬಳಿ ಕೋವಿಡ್ ಎರಡನೇ ಅಲೆ ಆರಂಭವಾದ ಸಂದರ್ಭದಲ್ಲೇ ವಿವರಣೆ ಕೇಳಿದ್ದೇವೆ. ಆದರೆ, ಅವರಿಂದ ತೃಪ್ತಿದಾಯಕ ಉತ್ತರ ಸಿಕ್ಕಿಲ್ಲ' ಎಂದರು.

'ಗಾಳಿಯ ಮೂಲಕ ಅಥವಾ ಶೌಚಾಲಯದ ಕೊಳವೆ ಮೂಲಕ ಸೋಂಕು ಹರಡಿರುವುದನ್ನು ಬಿಬಿಎಂಪಿ ದೃಢಪಡಿಸಿಲ್ಲ. ಒಂದು ವೇಳೆ ಶೌಚಾಲಯದ ಕೊಳವೆಗಳ ಮೂಲಕವೂ ಸೋಂಕು ಹರಡುತ್ತದೆ ಎಂದಾದರೆ ಖಂಡಿತ ಅದರಿಂದ ಅಪಾರ್ಟ್‌ಮೆಂಟ್ ಸಮುಚ್ಚಯಗಳ ನಿವಾಸಿಗಳಿಗೆ ಅಪಾಯ ಇದೆ ಎಂದೇ ಅರ್ಥ' ಎಂದು ಕಳವಳ ವ್ಯಕ್ತಪಡಿಸಿದರು.

ಮಾಹಿತಿ ಮುಚ್ಚಿಡುವ ಕ್ಷೇಮಾಭಿವೃದ್ಧಿ ಸಂಘಗಳು

'ಅಪಾರ್ಟ್‌ಮೆಂಟ್ ಸಮುಚ್ಚಯಗಳಲ್ಲಿ ಸೋಂಕು ವೇಗವಾಗಿ ಹರಡುತ್ತಿರುವುದನ್ನು ಪಾಲಿಕೆ ಅಧಿಕಾರಿಗಳೂ ಗಂಭೀರವಾಗಿ ಪರಿಗಣಿಸಿದ್ದಾರೆ. ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳು (ಆರ್‌ಡಬ್ಲ್ಯುಎ) ಕೋವಿಡ್ ಪತ್ತೆಯಾದ ಬಗ್ಗೆ ಪಾಲಿಕೆಗೆ ಮಾಹಿತಿ ನೀಡಲು ಹಿಂದೇಟು ಹಾಕುತ್ತವೆ. ಒಂದು ವೇಳೆ ಅವರು ಆರಂಭಿಕ ಹಂತದಲ್ಲೇ ಮಾಹಿತಿ ನೀಡದಿದ್ದರೆ ಅವರಿಗೇ ಅದು ತಿರುಗುಬಾಣವಾಗಲಿದೆ. ಸೋಂಕಿತರ ಸಂಖ್ಯೆ ಹೆಚ್ಚಳವಾದಾಗ ಅಲ್ಲಿ ಕಟ್ಟುನಿಟ್ಟಿನ ನಿಯಂತ್ರಣ ಕ್ರಮಗಳನ್ನು ಅನುಸರಿಸಬೇಕಾಗುತ್ತದೆ' ಎಂದು ಬಿಬಿಎಂಪಿ ವಿಶೇಷ ಆಯುಕ್ತ (ಆರೋಗ್ಯ) ಡಿ.ರಂದೀಪ್ ತಿಳಿಸಿದರು.

'ಕೆಲವು ಅಪಾರ್ಟ್‌ಮೆಂಟ್ ಸಮುಚ್ಚಗಳ ಆರ್‌ಡಬ್ಲ್ಯುಎಗಳು ಕೋವಿಡ್ ಕುರಿತು ಸರಿಯಾಗಿ ಮಾಹಿತಿ ನೀಡುತ್ತಿರಲಿಲ್ಲ. ಕೆಲವರು ಆಸ್ಪತ್ರೆಗಳಲ್ಲಿ ಗುಟ್ಟಾಗಿ ಕೋವಿಡ್ ಪರೀಕ್ಷೆ ನಡೆಸುತ್ತಿದ್ದರು. ಸೋಂಕು ಪತ್ತೆಯಾದರೂ ಬಿಬಿಎಂಪಿಗೆ ಮಾಹಿತಿ ನೀಡದಂತೆ ಒತ್ತಾಯಿಸುತ್ತಿದ್ದರು. ಇದನ್ನು ತಪ್ಪಿಸುವ ಸಲುವಾಗಿ ಪ್ರಯೋಗಾಲಯಗಳು ಹಾಗೂ ಆಸ್ಪತ್ರೆಗಳು ಎಲ್ಲ ಕೋವಿಡ್ ಪರೀಕ್ಷೆಗಳ ಫಲಿತಾಂಶದ ಬಗ್ಗೆ ಬಿಬಿಎಂಪಿಗೆ ಮಾಹಿತಿ ನೀಡುವುದನ್ನು ಕಡ್ಡಾಯಗೊಳಿಸಿ ಆದೇಶ ಹೊರಡಿಸಿದ್ದೇವೆ' ಎಂದರು.

₹2,700ರ ತನಕ Paytm ಕ್ಯಾಶ್‌ಬ್ಯಾಕ್ ಪಡೆಯಿರಿ
3 ಗ್ಯಾಸ್ ಸಿಲಿಂಡರ್ ಬುಕ್ಕಿಂಗ್‌ಗಳ ಮೇಲೆ. ಈಗ ಬುಕ್ ಮಾಡಲು QR ಸ್ಕ್ಯಾನ್ ಮಾಡಿ!

ನಗರದ ಕೋವಿಡ್ ಅಂಕಿ–ಅಂಶ

12,28,038 ▲	ಒಟ್ಟು ಪ್ರಕರಣಗಳು (12,27,748 ನಿನ್ನೆಯ ವಿವರ)
8,670 ▲	ಸಕ್ರಿಯ ಪ್ರಕರಣಗಳು
12,03,482 ▲	ಗುಣಮುಖರಾದವರು
15,885 ▲	ಒಟ್ಟು ಸಾವು

ಸೋಮವಾರದ ಏರಿಕೆ

ಹೊಸ ಪ್ರಕರಣ	290 ▼
ಗುಣಮುಖ	168 ▼
ಸಾವು	02 ▼

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಆಫ್ರಿಕಾ ಪ್ರಜೆ 'ಕಸ್ಟಡಿ' ಸಾವು; ಲಾಠಿ ಪ್ರಹಾರ

ಮೊದಲ ಪುಟದಿಂದ...

ಕರ್ತವ್ಯನಿರತ ಪಿಎಸ್‌ಐ ಹಾಗೂ ಸಿಬ್ಬಂದಿ ಸಮವಸ್ತ್ರ ಎಳೆದಾಡಿದ ಕೆಲವರು ಹಲ್ಲೆಗೆ ಮುಂದಾದರು. ಪರಿಸ್ಥಿತಿ ಕೈ ಮೀರುತ್ತಿದ್ದಂತೆ ಪೊಲೀಸರು, ಲಾಠಿ ಬೀಸಿದರು. ಪೊಲೀಸರು ಹಾಗೂ ಪ್ರತಿಭಟನಾಕಾರರ ನಡುವೆ ಜಟಾಪಟಿ ನಡೆಯಿತು. ಲಾಠಿ ಬೀಸಿದ್ದರಿಂದ ನಾಲ್ವರಿಗೆ ಗಾಯವಾಗಿ ರಕ್ತ ಸೋರುತ್ತಿತ್ತು. ಅವರನ್ನೂ ಸೇರಿದಂತೆ ಹಲವರನ್ನು ಪೊಲೀಸರು ವಶಕ್ಕೆ ಪಡೆದರು. ಪಿಎಸ್‌ಐ ಹಾಗೂ ಸಿಬ್ಬಂದಿ ಸಹ ಗಾಯಗೊಂಡಿದ್ದಾರೆ.

5 ಗ್ರಾಂ ಡ್ರಗ್ಸ್ ಸಮೇತ ಸಿಕ್ಕಿದ್ದರು: 'ಬಂಜಾರ್ ಲೇಔಟ್‌ನ 12ನೇ ಅಡ್ಡರಸ್ತೆಯಲ್ಲಿ ಡ್ರಗ್ಸ್ ಮಾರುತ್ತಿದ್ದ ಬಗ್ಗೆ ಮಾಹಿತಿ ಬಂದಿತ್ತು. ಪಿಎಸ್‌ಐ ರಘುಪತಿ ನೇತೃತ್ವದ ತಂಡ ಹೋಗಿ ಆರೋಪಿಗಳಿಗಾಗಿ ಕಾಯುತ್ತಿತ್ತು. ಆದರೆ, ಆರೋಪಿಗಳು ಸ್ಥಳಕ್ಕೆ ಬಂದಿರಲಿಲ್ಲ. ಹೆಣ್ಣೂರು ಬಳಿಯ ಬಾಬುಸಾಪಾಳ್ಯದಲ್ಲಿ ಆರೋಪಿಗಳು ಇರುವುದು ಹೊಯ್ಸಳ ಗಸ್ತು ವಾಹನದ ಸಿಬ್ಬಂದಿಯಿಂದ ಗೊತ್ತಾಗಿತ್ತು' ಎಂದು ಡಿಸಿಪಿ ಧರ್ಮೇಂದ್ರಕುಮಾರ್ ಹೇಳಿದರು.

'ಪೊಲೀಸರು ಸ್ಥಳಕ್ಕೆ ಹೋದಾಗ, ಆರೋಪಿ ಜೋಯೆಲ್ ಹಾಗೂ ಇನ್ನೊಬ್ಬ ದ್ವಿಚಕ್ರ ವಾಹನದಲ್ಲಿ (ಕೆಎ 01 ವಿ 5332) ಬಂದಿದ್ದರು. ದಾಳಿ ಮಾಡಿದಾಗ ಜೋಯೆಲ್ ಮಾತ್ರ ಸಿಕ್ಕಿಬಿದ್ದರು. ಇನ್ನೊಬ್ಬ ಆರೋಪಿ ಪರಾರಿಯಾದ. ಜೋಯೆಲ್ ಬಳಿ 5 ಗ್ರಾಂ ಎಂಡಿಎಂಎ ಸಿಕ್ಕಿತ್ತು. ಆದರೆ, ಆರೋಪಿ ಹೆಸರು ಪೊಲೀಸರಿಗೆ ಆರಂಭದಲ್ಲಿ ಗೊತ್ತಿರಲಿಲ್ಲ. ಆ ಬಗ್ಗೆ ಕೇಳಿದಾಗಲೂ ಯಾವುದೇ ಉತ್ತರ ನೀಡಿರಲಿಲ್ಲ. ಹೀಗಾಗಿ, ಆರೋಪಿಯನ್ನು ಠಾಣೆಗೆ ಕರೆತಂದಿದ್ದರು' ಎಂದೂ ಡಿಸಿಪಿ ವಿವರಿಸಿದರು.

'ಡ್ರಗ್ಸ್ ಪ್ರಕರಣದಲ್ಲಿ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿತ್ತು. ಆರೋಪಿಯನ್ನು ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಬೇಕು ಎನ್ನುಷ್ಟರಲ್ಲೇ ಎದೆನೋವು ಕಾಣಿಸಿತ್ತು' ಎಂದೂ ಹೇಳಿದರು.

'ಠಾಣೆ ಎದುರು ಬಂದಿದ್ದವರಲ್ಲಿ ಕೆಲವರು ಅಪರಾಧ ಹಿನ್ನೆಲೆಯುಳ್ಳವರು. ಕೆಲವರು, ಮಾದಕ ವಸ್ತು ಸೇವಿಸಿದ್ದರು. ಅಂಥವರ ಬಗ್ಗೆ ಮಾಹಿತಿ ಕಲೆಹಾಕಲಾಗುತ್ತಿದೆ' ಎಂದೂ ತಿಳಿಸಿದರು.

ಜೆ.ಸಿ.ನಗರ ಠಾಣೆ ಮುಂಭಾಗದಲ್ಲಿ ಕುಳಿತಿದ್ದ ಆಫ್ರಿಕಾ ಪ್ರಜೆಗಳು

'ಎಫ್‌ಐಆರ್ ದಾಖಲಿಸಿ'

'ವಿದ್ಯಾರ್ಥಿ ಜೋಯೆಲ್ ಬಳಿ ಪೊಲೀಸರು ಹಣ ಕೇಳಿದ್ದರು. ಅವರು ಕೊಡಲಿಲ್ಲವೆಂಬ ಕಾರಣಕ್ಕೆ ಠಾಣೆಗೆ ಎಳೆದೊಯ್ದಿದ್ದರು' ಎಂದು ಠಾಣೆ ಎದುರು ಸೇರಿದ್ದ ಪ್ರತಿಭಟನಕಾರರು ಹೇಳಿದರು.

'ಜೋಯೆಲ್ ಮೇಲೆ ಪೊಲೀಸರು ಹಲ್ಲೆ ಮಾಡಿದ್ದಾರೆ. ಅಸ್ವಸ್ಥಗೊಂಡ ಬಳಿಕ ಆಸ್ಪತ್ರೆಗೆ ಕರೆದೊಯ್ದಿದ್ದಾರೆ ಎಂಬ ಮಾಹಿತಿ ಇದೆ. ಕೊಲೆ ಆರೋಪದಡಿ ಪೊಲೀಸರ ವಿರುದ್ಧ ಎಫ್‌ಐಆರ್ ದಾಖಲಿಸಬೇಕು' ಎಂದೂ ಅವರು ಒತ್ತಾಯಿಸಿದರು.

ರಾಜ್ಯದಲ್ಲಿ ಸೋಂಕು ದೃಢಪ್ರಮಾಣ ಇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಹೊಸ ಪ್ರಕರಣಗಳು ಮತ್ತು ಸೋಂಕು ದೃಢ ಪ್ರಮಾಣದಲ್ಲಿ ಇಳಿಕೆಯಾಗಿದೆ.

ಭಾನುವಾರಕ್ಕೆ ಹೋಲಿಸಿದರೆ ಸೋಂಕು ಪರೀಕ್ಷೆಗಳು 22 ಸಾವಿರ (1.33 ಲಕ್ಷಕ್ಕೆ) ಕಡಿಮೆಯಾಗಿವೆ. ಹೊಸ ಪ್ರಕರಣಗಳು 590 ಇಳಿಕೆಯಾಗಿದೆ. ಸೋಂಕು ದೃಢಪ್ರಮಾಣ ಶೇ 1.2 ರಿಂದ ಶೇ 0.9ಕ್ಕೆ ಇಳಿಕೆಯಾಗಿದ್ದು, ಮರಣ ದರ ಶೇ 1.9ರಷ್ಟಿದೆ.

ಸೋಮವಾರ ಹೊಸದಾಗಿ 1,285 ಮಂದಿಗೆ ಸೋಂಕು ತಗುಲಿದ್ದರೆ, 25 ಜನ ಕೋವಿಡ್‌ನಿಂದ ಮೃತಪಟ್ಟಿದ್ದಾರೆ. 1,383 ಮಂದಿ ಗುಣಮುಖರಾಗಿದ್ದಾರೆ.

ಜುಲೈ 25 ರಂದು ಸೋಂಕು ಹೊಸ ಪ್ರಕರಣಗಳು 1,001ಕ್ಕೆ ತಗ್ಗಿದ್ದವು. ಕ್ರಮೇಣ ಹೆಚ್ಚಾಗುತ್ತಾ ಎರಡು ಸಾವಿರದಷ್ಟು ಪ್ರಕರಣಗಳು ವರದಿಯಾಗುತ್ತಿದ್ದವು. ಆದರೆ, ಸೋಮವಾರ ಒಮ್ಮೆಗೆ 1,300 ಆಸುಪಾಸಿಗೆ ತಗ್ಗಿವೆ.

ಬೆಂಗಳೂರು ಮತ್ತು ದಕ್ಷಿಣ ಕನ್ನಡದಲ್ಲಿ ಹೊಸ ಪ್ರಕರಣಗಳು ಶೇ 50ಕ್ಕಿಂತ ಕಡಿಮೆ ಇಳಿದಿವೆ. ಸೋಂಕು ಪರೀಕ್ಷೆಗಳು 20 ಸಾವಿರದಷ್ಟು ಕಡಿಮೆಯಾಗಿರುವುದೂ, ಹೊಸ ಪ್ರಕರಣಗಳಲ್ಲಿ ಇಳಿಕೆ ಕಾಣಲು ಕಾರಣವಾಗಿರಬಹುದು.

ಮೊದಲ ಮತ್ತು 2ನೇ ಅಲೆ ಸೇರಿ ಒಟ್ಟು ಸೋಂಕಿತರ ಸಂಖ್ಯೆ 29.08 ಲಕ್ಷಕ್ಕೆ ಹೆಚ್ಚಳವಾಗಿದ್ದು, ಸೋಂಕಿತರ ಪೈಕಿ ಈಗಾಗಲೇ 28.47 ಲಕ್ಷ ಮಂದಿ ಗುಣಮುಖರಾಗಿದ್ದಾರೆ. ಸಕ್ರಿಯ ಪ್ರಕರಣಗಳು 24,021 ಇವೆ. ಈವರೆಗೆ 36,612 ಮಂದಿ ಕೋವಿಡ್‌ನಿಂದ ಮೃತಪಟ್ಟಿದ್ದಾರೆ.

ಮೂರು ಜಿಲ್ಲೆಗಳಲ್ಲಿ 100ಕ್ಕಿಂತ ಹೆಚ್ಚು: ಬೆಂಗಳೂರು ನಗರದಲ್ಲಿ ಹೊಸದಾಗಿ 290, ದಕ್ಷಿಣ ಕನ್ನಡ 219, ಉಡುಪಿ 135, ಮೈಸೂರು 102 ಮಂದಿಗೆ ಸೋಂಕು ತಗುಲಿದೆ. ಕೊಡಗಿನಲ್ಲಿ 81, ಹಾಸನದಲ್ಲಿ 91 ಸೋಂಕಿತರು ಪತ್ತೆಯಾಗಿದ್ದು, ಉಳಿದ ಜಿಲ್ಲೆಗಳಲ್ಲಿ 100ಕ್ಕಿಂತ ಕಡಿಮೆ ಇವೆ. 14 ಜಿಲ್ಲೆಗಳಲ್ಲಿ ಬೆರಳೆಣಿಕೆಯಷ್ಟು ಪ್ರಕರಣಗಳು ವರದಿಯಾಗಿವೆ. 20 ಜಿಲ್ಲೆಗಳಲ್ಲಿ ಕೋವಿಡ್ ಸಾವು ವರದಿಯಾಗಿಲ್ಲ. ಬೆಂಗಳೂರಿನಲ್ಲಿ ಹೆಚ್ಚು ಅಂದರೆ 5, ದಕ್ಷಿಣ ಕನ್ನಡ ಮತ್ತು ಮೈಸೂರು ತಲಾ 4 ಸೋಂಕಿತರು ಮೃತಪಟ್ಟಿದ್ದಾರೆ ಎಂದು ಆರೋಗ್ಯ ಇಲಾಖೆ ಹೇಳಿದೆ.

ಸೌಮ್ಯ ರೂಪದ ಕೋವಿಡ್‌ಗೆ ಮೂಲಿಕೆ ಸಿರಪ್!

ನಗರದ 'ವೆಂಕಟ್ ಫಾರ್ಮಾ' ಮತ್ತು ಸರ್ಕಾರಿ ಹಾಗೂ ಖಾಸಗಿ ವೈದ್ಯಕೀಯ ಕಾಲೇಜುಗಳ ಔಷಧ ಸಂಶೋಧಕರು ಜಂಟಿಯಾಗಿ ಕೋವಿಡ್ ರೋಗಿಗಳಿಗಾಗಿ ಆಯುರ್ವೇದಿಕ್ ಸಿರಪ್ (ಹರ್ಬೋವಿರ್ ಸಿರಪ್) ಅಭಿವೃದ್ಧಿಪಡಿಸಿದ್ದು, ಇದು ಸೌಮ್ಯ ಸ್ವರೂಪದ ಕೋವಿಡ್ ರೋಗಿಗಳಿಗೆ ಪರಿಣಾಮಕಾರಿಯಾಗಿದೆ.

ಈ ಸಿರಪ್‌ನ ಕ್ಲಿನಿಕಲ್ ಟ್ರಯಲ್ ಪೂರ್ಣಗೊಂಡಿದೆ. ಅದರ ಫಲಿತಾಂಶದ ವರದಿಯೂ 'ಇಂಟರ್‌ನ್ಯಾಷನಲ್ ಜರ್ನಲ್ ಆಫ್ ಬೇಸಿಕ್ ಅಂಡ್ ಕ್ಲಿನಿಕಲ್ ಫಾರ್ಮಾಲಜಿ'ಯಲ್ಲಿ ಪ್ರಕಟವಾಗಿದೆ. 'ಹರ್ಬೋವಿರ್' ಸಿರಪ್ ಅನ್ನು ಸೌಮ್ಯ ಸ್ವರೂಪದ ಕೋವಿಡ್‌ನಿಂದ ಬಳಲುತ್ತಿದ್ದ ರೋಗಿಗಳಿಗೆ ನಿಯಮಿತವಾಗಿ ನೀಡಿದಾಗ, ಅವರಲ್ಲಿ ರೋಗ ನಿರೋಧಕ ಶಕ್ತಿ ವೃದ್ಧಿಯಾಗಿ, ಬೇಗನೆ ಗುಣಮುಖರಾಗಿದ್ದು ಕಂಡು ಬಂದಿದೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಈ ರೋಗಿಗಳಿಗೆ 'ಹರ್ಬೋವಿರ್' ಸಿರಪ್ ನೀಡಿದಾಗ ಅವರಲ್ಲಿ ರೋಗ ನಿರೋಧಕ ಗುರುತುಗಳು ಉತ್ತಮವಾಗಿತ್ತು. ಇಮ್ಯೂನ್ ಮಾರ್ಕರ್‌ಗಳಾದ ಎಲ್‌ಡಿಎಚ್, ಸಿಆರ್‌ಪಿ, ಡಿ–ಡೈಮರ್ ಸುಧಾರಣೆ ಆಗಿದ್ದವು. ಅಂತಿಮವಾಗಿ, ಹರ್ಬೋವಿರ್ ಸಿರಪ್ ಬಳಕೆಯಿಂದ ಕೋವಿಡ್ ರೋಗಿಗಳು ಬೇಗನೆ ಚೇತರಿಸಿಕೊಂಡರು ಎಂದು 'ವೆಂಕಟ್ ಫಾರ್ಮಾ'ದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಎಚ್.ಶ್ರೀನಿವಾಸ 'ಪ್ರಜಾವಾಣಿ'ಗೆ ತಿಳಿಸಿದರು.

ಇದು ದೇಹದಲ್ಲಿ ವೈರಾಣು ನಿರೋಧಕವಾಗಿ ವರ್ತಿಸುವುದರ ಜತೆಗೆ, ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸುವ ಕೆಲಸವನ್ನು ಮಾಡುತ್ತದೆ. ಕೋವಿಡ್ ರೋಗಿಗಳು ಬೇಗನೇ ಚೇತರಿಸಿಕೊಳ್ಳಲು ಸಹಾಯಕವಾಗುತ್ತದೆ. ಇದರ ಉತ್ಪಾದನೆ ಮತ್ತು ಮಾರಾಟಕ್ಕೆ ಸರ್ಕಾರದಿಂದ ಅನುಮತಿ ಸಿಕ್ಕಿದೆ ಎಂದು ಅವರು ವಿವರಿಸಿದರು.

ಕೋವಿಡ್ ಅಂಕಿ–ಅಂಶ

ಆಧಾರ: ಕೋವಿಡ್19 ಇಂಡಿಯಾ, ಒಆರ್‌ಜಿ

	ವಿಶ್ವ	ಭಾರತ
ಒಟ್ಟು ಪ್ರಕರಣ	19.93 ಕೋಟಿ ▲	3.17 ಕೋಟಿ ▲
ಸಕ್ರಿಯ ಪ್ರಕರಣ	1.52 ಕೋಟಿ ▲	3.98 ಲಕ್ಷ ▼
ಗುಣಮುಖ	17.98 ಕೋಟಿ ▲	3.08 ಕೋಟಿ
ಸಾವು	42.45 ಲಕ್ಷ ▲	4.25 ಲಕ್ಷ ▲

ದಿನದ ಮಾಹಿತಿ

	ವಿಶ್ವ	ಭಾರತ
ಹೊಸ ಪ್ರಕರಣ	4.66 ಲಕ್ಷ ▼	30,029 ▲
ಗುಣಮುಖ	3.46 ಲಕ್ಷ ▼	39,020 ▲
ಸಾವು	7,400 ▲	420 ▲

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ): 18,646 ಸ್ಪೇನ್; 32,511 ಇರಾನ್; 30,738 ಇಂಡೋನೇಷ್ಯಾ

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ): 54.66 ಅಮೆರಿಕ ▲; 12.30 ಬ್ರಿಟನ್ ▲; 7.35 ಬ್ರೆಜಿಲ್ ▼

(*ರಾತ್ರಿ 12 ಗಂಟೆಯವರೆಗಿನ ಮಾಹಿತಿ)

ಎಲ್ಲಿ ಹೆಚ್ಚು ಸಾವು: 1.33 ಲಕ್ಷ ಮಹಾರಾಷ್ಟ್ರ ▲; 34,130 ತಮಿಳುನಾಡು ▼; 25,054 ದೆಹಲಿ

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ): 63.15 ಮಹಾರಾಷ್ಟ್ರ ▲; 34.25 ಕೇರಳ ▲; 25.63 ತಮಿಳುನಾಡು ▲

ಪ್ರಜಾವಾಣಿ ಗ್ರಾಫಿಕ್ಸ್

ಚಿತ್ರಾವಳಿ

ಹೆನ್ನಾಗರ ಗ್ರಾಮ ಪಂಚಾಯಿತಿಯ ಕಾಚನಾಯಕನಹಳ್ಳಿಯಲ್ಲಿ ₹1.25 ಕೋಟಿ ವೆಚ್ಚದಲ್ಲಿ ರಸ್ತೆ ಮತ್ತು ಚರಂಡಿ ಕಾಮಗಾರಿಗೆ ಕಾಂಗ್ರೆಸ್ ಮುಖಂಡ ಆರ್.ಕೆ.ರಮೇಶ್ ಚಾಲನೆ ನೀಡಿದರು. ಗ್ರಾಮ ಪಂಚಾಯಿತಿ ಅಧ್ಯಕ್ಷೆ ಮುನಿರತ್ನ ಮುನಿರಾಜು, ಉಪಾಧ್ಯಕ್ಷ ಎಚ್.ಜೆ.ಪ್ರಸನ್ನ ಕುಮಾರ್, ಸದಸ್ಯರಾದ ವಿನಯ್, ಕೆ.ವಿ.ರಾಮಸ್ವಾಮಿ, ಮನು, ಲೋಕನಾಥ್, ಕಿರಣ್, ಸಾವಿತ್ರಮ್ಮ ಹಾಗೂ ಇತರರು ಇದ್ದರು.

ಜಯನಗರ ವ್ಯಾಪ್ತಿಯ ಪತ್ರಿಕಾ ವಿತರಕರು ಹಾಗೂ ಮಾರೇನಹಳ್ಳಿಯ ಬಡ ಕುಟುಂಬಗಳಿಗೆ ಶಾಸಕಿ ಸೌಮ್ಯಾ ರೆಡ್ಡಿ ಅವರು ದಿನಸಿ ಕಿಟ್ ವಿತರಿಸಿದರು. ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾರೆಡ್ಡಿ ಹಾಗೂ ಮುಖಂಡರು ಇದ್ದರು

ಅಪ್ಪಾಜಿ ಕ್ಯಾಂಟೀನ್‌ನ ನಾಲ್ಕನೇ ವಾರ್ಷಿಕೋತ್ಸವದ ಅಂಗವಾಗಿ ಜೆಡಿಎಸ್ ಮುಖಂಡ ಟಿ.ಎ.ಶರವಣ ಅವರು ಕೇಕ್ ಕತ್ತರಿಸಿ ಸಂಭ್ರಮಿಸಿದರು. ಇದೇ ವೇಳೆ ಒಂದು ರೂಪಾಯಿಗೆ ಮುದ್ದೆ, ಅನ್ನ, ಸಾರು, ರಸಂ ಹಾಗೂ ಪಾಯಸ ವಿತರಿಸಲಾಯಿತು.

ಧಾರವಾಡ: ಯೋಗೇಶ್‌ಗೌಡ ಗೌಡರ ಕೊಲೆ ಪ್ರಕರಣ

ಸೋಮಶೇಖರ್ ನ್ಯಾಮಗೌಡ ವೈದ್ಯಕೀಯ ವರದಿ ಸಲ್ಲಿಸಲು ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಧಾರವಾಡ ಜಿಲ್ಲಾ ಪಂಚಾಯಿತಿಯ ಸದಸ್ಯರಾಗಿದ್ದ ಯೋಗೇಶ್‌ಗೌಡ ಗೌಡರ ಕೊಲೆ ಪ್ರಕರಣದಲ್ಲಿ ಬಂಧಿತರಾಗಿರುವ ಕೆಎಎಸ್ ಅಧಿಕಾರಿ ಸೋಮಶೇಖರ್ ನ್ಯಾಮಗೌಡ ಅವರ ಆರೋಗ್ಯ ಸ್ಥಿತಿಗೆ ಸಂಬಂಧಿಸಿದ ವೈದ್ಯಕೀಯ ವರದಿಯನ್ನು ಸಲ್ಲಿಸುವಂತೆ ಧಾರವಾಡ ಕೇಂದ್ರ ಕಾರಾಗೃಹದ ಮುಖ್ಯ ಅಧೀಕ್ಷಕರಿಗೆ ಚುನಾಯಿತ ಪ್ರತಿನಿಧಿಗಳ ಪ್ರಕರಣದ ವಿಶೇಷ ನ್ಯಾಯಾಲಯ ಸೋಮವಾರ ಆದೇಶಿಸಿದೆ.

ಯೋಗೇಶ್‌ಗೌಡ ಕೊಲೆ ಪ್ರಕರಣದಲ್ಲಿ ಭಾಗಿಯಾದ ಆರೋಪದ ಮೇಲೆ ಸೋಮಶೇಖರ್ ನ್ಯಾಮಗೌಡ ಅವರನ್ನು ಸಿಬಿಐ ಅಧಿಕಾರಿಗಳು ಜುಲೈ 8ರಂದು ಬಂಧಿಸಿದ್ದರು. ಜುಲೈ 9ರಂದು ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿತ್ತು. ವೈದ್ಯಕೀಯ ಕಾರಣಗಳ ಆಧಾರದಲ್ಲಿ ಜಾಮೀನು ನೀಡುವಂತೆ ಕೋರಿ ಆರೋಪಿ ಅಧಿಕಾರಿ ಚುನಾಯಿತ ಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದಾರೆ.

'ಅರ್ಜಿದಾರರು 2015ರಿಂದಲೂ ಹೃದ್ರೋಗದಿಂದ ಬಳಲುತ್ತಿದ್ದಾರೆ. ಜಯದೇವ ಹೃದ್ರೋಗ ಸಂಸ್ಥೆ ಮತ್ತು ನಾರಾಯಣ ಹೃದಯಾಲಯದಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ನ್ಯಾಯಾಂಗ ಬಂಧನಕ್ಕೆ ಕಳುಹಿಸಿದ ಬಳಿಕ ಚಿಕಿತ್ಸೆ ಪಡೆಯಲು ಸಾಧ್ಯವಾಗಿಲ್ಲ. ತೀವ್ರವಾಗಿ ಅಸ್ವಸ್ಥರಾಗಿದ್ದ ಸೋಮಶೇಖರ್ ಅವರನ್ನು ಜುಲೈ 28ರಂದು ಹುಬ್ಬಳ್ಳಿಯ ಕಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿದೆ. ತುರ್ತಾಗಿ ಶಸ್ತ್ರಚಿಕಿತ್ಸೆಯ ಅಗತ್ಯವಿದೆ ಎಂಬುದಾಗಿ ವೈದ್ಯರು ಶಿಫಾರಸು ಮಾಡಿದ್ದಾರೆ' ಎಂದು ಅರ್ಜಿದಾರರ ಪರ ವಕೀಲರು ನ್ಯಾಯಾಲಯಕ್ಕೆ ತಿಳಿಸಿದ್ದರು.

ಜಾಮೀನು ಅರ್ಜಿ ವಿಚಾರಣೆಯ ಭಾಗವಾಗಿ ಅರ್ಜಿದಾರರ ಆರೋಗ್ಯದ ಸ್ಥಿತಿ ಕುರಿತು ವೈದ್ಯಕೀಯ ವರದಿ ಪಡೆಯುವಂತೆ ಅಧಿಕಾರಿ ಪರ ವಕೀಲರು ಪ್ರತ್ಯೇಕ ಅರ್ಜಿ ಸಲ್ಲಿಸಿದ್ದರು. ಸಿಬಿಐ ಪರ ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ ಈ ಬೇಡಿಕೆಯನ್ನು ವಿರೋಧಿಸಿ, ಆಕ್ಷೇಪಣೆ ಸಲ್ಲಿಸಿದ್ದರು.

ಈ ಕುರಿತು ವಿಸ್ತೃತ ವಿಚಾರಣೆ ನಡೆಸಿದ ಬಳಿಕ ಸೋಮವಾರ ಆದೇಶ ಪ್ರಕಟಿಸಿರುವ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಬಿ. ಜಯಂತ ಕುಮಾರ್ ಅವರು, ಅಧಿಕಾರಿಯ ಅರ್ಜಿಯನ್ನು ಮಾನ್ಯ ಮಾಡಿದ್ದಾರೆ. ಅರ್ಜಿದಾರರ ಸದ್ಯದ ಆರೋಗ್ಯ ಸ್ಥಿತಿಯ ಕುರಿತು ವೈದ್ಯಕೀಯ ವರದಿ ಪಡೆದು ಇ–ಮೇಲ್ ಮೂಲಕ ರವಾನಿಸುವಂತೆ ಧಾರವಾಡ ಕೇಂದ್ರ ಕಾರಾಗೃಹದ ಮುಖ್ಯ ಅಧೀಕ್ಷಕರಿಗೆ ನಿರ್ದೇಶನ ನೀಡಿದ್ದಾರೆ.

ಫೇಸ್‌ಬುಕ್‌ನಲ್ಲಿ 'ಐ–ಫೋನ್' ಜಾಹೀರಾತು: ₹ 7.29 ಲಕ್ಷ ವಂಚನೆ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಸಾಮಾಜಿಕ ಜಾಲತಾಣ ಫೇಸ್‌ಬುಕ್‌ನಲ್ಲಿ ಜಾಹೀರಾತು ನೋಡಿ ಐ–ಫೋನ್‌ಗಳನ್ನು ಖರೀದಿಸಲು ಮುಂದಾಗಿದ್ದ ನಗರ ನಿವಾಸಿಯೊಬ್ಬರು ₹ 7.29 ಲಕ್ಷ ಕಳೆದುಕೊಂಡಿದ್ದಾರೆ.

ವಂಚನೆಗೀಡಾಗಿರುವ ಚನ್ನಸಂದ್ರದ 30 ವರ್ಷದ ನಿವಾಸಿಯೊಬ್ಬರು ಪಶ್ಚಿಮ ವಿಭಾಗ ಸೈಬರ್ ಕ್ರೈಂ ಠಾಣೆಗೆ ದೂರು ನೀಡಿದ್ದಾರೆ. ಅಪರಿಚಿತನ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

'ಫೇಸ್‌ಬುಕ್‌ನಲ್ಲಿ ತೆರೆಯಲಾಗಿರುವ 'ಅಬುಬಿ ಸ್ಪೋರ್ಟ್ಸ್' ಪುಟದಲ್ಲಿ ಜಾಹೀರಾತು ನೀಡಿದ್ದ ಆರೋಪಿ, 'ಕಡಿಮೆ ದರದಲ್ಲಿ ಐ–ಫೋನ್‌ಗಳು ಮಾರಾಟಕ್ಕಿವೆ' ಎಂದಿದ್ದ. ಅದನ್ನು ನಂಬಿದ್ದ ದೂರುದಾರ, 'ಐ–ಫೋನ್ ಖರೀದಿಸುತ್ತೇನೆ' ಎಂದು ಹೇಳಿ ಆರೋಪಿಗೆ ಸಂದೇಶ ಕಳುಹಿಸಿದ್ದರು. ಆತನ ಮೊಬೈಲ್ ನಂಬರ್ ಪಡೆದು ಮಾತನಾಡಿದ್ದರು' ಎಂದು ಪೊಲೀಸರು ಹೇಳಿದರು.

'ಮುಂಗಡವಾಗಿ ಹಣ ಪಾವತಿ ಮಾಡಿದರೆ ಐ–ಫೋನ್‌ಗಳನ್ನು ನೀಡುವುದಾಗಿ ಆರೋಪಿ ಹೇಳಿದ್ದ. ಅದನ್ನು ನಂಬಿದ್ದ ದೂರುದಾರ, ಆರೋಪಿ ಹೇಳಿದ್ದ ಖಾತೆಗಳಿಗೆ ಜುಲೈ 26ರಿಂದ 30ರವರೆಗೆ ಹಂತ ಹಂತವಾಗಿ ₹ 7.29 ಲಕ್ಷ ಪಾವತಿಸಿದ್ದರು. ಅದಾದ ನಂತರ ಆರೋಪಿ ಐ–ಫೋನ್‌ಗಳನ್ನು ಕೊಟ್ಟಿಲ್ಲ. ಹಣವನ್ನೂ ವಾಪಸು ನೀಡಿಲ್ಲ' ಎಂದು ಪೊಲೀಸರು ತಿಳಿಸಿದರು.

'ಐ–ಫೋನ್ ಮಾರಾಟದ ಹೆಸರಿನಲ್ಲಿ ಜನರಿಂದ ಹಣ ಪಡೆದು ವಂಚಿಸಲೆಂದೇ ಆರೋಪಿ, ಫೇಸ್‌ಬುಕ್‌ನಲ್ಲಿ ನಕಲಿ ಖಾತೆ ತೆರೆದಿರುವುದು ಗೊತ್ತಾಗುತ್ತಿದೆ. ಇಂಟರ್‌ನೆಟ್ ಪ್ರೋಟೋಕಾಲ್ (ಐ.ಪಿ) ಮಾಹಿತಿ ಆಧರಿಸಿ ತನಿಖೆ ಮುಂದುವರಿಸಲಾಗಿದೆ' ಎಂದು ಹೇಳಿದರು.

ಹಣ ಪಡೆದು ವಂಚಿಸಿದ ಆನ್‌ಲೈನ್ ವಧು: ವೈವಾಹಿಕ ಜಾಲತಾಣ ಮೂಲಕ ಪರಿಚಯವಾಗಿದ್ದ ಯುವತಿಯೊಬ್ಬಳು ನಗರದ ಯುವಕನಿಂದ ₹ 1.60 ಲಕ್ಷ ಪಡೆದು ವಂಚಿಸಿದ್ದು, ಈ ಬಗ್ಗೆ ಈಶಾನ್ಯ ವಿಭಾಗದ ಸೈಬರ್ ಕ್ರೈಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಈ ಸಂಬಂಧ ದೊಡ್ಡಗುಬ್ಬಿಯ ನಿವಾಸಿಯೊಬ್ಬರು ದೂರು ನೀಡಿದ್ದಾರೆ.

'ಚಾಲಕರಾದ ದೂರುದಾರ, ವಧುಗಾಗಿ ಹುಡುಕಾಡುತ್ತಿದ್ದರು. ಮ್ಯಾಟ್ರಿಮೋನಿ ಜಾಲತಾಣದಲ್ಲಿ ಖಾತೆ ತೆರೆದಿದ್ದರು. ಅಲ್ಲಿಯೇ ಅವರಿಗೆ ಯುವತಿ ಪರಿಚಯವಾಗಿತ್ತು. ನಂತರ, ಪರಸ್ಪರ ಮಾತುಕತೆ ಆರಂಭವಾಗಿತ್ತು. ಈ ಸಂಗತಿ ದೂರಿನಲ್ಲಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ತನ್ನ ತಂದೆಗೆ ಹೃದಯ ಶಸ್ತ್ರಚಿಕಿತ್ಸೆ ಮಾಡಿಸಬೇಕೆಂದು ಹೇಳಿದ್ದ ಯುವತಿ, ಅದಕ್ಕಾಗಿ ಹಣ ಕೇಳಿದ್ದಳು. ಆಕೆಯ ಮಾತು ನಂಬಿದ್ದ ಆರೋಪಿ, ₹1.60 ಲಕ್ಷ ಕೊಟ್ಟಿದ್ದಾರೆ. ಇದೀಗ ಯುವತಿ ನಾಪತ್ತೆಯಾಗಿದ್ದಾಳೆ' ಎಂದೂ ಮೂಲಗಳು ತಿಳಿಸಿವೆ.

ಬಂಧನ: ನಗರದ ಹಲವು ಮನೆಗಳಲ್ಲಿ ಕಳ್ಳತನ ಮಾಡಿದ್ದ ಆರೋಪದಡಿ ಮಹೇಶ್ ಎಂಬಾತನನ್ನು ಕಾಮಾಕ್ಷಿಪಾಳ್ಯ ಪೊಲೀಸರು ಬಂಧಿಸಿದ್ದಾರೆ. 'ಮಹೇಶ್‌ನಿಂದ 10 ಗ್ರಾಂ ಚಿನ್ನದ ಓಲೆ ಹಾಗೂ 750 ಗ್ರಾಂ ಬೆಳ್ಳಿ ಸಾಮಗ್ರಿ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

ರಾತ್ರಿ ಕರ್ಫ್ಯೂ: ಕಟ್ಟುನಿಟ್ಟಿನ ಜಾರಿಗೆ ನಿರ್ಧಾರ

ಮೊದಲ ಪುಟದಿಂದ...

'ನಗರದ ಮಾರುಕಟ್ಟೆಗಳು, ಮಾಲ್‌ಗಳು, ಹೋಟೆಲ್‌ಗಳು, ದೇವಸ್ಥಾನಗಳು, ರೆಸ್ಟೋರೆಂಟ್‌ಗಳು ಸೇರಿದಂತೆ ಹೆಚ್ಚು ಜನ ಸಂದಣಿ ಸೇರುವ ಪ್ರದೇಶಗಳಲ್ಲಿ ಕೋವಿಡ್ ನಿಯಂತ್ರಣ ನಿಯಮಗಳ ಪಾಲನೆ ಆಗುತ್ತಿಲ್ಲ. ಇಂತಹ ಕಡೆಗಳಿಗೆ ಪಾಲಿಕೆಯ ಅಧಿಕಾರಿಗಳ ತಂಡವು ಪೊಲೀಸ್ ಸಿಬ್ಬಂದಿ ಜೊತೆ ಭೇಟಿ ನೀಡಿ ಪರಿಶೀಲನೆ ನಡೆಸಬೇಕು. ನಿಯಮಗಳನ್ನು ಪಾಲಿಸುವಂತೆ ಸೂಚನೆ ನೀಡಬೇಕು. ಈ ಬಗ್ಗೆ ಧ್ವನಿವರ್ಧಕಗಳ ಮೂಲಕ ನಾಗರಿಕರಲ್ಲಿ ಜಾಗೃತಿ ಮೂಡಿಸಬೇಕು' ಎಂದು ನಿರ್ದೇಶನ ನೀಡಿದರು.

'ಕೋವಿಡ್ ದೃಢಪಟ್ಟವರನ್ನು ಚಿಕಿತ್ಸೆ ನಿರ್ಧಾರ ಕೇಂದ್ರಗಳಲ್ಲೇ (ಟ್ರಯಾಜ್ ಸೆಂಟರ್) ವೈದ್ಯಕೀಯ ತಪಾಸಣೆಗೆ ಒಳಪಡಿಸಿ ಅವರಿಗೆ ಎಂತಹ ಚಿಕಿತ್ಸೆ ಅಗತ್ಯ ಎಂಬ ಬಗ್ಗೆ ಮಾಹಿತಿ ನೀಡಬೇಕು. ಅವರ ಸಂಪರ್ಕಕ್ಕೆ ಬಂದವರನ್ನು ಪತ್ತೆ ಹಚ್ಚಿ, ಅಂತಹವರ ಪ್ರತ್ಯೇಕವಾಸಕ್ಕೆ ವ್ಯವಸ್ಥೆ ಕಲ್ಪಿಸಬೇಕು. ಮೂರು ಹಾಗೂ ಅದಕ್ಕಿಂತ ಹೆಚ್ಚು ಕೋವಿಡ್ ಪ್ರಕರಣಗಳು ಪತ್ತೆಯಾಗುವ ಪ್ರದೇಶವನ್ನು ಕಂಟೈನ್ಮೆಂಟ್ ವಲಯವನ್ನಾಗಿ ಗುರುತಿಸಬೇಕು' ಎಂದರು.

ಬಿಬಿಎಂಪಿ ವಿಶೇಷ ಆಯುಕ್ತರಾದ ಡಿ.ರಂದೀಪ್, ಮನೋಜ್ ಜೈನ್, ಡಾ.ಹರೀಶ್ ಕುಮಾರ್, ರವೀಂದ್ರ, ಕೆ.ಎ.ದಯಾನಂದ್, ರೆಡ್ಡಿ ಶಂಕರ ಬಾಬು, ತುಳಸಿ ಮದ್ದಿನೇನಿ, ಹೆಚ್ಚುವರಿ ಪೊಲೀಸ್ ಕಮಿಷನರ್ ಮುರುಗನ್, ಎಲ್ಲಾ ವಲಯ ಜಂಟಿ ಆಯುಕ್ತರು, ವಲಯ ಡಿಸಿಪಿಗಳು, ಮುಖ್ಯ ಆರೋಗ್ಯ ಅಧಿಕಾರಿ ಡಾ.ಬಿ.ಕೆ.ವಿಜಯೇಂದ್ರ, ವಲಯ ಆರೋಗ್ಯಾಧಿಕಾರಿಗಳು ಸಲಹೆಗಳನ್ನು ನೀಡಿದರು.

'ನಿಯಮ ಉಲ್ಲಂಘಿಸಿದರೆ ಮೊಕದ್ದಮೆ'

'ನಗರದಲ್ಲಿ ಕೋವಿಡ್ ನಿಯಂತ್ರಿಸಲು ಪೊಲೀಸ್ ಇಲಾಖೆಯಿಂದ ಅಗತ್ಯ ಸಹಕಾರ ನೀಡಲಾಗುವುದು. ಕೋವಿಡ್ ನಿಯಮಗಳನ್ನು ಪಾಲಿಸದಿರುವವರ ಮೇಲೆ ಪ್ರಕರಣಗಳನ್ನು ದಾಖಲಿಸಲಾಗುವುದು' ಎಂದು ಬೆಂಗಳೂರು ನಗರ ಪೊಲೀಸ್ ಆಯುಕ್ತ ಕಮಲ್ ಪಂತ್ ತಿಳಿಸಿದರು.

ರೌಡಿಗಳ ಮನೆ ಮೇಲೆ ದಾಳಿ: 57 ಮಂದಿ ವಶಕ್ಕೆ

ಬೆಂಗಳೂರು: ಕೆ.ಪಿ. ಅಗ್ರಹಾರ ಠಾಣೆ ವ್ಯಾಪ್ತಿಯಲ್ಲಿ ವಾಸವಿರುವ ರೌಡಿಗಳ ಮನೆ ಮೇಲೆ ಪೊಲೀಸರು ಸೋಮವಾರ ಬೆಳಿಗ್ಗೆ ದಾಳಿ ಮಾಡಿದ್ದು, 57 ಮಂದಿಯನ್ನು ವಶಕ್ಕೆ ಪಡೆದಿದ್ದಾರೆ.

'ಜೈಲಿಗೆ ಹೋಗಿ ಬಂದ ನಂತರವೂ ಕೆಲ ರೌಡಿಗಳು ಅಪರಾಧ ಕೃತ್ಯದಲ್ಲಿ ಭಾಗಿಯಾಗುತ್ತಿದ್ದಾರೆ. ಅಪರಾಧ ಕೃತ್ಯ ಎಸಗಲು ಸಂಚು ರೂಪಿಸುತ್ತಿದ್ದಾರೆ. ಇಂಥ ರೌಡಿಗಳ ಪಟ್ಟಿ ಸಿದ್ಧಪಡಿಸಿ, 62 ಮನೆಗಳ ಮೇಲೆ ದಾಳಿ ಮಾಡಲಾಯಿತು' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ರೌಡಿ ಚಟುವಟಿಕೆ ತಡೆಯಲು ನಿರಂತರವಾಗಿ ಕಾರ್ಯಾಚರಣೆ ನಡೆಸಲಾಗುತ್ತಿದೆ. ಸೋಮವಾರ ದಾಳಿ ವೇಳೆಯಲ್ಲಿ 7 ರೌಡಿಗಳು ಮಾದಕ ವಸ್ತು ಸೇವಿಸಿದ್ದು ಪತ್ತೆಯಾಗಿದೆ. ಅವರ ವಿರುದ್ಧ ಎನ್‌ಡಿಪಿಎಸ್ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ತಿಳಿಸಿದರು.

ಬೈಕ್ ಅಡ್ಡಗಟ್ಟಿ ಹಲ್ಲೆ– ಹರಿದಾಡಿದ ವಿಡಿಯೊ: ಬೈಕ್‌ನಲ್ಲಿ ತಾಯಿ ಜೊತೆ ಹೊರಟಿದ್ದ ಯುವಕನನ್ನು ಅಡ್ಡಗಟ್ಟಿ ಹಲ್ಲೆ ಮಾಡಲಾಗಿದ್ದು, ಇದರ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

ಸಂಜಯನಗರ ಠಾಣೆ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ ಎನ್ನಲಾಗಿದ್ದು, ವಿಡಿಯೊ ಆಧರಿಸಿ ಪೊಲೀಸರು ಮಾಹಿತಿ ಕಲೆಹಾಕುತ್ತಿದ್ದಾರೆ. 'ಯುವಕನನ್ನು ಮುನಿರಾಜು ಎಂದು ಗುರುತಿಸಲಾಗಿದೆ. ಮೂವರು ದುಷ್ಕರ್ಮಿಗಳು ಹೆಲ್ಮೆಟ್ ಧರಿಸಿದ್ದರು. ಅವರು ಗುರುತು ಪತ್ತೆಯಾಗಿಲ್ಲ. ವೈಯಕ್ತಿಕ ಕಾರಣದಿಂದ ಹಲ್ಲೆ ನಡೆದಿರುವ ಮಾಹಿತಿ ಇದ್ದು, ಯುವಕನಿಂದ ಹೇಳಿಕೆ ಪಡೆಯಬೇಕಿದೆ' ಎಂದು ಮೂಲಗಳು ತಿಳಿಸಿವೆ.

ಶಾಸಕ ಬಸನಗೌಡ ಪಾಟೀಲ ಯತ್ನಾಳ ಸಂಶಯ ● ಗೌಡರ ನಿರ್ಧಾರ ಸ್ವಾಗತಿಸುತ್ತೇವೆ –ಸಿ.ಟಿ.ರವಿ

‘ಪಕ್ಷದ ಸೂಚನೆಯಂತೆ ಬೊಮ್ಮಾಯಿ–ಗೌಡರ ಭೇಟಿ’

ಪ್ರಜಾವಾಣಿ ವಾರ್ತೆ

ವಿಜಯಪುರ: ಬಿಜೆಪಿ ಹೈಕಮಾಂಡ್ ಸೂಚನೆ ಮೇರೆಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಮಾಜಿ ಪ್ರಧಾನಿ ದೇವೇಗೌಡರನ್ನು ಭೇಟಿ ಮಾಡಿದ್ದಾರೆ ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದರು.

ಸೋಮವಾರ ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಯಡಿಯೂರಪ್ಪ ಹೇಳಿದಂತೆ ಬೊಮ್ಮಾಯಿ ಕೇಳದಿದ್ದರೆ ರಾಜ್ಯ ಸರ್ಕಾರವನ್ನು ಅವರು ಅಸ್ಥಿರಗೊಳಿಸುವ ಸಾಧ್ಯತೆ ಇತ್ತು ಎಂದು ಹೇಳಿದರು.

‘ಅಂತಹ ಸಂದರ್ಭ ಎದುರಾದರೆ ಜೆಡಿಎಸ್ ಬೆಂಬಲ ಪಡೆಯಲಾಗುವುದು ಎಂಬ ಸಂದೇಶ ರವಾನಿಸುವ ಉದ್ದೇಶದಿಂದಲೇ ವರಿಷ್ಠರ ಸೂಚನೆ ಮೇರೆಗೆ ಬೊಮ್ಮಾಯಿ– ದೇವೇಗೌಡರನ್ನು ಭೇಟಿ ಮಾಡಿದ್ದಾರೆ’ ಎಂದು ಯತ್ನಾಳ್ ವಿಶ್ಲೇಷಿಸಿದರು.

‘ಬೊಮ್ಮಾಯಿ ಸರ್ಕಾರಕ್ಕೆ ಸಂಕಷ್ಟ ಎದುರಾದರೆ ತಮ್ಮ ಪಕ್ಷ ಬೆಂಬಲಕ್ಕೆ ನಿಲ್ಲಲಿದೆ’ ಎಂದು ಈ ಕಾರಣಕ್ಕಾಗಿಯೇ ದೇವೇಗೌಡರು ಘೋಷಿಸಿರುವುದು ಎಂದು ಅಭಿಪ್ರಾಯಪಟ್ಟರು.

ಯತ್ನಾಳ

ಒಂದು ವೇಳೆ 10-20 ಮಂದಿ ಶಾಸಕರು ಯಡಿಯೂರಪ್ಪನವರ ಜತೆ ಹೋದರೆ ದೇವೇಗೌಡ, ಕುಮಾರಸ್ವಾಮಿ ಅವರು ಬೊಮ್ಮಾಯಿ ಸರ್ಕಾರಕ್ಕೆ ಬೇಷರತ್ ಬೆಂಬಲ ನೀಡುವ ಸಾಧ್ಯತೆ ಇದೆ ಎಂದರು.

ಚುನಾವಣೆಗೆ ಹೋಗಿ (ಬಾಗಲಕೋಟೆ ವರದಿ): ‘ಬಸವರಾಜ ಬೊಮ್ಮಾಯಿ ಅವರದ್ದು ಅತಂತ್ರ ಸರ್ಕಾರ. ದೇವೇಗೌಡರ ನೆರವು ಕೋರುವ ಬದಲು ಬಿಜೆಪಿಯವರು ವಿಧಾನಸಭೆ ವಿಸರ್ಜಿಸಿ ಚುನಾವಣೆಗೆ ಹೋಗುವುದು ಸೂಕ್ತ’ ಎಂದು ಕಾಂಗ್ರೆಸ್ ವಿಧಾನಪರಿಷತ್ ಸದಸ್ಯ ಆರ್.ಬಿ.ತಿಮ್ಮಾಪುರ ಸೋಮವಾರ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಬಿಜೆಪಿಯಲ್ಲಿ ನಾಲ್ಕಾರು ಗುಂಪುಗಳಿವೆ. ಈ ಸರ್ಕಾರಕ್ಕೆ ಬಹಳ ದಿನ ಭವಿಷ್ಯವಿಲ್ಲ. ಅತಂತ್ರ ಸರ್ಕಾರದಿಂದ ಒಳ್ಳೆಯ ಆಡಳಿತ ಕೊಡಲೂ ಆಗುವುದಿಲ್ಲ. ಚುನಾವಣೆ ಸೂಕ್ತ’ ಎಂದರು.

‘ಜನಹಿತ ಆದ್ಯತೆಯೇ ರಾಜಕಾರಣವಾಗಲಿ’

ಸಿ.ಟಿ.ರವಿ

ಚಿಕ್ಕಮಗಳೂರು: ‘ಸಂಕಷ್ಟ ಒದಗಿದರೆ ಬೆಂಬಲಿಸುತ್ತೇವೆ ಎಂದು ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡ ಅವರು ಸಿ.ಎಂಗೆ ಭರವಸೆ ನೀಡಿರುವುದನ್ನು ಸ್ವಾಗತಿಸುತ್ತೇವೆ’ ಎಂದು ಶಾಸಕ ಸಿ.ಟಿ.ರವಿ ಹೇಳಿದ್ದಾರೆ.

‘ದೇಶದ ಹಿತಕ್ಕೆ ಆದ್ಯತೆ ನೀಡುವ ರಾಜಕಾರಣ ಮೊದಲಾಗಬೇಕು’ ಎಂದು ಪ್ರತಿಕ್ರಿಯಿಸಿದರು. ‘ನಾನು ಸಚಿವ ಸ್ಥಾನದ ಆಕಾಂಕ್ಷಿಯಲ್ಲ, ಪಕ್ಷ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಯ ಜವಾಬ್ದಾರಿ ನೀಡಿದೆ’ ಎಂದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಜನಹಿತ ದೃಷ್ಟಿಯಲ್ಲಿಟ್ಟುಕೊಂಡು ಸಂಪುಟ ವಿಸ್ತರಿಸಬೇಕು. ಜನತೆ ಮತ್ತು ಪಕ್ಷ ಬಲವರ್ಧನೆ ಕೆಲಸ ಮಾಡುವವರಿಗೆ ಆದ್ಯತೆ ನೀಡಬೇಕು’ ಎಂದು ಹೇಳಿದರು.

ಬಿಜೆಪಿ ಜತೆ ಹೋಗುವುದಾಗಿ ಹೇಳಿಲ್ಲ: ರೇವಣ್ಣ

ಹಾಸನ: ‘ಬಿಜೆಪಿ ನೇತೃತ್ವದ ರಾಜ್ಯ ಸರ್ಕಾರಕ್ಕೆ ಸಂಕಷ್ಟ ಎದುರಾದರೆ ಜೆಡಿಎಸ್ ಬೆಂಬಲಕ್ಕೆ ನಿಲ್ಲಲಿದೆ ಎಂದು ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ.ದೇವೇಗೌಡರು ಹೇಳಿದ ಮಾತ್ರಕ್ಕೆ ಬಿಜೆಪಿ ಜತೆ ಹೋಗುತ್ತೇವೆ ಎಂದು ಅರ್ಥವಲ್ಲ’ ಎಂದು ಶಾಸಕ ಎಚ್.ಡಿ.ರೇವಣ್ಣ ಸೋಮವಾರ ಸ್ಪಷ್ಟಪಡಿಸಿದರು.

‘ಸರ್ಕಾರ ಬೀಳಿಸುವ ಉದ್ದೇಶ ಇಲ್ಲ. ರಾಜಕೀಯ ದ್ವೇಷ ಮಾಡದೇ ಉತ್ತಮ ಆಡಳಿತ ನೀಡಿದರೆ ಸಹಕಾರ ನೀಡಲಾಗುವುದು. ಬಿ.ಎಸ್.ಯಡಿಯೂರಪ್ಪ ಅವರಿಗೂ ಸಹಕಾರ ನೀಡಿದ್ದರೂ ರಾಜಕೀಯ ದ್ವೇಷ ಮಾಡಿದರು’ ಎಂದರು.

‘ಎಸ್.ಆರ್.ಬೊಮ್ಮಾಯಿ ಅವರೊಂದಿಗೆ ದೇವೇಗೌಡರು ಒಡನಾಟ ಹೊಂದಿದ್ದರು. ಅವರ ಪುತ್ರ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮನೆಗೆ ಭೇಟಿ ನೀಡಿದ್ದಾಗ ಎರಡು ವರ್ಷ ಉತ್ತಮ ಆಡಳಿತ ನೀಡುವಂತೆ ಗೌಡರು ಸಲಹೆ ನೀಡಿದರು’ ಎಂದು ತಿಳಿಸಿದರು.

‘ಜಾತ್ಯತೀತವಾದಕ್ಕೆ ಜೆಡಿಎಸ್ ತರ್ಪಣ’

ಸಿದ್ದರಾಮಯ್ಯ

ಕಾರವಾರ: ‘ಜೆ.ಡಿ.ಎಸ್ ಈಗ ಜಾತ್ಯತೀತ ಪಕ್ಷವಲ್ಲ. ಆ ಸಿದ್ಧಾಂತಕ್ಕೆ ತರ್ಪಣ ಬಿಟ್ಟು ಬಹಳ ದಿನಗಳಾದವು. ನಾವಿದ್ದಾಗ ಪಕ್ಷ ಆಗಿತ್ತು’ ಎಂದು ವಿಧಾನಸಭೆಯಲ್ಲಿ ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಟೀಕಿಸಿದರು.

ನಗರದಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಎಚ್.ಡಿ.ದೇವೇಗೌಡರ ಬೆಂಬಲ ಕುರಿತ ಪ್ರಶ್ನೆಗೆ ಅವರು ಉತ್ತರಿಸಿದರು.

‘ಬೊಮ್ಮಾಯಿ ಅವರು ನಮ್ಮವರು ಎಂದು ಜೆ.ಡಿ.ಎಸ್.ನವರು ಈಗ ಹೇಳುತ್ತಿದ್ದಾರೆ. ಅಲ್ಲಿಂದ ಬೇರೆ ಪಕ್ಷಕ್ಕೆ ಬಂದವರೂ ಜೆ.ಡಿ.ಎಸ್. ನವರಾಗ್ತಾರಾ? ನಾನೂ ಅಲ್ಲಿಂದಲೇ ಬಂದವನು. ಇವರೂ (ಪಕ್ಕದಲ್ಲಿದ್ದ ಆರ್.ವಿ.ದೇಶಪಾಂಡೆ) ಜನತಾ ಪಕ್ಷದಿಂದ ಬಂದವರು. ನಾವಿನ್ನು ಅಲ್ಲೇ ಇದ್ದೀವಾ’ ಎಂದು ಪ್ರಶ್ನಿಸಿದರು.

ಸುದ್ದಿ 2 ನಿಮಿಷ

ಶಾಲಾ ಸಿಬ್ಬಂದಿಗೆ ಲಸಿಕೆ: ವಿವರ ಕೇಳಿದ ಹೈಕೋರ್ಟ್

ಬೆಂಗಳೂರು: ಸರ್ಕಾರಿ ಮತ್ತು ಅನುದಾನಿತ ಶಾಲೆಗಳ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗೆ ಕೋವಿಡ್ ಲಸಿಕೆ ಹಾಕುವ ಕುರಿತು ಜಿಲ್ಲಾವಾರು ಮಾಹಿತಿ ದಾಖಲಿಸುವಂತೆ ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶನ ನೀಡಿದೆ.

ಶಾಲೆಗಳನ್ನು ಪ್ರಾರಂಭಿಸುವ ವಿಷಯದಲ್ಲಿ ಸರ್ಕಾರ ಕೈಗೊಂಡಿರುವ ನಿರ್ಧಾರಗಳ ಬಗ್ಗೆ ಯಾವುದೇ ನಿರ್ದೇಶನ ನೀಡುವುದಿಲ್ಲ ಎಂದು ನ್ಯಾಯಮೂರ್ತಿ ಬಿ.ವಿ.ನಾಗರತ್ನ ನೇತೃತ್ವದ ವಿಭಾಗೀಯ ಪೀಠ ಹೇಳಿತು.

ಶಾಲೆ ಮತ್ತು ಅಂಗನವಾಡಿಗಳಲ್ಲಿ ಮಧ್ಯಾಹ್ನದ ಬಿಸಿಯೂಟ ಆರಂಭಿಸುವಂತೆ ಕೋರಿ ಎ.ರಾಧಾ ಮತ್ತು ಇತರರು ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆ ನಡೆಸಿದ ಪೀಠ, ‘ಲಸಿಕೆಯು ಸಿಬ್ಬಂದಿಯಲ್ಲಿ ಆತ್ಮವಿಶ್ವಾಸ ಹೆಚ್ಚಿಸಲಿದೆ’ ಎಂದಿತು.

ವಿಶೇಷ ಸಮಿತಿಯ ಶಿಫಾರಸು ಆಧರಿಸಿ ಶಾಲೆಗಳನ್ನು ಪುನರ್ ಆರಂಭಿಸುವ ನಿರ್ಧಾರವನ್ನು ಪರಿಶೀಲಿಸಿದ ಪೀಠ, ‘ಪರಿಸ್ಥಿತಿ ಬದಲಾಗುತ್ತಿದೆ. ಒಂದು ವಾರದ ಹಿಂದೆ ನೀಡಿದ್ದ ಶಿಫಾರಸು ಸದ್ಯದ ಸ್ಥಿತಿಗೆ ಸರಿ ಹೊಂದುವುದಿಲ್ಲ’ ಎಂದು ಅಭಿಪ್ರಾಯಪಟ್ಟಿತು.

‘ಕೋವಿಡ್ ಪ್ರಕರಣಗಳ ಸಂಖ್ಯೆ ಮತ್ತೆ ಏರಿಕೆಯಾಗುತ್ತಿದೆ. 3ನೇ ಅಲೆಯ ಬಗ್ಗೆ ವರದಿಗಳು ಪ್ರಕಟವಾಗುತ್ತಿವೆ. ಈ ಸಂದರ್ಭದಲ್ಲಿ ಶಾಲೆಗಳನ್ನು ತೆರೆದರೆ ಪೋಷಕರು ತಮ್ಮ ಮಕ್ಕಳನ್ನು ಕಳುಹಿಸಲಾರರು. ಸರ್ಕಾರ ತೆಗೆದುಕೊಂಡಿರುವ ನಿರ್ಧಾರ ಅನೌಪಚಾರಿಕ ಆಗಿರುವುದರಿಂದ ಈ ವಿಷಯದಲ್ಲಿ ಯಾವುದೇ ನಿರ್ದೇಶನಗಳನ್ನು ನೀಡುವುದಿಲ್ಲ’ ಎಂದು ಪೀಠ ಹೇಳಿತು.

‘ಪಠ್ಯ ಕಡಿತ: ತೀರ್ಮಾನ ಆಗಿಲ್ಲ’

ಬೆಂಗಳೂರು: ಪ್ರಸಕ್ತ ಶೈಕ್ಷಣಿಕ ಸಾಲಿನಲ್ಲಿ (2021-22) ಒಂದರಿಂದ 10ನೇ ತರಗತಿವರೆಗಿನ ಪಠ್ಯಕ್ರಮದಲ್ಲಿ ಕಡಿತಗೊಳಿಸುವ ಕುರಿತು ರಾಜ್ಯ ಸರ್ಕಾರ ಇನ್ನೂ ಯಾವುದೇ ತೀರ್ಮಾನ ತೆಗೆದುಕೊಂಡಿಲ್ಲ.

‘ಶಾಲೆಗಳು ಇನ್ನೂ ಆರಂಭ ಆಗದೇ ಇರುವುದರಿಂದ ಎಲ್ಲ ವಿಷಯಗಳ ಪಠ್ಯಗಳನ್ನು ದೂರದರ್ಶನ ಚಂದನವಾಹಿನಿ ಮೂಲಕ ಬೋಧಿಸಲಾಗುತ್ತಿದೆ. ಪಠ್ಯ ಕಡಿತಗೊಳಿಸುವ ಬಗ್ಗೆ ತೀರ್ಮಾನ ಆಗಿಲ್ಲ’ ಎಂದು ರಾಜ್ಯ ಶಿಕ್ಷಣ ಸಂಶೋಧನಾ ಮತ್ತು ತರಬೇತಿ ಇಲಾಖೆ (ಡಿಎಸ್‌ಆರ್‌ಇಟಿ) ನಿರ್ದೇಶಕ ಎಂ.ಆರ್. ಮಾರುತಿ ತಿಳಿಸಿದರು.

ಕೋವಿಡ್ ಕಾರಣ ಕಳೆದ ಶೈಕ್ಷಣಿಕ ವರ್ಷಕ್ಕೆ (2020–21) ಅನ್ವಯಿಸುವಂತೆ 1 ರಿಂದ 10ನೇ ತರಗತಿಯ ಪಠ್ಯಕ್ರಮದಲ್ಲಿ ಶೇ 30ರಷ್ಟು ಕಡಿತಗೊಳಿಸಲಾಗಿತ್ತು. 5ರಿಂದ–10ನೇ ತರಗತಿವರೆಗೆ ಆನ್‌ಲೈನ್ ಶಿಕ್ಷಣದ ಜೊತೆಗೆ ವಿದ್ಯಾಗಮ ಮತ್ತು ಚಂದನವಾಹಿನಿಯ ಮೂಲಕ ವಿದ್ಯಾರ್ಥಿಗಳಿಗೆ ಪಾಠ ಬೋಧನೆ ಮಾಡಲಾಗಿತ್ತು’ ಎಂದು ತಿಳಿಸಿದರು.

ಕೋವಿಡ್ ಕಡಿಮೆ ಆಗಿರುವುದರಿಂದ ಪ್ರಾಥಮಿಕ ಹಂತದಿಂದ ಶಾಲೆಗಳನ್ನು ಆರಂಭಿಸಲು ಒತ್ತಡ ಹೆಚ್ಚುತ್ತಿದೆ. ಐಸಿಎಂಆರ್, ಡಾ.ದೇವಿಶೆಟ್ಟಿ ನೇತೃತ್ವದ ತಜ್ಞರ ಸಮಿತಿಗಳು ಶಾಲೆಗಳನ್ನು ಆರಂಭಿಸಲು ಸಲಹೆ ನೀಡಿದೆ. ಇಲಾಖೆಯ ಆಯುಕ್ತ ವಿ.ಅನ್ಬುಕುಮಾರ್ ನೇತೃತ್ವದ ಕಾರ್ಯಪಡೆಯೂ ಸಕಾರಾತ್ಮಕವಾಗಿ ಸರ್ಕಾರಕ್ಕೆ ವರದಿ ಸಲ್ಲಿಸಿದೆ ಎಂದರು.

‘ಪ್ರಸಕ್ತ ವರ್ಷ ಇನ್ನೂ ಶಾಲೆಗಳು ಆರಂಭವಾಗಿಲ್ಲ. ಮೂರನೇ ಅಲೆಯ ವದಂತಿಗಳಿವೆ. ಹೀಗಾಗಿ, ಈ ವರ್ಷವೂ ಶೇ 30ರಷ್ಟು ಪಠ್ಯ ಕಡಿತಗೊಳಿಸಬೇಕು’ ಎಂದು ಖಾಸಗಿ ಶಾಲಾ ಆಡಳಿತ ಮಂಡಳಿಗಳು ಬೇಡಿಕೆ ಮುಂದಿಟ್ಟಿವೆ.

ಸಚಿವ ಸ್ಥಾನ: ಯಾರಿಗೂ ಭರವಸೆ ಕೊಡದ ಬಿಎಸ್‌ವೈ

ಬೆಂಗಳೂರು: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಸರ್ಕಾರದಲ್ಲಿ ಸಚಿವ ಸ್ಥಾನ ಗಿಟ್ಟಿಸಲು ಕೆಲವು ಶಾಸಕರು ದೆಹಲಿಯಲ್ಲಿ ಬೀಡು ಬಿಟ್ಟಿದ್ದರೆ, ಇನ್ನು ಕೆಲವರು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ ಸುತ್ತ ಗಿರಕಿ ಹೊಡೆಯಲಾರಂಭಿಸಿದ್ದಾರೆ.

ಮಂತ್ರಿಮಂಡಲ ರಚನೆಗೆ ಸಂಬಂಧಿಸಿ ಬೊಮ್ಮಾಯಿ ದೆಹಲಿಗೆ ಹೋಗಿರುವ ಬೆನ್ನಲ್ಲೇ ಸೋಮವಾರ ಬೆಳಿಗ್ಗೆಯಿಂದಲೇ ಹಲವು ಶಾಸಕರು ಯಡಿಯೂರಪ್ಪ ಅವರನ್ನು ‘ಕಾವೇರಿ’ ನಿವಾಸದಲ್ಲಿ ಭೇಟಿ ಮಾಡಿ ಸಚಿವ ಸ್ಥಾನಕ್ಕಾಗಿ ಒತ್ತಡ ಹೇರಲಾರಂಭಿಸಿದರು.

ತಮ್ಮನ್ನು ಭೇಟಿಯಾಗಿದ್ದ ಯಾವುದೇ ಶಾಸಕರಿಗೂ ಯಡಿಯೂರಪ್ಪ ಸಚಿವ ಸ್ಥಾನದ ಭರವಸೆ ನೀಡಿಲ್ಲ. ‘ಸಂಪುಟ ವಿಸ್ತರಣೆ ವಿಚಾರ ವರಿಷ್ಠರಿಗೆ ಬಿಟ್ಟಿದ್ದು, ಅವರೇ ನಿರ್ಣಯ ಮಾಡುತ್ತಾರೆ. ನಾವು ಹೇಳುವಂತಹದ್ದೂ ಏನೂ ಇಲ್ಲ’ ಎಂದು ಹೇಳಿದರು.

‘ಯಡಿಯೂರಪ್ಪ ಅವರು ಸಿ.ಎಂ ಆಗಿದ್ದಾಗಲೇ ಅವರ ಎಲ್ಲ ಮಾತುಗಳನ್ನು ಹೈಕಮಾಂಡ್ ಕೇಳುತ್ತಿರಲಿಲ್ಲ. ಟಿಕೆಟ್ ಹಂಚಿಕೆ ಸೇರಿದಂತೆ ವರಿಷ್ಠರ ಮಾತೇ ಅಂತಿಮವಾಗಿರುತ್ತಿತ್ತು. ಈಗ ಅವರ ಮಾತು ಕೇಳುತ್ತಾರೆಯೇ? ಹೀಗಾಗಿ ಯಾರಿಗೂ ಭರವಸೆ ನೀಡುವ ಗೋಜಿಗೆ ಹೋಗಿಲ್ಲ’ ಎಂದು ಮೂಲಗಳು ತಿಳಿಸಿವೆ. ‘ಇನ್ನೂ ಕೆಲವರು ವಿಜಯೇಂದ್ರ ಇರುತ್ತಾರೆ ಎಂಬ ಕಾರಣಕ್ಕೆ ಬರುತ್ತಾರೆ. ಇದು ಬೇರೆ ರೀತಿಯ ಸಂದೇಶಗಳ ರವಾನೆಗೆ ಕಾರಣವಾದೀತು ಎಂದು ಯಾರನ್ನೂ ಭೇಟಿ ಮಾಡದಿರಲು ವಿಜಯೇಂದ್ರ ತೀರ್ಮಾನಿಸಿದ್ದಾರೆ‘ ಎಂದೂ ಮೂಲಗಳು ಹೇಳಿವೆ.

> **ಸಚಿವ ಸಂಪುಟ ರಚನೆಗೆ ಕುರಿತು ವರಿಷ್ಠರ ಜತೆಗಿನ ಸಭೆಯಲ್ಲಿ ಎಲ್ಲ ಆಯಾಮಗಳಲ್ಲೂ ಚರ್ಚೆ ನಡೆದಿದೆ. ಮಂಗಳವಾರ ರಾತ್ರಿ ಪಟ್ಟಿ ದೊರೆಯಲಿದೆ**
> **ಬಸವರಾಜ ಬೊಮ್ಮಾಯಿ,** ಮುಖ್ಯಮಂತ್ರಿ

ಎಸ್.ಆರ್.ವಿಶ್ವನಾಥ್, ಪ್ರೀತಂಗೌಡ, ಮಸಾಲೆ ಜಯರಾಂ, ಎಂ.ಪಿ.ಕುಮಾರಸ್ವಾಮಿ, ಆರಗ ಜ್ಞಾನೇಂದ್ರ, ದೊಡ್ಡನಗೌಡ ಪಾಟೀಲ, ವಿಧಾನಪರಿಷತ್ ಸದಸ್ಯ ಎಂಟಿಬಿ ನಾಗರಾಜ್ ಅವರು ಯಡಿಯೂರಪ್ಪ ಅವರನ್ನು ಭೇಟಿಯಾಗಿದ್ದರು.

ಇವರಲ್ಲಿ ಕುಮಾರಸ್ವಾಮಿ, ದೊಡ್ಡನಗೌಡ ಪಾಟೀಲ ಬೆಂಬಲಿಗರ ಜತೆಯೇ ಬಂದಿದ್ದರು. ಜಿ.ಎಚ್. ತಿಪ್ಪಾರೆಡ್ಡಿ, ಎಂ.ಚಂದ್ರಪ್ಪ, ಪೂರ್ಣಿಮಾ, ಗೂಳಿಹಟ್ಟಿ ಶೇಖರ್ ಸಚಿವ ಸ್ಥಾನಕ್ಕಾಗಿ ತಮ್ಮದೇ ಆದ ರೀತಿಯಲ್ಲಿ ಒತ್ತಡ ಹೇರುತ್ತಿದ್ದಾರೆ.

ಸಂಪುಟ ಸಂಕಟಕ್ಕೆ ಸು‘ಸೂತ್ರ’?

ಒಂದನೇ ಪುಟದಿಂದ

ವಲಸಿಗರಿಗೆ ಅವಕಾಶ: ಕಾಂಗ್ರೆಸ್ ಮತ್ತು ಜೆಡಿಎಸ್ ತೊರೆದು ಬಂದು ಬಿಜೆಪಿ ಸರ್ಕಾರ ರಚನೆಗೆ ಕಾರಣರಾಗಿ, ಯಡಿಯೂರಪ್ಪ ಸಂಪುಟ ಸೇರಿದ್ದ ಎಲ್ಲ ವಲಸಿಗರಿಗೂ ಹೊಸ ಸಂಪುಟದಲ್ಲಿ ಅವಕಾಶ ನೀಡಲು ವರಿಷ್ಠರು ಸಮ್ಮತಿ ಸೂಚಿಸಿದ್ದಾರೆ.

ರಾಜರಾಜೇಶ್ವರಿ ನಗರ ಶಾಸಕ ಮುನಿರತ್ನ ಅವರನ್ನು ಸಂಪುಟಕ್ಕೆ ಸೇರ್ಪಡೆ ಮಾಡಿಕೊಳ್ಳುವುದು ಹಾಗೂ ಸಿ.ಡಿ. ಪ್ರಕರಣದಿಂದ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿರುವ ರಮೇಶ ಜಾರಕಿಹೊಳಿ ಅವರ ಬದಲಿಗೆ, ಅವರ ಸೋದರ ಬಾಲಚಂದ್ರ ಅವರಿಗೆ ಅವಕಾಶ ನೀಡುವ ಕುರಿತೂ ಚರ್ಚೆ ನಡೆಸಲಾಗಿದೆ.

ಮಹೇಶ ಕುಮಠಳ್ಳಿ ಅವರನ್ನು ಸಂಪುಟಕ್ಕೆ ಸೇರಿಸಿಕೊಳ್ಳುವಂತೆ ಜಾರಕಿಹೊಳಿ ಸೋದರರಿಂದ ತೀವ್ರ ಒತ್ತಡ ಬಂದಿದೆ ಎನ್ನಲಾಗಿದ್ದು, ವರಿಷ್ಠರ ತೀರ್ಮಾನ ಅಂತಿಮ ಎನ್ನಲಾಗಿದೆ.

ವಿಧಾನಸಭೆ ಅಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅವರನ್ನು ಸಂಪುಟಕ್ಕೆ ಸೇರ್ಪಡೆ ಮಾಡಿ, ಅವರ ಸ್ಥಾನಕ್ಕೆ ಸುರೇಶಕುಮಾರ್ ಅವರ ಹೆಸರನ್ನೂ ಪ್ರಸ್ತಾಪಿಸಲಾಗಿದೆ.

ಸುದೀರ್ಘ ಸಮಾಲೋಚನೆ: ಬಸವರಾಜ ಬೊಮ್ಮಾಯಿ ಅವರು ಕೇಂದ್ರ ಸಚಿವರಾದ ಅಮಿತ್ ಶಾ, ಪ್ರಲ್ಹಾದ ಜೋಶಿ, ಧರ್ಮೇಂದ್ರ ಪ್ರಧಾನ್, ಪಕ್ಷದ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಬಿ.ಎಲ್. ಸಂತೋಷ್, ರಾಜ್ಯ ಉಸ್ತುವಾರಿ ಅರುಣ್ ಸಿಂಗ್ ಅವರೊಂದಿಗೆ ಮಾತುಕತೆ ನಡೆಸಿದರು.

ಸಂಭವನೀಯ ಪಟ್ಟಿಯನ್ನು ಅಂತಿಮಗೊಳಿಸುವ ನಿಟ್ಟಿನಲ್ಲಿ ವರಿಷ್ಠರ ಸೂಚನೆಯ ಮೇರೆಗೆ ಪ್ರಲ್ಹಾದ ಜೋಶಿ ಅವರೊಂದಿಗೆ ಸೋಮವಾರವೂ ಮೂರು ಗಂಟೆ ಕಾಲ ಚರ್ಚಿಸಿದ ಬೊಮ್ಮಾಯಿ, ರಾತ್ರಿ 8.30ರ ನಂತರ ಪಟ್ಟಿಯೊಂದಿಗೆ ನಡ್ಡಾ ಅವರ ನಿವಾಸಕ್ಕೆ ತೆರಳಿ ಚರ್ಚೆ ನಡೆಸಿದರು.

ಮಂಗಗಳ ಹತ್ಯೆ: ದಂಪತಿ ಸೇರಿ 7 ಮಂದಿ ಬಂಧನ

ಹಾಸನ: ಬೇಲೂರು ತಾಲ್ಲೂಕಿನ ಚೌಡಹಳ್ಳಿ ಬಳಿ ನಡೆದಿದ್ದ ಮಂಗಗಳ ಮಾರಣಹೋಮ ಪ್ರಕರಣಕ್ಕೆ ಸಂಬಂಧಿಸಿದಂತೆ ಅರಣ್ಯ ಮತ್ತು ಪೊಲೀಸ್ ಇಲಾಖೆ ಸಿಬ್ಬಂದಿ ದಂಪತಿ ಸೇರಿ ಏಳು ಜನರನ್ನು ಬಂಧಿಸಿದ್ದಾರೆ.

ಮಂಗಗಳನ್ನು ಸೆರೆ ಹಿಡಿಯುತ್ತಿದ್ದ ಬಾಣಾವರದ ಯಶೋದಾ-ರಾಮು ದಂಪತಿ, ಉಗನೆ ಗ್ರಾಮದ ಪ್ರಸನ್ನ, ರಾಜೇಗೌಡ, ಚಾಲಕ ಮಂಜು, ರಾಮಾನುಜ ಅಯ್ಯಂಗಾರಿ ಮತ್ತು ಶ್ರೀಕಾಂತ ಬಂಧಿತರು.

ಉಗನೆ, ಕ್ಯಾತನಹಳ್ಳಿಯಲ್ಲಿ ಮಂಗಗಳ ಹಾವಳಿ ಹೆಚ್ಚಿದ್ದು, ಹಿಡಿದು ಸ್ಥಳಾಂತರಿಸುವಾಗ ಉಸಿರುಗಟ್ಟಿ ಸತ್ತಿರುವುದು ಮೇಲ್ನೋಟಕ್ಕೆ ಕಂಡುಬಂದಿದ್ದು, ಮರಣೋತ್ತರ ಪರೀಕ್ಷೆ ಬಂದ ಬಳಿಕ ನಿಖರ ಕಾರಣ ತಿಳಿಯಲಿದೆ ಎಂದು ಜಿಲ್ಲಾಧಿಕಾರಿ ಆರ್.ಗಿರೀಶ್, ಪೊಲೀಸ್ ವರಿಷ್ಠಾಧಿಕಾರಿ ಆರ್.ಶ್ರೀನಿವಾಸ್‌ಗೌಡ ಸೋಮವಾರ ಜಂಟಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

‘ಚೀಲದಲ್ಲಿ ತುಂಬಿ ಟಾಟಾ ಏಸ್ ವಾಹನದಲ್ಲಿ ಸಾಗಿಸುವಾಗ ಉಸಿರುಗಟ್ಟಿ 38 ಮಂಗಗಳು ಸತ್ತಿರುವ ಸಾಧ್ಯತೆ ಇದೆ’ ಎಂದು ಉಪ ಅರಣ್ಯ ಸಂರಕ್ಷಣಾಧಿಕಾರಿ ಕೆ.ಬಸವರಾಜ್ ತಿಳಿಸಿದರು.

ಪಂಚಾಯಿತಿ ನೌಕರರೂ ಕೋವಿಡ್ ಯೋಧರು

ಬೆಂಗಳೂರು: ಕೋವಿಡ್ ನಿರ್ವಹಣೆಯ ಕರ್ತವ್ಯಗಳಲ್ಲಿ ತೊಡಗಿರುವ ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಮತ್ತು ಗ್ರಾಮ ಪಂಚಾಯಿತಿಗಳ ಅಧಿಕಾರಿಗಳು ಹಾಗೂ ನೌಕರರನ್ನು ಕೋವಿಡ್ ಯೋಧರು ಎಂದು ಪರಿಗಣಿಸಲು ಸರ್ಕಾರ ಆದೇಶ ಹೊರಡಿಸಿದೆ.

ಆಯಾ ಜಿಲ್ಲೆಗಳ ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿ ಸಿಇಒಗಳು ಕೋವಿಡ್ ಯೋಧರು ಎಂದು ಗುರುತಿಸಬಹುದು. ಇವರು ಕೋವಿಡ್‌ನಿಂದ ಮೃತಪಟ್ಟರೆ ಅವರ ಕುಟುಂಬದವರಿಗೆ ಪರಿಹಾರ ನೀಡಲಾಗುವುದು ಎಂದು ಆದೇಶದಲ್ಲಿ ತಿಳಿಸಿದೆ.

ಕೋವಿಡ್‌ನಿಂದ ಅನಾರೋಗ್ಯಕ್ಕೆ ಒಳಗಾದಲ್ಲಿ ಸರ್ಕಾರಿ ಚಿಕಿತ್ಸೆಗೆ ತಗಲುವ ವೈದ್ಯಕೀಯ ವೆಚ್ಚ ಭರಿಸಲಾಗುವುದು. ರಾಜ್ಯದ ಪ್ರತಿಯೊಂದು ಜಿಲ್ಲೆಯಲ್ಲಿ ಸ್ಥಾಪಿಸಲಾಗುವ ಜಿಲ್ಲಾ ಪಂಚಾಯಿತಿ ಆಶ್ವಾಸನಾ ನಿಧಿಯಡಿ ಪರಿಹಾರ ಮೊತ್ತವನ್ನು ಪಡೆಯಲು ಅರ್ಹರಿರುತ್ತಾರೆ.

ಸೋಂಕಿಗೆ ಒಳಗಾದವರು 14 ದಿನಗಳ ವಿಶೇಷ ರಜೆ ಪಡೆಯಲು ಅರ್ಹರಿರುತ್ತಾರೆ. ಈ ಆದೇಶ ಏಪ್ರಿಲ್ 1 ಪೂರ್ವಾನ್ವಯವಾಗುವಂತೆ ಜಾರಿಗೊಳಿಸಲಾಗಿದೆ.

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ
ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು–560001.
ದೂರವಾಣಿ: 080–22215601, 22211246, ಫ್ಯಾಕ್ಸ್: 080–22215602
ಸಂಖ್ಯೆ: ಡಿವೈಇಎಸ್/ಯುನಿ/ಯುಶಕೇ/11/2021–22 ದಿನಾಂಕ: 29–07–2021

ಅಲ್ಪಾವಧಿ ಟೆಂಡರ್ ಪ್ರಕಟಣೆ (2ನೇ ಕರೆ)
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಉಪ–ನಿರ್ದೇಶಕರು (ಆಡಳಿತ), ಇವರು ಈ ಕೆಳಗೆ ತಿಳಿಸಿರುವ ಕಾಮಗಾರಿಗೆ ಟೆಂಡರ್ ಆಹ್ವಾನಿಸಿದ್ದಾರೆ.

ಕ್ರಸಂ.	ಕಾಮಗಾರಿ ವಿವರ	ಇ.ಎಂ.ಡಿ ಮೊತ್ತ
1	ವಿವಿಧ ಜಿಲ್ಲೆಗಳಿಗೆ ಅತ್ಯಾಧುನಿಕ ಜಿಮ್ ಉಪಕರಣಗಳನ್ನು ಸರಬರಾಜು ಮಾಡುವುದು.	ಇಲ್ಲ

ಆಸಕ್ತ ಟೆಂಡರ್‌ದಾರರು ಆನ್‌ಲೈನ್ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್: **http://eproc.karnataka.gov.in** ಮೂಲಕ ತಮ್ಮ ಬಿಡ್‌ಗಳನ್ನು ಸಲ್ಲಿಸಬಹುದು. ಟೆಂಡರ್ ದಾಖಲೆಗಳನ್ನು ಉಚಿತವಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ವೀಕ್ಷಿಸಬಹುದು.
1) ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಬಿಡ್ ಸಲ್ಲಿಸಲು ಕೊನೆಯ ದಿನಾಂಕ: **09–08–2021ರಂದು ಸಮಯ: 16.30 ಗಂಟೆಯವರೆಗೆ.** 2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **10–08–2021ರಂದು ಸಮಯ: 16.30 ಗಂಟೆಗೆ.** 3) ಹಣಕಾಸು ಬಿಡ್ ತೆರೆಯುವ ದಿನಾಂಕ: **ನಂತರ ತಿಳಿಸಲಾಗುವುದು.** ಹೆಚ್ಚಿನ ಮಾಹಿತಿಗಾಗಿ ಮೇಲ್ಕಾಣಿಸಿದ ವಿಳಾಸ ಸಂಪರ್ಕಿಸಬಹುದು.

ಸಹಿ/– ಉಪ ನಿರ್ದೇಶಕರು (ಆಡಳಿತ) ಹಾಗೂ ಟೆಂಡರ್ ಆಹ್ವಾನಿಸುವ ಪ್ರಾಧಿಕಾರ
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ
ವಾಸಾಸಂಇ/ಬೆಂ.ನ/ಅಡ್ವರ್ಟೋ/1020/2021–22

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರು
ಸರಕು ಖರೀದಿ ಅಧಿಕಾರಿಗಳ ಕಾರ್ಯಾಲಯ, ಕೃವಿವಿ, ರಾಯಚೂರು
ಮಿಂಚಂಚೆ : spo@uasraichur.edu.in ದೂರವಾಣಿ ಸಂಖ್ಯೆ : 08532-220165
ಇ–ಟೆಂಡರ್ ಪ್ರಕಟಣೆ ಸಂಖ್ಯೆ : SPO/UASR/E-Proc-03/2021-22, Dt : 29-07-2021

:: ಅಲ್ಪಾವಧಿ ಟೆಂಡರ್ ಪ್ರಕಟಣೆ ::

ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿಗೆ ಸಂಬಂಧಪಟ್ಟಂತೆ ವೈಜ್ಞಾನಿಕ ಮತ್ತು ಇನ್ನಿತರ ವಸ್ತುಗಳ ಖರೀದಿಗಾಗಿ ಅಲ್ಪಾವಧಿ ಟೆಂಡರನ್ನು ಕರೆಯಲಾಗಿದ್ದು, ಆಸಕ್ತ ಸರಬರಾಜುದಾರರು ಆನ್‌ಲೈನ್ ಮುಖಾಂತರ ಅಂದರೆ www.eproc.karnataka.gov.in ಜಾಲತಾಣದಲ್ಲಿ (ಬೇಡಿಕೆ ಸಂಖ್ಯೆ: UAS/2019-20/IND3821 TO 3830) ಭಾಗವಹಿಸಬಹುದು. ಈ ಟೆಂಡರ್‌ಗೆ ಸಂಬಂಧಪಟ್ಟ ಎಲ್ಲಾ ದಾಖಲೆಗಳನ್ನು ಭರ್ತಿಮಾಡಿ ಸಲ್ಲಿಸುವ ಕಡೆ ದಿನಾಂಕ : **07–08–2021** ಆಗಿರುತ್ತದೆ.

ಸಹಿ/– ಸರಕು ಖರೀದಿ ಅಧಿಕಾರಿಗಳು
ಕೃವಿವಿ., ರಾಯಚೂರು
ವಾ.ಸಾ.ಸಂ.ಇ/ರಾಯಚೂರು/236/ಎಂ.ಸಿ.&ಎ/2021–22

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನೀಯರರವರ ಕಛೇರಿ
ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ಯಾದಗಿರಿ
ಸಂಖ್ಯೆ:ಕಾಪಾಅ/ಗ್ರಾನೀಸಮತ್ತುನೈ/ವಿಯಾ/ಟೆ.ಪ್ರ/ಪ.ಬಿ/JJM/2021–22/487 ದಿನಾಂಕ:02/08/2021

ಅಲ್ಪಾವಧಿ ಮರು ಟೆಂಡರ ತಿದ್ದುಪಡಿ ಪ್ರಕಟಣೆ (ದ್ವಿ ಲಕೋಟೆ)
"ಇ–ಪ್ರೊಕ್ಯೂರ್‌ಮೆಂಟ್" ಮೂಲಕ

ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನೀಯರರು, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ಯಾದಗಿರಿ ರವರಿಂದ ಕುಡಿಯುವ ನೀರು ಕಾಮಗಾರಿಗಳಿಗೆ ಅರ್ಹ ಗುತ್ತಿಗೆದಾರರಿಂದ ಟೆಂಡರ ಅಹ್ವಾನಿಸಲಾಗಿದ್ದು ವಿವರ ಈ ಕೆಳಗಿನಂತಿದೆ.
1) ಕಾಮಗಾರಿಯ ವಿವರ: 1) Bijaspur-Est Cost Rs.128.70 lakhs- Indent No. 28126 & 2) Hemnoor- Est Cost Rs.146.70 lakhs- Indent No.28132 in SHORAPUR TQ, 2) ಲೆಕ್ಕ ಶೀರ್ಷಿಕೆ: Jal Jeevan Mission-2020-21, 3) ಗುತ್ತಿಗೆದಾರರ, ಅರ್ಹತೆ : 3ನೇ ಹಾಗೂ ಮೇಲ್ಪಟ್ಟು ದರ್ಜೆ 4) ಟೆಂಡರ ಫಾರಂ ಪಡೆಯುವ ದಿನಾಂಕ: 02-08-2021 ರಿಂದ 09-08-2021. 5) ಟೆಂಡರ್ ಅರ್ಜಿ ಬೆಲೆ ಮತ್ತು ಇ.ಎಂ.ಡಿ ಮೊತ್ತ ಇ–ಪ್ರೊಕ್ಯೂರ್‌ಮೆಂಟ್ ಪ್ರಕಾರ. 6) Pre Bid Meeting Date: 05-08-2021 & Address: Office of the Executive Engineer, RDW&S Division Yadgir at 11.00 am, 7) ಟೆಂಡರ್ ಫಾರಂ ಸಲ್ಲಿಸುವ ಅಂತಿಮ ದಿನಾಂಕ: **09–08–2021 ಸಾಯಂಕಾಲ 4.30 ಗಂಟೆವರೆಗೆ.** 8) ತಾಂತ್ರಿಕ ಬಿಡ್ಡ್ ತೆರೆಯುವ ದಿನಾಂಕ: **10–08–2021 ಸಾಯಂಕಾಲ 5.00 ಗಂಟೆಯ ನಂತರ.** 9) ಆರ್ಥಿಕ ಬಿಡ್ಡುಗಳನ್ನು ತೆರೆಯುವ ದಿನಾಂಕ: **12–08–2021 ಬೆಳಿಗ್ಗೆ 11.00 ಗಂಟೆಯ ನಂತರ,** 10) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ: ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ, ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ರೈಲ್ವೇ ನಿಲ್ದಾಣದ ಹತ್ತಿರ ಯಾದಗಿರ. 11) ಅಂತರ್ಜಾಲ ತಾಣದ ವಿಳಾಸ: www.eproc.karnataka.gov.in.

ಸಹಿ/– ಕಾರ್ಯಪಾಲಕ ಇಂಜಿನೀಯರರು,
ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ಯಾದಗಿರಿ.
ವಾ.ಸಾ.ಸಂ.ಇ/ಯಾದಗಿರಿ/130/ಎಂಸಿ&ಎ/2021–22

ನಗರಸಭೆ ಕಾರ್ಯಾಲಯ, ಗಂಗಾವತಿ.
CITY MUNICIPAL COUNCIL, GANGAVATHI.
ತಾಲೂಕ: ಗಂಗಾವತಿ–583227, ಜಿಲ್ಲೆ: ಕೊಪ್ಪಳ, ರಾಜ್ಯ: ಕರ್ನಾಟಕ. ದೂರವಾಣಿ ಸಂ: 08533–230243
ವೆಬ್‌ಸೈಟ್ : www.gangavathicity.mrc.gov.in ಇ–ಮೇಲ್ ಐ.ಡಿ : itstaff_ulb_gangavati@yahoo.com
ಸಂ:ನಸಗಂ/ಟೆಂಡರ/ನ.ನಿ/ಕಂ.ಆ/ಡ್ರೈ.ಸೂ/ವಾ.ಮ್ಯಾ/2021–22 ದಿನಾಂಕ: 30–07–2021

–:: ಇ–ಪ್ರ್ಯೋಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ ::–
(ಸ್ಟ್ಯಾಂಡರ್ಡ ಟೆಂಡರ ಪ್ರೊಕ್ಯೂರ್‌ಮೆಂಟ್ ಕೆ.ಸಿ–3 ನಿಬಂಧನೆಗಳಿಗೆ ಒಳಪಟ್ಟು ಟೆಂಡರ್ ಆಹ್ವಾನಿಸಲಾಗಿದೆ)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಮತ್ತು ಪಾರದರ್ಶಕತೆ ಅಧಿನಿಯಮ 2000 ರ ಪ್ರಕಾರ **2021–22ನೇ ಸಾಲಿನ ನಗರಸಭೆ ನಿಧಿ ಅನುದಾನದಡಿಯಲ್ಲಿ** ಮಂಜೂರಾದ ಕಾಮಗಾರಿಗೆ ಇ–ಪ್ರೊಕ್ಯೂರ್‌ಮೆಂಟ್ ಏಕ ಲಕೋಟೆ ಪದ್ಧತಿಯಲ್ಲಿ ಈ ಕೆಳಗೆ ನಮೂದಿಸಿದ ಕಾಮಗಾರಿಗಳಿಗೆ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೊಂದಾಯಿಸಲ್ಪಟ್ಟ ಅರ್ಹ ಸರ್ಕಾರೇತರ ಸಂಸ್ಥೆಗಳಿಂದ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಇ–ಪ್ರೊಕ್ಯೂರಮೆಂಟ್ ದಾಖಲೆಗಳಿಗಾಗಿ ಇಲಾಖಾ ವೆಬ್‌ಸೈಟ್ http://eproc.karnataka.gov.in ರ ಮೂಲಕ ಕೆಳಗೆ ನಮೂದಿಸಿರುವ ದಿನಾಂಕದಂದು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವುದು. ಟೆಂಡರ ಫಾರಂಗಳನ್ನು ಪಡೆಯುವುದು, ಭರ್ತಿ ಮಾಡುವುದು ಮತ್ತು ಸಲ್ಲಿಸುವುದು ವೆಬ್‌ಸೈಟ್ ಮುಖಾಂತರ ಮಾತ್ರ. ಈ ಕಛೇರಿಯಲ್ಲಿ ಯಾವುದೇ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.
1] ಖಾಲಿ ಟೆಂಡರ್ ಫಾರಂಗೆ ಇ–ಪ್ರೋಕ್ಯೂರ್‌ಮೆಂಟ್ ಪ್ರಕಾರ ಅರ್ಜಿ ಸಲ್ಲಿಸುವ: **13–08–2021 ರ ಸಂಜೆ 5–30 ಗಂಟೆಗೆ.** 2] ಶೆಡ್ಯೂಲ್–‘ಬಿ’ ಗಳನ್ನು ವೆಬ್‌ಸೈಟ್‌ನಲ್ಲಿ ಭರ್ತಿ ಮಾಡಿ ಸಲ್ಲಿಸುವ ಕೊನೆಯ ದಿನಾಂಕ: **13–08–2021 ರ ಸಂಜೆ 5–30 ಗಂಟೆಗೆ.** 3] ಟೆಂಡರನ್ನು ತೆರೆಯುವ ದಿನಾಂಕ: **16–08–2021 ರ ಬೆಳಿಗ್ಗೆ 11–00 ಗಂಟೆಗೆ.** 4] ಅರ್ಜಿ ಶುಲ್ಕ (ಹಿಂದಿರುಗಿಸಲಾಗುವುದಿಲ್ಲ): **ಇ–ಪ್ರೋಕ್ಯೂರ್‌ಮೆಂಟ್ ನಿಯಮಾನುಸಾರ**
ಒಂದು ವೇಳೆ ಪ್ರಕಟಿಸಲಾಗಿರುವ ದಿನಾಂಕಗಳು ಸಾರ್ವಜನಿಕ ರಜಾ ದಿನಗಳನ್ನಾಗಿ ಘೋಷಿಸಲ್ಪಟ್ಟರೆ ಮುಂದಿನ ದಿನಾಂಕವನ್ನು ಪರಿಗಣಿಸಲಾಗುವುದು.
2021–22ನೇ ಸಾಲಿನ ನಗರಸಭೆ ನಿಧಿ ಅನುದಾನ: ಕಾಮಗಾರಿಗಳ ವಿವರ: 1. Annual Man Power Contract to Supply of 05 Computer Operator for CMC Gangavathi. **NO/CMCGVT/MF/CO/2021-22. ಟೆಂಡರ್‌ಗಿಟ್ಟ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ):** 11,00,000/–. **ಮುಂಗಡ ಠೇವಣಿ ಮೊತ್ತ:** 0.00. **ನಿರ್ವಹಣೆಗಾಗಿ ನಿಗದಿಪಡಿಸಿದ ಅವಧಿ:** 12 ತಿಂಗಳು. 2. Annual Man Power Contrat Supply of 03 Driver cum Operator Loaders and Watchman for CMC Gangavathi **NO/CMCGVT/SERVICE/DRVRLDRWMAN/2021-22. ಟೆಂಡರ್‌ಗಿಟ್ಟ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ):** 17,10,000/–. **ಮುಂಗಡ ಠೇವಣಿ ಮೊತ್ತ:** 0.00. **ನಿರ್ವಹಣೆಗಾಗಿ ನಿಗದಿಪಡಿಸಿದ ಅವಧಿ:** 12 ತಿಂಗಳು. 3. Annual Man Power Contract of Supply of 15 Drivers and 04 Supervisors and 01 Landfill Site Supervisor for CMC Gangavathi **NO/CMCGVT/DRIVERSUPERVISR/2021-22. ಟೆಂಡರ್‌ಗಿಟ್ಟ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ):** 41,50,000/–. **ಮುಂಗಡ ಠೇವಣಿ ಮೊತ್ತ:** 0.00. **ನಿರ್ವಹಣೆಗಾಗಿ ನಿಗದಿಪಡಿಸಿದ ಅವಧಿ:** 12 ತಿಂಗಳು
Note :- **Any changes in Calendar of events will be published in e-procurement portal only**. **ಷರತ್ತುಗಳು:** 1) ಟೆಂಡರ್ ದಸ್ತಾವೇಜುನಲ್ಲಿರುವಂತೆ ಷರತ್ತುಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು. 2)ಟೆಂಡರನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ನಗರಸಭೆಯು ಕಾಯ್ದಿರಿಸಿಕೊಂಡಿದೆ.

ಸಹಿ/– ಪೌರಾಯುಕ್ತರು, ನಗರಸಭೆ ಗಂಗಾವತಿ
ಡಿಐಪಿಆರ್/ಕೊಪ್ಪಳ/188/ಎಂಸಿಎ/2021–22
ಸಹಿ/– ಅಧ್ಯಕ್ಷರು, ನಗರಸಭೆ ಗಂಗಾವತಿ.

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
CIN:U85110KA1998SGC024503
ನಂ.1, 4ನೇ ಮಹಡಿ, ಕಾಫಿ ಮಂಡಳಿ, ಡಾ|| ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು–560001, ದೂ: 080–22283074–78 ಫ್ಯಾಕ್ಸ್: 080–22386015,
ವೆಬ್‌ಸೈಟ್: **http://www.knnlindia.com**
ಸಂ.: ಕನೀನಿನಿ(ಆರ್)/ನೇಮಕಾತಿ(ಸಿಎಸ್)/ಸಿ&ಆರ್/2021–22/2015 ದಿನಾಂಕ: 02.08.2021

ನೇಮಕಾತಿ ಅಧಿಸೂಚನೆ
ಕಂಪನಿ ಕಾರ್ಯದರ್ಶಿ ಹುದ್ದೆಯ ನೇಮಕಾತಿ (on contract basis)

ಕರ್ನಾಟಕ ನೀರಾವರಿ ನಿಗಮ ನಿಯಮಿತವು (ಕನೀನಿನಿ) ಕರ್ನಾಟಕ ಸರ್ಕಾರದ ಉದ್ಯಮವಾಗಿದ್ದು, ರಾಜ್ಯದ ಬೃಹತ್ ಮತ್ತು ಮಧ್ಯಮ ನೀರಾವರಿ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದೆ. ನಿಗಮವು ಬೆಂಗಳೂರಿನಲ್ಲಿರುವ ನೋಂದಾಯಿತ ಕಛೇರಿಯಲ್ಲಿ **ಕಂಪನಿ ಕಾರ್ಯದರ್ಶಿ (Grade-I or Grade-II) (on Contract basis)** ಹುದ್ದೆಗೆ ಸೂಕ್ತ ಅಭ್ಯರ್ಥಿಯ ಆಯ್ಕೆಗಾಗಿ ಈ ಅಧಿಸೂಚನೆಯನ್ನು ಹೊರಡಿಸಿದೆ.
ಆಸಕ್ತಿಯುಳ್ಳ ಅಭ್ಯರ್ಥಿಗಳು ಹೆಚ್ಚಿನ ವಿವರಗಳಿಗಾಗಿ ಕನೀನಿನಿ ವೆಬ್‌ಸೈಟ್: **http://www.knnlindia.com** ನಲ್ಲಿ ಪಡೆಯಬಹುದಾಗಿದೆ. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: **23.08.2021 ಸಂಜೆ 5.30 ರವರೆಗೆ** ಆಗಿದ್ದು, ನೋಂದಾಯಿತ ಕಛೇರಿಯಲ್ಲಿ ಅರ್ಜಿಯನ್ನು ಸಲ್ಲಿಸಬಹುದಾಗಿದೆ.

ಸಹಿ/- ವ್ಯವಸ್ಥಾಪಕ ನಿರ್ದೇಶಕರು

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ
#49, ಪರಿಸರ ಭವನ, ಚರ್ಚ್ ಸ್ಟ್ರೀಟ್, ಬೆಂಗಳೂರು–560 001
ದೂ: 080–2558 6520/ 2558 9112 ಫ್ಯಾಕ್ಸ್: 080–2588 6321
ಇಮೇಲ್: ho@kspcb.gov.in ವೆಬ್‌ಸೈಟ್: www.kspcb.gov.in
ಸಂಖ್ಯೆ: ಕರಾಮಾನಿಮಂ/ತ್ಯಾನಿಕೋ/1121/ಪ್ಲಾಸ್ಟಿಕ್/2016/2021–22/1917 ದಿನಾಂಕ: 02.08.2021

ಸಾರ್ವಜನಿಕ ಸೂಚನೆ
ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣಾ ನಿಯಮಗಳು, 2016ರ ಅಡಿಯಲ್ಲಿ ನಿಯಮ, 9(1), 9(2) ಮತ್ತು 13 (2)ಗಳ ಪ್ರಕಾರ (ತಿದ್ದುಪಡಿ ಮಾಡಿದಂತೆ) ಉತ್ಪಾದಕರು, ಆಮದುದಾರರು ಮತ್ತು ಬ್ರಾಂಡ್ ಮಾಲೀಕರ ನೋಂದಣಿಗೆ ಸೂಚನೆ.

ಕೇಂದ್ರ ಸರ್ಕಾರದ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯವು, ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣಾ ನಿಯಮಗಳು, 2016 ಅನ್ನು ದಿನಾಂಕ: 18.03.2016 ರಂದು ಅಧಿಸೂಚಿಸಿದೆ.
ಮೇಲಿನ ನಿಯಮದ ಪ್ರಕಾರ ಉತ್ಪಾದಕರು, ಆಮದುದಾರರು ಮತ್ತು ಬ್ರಾಂಡ್ ಮಾಲೀಕರು ತಾವು ಮಾರುಕಟ್ಟೆಗೆ ಪೂರೈಸುವ ಉತ್ಪನ್ನಗಳಿಂದ (ಬಳಕೆ ನಂತರ) ಉತ್ಪತ್ತಿಯಾಗುವ ಪ್ಲಾಸ್ಟಿಕ್ ತ್ಯಾಜ್ಯಕ್ಕೆ ವಿಸ್ತೃತ ಉತ್ಪಾದಕರ ಜವಾಬ್ದಾರಿ (Extended Producer Responsibility) ಅಡಿ, ಸದರಿ ವಸ್ತುವಿನ ಪ್ಲಾಸ್ಟಿಕ್ ತ್ಯಾಜ್ಯವನ್ನು ಪರಿಸರ ಸ್ನೇಹಿ ತಂತ್ರಜ್ಞಾನದ ಮೂಲಕ ನಿರ್ವಹಿಸಿ, ಸಂಸ್ಕರಿಸಿ ಹಾಗೂ ವಿಲೇವಾರಿ ಮಾಡಬೇಕಾದ ಜವಾಬ್ದಾರಿ, ಉತ್ಪಾದಕರು, ಆಮದುದಾರರು ಹಾಗೂ ಬ್ರಾಂಡ್ ಮಾಲೀಕರ ಮೇಲೆ ಇರುತ್ತದೆ.
ಉತ್ಪಾದಕರು, ಆಮದುದಾರರು ಮತ್ತು ಬ್ರಾಂಡ್ ಮಾಲೀಕರು ಎರಡು ರಾಜ್ಯ ಅಥವಾ ಕೇಂದ್ರಾಡಳಿತ ಪ್ರದೇಶಕ್ಕಿಂತ ಹೆಚ್ಚಿನ ಸ್ಥಳಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದರೆ ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಹಾಗೂ ಒಂದು ಅಥವಾ ಎರಡು ರಾಜ್ಯ ಅಥವಾ ಕೇಂದ್ರಾಡಳಿತ ಪ್ರದೇಶಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದರೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ನೋಂದಣಿ ಪಡೆಯಬೇಕಾಗಿರುತ್ತದೆ.
ಈ ಸಾರ್ವಜನಿಕ ಸೂಚನೆಯನ್ನು ಉತ್ಪಾದಕರು, ಆಮದುದಾರರು ಮತ್ತು ಬ್ರಾಂಡ್ ಮಾಲೀಕರ ಗಮನ ಸೆಳೆಯಲು ನೀಡಿದ್ದು, ಎಲ್ಲಾ ಉತ್ಪಾದಕರು, ಆಮದುದಾರರು ಮತ್ತು ಬ್ರಾಂಡ್ ಮಾಲೀಕರು ಮೇಲೆ ಸೂಚಿಸಿದಂತೆ ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ / ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ / ಮಾಲಿನ್ಯ ನಿಯಂತ್ರಣ ಕಮಿಟಿಗಳಲ್ಲಿ ಮೇಲಿನಂತೆ ನೋಂದಾಯಿಸಿ ಕಾರ್ಯನಿರ್ವಹಿಸಬೇಕಾಗಿರುತ್ತದೆ. ಈಗಾಗಲೇ ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ ನಿಗದಿಪಡಿಸಿದ ವಿಸ್ತರಣಾ ಅವಧಿಯು ದಿನಾಂಕ: 01.08.2021ಕ್ಕೆ ಮುಕ್ತಾಯವಾಗಿರುತ್ತದೆ. ಆದುದ್ದರಿಂದ ಯಾವುದೇ ಉತ್ಪಾದಕರು, ಆಮದುದಾರರು ಅಥವಾ ಬ್ರಾಂಡ್ ಮಾಲೀಕರು ನೋಂದಣಿ ಮಾಡದೇ ಕಾರ್ಯನಿರ್ವಹಿಸುತ್ತಿದ್ದಲ್ಲಿ, ಅಂತಹ ಉದ್ದಿಮೆದಾರರು, ಈ ಕೂಡಲೇ ನೋಂದಣಿ ಮಾಡಿಸಬೇಕಾಗಿರುತ್ತದೆ. ಇದನ್ನು ಯಾರೇ ಉದ್ದಿಮೆದಾರರು ಉಲ್ಲಂಘಿಸಿದಲ್ಲಿ ಅಂತಹ ಉದ್ದಿಮೆದಾರರ ವಿರುದ್ಧ ಪರಿಸರ (ಸಂರಕ್ಷಣೆ) ಕಾಯ್ದೆ, 1986 ರಡಿ ಮುಚ್ಚುವ ಆದೇಶ ಹೊರಡಿಸಲಾಗುವುದು ಮತ್ತು ಪರಿಸರ ಪರಿಹಾರವನ್ನು ವಸೂಲಿ ಮಾಡಲಾಗುವುದು.
ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಉತ್ಪಾದಕರು, ಆಮದುದಾರರು ಮತ್ತು ಬ್ರಾಂಡ್ ಮಾಲೀಕರ ವಿರುದ್ಧ ಪರಿಸರ (ಸಂರಕ್ಷಣೆ) ಕಾಯ್ದೆ, 1986 ರಡಿ ನೋಂದಣಿ ಮಾಡದೆ ಕಾರ್ಯನಿರ್ವಹಿಸಿದ ಅವಧಿಗೆ, ಸದರಿ ಕಾಯ್ದೆಯಡಿ ಕ್ರಮಕೈಗೊಳ್ಳಲು ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಗೆ ಶಿಫಾರಸ್ಸು ಮಾಡಲಾಗುವುದು ಎಂದು ಈ ಮೂಲಕ ತಿಳಿಸಲಾಗಿದೆ.

ಸಹಿ/– ಸದಸ್ಯ ಕಾರ್ಯದರ್ಶಿ
ವಾ.ಸಾ.ಸಂ.ಇ/1020/2021–22

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಜಿಲ್ಲಾ ಪಂಚಾಯತ ಕಾರ್ಯಾಲಯ
ಬೆಳಗಾವಿ–590 002.
ದೂರವಾಣಿ: 0831-2417809, ಫಾಕ್ಸ್: 0831-2429662, ಇಮೇಲ್: tscbgm@gmail.com
ಸಂಖ್ಯೆ : ಜಿ.ಪಂ.ಬೆ./ಸ್ವಭಾಮಿ/GP/INC/2020–21 ದಿನಾಂಕ : 23–07–2021

ಇ-ಟೆಂಡರ್ ಅಧಿಸೂಚನೆ

ಜಿಲ್ಲಾ ಪಂಚಾಯತ ವ್ಯಾಪ್ತಿಯ ಗ್ರಾಮ ಪಂಚಾಯಿತಿಗಳಿಗೆ ಹಂತ–ಹಂತವಾಗಿ ನೀಡಲಾಗುವ ಬೇಡಿಕೆ ಪತ್ರಗಳನ್ನು ಆಧಾರಿಸಿ ದಹನ ಯಂತ್ರ (Incinerator for Sanitary Napkin) ಸರಬರಾಜು ಮಾಡಲು ಕೆ.ಟಿ.ಪಿ.ಪಿ. ನಿಯಮಾವಳಿಗಳನ್ವಯ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಪಡೆಯುವ ಇ–ಟೆಂಡರ್ ಅಧಿಸೂಚನೆಯನ್ನು ಹೊರಡಿಸಲಾಗಿದೆ.
ವಿವರಗಳು : 1) ಇ–ಟೆಂಡರ್ ಪ್ರಕಟಣೆ ದಿನಾಂಕ : 23–07–2021, 2) ಟೆಂಡರಿಗಿಟ್ಟ ಮೊತ್ತ : ರೂ. 2,24,55,000/–, 3) ಇ.ಎಂ.ಡಿ. ಮೊತ್ತ : ರೂ. 3,36,825/–, 4) ಟೆಂಡರ್ ಪ್ರಾರಂಭದ ದಿನಾಂಕ : 26–07–2021, 5) ಭರ್ತಿ ಮಾಡಿದ ಟೆಂಡರ್ ಫಾರಂ ಸಲ್ಲಿಕೆಗೆ ಕೊನೆಯ ದಿನಾಂಕ ಮತ್ತು ಸಮಯ : 25–08–2021 ರ ಸಂಜೆ 4.30 ಗಂಟೆ, 6) ಟೆಂಡರ್ ತೆರೆಯುವ ದಿನಾಂಕ ವೇಳೆ ಮತ್ತು ಸ್ಥಳ : 27–08–2021 ರ ಬೆಳಿಗ್ಗೆ 11.00 ಗಂಟೆ.
ಹೆಚ್ಚಿನ ವಿವರಗಳನ್ನು ಕಛೇರಿ ವೇಳೆಯಲ್ಲಿ ಉಪಕಾರ್ಯದರ್ಶಿಗಳು 1 (ಆಡಳಿತ), ಜಿಲ್ಲಾ ಪಂಚಾಯತ್, ಬೆಳಗಾವಿ ರವರನ್ನು ಕಛೇರಿ ಸಂಪರ್ಕಿಸಬಹುದು. ದೂರವಾಣಿ ಸಂಖ್ಯೆ : 94808 54001.

ಸಹಿ/– ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
ಜಿಲ್ಲಾ ಪಂಚಾಯತ್, ಬೆಳಗಾವಿ.
ಡಿಐಪಿಆರ್/ಬೆಳಗಾವಿ/572/ಮಣಿಪಾಲ್/2021–22

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ, ಶಾಂತಿನಗರ ವಿಭಾಗ,
ಪಿ.ಯು. ಕಟ್ಟಡ, 9ನೇ ಮಹಡಿ, ಎಂ.ಜಿ. ರಸ್ತೆ, ಬೆಂಗಳೂರು–560001
ನಂ.: ಕಾಪಾಅ/ಶಾನ/ಟೆಂಡರ್/06/2021–22 ದಿನಾಂಕ: 31.07.2021

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ) ಏಕ / ದ್ವಿ ಲಕೋಟೆ

ಕಾರ್ಯಪಾಲಕ ಅಭಿಯಂತರರು (ಶಾಂತಿನಗರ ವಿಭಾಗ), ಬಿಬಿಎಂಪಿ, ಬೆಂಗಳೂರು ಇವರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ನೋಂದಾಯಿತ ಅಥವಾ ತತ್ಸಮಾನ ಸಿಪಿಡಬ್ಲ್ಯುಡಿ / ಕೆಪಿಡಬ್ಲ್ಯುಡಿ / ರೈಲ್ವೇಸ್ / ಎಂಇಎಸ್ / ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಗಿನ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. (ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ – ಕೆಡಬ್ಲ್ಯು–1 ಏಕ ಲಕೋಟೆಗೆ, ಕೆಡಬ್ಲ್ಯು–2 ದ್ವಿ ಲಕೋಟೆಗೆ).

ಕ್ರ. ಸಂ.	ಕಾಮಗಾರಿಯ ಹೆಸರು	ಕಾಮಗಾರಿಯ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)
1	ಜೋಗುಪಾಳ್ಯ, ವಾರ್ಡ್ ನಂ. 89ರಲ್ಲಿ ಸಾರ್ವಜನಿಕ ಶೌಚಾಲಯ ನಿರ್ಮಾಣ. (ವರ್ಗ: ಇತರೆ)	15.00
2	ವಾರ್ಡ್ ನಂ. 89, ಅಪ್ಪಾ ರೆಡ್ಡಿಪಾಳ್ಯ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ಬೋರ್‌ವೆಲ್ ಕೊರೆಯುವುದು ಮತ್ತು ಸರಬರಾಜಿಗಾಗಿ ಕೊಳವೆ ಮಾರ್ಗವನ್ನು ಒದಗಿಸುವುದು. (ವರ್ಗ: ಇತರೆ)	20.00
3	ವಾರ್ಡ್ ನಂ. 89, ಅಪ್ಪಾ ರೆಡ್ಡಿಪಾಳ್ಯ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ಬೋರ್‌ವೆಲ್ ಕೊರೆಯುವುದು ಮತ್ತು ಕೊಳವೆ ಮಾರ್ಗವನ್ನು ಒದಗಿಸುವುದು. (ವರ್ಗ: ಪ.ಜಾ.)	20.00
4	ವಾರ್ಡ್ ನಂ. 89ರಲ್ಲಿ ಇಂದಿರಾನಗರ 2ನೇ ಸ್ಟೇಜ್‌ನ 1ನೇ ಅಡ್ಡರಸ್ತೆಯಿಂದ 10ನೇ ಅಡ್ಡರಸ್ತೆಗಳವರೆಗೆ ಮತ್ತು ಸುತ್ತಲ ಪ್ರದೇಶದಲ್ಲಿ ಬಿಡಬ್ಲ್ಯುಎಸ್‌ಎಸ್‌ಬಿಯಿಂದ ಅಗೆಯಲಾದ ರಸ್ತೆಗಳ ರಸ್ತೆ ಅಭಿವೃದ್ಧಿ. (ದ್ವಿ ಲಕೋಟೆ)	90.00
5	ದೊಮ್ಮಲೂರು, ವಾರ್ಡ್ ನಂ. 112ರಲ್ಲಿ ಬಹುಉದ್ದೇಶಿತ ಕಟ್ಟಡ ನಿರ್ಮಾಣ. (2ನೇ ಕರೆ) (ದ್ವಿ ಲಕೋಟೆ)	200.00

ವೇಳಾಪಟ್ಟಿ: (1) ಟೆಂಡರ್ ದಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ **10.08.2021**ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಟೆಂಡರ್‌ಗಳನ್ನು ಆನ್‌ಲೈನ್ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ **27.08.2021**ರ **ಸಂಜೆ 4:00 ಗಂಟೆ**ಯೊಳಗೆ ಸಲ್ಲಿಸತಕ್ಕದ್ದು ಹಾಗೂ ಟೆಂಡರ್‌ಗಳನ್ನು **30.08.2021**ರ **ಸಂಜೆ 4:30 ಗಂಟೆ**ಗೆ ತೆರೆಯಲಾಗುವುದು. ಹೆಚ್ಚಿನ ಮಾಹಿತಿಯನ್ನು ಮೇಲಿನ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ **https://eproc.karnataka.gov.in** ನಿಂದ ಪಡೆದುಕೊಳ್ಳಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಶಾಂತಿನಗರ ವಿಭಾಗ, ಬಿಬಿಎಂಪಿ

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ನಾವೆಲ್ಲರೂ ಒಂದಲ್ಲ ಒಂದು ಕಾರಣದಿಂದ ಆಯಾಸಗೊಳ್ಳುತ್ತಿರುತ್ತೇವೆ. ಆದರೆ ಸದಾ ಕಾಲ ಕಾಣಿಸಿಕೊಳ್ಳುವ ಆಯಾಸ, ಸುಸ್ತು ನಮ್ಮ ದೇಹ–ಮನಸ್ಸುಗಳಿಗೆ ಎದುರಾಗಿರಬಹುದಾದ ಅನಾರೋಗ್ಯದ ಸೂಚನೆಯೂ ಆಗಿರಬಹುದು.

ಉಪದೇಶದ ಹಾವಳಿ

ರಘು ವಿ.

ಜಗದ ಡೊಂಕನ್ನು ನೀವೇಕೆ ತಿದ್ದುವಿರಿ - ಎಂದು ಅಣ್ಣನವರು ಕೇಳಿದ್ದರೂ ಆ 'ತಿದ್ದುವ' ಡೊಂಕು ಕೂಡ ಜಗತ್ತಿನ ಮೂಲಸ್ವಭಾವವೇ ಆಗಿ ಉಳಿದುಬಿಟ್ಟಿದೆ. ಅದರಲ್ಲೂ 'ಮಿತ್ರಸಂಹಿತೆ'ಯ ಹೆಸರಿನಲ್ಲಿ ಮೂಗಿಗೆ ಹುಳಿ ಹಿಂಡುವುದರಿಂದ ಮೊದಲ್ಗೊಂಡು ಯಾವ ಕಾಯಿಲೆಗೆ ಯಾವ ಪೌಷ್ಟಿಕಾಂಶ / ವಿಟಮಿನ್ ಸೇವಿಸಬೇಕು ಎಂದು ಸೂಚಿಸುವವರ ಪಟ್ಟಿ ದೊಡ್ಡದೇ ಇದೆ. ಅದರಲ್ಲಿಯೂ ಕೊರೊನಾ ಅಲೆಗಿಂತ ಬಹಳ ವೇಗವಾಗಿ ಹರಡಿದ್ದು ಉಪದೇಶಗಳ ಅಲೆ! ಮುಖ್ಯವಾಗಿ ಇಂತಹ ಉಪದೇಶಿಗರು ಅವುಗಳನ್ನು ತಾವೇ ಪಾಲಿಸದಿದ್ದರೂ ಇತರರಿಗೆ ಸರಾಗವಾಗಿ ಅವುಗಳನ್ನು ನೀಡಿಬಿಡುತ್ತಾರೆ. ವೈದ್ಯರು, ವಿಷಯತಜ್ಞರು, ಆಯಾಕ್ಷೇತ್ರದ ಪರಿಣತರು ತಮ್ಮ ತಮ್ಮ ಕ್ಷೇತ್ರಗಳಿಗೆ ಸಂಬಂಧಿಸಿದಂತಹ ಕ್ರಮಗಳನ್ನು, ಎಚ್ಚರಿಕೆಗಳನ್ನು, ಸಲಹೆಗಳನ್ನು ನೀಡುತ್ತಾರೆ. ಅಷ್ಟು ಸಾಕು, ಜೀವನ ನಡೆಸಲು.

> ಕೊರೊನಾ ಅಲೆಗಿಂತ ಬಹಳ ವೇಗವಾಗಿ ಹರಡಿದ್ದು ಉಪದೇಶಗಳ ಅಲೆ! ಆರೋಗ್ಯದ ವಿಷಯವಾಗಿ ಇನ್ನೊಬ್ಬರಿಗೆ ಉಪದೇಶವನ್ನು ಕೊಡುವ ಮೊದಲು ಸಾವಿರ ಸಲ ಯೋಚಿಸಬೇಕು. ನಾವು ಉಪದೇಶವನ್ನು ಕೊಡದಿರುವುದೇ ಲೇಸು.

'ಪುಸ್ತಕದಿ ದೊರೆತರಿವು ಮಸ್ತಕವಿ ತಳೆದ ಮಣಿ . . . . ವಸ್ತು ಸಾಕ್ಷಾತ್ಕಾರವಂತರೀಕ್ಷಣೆಯಿಂದ' ಎಂದು ಹೇಳುವ ಕಗ್ಗದ ಸಾಲಿನಲ್ಲಿ 'ಶಾಸ್ತ್ರಿತನದಿಂದಲ್ಲ' ಎಂಬುದನ್ನು 'ಉಪದೇಶದಿಂದಲ್ಲ' ಎಂದು ಓದಿಕೊಳ್ಳಲು ಅಡ್ಡಿಯಿಲ್ಲ. ತರ್ಕ, ಕುತರ್ಕಗಳಿಂದ ಪ್ರಯೋಜನವಿಲ್ಲ, ಬದುಕು ಪ್ರಾಯೋಗಿಕವಾಗಿರಬೇಕು ಎಂಬುದು ಇದರ ತಾತ್ಪರ್ಯ. ತಾನು ಮಾಡದ್ದನ್ನು, ಆಚರಿಸದ್ದನ್ನು ಮತ್ತೊಬ್ಬರಿಗೆ ಹೇಳಬಾರದು ಎಂಬುದೇ ನೀತಿ. ಜೊತೆಗೆ ಅವರವರ ದೇಹ, ಮನಸ್ಸುಗಳು ಅವರವರಿಗೆ ಮಾತ್ರ ತಿಳಿದಿರುವಂತಹವು.

ನನ್ನ ಮಿತ್ರವಲಯದ ದಂಪತಿಗಳು ಒಬ್ಬ ಆಯುರ್ವೇದಪಂಡಿತರಲ್ಲಿ ಔಷಧೋಪಚಾರ ಪಡೆಯುತ್ತಿದ್ದರು. ಒಮ್ಮೆ ಒಂದು ಕಾಯಿಲೆಗೆ ವೈದ್ಯರು ಪತ್ನಿಗೆ ಒಂದು ಔಷಧವನ್ನು ಸೂಚಿಸಿದರು. ಅದಾದ ಕೆಲವು ತಿಂಗಳ ಬಳಿಕ ಆತನಿಗೆ ಅದೇ ಸಮಸ್ಯೆ ತಲೆದೋರಿದಾಗ ಆ ಔಷಧದ ತದ್ವಿರುದ್ಧ ಗುಣ ಬಿಂಬಿಸುವ ಔಷಧವನ್ನು ವೈದ್ಯರು ಸೂಚಿಸಿದ್ದನ್ನು ಕಂಡು ಗೆಳೆಯ ಅಚ್ಚರಿ ವ್ಯಕ್ತಪಡಿಸಿದಾಗ ವೈದ್ಯರು, 'ಹೌದು, ನಿಮ್ಮ ದೇಹಪ್ರಕೃತಿ ಹಾಗೇ. ಅವರಿಗೆ ಸೂಚಿಸಿದ ಔಷಧಿ ಅವರ ದೇಹಪ್ರಕೃತಿಗೆ' ಎಂದರಂತೆ. ಹೀಗೆ ಪ್ರತಿಯೊಬ್ಬರೂ ಭಿನ್ನವೇ ಆಗಿರುವಾಗ ತಮಗೆ ಸರಿಯೆನಿಸಿದ್ದನ್ನು ಇಡೀ ಜಗತ್ತಿಗೆ ಅಳವಡಿಸಹೊರಟರೆ ಅದು ದಡ್ಡತನವಾದೀತು. ಇಹರೋಗ ವೈದ್ಯರಂತೆ ಭವರೋಗ ವೈದ್ಯರೂ ಜನರ ಭಾವ, ಸ್ವಭಾವಗಳಿಗೆ ತಕ್ಕಂತೆ ಔಷಧ-ಪಥ್ಯವನ್ನೂ ಸೂಚಿಸುತ್ತಾರೆ. ವಚನವೇದದಲ್ಲಿ ಶ್ರೀರಾಮಕೃಷ್ಣರು ಹೇಳುತ್ತಾರೆ:

'ಯಾರದು ಯಾವ ಭಾವವೋ ಅದನ್ನು ನಾನು ಸಂರಕ್ಷಿಸಲು ಪ್ರಯತ್ನಿಸುತ್ತೇನೆ. ವೈಷ್ಣವನಿಗೆ ವೈಷ್ಣವರ ಭಾವದಲ್ಲಿಯೆ ಮುಂದುವರೆಯುವಂತೆ ಹೇಳುತ್ತೇನೆ. ಶಾಕ್ತನಿಗೆ ಶಾಕ್ತರ ಭಾವ. 'ನಮ್ಮ ಮಾರ್ಗವೇ ಸರಿ ಸತ್ಯ, ಉಳಿದವರದೆಲ್ಲ ಮಿಥ್ಯ' ಎಂದು ಹೇಳಬೇಡಿ. ಹಿಂದೂ ಮುಸಲ್ಮಾನ ಕ್ರೈಸ್ತ ವಿವಿಧ ಮಾರ್ಗದಿಂದ ಒಂದೇ ಸ್ಥಳಕ್ಕೆ ಹೋಗಿ ಸೇರುತ್ತಾರೆ.'

ಇತರರ ತಪ್ಪನ್ನು ತಿದ್ದಲು ಮುಂದಾಗುವ, ಉಪದೇಶ ನೀಡಲು ಮುಂದಾಗುವ ನಮಗೆ ಕ್ರಿಸ್ತನ ಮಾತು ನೆನಪಾಗಬೇಕು. 'ಯಾರು ತಪ್ಪು ಮಾಡಿಲ್ಲವೊ ಅವರು ಮೊದಲು ಕಲ್ಲೆಸೆಯಿರಿ' ಎಂದ ಮಹಾತ್ಮರು ಅವರು. ಜನ ಹೀಗೇಕೆ ಅಯಾಚಿತ ಉಪದೇಶಗಳನ್ನು ಮಾಡುತ್ತಾರೆ ಎಂಬುದನ್ನೂ ನಾವು ಪರಿಶೀಲಿಸಬೇಕು. ಒಂದು, ತಮಗೆ ತಿಳಿದದ್ದನ್ನು ತಕ್ಷಣ ಬೇರೆಯವರಿಗೆ ತಿಳಿಸಬೇಕೆಂಬ ಆತುರ. ಮತ್ತೊಂದು, ತಮ್ಮ ಅಭಿಪ್ರಾಯವನ್ನು ಇತರರು ಸ್ವೀಕರಿಸಲಿ ಎಂಬ ಧೋರಣೆ. ಇವೆರಡೂ ದೋಷವೇ. ಮೊದಲನೆಯದು-ನಾವು ತಿಳಿದುಕೊಂಡದ್ದೆಲ್ಲ ಅಂತಿಮ ಸತ್ಯವಲ್ಲ. ಎರಡನೆಯದು-ಇತರರು ನಮ್ಮ ಅಭಿಪ್ರಾಯವನ್ನು ಒಪ್ಪಬೇಕೆಂಬ ನಿಯಮವಿಲ್ಲ. ಅತಿ ಹತ್ತಿರದವರಿಗೂ ಹೇಳಬೇಕೆನಿಸಿದ್ದನ್ನು ಹೇಳಿ, 'ಇಷ್ಟರ ಬಳಿಕ ನಿನ್ನಿಷ್ಟ' ಎಂಬುದು ಒಳ್ಳೆಯದು. ಭಗವದ್ಗೀತೆಯನ್ನು ಬೋಧಿಸಿದ ಕೃಷ್ಣನೂ ಕೊನೆಗೆ ಅರ್ಜುನನಿಗೆ 'ಇನ್ನು ನಿನಗೆ ತಿಳಿದಂತೆ ಮಾಡು' ಎನ್ನುತ್ತಾನೆ. ಜನ ನಮ್ಮನ್ನು ಒಪ್ಪಿಕೊಳ್ಳಲಿ, ನಮ್ಮ ಮಾತುಗಳನ್ನು ಕೇಳಲಿ ಇತ್ಯಾದಿ ಧೋರಣೆಗಳು ನಮ್ಮ ದೌರ್ಬಲ್ಯ ಸೂಚಕಗಳು. ನಮ್ಮ ಅಸ್ತಿತ್ವ, ನಮ್ಮ ಸಂತೋಷ ಇತರರ ಒಪ್ಪಿಗೆಯ ಮೇಲೆ ನಿಲ್ಲಬಾರದು. ಅವರು ನಮ್ಮ ಮಾತುಗಳನ್ನು ಕೇಳಲಿ, ಪಾಲಿಸಲಿ ಎಂದು ಭಾವಿಸದೆ ನಮ್ಮ ನಮ್ಮ ಮಿತಿಗಳೊಳಗೆ ಸೌಹಾರ್ದಯುತ ಬದುಕನ್ನು ಕಟ್ಟಿಕೊಳ್ಳಬೇಕು. ಈ ಲೇಖನವೂ ಒಂದು ಉಪದೇಶವೇ! ಆದರೆ ಇದೊಂದು ಅಕ್ಷರ ಸ್ವಗತ. ಇದನ್ನು ಯಾರೂ ಒಪ್ಪಿಕೊಳ್ಳಬೇಕೆಂಬ ವರಾತವಿಲ್ಲ. ಇದೊಂದು ಉಪಯುಕ್ತ ಚಿಂತನೆಯೆಂದು ಭಾವಿಸಿ ಹಂಚಿಕೊಳ್ಳುವ ಪ್ರಯತ್ನ. ಯಾರೇ, ಎಷ್ಟೇ ಹತ್ತಿರದವರಾದರೂ ಅವರಾಗಿ ಕೇಳಿದ ಹೊರತು ನಮ್ಮ ಸಲಹೆಗಳನ್ನು, ಅಭಿಪ್ರಾಯಗಳನ್ನು ನೀಡದಿರುವುದು ಸೌಜನ್ಯತೆಯ ಲಕ್ಷಣ. ಅದರಲ್ಲೂ ಆರೋಗ್ಯದ ವಿಷಯವಾಗಿ ಇನ್ನೊಬ್ಬರಿಗೆ ಉಪದೇಶವನ್ನು ಕೊಡುವ ಮೊದಲು ಸಾವಿರ ಸಲ ಯೋಚಿಸಬೇಕು. ನಾವು ಉಪದೇಶವನ್ನು ಕೊಡದಿರುವುದೇ ಲೇಸು. ನಾವು ಕೊಡಬಹುದುದಾದ ಉಪದೇಶ ಎಂದರೆ, 'ತಜ್ಞರನ್ನು ಭೇಟಿಯಾಗಿ'.

ಕೋವಿಡ್‌ನ ಮೂರನೆಯ ಅಲೆ ಬರುತ್ತಿರುವಂತಿದೆ ಎಂದು ತಜ್ಞರು ಹೇಳಲು ಆರಂಭಿಸಿದ್ದಾರೆ. ಕೊರೊನಾ ವಿಷಯದಲ್ಲಿ ಉಪದೇಶಗಳನ್ನು ಕೊಡುವುದಕ್ಕೂ ಸ್ವೀಕರಿಸುವುದಕ್ಕೂ ಮೊದಲು ಎಚ್ಚರ ಇರಲಿ. ❖

ಆಯಾಸವೋ ಆಯಾಸ...

ಸುಲೇಖಾ ವರದರಾಜ್

'**ತುಂಬಾ** ಸುಸ್ತು, ಏನು ಮಾಡಲೂ ಆಗುತ್ತಿಲ್ಲ'. ಇದು ವೈದ್ಯಕೀಯ ಕ್ಷೇತ್ರದಲ್ಲಿ ರೋಗಿಗಳಿಂದ ಕೇಳಿ ಬರುವ ಅತಿ ಸಾಮಾನ್ಯ ತೊಂದರೆಗಳಲ್ಲಿ ಒಂದು. ಆಯಾಸವು ಅನೇಕ ದೈಹಿಕ ಮಾತ್ತು ಮಾನಸಿಕ ಕಾಯಿಲೆಗಳ ಲಕ್ಷಣವಾಗಿರುವುದರಿಂದ ಅದರ ಅರಿವು ಅಗತ್ಯ.

ಆಯಾಸಕ್ಕೆ ಕಾರಣಗಳು ಹಲವು:

1. ಸ್ವಾಭಾವಿಕ ಕಾರಣಗಳು
2. ದೈಹಿಕ ಕಾಯಿಲೆಗಳು
3. ಮಾನಸಿಕ ಕಾಯಿಲೆಗಳು

ಆಯಾಸದ ಸಂದರ್ಭದಲ್ಲಿ ಈ ಕೆಳಗಿನ ತೊಂದರೆಗಳು ಕಂಡುಬರುತ್ತವೆ:

1. ಕಡಿಮೆ ಶಕ್ತಿ ಅಥವಾ ಶಕ್ತಿ ಇಲ್ಲದೇ ಇರುವುದು
2. ದೈಹಿಕ ಅಥವಾ ಮಾನಸಿಕ ಬಳಲಿಕೆ
3. ಪ್ರೇರಣೆ ಇಲ್ಲದಿರುವುದು; ಯಾವುದೇ ಚಟುವಟಿಕೆಯಲ್ಲೂ ಆಸಕ್ತಿ ಇಲ್ಲದಿರುವುದು.

ಸ್ವಾಭಾವಿಕ ಸುಸ್ತು

ಅಭ್ಯಾಸವಿಲ್ಲದೆ ಶಾರೀರಿಕ ಚಟುವಟಿಕೆಗಳನ್ನು ಮೊದಲ ಬಾರಿ ಮಾಡಿದಾಗ ಯಾರಿಗಾದರೂ ಆಯಾಸವಾಗುವುದು ಸಹಜವಾಗಿರುತ್ತದೆ. ಜಾಸ್ತಿ ದೈಹಿಕ ವ್ಯಾಯಾಮ ಹಾಗೂ ಕೆಲವು ಜೀವನ ಕ್ರಮಗಳಾದ ತಡವಾಗಿ ನಿದ್ರೆ ಮಾಡುವುದು, ಜಾಸ್ತಿ ಕೆಫೀನ್ ಇರುವ ಪದಾರ್ಥಗಳ ಸೇವನೆ, ವಿಪರೀತ ಮದ್ಯಸೇವನೆ, ಜಾಸ್ತಿ ಸಿಹಿ ಹಾಗೂ ಕೊಬ್ಬಿನಂಶವಿರುವ ಆಹಾರಸೇವನೆಗಳಿಂದ ಸುತ್ತು ಕಾಣಿಸಿಕೊಳ್ಳಬಹುದು. ಗರ್ಭಿಣಿಯರಲ್ಲಿ ಹಾಗೂ ಎದೆಹಾಲು ಉಣಿಸುವ ತಾಯಂದಿರಲ್ಲೂ ಆಯಾಸ ಕಂಡುಬರಬಹುದು. ಇವೆಲ್ಲ ಸಂದರ್ಭಗಳಲ್ಲಿ ಉಂಟಾಗುವ ಆಯಾಸವು ವಿಶ್ರಾಂತಿಯನ್ನು ಪಡೆದ ಬಳಿಕ ಅಥವಾ ನಿದ್ರೆಯ ಬಳಿಕ ಇಲ್ಲವಾಗುತ್ತದೆ.

ದೈಹಿಕ ಕಾಯಿಲೆಗಳು

- ಅನೇಕ ದೈಹಿಕ ಕಾಯಿಲೆಗಳ ಒಂದು ಲಕ್ಷಣವಾಗಿ ಆಯಾಸ ಇರುತ್ತದೆ.
- ಯಾವುದೇ ಸೋಂಕು ರೋಗದ ಪ್ರಮುಖ ಲಕ್ಷಣ ಸುಸ್ತು ಆಗಿರುತ್ತದೆ. ಫ್ಲ್ಯೂ ಜ್ವರ, ಹೆಪಟೈಟಿಸ್, ಟಿಬಿ ಕಾಯಿಲೆ, ಎಚ್ ಐ ವಿ ಮುಂತಾದವುಗಳು ಪ್ರಮುಖ ಸೋಂಕು ರೋಗಗಳು. ಈ ರೋಗಗಳ ಸೋಂಕಿದ್ದಲ್ಲಿ ಸುಸ್ತು ಕಾಣಿಸಿಕೊಳ್ಳಬಹುದು.
- ಹೃದಯ, ಕಿಡ್ನಿ, ಲಿವರ್ ಸಂಬಂಧಿ ಅನೇಕ ರೋಗಗಳು, ರಕ್ತಹೀನತೆ, ಕ್ಯಾನ್ಸರ್, ನರಸಂಬಂಧಿ ಕಾಯಿಲೆ, ಪೌಷ್ಟಿಕಾಂಶದ ಕೊರತೆಯಿಂದ ಬರುವ ಕಾಯಿಲೆಗಳಲ್ಲೂ ಆಯಾಸ ಸಾಮಾನ್ಯವಾಗಿ ಇರುತ್ತದೆ.
- ಥೈರಾಯಿಡ್ ಸಮಸ್ಯೆ, ಸಿಹಿಮೂತ್ರ ರೋಗ, ಬೊಜ್ಜುತನ, ಸ್ಲೀಪ್ ಅಪ್ನಿಯಾ ಸಮಸ್ಯೆ ಇರುವ ರೋಗಿಗಳಲ್ಲಿ ಸುಸ್ತು ಇರುತ್ತದೆ.
- ಕೆಲವು ಕಾಯಿಲೆಗಳಿಗೆ ತೆಗೆದುಕೊಳ್ಳುವ ಔಷಧಗಳು ಕೂಡ ಆಯಾಸವನ್ನು ಉಂಟುಮಾಡಬಹುದು.
- ಶ್ವಾಸಕೋಶಸಂಬಂಧಿ ಕಾಯಿಲೆ ಹಾಗೂ ಕೆಲವು ಗಂಟುರೋಗಗಳಲ್ಲೂ ಸುಸ್ತು ಒಂದು ಸಾಮಾನ್ಯ ಲಕ್ಷಣ.

ಮಾನಸಿಕ ಕಾಯಿಲೆಗಳಲ್ಲಿ ಆಯಾಸ

ಖಿನ್ನತೆ, ಒತ್ತಡ, ಆತಂಕ ಮುಂತಾದ ಮಾನಸಿಕ ಸಮಸ್ಯೆಗಳಲ್ಲಿ ಆಯಾಸವಾಗುವುದು ಸಹಜ. ಈ ಸಮಸ್ಯೆಗಳ ಇರುವಿಕೆಗೆ ಇದೊಂದು ಲಕ್ಷಣವೇ ಆಗಿರುತ್ತದೆ.

ಆಯಾಸದ ನಿರ್ವಹಣೆ

- ಹಲವು ರೋಗಗಳ ಲಕ್ಷಣವಾಗಿ ಆಯಾಸ ಇರುವುದರಿಂದ ಸೂಕ್ತ ಪರೀಕ್ಷೆಗಳ ಮೂಲಕ ಆಯಾಸದ ಕಾರಣವನ್ನು ಕಂಡುಹಿಡಿಯಬೇಕು.
- ದೈಹಿಕ ಪರೀಕ್ಷೆ, ರಕ್ತಪರೀಕ್ಷೆ ಮತ್ತು ಇತರ ಪರೀಕ್ಷೆಗಳ ಮೂಲಕ ಆಯಾಸದ ಮೂಲವನ್ನು ಪತ್ತೆ ಹಚ್ಚಬಹುದು.
- ಸೂಕ್ತ ದೈಹಿಕ ರೋಗದ ಪತ್ತೆಯಾದ ಮೇಲೆ ಚಿಕಿತ್ಸೆಯ ಮೂಲಕ ಆಯಾಸ ಕಡಿಮೆಯಾಗುತ್ತವೆ.
- ಮಾನಸಿಕ ಕಾಯಿಲೆಗಳ ಲಕ್ಷಣವಾಗಿ ಆಯಾಸವಿದ್ದರೆ ಸೂಕ್ತ ಔಷಧಿ, ಸಿಬಿಟಿ ಹಾಗೂ ಸೈಕೋಥೆರಪಿ ಮೂಲಕ ಆಯಾಸವನ್ನು ಶಮನಗೊಳಿಸಬಹುದು.

ಯಾವುದೇ ದೈಹಿಕ ಅಥವಾ ಮಾನಸಿಕ ಕಾಯಿಲೆಗಳು ಪತ್ತೆಯಾಗದೇ ದೀರ್ಘಕಾಲದವರೆಗೆ ಆಯಾಸ ಮುಂದುವರೆದರೆ ಈ ಕೆಳಗಿನ ವಿಧಾನಗಳನ್ನು ಅನುಸರಿಸಬಹುದು:

- ನಿಯಮಿತ ಶಾರೀರಿಕ ವ್ಯಾಯಾಮ, ನಿಯಮಿತವಾದ ವಿರಾಮ.
- ನಿದ್ರೆಯ ಅಭ್ಯಾಸವನ್ನು ನಿಯಮಿತಗೊಳಿಸಿ. ಸರಿಯಾಗಿ ನಿದ್ರೆ ಬರುವಂತೆ ನೋಡಿಕೊಳ್ಳುವುದು.
- ಕೆಫೀನ್‌ಯುಕ್ತ ಆಹಾರದ ಸೇವನೆಯನ್ನು ಕಡಿಮೆಗೊಳಿಸುವುದು.
- ಸಮತೋಲಿತ ಆಹಾರಸೇವನೆಯನ್ನು ರೂಢಿಸಿಕೊಳ್ಳಬೇಕು. ಬೊಜ್ಜುತನಕ್ಕೆ ಆಸ್ಪದ ಕೊಡಬಾರದು; ಹೀಗೆಯೇ ಸಕಾರಣವಿಲ್ಲದೆ ದೇಹದ ತೂಕ ಕಡಿಮೆ ಆಗದಂತೆಯೂ ನೋಡಿಕೊಳ್ಳುವುದು.
- ವಾಸ್ತವಕ್ಕೆ ಹತ್ತಿರ ಇರುವ ನಿರೀಕ್ಷೆಗಳನ್ನು ಇಟ್ಟುಕೊಳ್ಳುವುದು. ಮನಸ್ಸನ್ನು ಉಲ್ಲಾಸವಾಗಿಟ್ಟುಕೊಳ್ಳುವುದು.
- ಒತ್ತಡಗಳ ಸರಿಯಾದ ನಿರ್ವಹಣೆ ಹಾಗೂ ಸೂಕ್ತ ವಿಶ್ರಾಂತಿಯನ್ನು ಪಡೆಯುವುದು.

❖

ಸಿಇಟಿ ದಿಕ್ಸೂಚಿ

Physics - System of Particles

1. A thin uniform rectangular plate of mass 2 kg is placed in X – Y plane as shown in figure. The moment of inertia about x – axis is $I_x = 0.2 kg\ m^2$ and the moment of inertia about y – axis is $I_y = 0.3 kg\ m^2$ The radius of gyration of the plate about the axis passing through O and perpendicular to the plane of the plate is



(1) 50cm (2) 5cm
(3) 38.7 cm (4) 31.6 cm

2. Moment of inertia of a body about two perpendicular axes X and Y in the plane of lamina are 20 kg m² and 25 kg m² respectively. Its moment of inertia about an axis perpendicular to the plane of the lamina and passing through the point of intersection of X and Y axes is
(1) 5 kg m² (2) 45 kg m²
(3) 12.5 kg m² (4) 500 kg m²

3. A wheel starting from rest gains an angular velocity of 10 rad/s after uniformly accelerated for 5 sec. The total angle through which it has turned is
(1) 25 rad (2) 100 rad
(3) $25\ \pi$ rad
(4) $50\ \pi$ rad about a vertical axis

4. A solid sphere of mass m rolls down an inclined plane without slipping, starting from rest at the top of an inclined plane. The linear speed of the sphere at the bottom of the inclined plane v is . The kinetic energy of the sphere at the bottom is [KCET-2011]

1) $\frac{1}{2}mv^2$ 2) $\frac{5}{3}mv^2$
3) $\frac{2}{5}mv^2$ 4) $\frac{7}{10}mv^2$

5. A force $\vec{F} = 5\hat{i} + 2\hat{j} - 5\hat{k}$ acts on a particle whose position vector is $\vec{r} = \hat{i} - 2\hat{j} + \hat{k}$. What is the torque about the origin?

(1) $8\hat{i} + 10\hat{j} + 12\hat{k}$ (2) $8\hat{i} + 10\hat{j} - 12\hat{k}$
(3) $8\hat{i} - 10\hat{j} - 8\hat{k}$ (4) $10\hat{i} - 10\hat{j} - \hat{k}$

6. A rotating wheel changes angular speed from 1800 rpm to 3000 rpm in 20 s. What is the angular acceleration assuming to be uniform?

(1) 60π rad s^{-2} (2) 90π rad s^{-2}
(3) 2π rad s^{-2} (4) 40π rad s^{-2}

7. A body having a moment of inertia about its axis of rotation equal to 3 kg – m² is rotating with angular velocity of 3 rad s⁻¹. Kinetic energy of this rotating body is same as that of a body of mass 27 kg moving with velocity v. The value of v is
(1)1 ms^{-1} (2)0.5 ms^{-1} (3) 2 ms^{-1}
(4)1.5 ms^{-1}

8. Which of the points is likely the position of the centre of mass of the system shown in the figure?



(1) A
2)D (3) C
(4) C

9. Three bodies, a ring (R), a solid cylinder (C) and a solid sphere (S) having the same mass and same radius roll down the inclined plane without slipping. They start from rest if v_R, v_C, and v_S are velocities of respective bodies on reaching the bottom of the plane, then -

(1) $v_R = v_C = v_S$ (2) $v_R > v_C > v_S$
(3) $v_R, v_C < v_S$ (4) $v_R = v_C > v_S$

10. Two particles which are initially at rest move towards each other under the action of their mutual attraction. If their speeds are v and 2 v at any instant, then the speed of center of mass of the system is,
(1) 1.5 v (2) 2v (3) v (4) zero

11. A particle is moving uniformly along a straight line as shown in the figure. During the motion of the particle from A to B, the angular momentum of the particle about 'O'



(1) remains constant (2) increases
(3) first increases then decreases
(4) decreases

12. Two balls are thrown simultaneously in air. The acceleration of the centre of mass of the two balls when in air, [KCET-2017]
(1) depends on the masses of the two balls
(2) depends on the speeds of the two balls
(3) is equal to g (Acceleration due to gravity)
(4) depends on the direction of motion of the two balls.

13. Moment of Inertia of a thin uniform rod rotating about the perpendicular axis passing through its centre is I. If the same rod is bent into a ring and its moment of inertia about its diameter is I'. then the ratio will be

(1) $\frac{3}{2}\pi^2$ (2) $\frac{8}{3}\pi^2$
(3) $\frac{2}{3}\pi^2$ (4) $\frac{5}{3}\pi^2$

Answers

1. Answer: (1)
Topic code: P7
Sol:
$I_z = I_x + I_y = 0.2 + 0.3 = 0.5$ kg m^2
$\Rightarrow 2 \times Z^2 = 0.5 \Rightarrow Z = \frac{1}{2}m = 50$ cm

2. Answer: (2)
Topic Code: P7
Solution:
$I = I_x + I_y$
$I = 20 + 25 = 45$

3. Answer: (1)
Topic code:P7
Sol: $10 = 0 + \alpha \times 5 \Rightarrow \alpha = 2$ rad/S^2
$\theta = 0 + \frac{1}{2}\alpha(5)^2 = \frac{1}{2} \times 2 \times 5 = 25$ rad

4. Answer: (4)
Topic Code: P7
Sol.: Take KE at bottom
$KE = \frac{1}{2}mv^2\left[1 + \frac{K^2}{R^2}\right]$
$= \frac{1}{2}mv^2\left[1 + \frac{2}{5}\right] = \frac{7}{10}mv^2$

5. Answer:(1)
Topic Code: P7
Hint:Given, $\vec{F} = 5\hat{i} + 2\hat{j} - 5\hat{k}; \vec{r} = \hat{i} - 2\hat{j} + \hat{k}$
We know torque, $\tau = \vec{r} \times \vec{F} = \begin{vmatrix} \hat{i} & \hat{j} & \hat{k} \\ 1 & -2 & 1 \\ 5 & 2 & -5 \end{vmatrix}$
Therefore, $\tau = \hat{i}(10-2) - \hat{j}(-5-5) + \hat{k}(2+10)$
$\Rightarrow \tau = 8\hat{i} + 10\hat{j} + 12\hat{k}$
Thus, torque about origin is $8\hat{i} + 10\hat{j} + 12\hat{k}$

6. Answer (3)
Topic Code: P7
Hint:For angular speed of 1800 rpm
$\omega_1 = 2\pi f_1 = 2\pi\left(\frac{1800}{60}\right) = 60\pi$ rad s^{-1}
For angular speed of 3000 rpm
$\omega_2 = 2\pi f_2 = 2\pi\left(\frac{3000}{60}\right) = 100\pi$ rad s^{-1}
Therefore, angular acceleration =
$\frac{\omega_1 - \omega_2}{t} = \frac{100\pi - 60\pi}{20} = \frac{40\pi}{20} = 2\pi$
Thus, angular acceleration of rotating wheel = 2π rad s^{-1}

7. Answer (1)
Topic Code: P7
Hint:Given, moment of Inertia, I = 3 kg m^2; angular velocity, $\omega = 3$rad s^{-1};mass m = 27kg
Now, $\frac{1}{2}mv^2 = \frac{1}{2}I\omega^2$
$\Rightarrow mv^2 = I\omega^2 \Rightarrow v^2 = \frac{I\omega^2}{m}$
Therefore, $v = \sqrt{\frac{I}{m}}\omega$.
Substituting the values, we get
$v = \sqrt{\frac{3}{27}} \times 3 = \sqrt{\frac{1}{9}} \times 3 = \frac{1}{3} \times 3$
Thus, velocity of body is 1m s^{-1}

8. Answer (2)
CODE:-P7
Sol. The centre of mass lies towards the heavier mass, from the above diagram, the centre mass is more likely at point D.

9. Answer (3)
CODE:-P7
Sol. Let the body start from rest
Using the work-energy equation
W = Δ K.E
= $K.E_f - K.E_i$
= $K.E._f$ [$\because K.E_i = 0$]
mgh = (1 / 2) mv^2 + (1 / 2) Iω^2
But v = r ω
I = kmr^2
mgh = (1 / 2) mv^2 + (1 / 2) kmv^2
mgh = (1 / 2) mv^2 [1 + k]
v = √2gh / (1 + k)
As we know; $k_R = 1$, $k_C = 0.5$, $k_S = 0.4$
$K_S < K_C < K_R$
=> $V_R < V_C < V_S$

0. Answer: (4)
Topic Code: P7
Hint: At initial position both A and B are at rest, hence, momentum is zero. It is given that no external force is acting on them. So, momentum remains zero. Since mass cannot be zero, therefore velocity is zero.

11. Answer: (1)
Topic Code: P7
Hint: Conceptual

12. Answer: (3)
Topic code:P7
Sol: Conceptual

13. Answer (3)
Topic Code :P7
Hint :M.O.I. of ring about its diameter is given by $I_2 = \frac{mR^2}{2}$



$I_1 = \frac{mL^2}{12}$
$L = 2\pi R \Rightarrow R = \frac{L}{2\pi}$
$I_2 = \frac{mR^2}{2} = \frac{1}{2}m\left(\frac{L}{2\pi}\right)^2 = \frac{mL^2}{8\pi^2}$
$\frac{I_1}{I_2} = \frac{mL^2}{12} \times \frac{8\pi^2}{mL^2} = \frac{8\pi^2}{12} = \frac{2\pi^2}{3}$

(ಪ್ರಶ್ನೋತ್ತರ ಸಂಯೋಜನೆ: ಆಕಾಶ್ ಇನ್‌ಸ್ಟಿಟ್ಯೂಟ್, ಬೆಂಗಳೂರು)

ಪೊಲೀಸ್ ಕಾನ್‌ಸ್ಟೇಬಲ್ ನೇಮಕಾತಿ ಪರೀಕ್ಷೆಯ ಮಾದರಿ ಪ್ರಶ್ನೆಗಳು

ಭಾಗ- 34

451. ಉತ್ತರ ಪ್ರದೇಶದ ರಾಜಧಾನಿ ಯಾವುದು?
ಎ) ಅಲಹಾಬಾದ್ ಬಿ) ವಾರಾಣಸಿ
ಸಿ) ನೋಯ್ಡಾ ಡಿ) ಲಖನೌ

452. ಇವುಗಳಲ್ಲಿ ಯಾವುದು ದ್ರಾವಿಡ ಭಾಷೆ ಅಲ್ಲ?
ಎ) ತೆಲುಗು ಬಿ) ಮರಾಠಿ
ಸಿ) ತುಳು ಡಿ) ಕನ್ನಡ

453. ನ್ಯೂಜಿಲ್ಯಾಂಡ್ ದೇಶದ ರಾಜಧಾನಿ ಯಾವುದು?
ಎ) ರಿಯೋ ಡಿ ಜನೈರೋ
ಬಿ) ಸಿಡ್ನಿ
ಸಿ) ಅಡಿಲೇಟ್
ಡಿ) ವೆಲಿಂಗ್ಟನ್

454) ಶ್ರೀಹರಿಕೋಟಾ ಯಾವ ಕಾರಣಕ್ಕಾಗಿ ಪ್ರಸಿದ್ಧವಾಗಿದೆ?
ಎ) ಕ್ರಿಕೆಟ್ ಕ್ರೀಡಾಂಗಣ
ಬಿ) ಧಾರ್ಮಿಕ ಸ್ಥಳ
ಸಿ) ಬಾಹ್ಯಾಕಾಶ ಕೇಂದ್ರ
ಡಿ) ರಾಜಕೀಯ ಚಟುವಟಿಕೆಗಳಿಗೆ

455) ಎಫ್-16 ಎಂಬುದು
ಎ) ಯುದ್ಧವಿಮಾನ ಬಿ) ನೌಕಾನೆಲೆ
ಸಿ) ಶಿಖರ
ಡಿ) ಮೇಲಿನ ಯಾವುದೂ ಅಲ್ಲ

456) ಪ್ರಧಾನಮಂತ್ರಿ ಉಜ್ವಲ ಯೋಜನೆಯನ್ನು ಈ ಕೆಳಗಿನ ಯಾವ ಉದ್ದೇಶಗಳಿಗಾಗಿ ಪ್ರಾರಂಭಿಸಲಾಗಿದೆ?
ಎ) ಬಿಪಿಎಲ್ ಕುಟುಂಬಗಳಿಗೆ ಎಲ್‌ಪಿಜಿ ಸಂಪರ್ಕ ಒದಗಿಸುವುದು
ಬಿ) ಹೆಣ್ಣು ಮಕ್ಕಳಿಗೆ ಉಚಿತ ಶಿಕ್ಷಣ ಒದಗಿಸುವುದು
ಸಿ) ಹೆಣ್ಣು ಮಕ್ಕಳನ್ನು ಸೇನೆಗೆ ಸೇರಿಸಿಕೊಳ್ಳುವುದು
ಡಿ) ನಗರಗಳ ಸೌಂದರ್ಯ ಹೆಚ್ಚಿಸುವುದು

457) ಚಂಪಾರಣ್ಯ ಸತ್ಯಾಗ್ರಹದ ನಾಯಕತ್ವ ವಹಿಸಿದ್ದವರು
ಎ) ಸರ್ದಾರ್ ಪಟೇಲ್
ಬಿ) ಮಹಾತ್ಮ ಗಾಂಧಿ
ಸಿ) ಜವಾಹರಲಾಲ್ ನೆಹರು
ಡಿ) ಲಾಲ್ ಬಹದ್ದೂರ್ ಶಾಸ್ತ್ರಿ

458) ಈ ವಾದ್ಯವು ತಾಳ ವಾದ್ಯವಾಗಿದೆ
ಎ) ಮೃದಂಗ ಬಿ) ತಂಬೂರಿ
ಸಿ) ಪಿಟೀಲು ಡಿ) ವೀಣೆ

459) ಭಾರತೀಯ ಸರ್ವೋಚ್ಚ ನ್ಯಾಯಾಲಯದ ಕೇಂದ್ರ ಕಚೇರಿ ಇರುವುದು
ಎ) ನವದೆಹಲಿ ಬಿ) ಬೆಂಗಳೂರು
ಸಿ) ಧಾರವಾಡ ಡಿ) ಕೋಲ್ಕತ್ತ

460) ವಿಧಾನ ಪರಿಷತ್ತಿನ ಸದಸ್ಯರ ಅಧಿಕಾರಾವಧಿ
ಎ) 5 ವರ್ಷಗಳು ಬಿ) 6 ವರ್ಷಗಳು
ಸಿ) 4 ವರ್ಷಗಳು ಡಿ) 3 ವರ್ಷಗಳು

461) ಗ್ರಾಮೀಣ ಮಹಿಳೆಯರ ವಿಕಾಸಕ್ಕಾಗಿ ಕರ್ನಾಟಕ ಸರ್ಕಾರ ಜಾರಿಗೆ ತಂದ ಕಾರ್ಯಕ್ರಮ ಯಾವುದು?
ಎ) ಲೋಕಾಯುಕ್ತ ಬಿ) ಸ್ತ್ರೀಶಕ್ತಿ
ಸಿ) ಸಾಕ್ಷರಭಾರತ
ಡಿ) ಕುಟುಂಬ ಕಲ್ಯಾಣ ಕಾರ್ಯಕ್ರಮ

462) 'ಮಾವಿನ ಕೊಯ್ಲು' ಎಂಬ ಹೆಸರಿನ ಮಳೆ ಯಾವ ತಿಂಗಳಿನಲ್ಲಿ ಬರುತ್ತದೆ?
ಎ) ಡಿಸೆಂಬರ್ ಬಿ) ಎಪ್ರಿಲ್
ಸಿ) ಜೂನ್ ಡಿ) ಸೆಪ್ಟೆಂಬರ್

463) ವೈದ್ಯರೊಬ್ಬರು ಸರಿಯಾಗಿ ಬೆಳವಣಿಗೆಯಾಗದ ಮೂಳೆಗಳುಳ್ಳ ಮಗುವನ್ನು ಬೆಳಗಿನ ಬಿಸಿಲಿನಲ್ಲಿ ಓಡಾಡಿಸಲು ಸಲಹೆ ನೀಡುತ್ತಾರೆ. ಏಕೆಂದರೆ ಮಗುವಿನ ಸರಿಯಾದ ಬೆಳವಣಿಗೆಗೆ ಈ ಕೆಳಗಿನ ಒಂದು ವಿಕಿರಣ ಸಹಾಯ ಮಾಡುತ್ತದೆ. ಅದು ಯಾವುದು?
ಎ) ಕ್ಷ-ಕಿರಣ
ಬಿ) ಅವಕೆಂಪು ಕಿರಣ
ಸಿ) ನೇರಳಾತೀತ ಕಿರಣ
ಡಿ) ಗಾಮಾ ಕಿರಣ

464) ಇಂಧನ ಉಳಿತಾಯಕ್ಕೆ ಈ ಕೆಳಗಿನ ಯಾವ ಅಭ್ಯಾಸ ಸೂಕ್ತವಲ್ಲ?
ಎ) ಸಾರ್ವಜನಿಕ ಸಾರಿಗೆ ವ್ಯವಸ್ಥೆಯನ್ನು ಬಳಸುವುದು
ಬಿ) ಕಡಿಮೆ ದೂರವನ್ನು ಕ್ರಮಿಸಲು ಮೋಟಾರ್ ಸೈಕಲ್‌ಅನ್ನು ಬಳಸುವುದು
ಸಿ) ಕಡಿಮೆ ದೂರವನ್ನು ಕ್ರಮಿಸಲು ಸೈಕಲ್‌ಅನ್ನು ಬಳಸುವುದು
ಡಿ) ಕಡಿಮೆ ದೂರವನ್ನು ನಡೆದುಕೊಂಡು ಕ್ರಮಿಸುವುದು

465) ಕಾರ್ಬೋರೇಟರ್ ಕಾರ್ಯವೆಂದರೆ
ಎ) ಪೆಟ್ರೋಲ್‌ಅನ್ನು ಮಾತ್ರ ಎಂಜಿನ್‌ಗೆ ಪ್ರವೇಶಿಸುವಂತೆ ಮಾಡುತ್ತದೆ
ಬಿ) ಗಾಳಿಯನ್ನು ಮಾತ್ರ ಎಂಜಿನ್‌ಗೆ ಪ್ರವೇಶಿಸುವಂತೆ ಮಾಡುತ್ತದೆ
ಸಿ) ಪೆಟ್ರೋಲ್ ಮತ್ತು ಗಾಳಿಯ ಮಿಶ್ರಣವನ್ನು ಎಂಜಿನ್‌ಗೆ ಪ್ರವೇಶಿಸುವಂತೆ ಮಾಡುತ್ತದೆ
ಡಿ) ಡೀಸೆಲ್ ಮತ್ತು ಪೆಟ್ರೋಲ್ ಮಿಶ್ರಣವನ್ನು ಎಂಜಿನ್‌ಗೆ ಪ್ರವೇಶಿಸುವಂತೆ ಮಾಡುತ್ತದೆ

(ಪ್ರಶ್ನೋತ್ತರ ಸಂಯೋಜನೆ: ಸ್ಲೇಟ್ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕೇಂದ್ರ, ಧಾರವಾಡ)

ಭಾಗ 33ರ ಉತ್ತರ: 441. ಎ, 442. ಬಿ, 443. ಸಿ, 444. ಡಿ, 445. ಸಿ, 446. ಡಿ, 447. ಬಿ, 448. ಬಿ, 449. ಎ, 450. ಡಿ

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಸುಭಾಷಿತ

ಕೆಲವೊಮ್ಮೆ, ಬೀದಿಯಲ್ಲಿ ಸಿಗುವ ಜ್ಞಾನವು ಪುಸ್ತಕದ ಓದಿನಿಂದ ಸಿಗುವ ಜ್ಞಾನದಷ್ಟೇ ಮುಖ್ಯವಾಗಬಹುದು.
-ವಿಕಾಸ್ ಸ್ವರೂಪ್

ಜಾಹೀರಾತು ನಿಯಮಕ್ಕೆ ತಡೆನೀಡಿ ಬೆಂಗಳೂರಿನ ಸೌಂದರ್ಯ ಕಾಪಾಡಿ

ಬೆಂಗಳೂರಿನಲ್ಲಿ ಹೋರ್ಡಿಂಗ್, ಫ್ಲೆಕ್ಸ್, ಬ್ಯಾನರ್, ಬಂಟಿಂಗ್ ಅಳವಡಿಕೆಗೆ ರಾಜ್ಯ ಸರ್ಕಾರ ಪುನಃ ಅವಕಾಶ ನೀಡಿದ್ದು, ಹಾದಿ-ಬೀದಿಗಳಲ್ಲಿ ಇವುಗಳ ಹಾವಳಿ ಮತ್ತೆ ಶುರುವಾಗಲಿದೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ (ಬಿಬಿಎಂಪಿ) ಚುನಾಯಿತ ಕೌನ್ಸಿಲ್ ಇಲ್ಲದ ಸಮಯದಲ್ಲಿ 'ಬಿಬಿಎಂಪಿ ಜಾಹೀರಾತು ನಿಯಮಗಳು- 2019' ಅನ್ನು ಆತುರಾತುರವಾಗಿ ಜಾರಿಗೆ ತರಲಾಗಿದೆ. ಕೋವಿಡ್ ಸಂಕಷ್ಟ ಹಾಗೂ ಪ್ರಕೃತಿ ವಿಕೋಪದ ಈ ಸೂಕ್ಷ್ಮ ಸಂದರ್ಭದಲ್ಲಿ ಸರ್ಕಾರ ಅತ್ಯುತ್ಸಾಹದಿಂದ ಈ ನಿರ್ಧಾರ ಕೈಗೊಂಡಿದ್ದರ ಹಿಂದೆ ಜಾಹೀರಾತು ಮಾಫಿಯಾದ ಒತ್ತಡ ಕೆಲಸ ಮಾಡಿದೆ ಎಂಬ ಆರೋಪದಲ್ಲಿ ಹುರುಳಿಲ್ಲದೆ ಇಲ್ಲ. ಇದರಿಂದ, ನಗರದ ಹಾದಿಬೀದಿಗಳನ್ನು ಜಾಹೀರಾತು ಮುಕ್ತಗೊಳಿಸಲು ಮೂರು ವರ್ಷಗಳಿಂದ ನಡೆದಿದ್ದ ಎಲ್ಲ ಪ್ರಯತ್ನಗಳನ್ನು ಮತ್ತೆ ಶೂನ್ಯಕ್ಕೆ ತಂದು ನಿಲ್ಲಿಸಿದಂತಾಗಿದೆ. ಹಿಂದೆ ಸಾರ್ವಜನಿಕ ಸ್ಥಳಗಳಲ್ಲಿ ಅಳವಡಿಸುತ್ತಿದ್ದ ಹೋರ್ಡಿಂಗ್‌ಗಳು, ಒಂದೆಡೆ ನಗರದ ಸೌಂದರ್ಯವನ್ನು ಹಾಳುಗೆಡವುತ್ತಿದ್ದವು. ಮತ್ತೊಂದೆಡೆ ಬಿಬಿಎಂಪಿಗೆ ಸಿಗಬೇಕಿದ್ದ ವರಮಾನದಲ್ಲಿ ಭಾರಿ ಸೋರಿಕೆ ಆಗುತ್ತಿತ್ತು. ನಗರಕ್ಕೆ ರಾಷ್ಟ್ರೀಯ ನಾಯಕರು ಯಾರಾದರೂ ಬಂದರೆಂದರೆ ಬೀದಿಗಳಲ್ಲಿ ಕಣ್ಣಿಗೆ ಕಿರಿಕಿರಿ ಆಗುವಷ್ಟು ಫ್ಲೆಕ್ಸ್, ಬ್ಯಾನರ್, ಬಂಟಿಂಗ್‌ಗಳು ರಾರಾಜಿಸುತ್ತಿದ್ದವು. ಫ್ಲೆಕ್ಸ್‌ಗಳ ತೋರಣ ಹರಿದುಬಿದ್ದು ಅಪಘಾತಗಳೂ ಸಂಭವಿಸಿದ್ದವು. ಈ ಎಲ್ಲ ಅಂಶಗಳನ್ನು ಗಮನಿಸಿಯೇ ಹೈಕೋರ್ಟ್, ಜಾಹೀರಾತು ಹಾವಳಿಯನ್ನು ತಡೆಗಟ್ಟುವಂತೆ ಬಿಬಿಎಂಪಿ ಅಧಿಕಾರಿಗಳ ಮೇಲೆ ಚಾಟಿ ಬೀಸಿತ್ತು. ಆಗ ಮಿಂಚಿನ ಕಾರ್ಯಾಚರಣೆ ನಡೆಸಿದ್ದ ಬಿಬಿಎಂಪಿ, ನಗರದ ಬೀದಿಗಳನ್ನು ಜಾಹೀರಾತು ಮುಕ್ತಗೊಳಿಸಿತ್ತು. ಸಾರ್ವಜನಿಕ ಪ್ರದೇಶಗಳಲ್ಲಿ ಹೋರ್ಡಿಂಗ್, ಫ್ಲೆಕ್ಸ್, ಬ್ಯಾನರ್‌ಗಳೂ ಸೇರಿದಂತೆ ವಾಣಿಜ್ಯ ಉದ್ದೇಶದ ಎಲ್ಲ ವಿಧದ ಜಾಹೀರಾತುಗಳನ್ನೂ ನಿಷೇಧಿಸಿತ್ತು. ಬಿಬಿಎಂಪಿಯ ಈ ನಿರ್ಣಯಕ್ಕೆ ಹೈಕೋರ್ಟ್‌ನ ಏಕಸದಸ್ಯ ಪೀಠವು ತಡೆಯಾಜ್ಞೆ ನೀಡಿತ್ತು. ಆದರೆ, ವಿಭಾಗೀಯ ಪೀಠವು ತಡೆಯಾಜ್ಞೆಯನ್ನು ರದ್ದುಪಡಿಸಿತ್ತು. ಈ ನಡುವೆ ನಗರಾಭಿವೃದ್ಧಿ ಇಲಾಖೆಯು ಬಿಬಿಎಂಪಿ ನಿರ್ಣಯಕ್ಕೆ ವಿರುದ್ಧವಾಗಿ, ನಗರದಲ್ಲಿ ಹೋರ್ಡಿಂಗ್ ಸೇರಿದಂತೆ ವಿವಿಧ ರೀತಿಯ ಜಾಹೀರಾತುಗಳ ಪ್ರದರ್ಶನಕ್ಕೆ ಅವಕಾಶ ಕಲ್ಪಿಸಲು 2019ರ ಜುಲೈನಲ್ಲಿ ಜಾಹೀರಾತು ನಿಯಮಗಳ ಕರಡು ಅಧಿಸೂಚನೆಯನ್ನು ಪ್ರಕಟಿಸಿತ್ತು. ಬಿಬಿಎಂಪಿಯ ಚುನಾಯಿತ ಕೌನ್ಸಿಲ್‌ನ ಸದಸ್ಯರು ಪಕ್ಷಭೇದ ಮರೆತು ಈ ಕರಡು ಅಧಿಸೂಚನೆಯನ್ನು ವಿರೋಧಿಸಿದ್ದರು.

ಬಿಬಿಎಂಪಿ ಕೌನ್ಸಿಲ್ ಅಂಗೀಕರಿಸಿರುವ ಜಾಹೀರಾತು ನೀತಿಗೆ ಅನುಗುಣವಾಗಿ ನಡೆದುಕೊಳ್ಳಬೇಕು

ಬಿಬಿಎಂಪಿ ಜಾರಿಗೊಳಿಸಿರುವ ಜಾಹೀರಾತು ನೀತಿಯನ್ನು ಹಿಂಪಡೆಯುವಂತೆ ಸರ್ಕಾರದ ಮೇಲೆ ಜಾಹೀರಾತು ಮಾಫಿಯಾ ಸತತವಾಗಿ ಒತ್ತಡ ಹೇರುತ್ತಲೇ ಇತ್ತು. ಇದಕ್ಕೆ ಪ್ರತಿಯಾಗಿ ಸಾರ್ವಜನಿಕರು ನಗರದ ಬೀದಿಗಳಲ್ಲಿ ಜಾಹೀರಾತುಗಳ ಹಾವಳಿಗೆ ಮತ್ತೆ ಅವಕಾಶ ಕಲ್ಪಿಸಬಾರದು ಎಂದು ಒತ್ತಾಯಿಸುತ್ತಾ ಬಂದಿದ್ದರು. ಈ ವಿರೋಧದ ಕಾವು ಎಷ್ಟರಮಟ್ಟಿಗೆ ಇತ್ತೆಂದರೆ, 2018ರ ವಿಧಾನಸಭಾ ಚುನಾವಣೆಯ ಸಂದರ್ಭದಲ್ಲಿ ಬಿಜೆಪಿಯು ಬೆಂಗಳೂರಿನಲ್ಲಿ ಫ್ಲೆಕ್ಸ್ ಮತ್ತು ಬ್ಯಾನರ್‌ಗಳ ಹಾವಳಿ ತಡೆಯಲು ಕ್ರಮ ಕೈಗೊಳ್ಳುವುದಾಗಿ ತನ್ನ ಪ್ರಣಾಳಿಕೆಯಲ್ಲೇ ಭರವಸೆ ನೀಡಿತ್ತು. ಆದರೆ, ಬಿಜೆಪಿ ನೇತೃತ್ವದ ಸರ್ಕಾರವೇ ಅಧಿಕಾರದಲ್ಲಿದ್ದರೂ ಪ್ರಣಾಳಿಕೆಯಲ್ಲಿ ನೀಡಿದ್ದ ಭರವಸೆಯನ್ನು ಮರೆತು ಜಾಹೀರಾತು ಮಾಫಿಯಾಕ್ಕೆ ಸರ್ಕಾರ ಮಣಿದಿದೆ ಎನ್ನದೆ ವಿಧಿಯಿಲ್ಲ. ಅದರಲ್ಲೂ ಬಿ.ಎಸ್.ಯಡಿಯೂರಪ್ಪ ನೇತೃತ್ವದ ಸರ್ಕಾರದ ಕೊನೆಯ ದಿನ ಈ ತೀರ್ಮಾನ ಕೈಗೊಂಡಿರುವುದು ಹಲವು ಅನುಮಾನಗಳನ್ನು ಮೂಡಿಸಿದೆ. ಜಾಹೀರಾತು ಪ್ರದರ್ಶನಕ್ಕೆ ಅವಕಾಶ ಕಲ್ಪಿಸುವ ಹೊಸ ನಿಯಮಗಳು ಅನೇಕ ಗೊಂದಲಗಳನ್ನೂ ಹುಟ್ಟುಹಾಕಿವೆ. ಇವು ಬಿಬಿಎಂಪಿ ರೂಪಿಸಿರುವ ಜಾಹೀರಾತು ನೀತಿಗೆ ತದ್ವಿರುದ್ಧವಾಗಿವೆ. ಸ್ವಾಧೀನಾನುಭವ ಪ್ರಮಾಣಪತ್ರ ಪಡೆಯದ ಕಟ್ಟಡಗಳಲ್ಲೂ ಈಗ ಹೋರ್ಡಿಂಗ್ ಅಳವಡಿಸಬಹುದು. ಇದಂತೂ ಸರ್ಕಾರ ತಾನೇ ರಚಿಸಿದ ನಿಯಮಗಳ ಉಲ್ಲಂಘನೆಗೆ ಅವಕಾಶ ಕಲ್ಪಿಸುತ್ತದೆ. ಫ್ಲೆಕ್ಸ್ ಮತ್ತು ಬಂಟಿಂಗ್ಸ್ ಬಳಕೆಗೂ ಅನುವು ಮಾಡಿಕೊಡುವ ಈ ನಿಯಮಗಳು ಪರಿಸರ ಮಾಲಿನ್ಯ ಹೆಚ್ಚಳಕ್ಕೂ ಕಾರಣವಾಗಲಿವೆ. ಧಾರ್ಮಿಕ ಉದ್ದೇಶದ ಜಾಹೀರಾತುಗಳ ಉಚಿತ ಅಳವಡಿಕೆಗೆ ಅನುವು ಮಾಡಿಕೊಟ್ಟಿರುವುದು ಇನ್ನೊಂದು ಅಪಾಯಕಾರಿ ನಡೆ. ಹಬ್ಬ ಹರಿದಿನಗಳ ಸಂದರ್ಭದಲ್ಲಿ ಶುಭ ಕೋರುವ ಜಾಹೀರಾತುಗಳು ಎಲ್ಲೆಂದರಲ್ಲಿ ಮತ್ತೆ ರಾರಾಜಿಸುವುದಕ್ಕೆ ಇದು ಕಾರಣವಾಗಲಿದೆ. ಇವುಗಳ ತೆರವು ಬಿಬಿಎಂಪಿ ಪಾಲಿಗೆ ಭವಿಷ್ಯದಲ್ಲಿ ಮತ್ತೆ ತಲೆನೋವಾಗಲಿದೆ. ರಸ್ತೆ ಮಟ್ಟಕ್ಕಿಂತ 25 ಮೀಟರ್ ಎತ್ತರದವರೆಗಿನ ಹೋರ್ಡಿಂಗ್‌ಗಳಿಗೆ, ಕಣ್ಣು ಕುಕ್ಕುವ ನಿಯಾನ್ ಬೆಳಕಿನ ಮತ್ತು ಡಿಜಿಟಲ್ ರೂಪದ ಜಾಹೀರಾತುಗಳಿಗೂ ಅವಕಾಶ ಕಲ್ಪಿಸಲಾಗಿದೆ. ಈ ನಿರ್ಧಾರವೂ ಮುಂದೆ ಅಪಾಯಗಳನ್ನು ತಂದೊಡ್ಡಬಹುದು. 'ವಾಹನ ಸವಾರರಿಗೆ ಕಿರಿಕಿರಿ ಉಂಟುಮಾಡುವ ಹಾಗೂ ಸಂಚಾರ ಸಿಗ್ನಲ್‌ಗಳನ್ನು ಹೋಲುವ ಜಾಹೀರಾತುಗಳನ್ನು ಅಳವಡಿಸುವಂತಿಲ್ಲ. ರಸ್ತೆಗಳು ಕೂಡುವಲ್ಲಿ ವಾಹನ ನಿಲುಗಡೆ ರೇಖೆಯ 25 ಮೀಟರ್ ವ್ಯಾಪ್ತಿಯಲ್ಲಿ ಹೋರ್ಡಿಂಗ್ ಅಳವಡಿಸುವಂತಿಲ್ಲ' ಎಂದು ನಿಯಮಗಳಲ್ಲಿ ಹೇಳಲಾಗಿದೆ. ಇಂತಹ ನಿಯಮಗಳು ಹಿಂದೆಯೂ ಜಾರಿಯಲ್ಲಿದ್ದವು. ಆದರೆ ಇವುಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಲು ಬೇಕಾದ ವ್ಯವಸ್ಥೆ ಬಿಬಿಎಂಪಿಯಲ್ಲಿ ಇಲ್ಲ. 'ಹೊಸ ನಿಯಮಗಳು ಬಿಬಿಎಂಪಿಗೆ ಭಾರಿ ವರಮಾನವನ್ನೇನೂ ತರುವುದಿಲ್ಲ. ಜಾಹೀರಾತು ಏಜೆನ್ಸಿಗಳು ಹಣ ಮಾಡುವುದಕ್ಕಷ್ಟೇ ಅವಕಾಶ ಮಾಡಿಕೊಡಲಿವೆ. ಹೋರ್ಡಿಂಗ್ ಅಳವಡಿಕೆಗೆ ನಿರ್ದಿಷ್ಟ ಪ್ರದೇಶಗಳನ್ನು ಗುರುತಿಸಿ ಅವಕಾಶ ಕಲ್ಪಿಸಿದ್ದರೆ, ಬಿಬಿಎಂಪಿಗೆ ಜಾಸ್ತಿ ವರಮಾನ ಬರುತ್ತಿತ್ತು' ಎಂಬುದು ನಗರಯೋಜನಾ ತಜ್ಞರ ಅಭಿಪ್ರಾಯ. ಜನರ ಆಶಯಗಳಿಗೆ ವಿರುದ್ಧವಾದ ಹೊಸ ಜಾಹೀರಾತು ನಿಯಮವನ್ನು ಮುಖ್ಯಮಂತ್ರಿಯವರು ತಕ್ಷಣ ತಡೆಹಿಡಿಯಬೇಕು. ಬಿಬಿಎಂಪಿ ಕೌನ್ಸಿಲ್ ಅಂಗೀಕರಿಸಿರುವ ಜಾಹೀರಾತು ನೀತಿಗೆ ಅನುಗುಣವಾಗಿ ನಡೆದುಕೊಳ್ಳಬೇಕು.

ದಿನದ ಟ್ವೀಟ್

ಚಿತ್ರನಟರೇ ಯಾಕೆ?

ಭಾರತ ಮಹಿಳಾ ಹಾಕಿ ತಂಡದ ತರಬೇತುದಾರರಾಗಿರುವುದು ಶೋರ್ಡ್ ಮರೈನ್ ಅವರೇ ಹೊರತು ಯಾವುದೇ ಚಲನಚಿತ್ರ ನಟ ಅಲ್ಲ. ಭಾರತದ ಯಾವುದೇ ತಂಡ ಅಥವಾ ಅಥ್ಲೀಟ್ ಗೆದ್ದರೆ, ಚಲನಚಿತ್ರ ಇಲ್ಲವೇ ಜೀವನಾಧಾರಿತ ಚಿತ್ರದಲ್ಲಿ ತರಬೇತುದಾರನ ಪಾತ್ರ ನಿರ್ವಹಿಸಿದ ನಟನ ಅಥವಾ ಆ ಚಿತ್ರದ ದೃಶ್ಯಗಳನ್ನು ಪೋಸ್ಟ್ ಮಾಡುವ ಬದಲು, ನಿಜವಾದ ತರಬೇತುದಾರನ ಫೋಟೊವನ್ನು ಪೋಸ್ಟ್ ಮಾಡುವುದು ಉತ್ತಮ.

ಅನ್ಷುಲ್ ಸಕ್ಸೇನಾ, ಸುದ್ದಿ ವಿಶ್ಲೇಷಕ

ಕಿಡಿನುಡಿ

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರದ್ದು ಅತಂತ್ರ ಸರ್ಕಾರ. ಬಿಜೆಪಿಯಲ್ಲಿ ನಾಲ್ಕಾರು ಗುಂಪುಗಳಿವೆ. ಈ ಸರ್ಕಾರಕ್ಕೆ ಬಹಳ ದಿನ ಭವಿಷ್ಯವೂ ಇಲ್ಲ, ಅತಂತ್ರ ಸರ್ಕಾರದಿಂದ ಒಳ್ಳೆಯ ಆಡಳಿತ ಕೊಡಲೂ ಆಗುವುದಿಲ್ಲ. ದೇವೇಗೌಡರ ನೆರವು ಕೋರುವ ಬದಲು ಬಿಜೆಪಿಯವರು ವಿಧಾನಸಭೆಯನ್ನು ವಿಸರ್ಜಿಸಿ ಚುನಾವಣೆಗೆ ಹೋಗುವುದು ಸೂಕ್ತ.

ಆರ್.ಬಿ.ತಿಮ್ಮಾಪೂರ, ವಿಧಾನಪರಿಷತ್ ಸದಸ್ಯ, ಕಾಂಗ್ರೆಸ್ ಮುಖಂಡ

25 ವರ್ಷಗಳ ಹಿಂದೆ

ಶನಿವಾರ, 3-8-1996

• ದೂರವಾಣಿ ಕದ್ದಾಲಿಕೆ: ತನಿಖೆಗೆ ಆಗ್ರಹ

ಮಂಗಳೂರು, ಆ. 2– ಸರ್ಕಾರ ದೂರವಾಣಿ ಕದ್ದಾಲಿಕೆ ನಡೆಸುತ್ತಿದೆ ಎಂಬ ತಮ್ಮ ಆರೋಪವನ್ನು ಗಂಭೀರವಾಗಿ ಪರಿಗಣಿಸಿ ಅದರ ಬಗ್ಗೆ ಸದನ ಸಮಿತಿ ರಚಿಸಿ ತನಿಖೆ ನಡೆಸಬೇಕೆಂದು ರಾಷ್ಟ್ರೀಯ ನವನಿರ್ಮಾಣ ವೇದಿಕೆಯ ಮುಖಂಡ ಮತ್ತು ಮಾಜಿ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆ ಅವರು ಇಂದು ಇಲ್ಲಿ ಆಗ್ರಹಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡುತ್ತಿದ್ದ ಅವರು, ವಿರೋಧ ಪಕ್ಷದ ನಾಯಕರು, ಪಕ್ಷದ ಭಿನ್ನಮತೀಯರು ಮತ್ತು ಪತ್ರಕರ್ತರ ದೂರವಾಣಿಯನ್ನು ಸರ್ಕಾರ ಕದ್ದಾಲಿಸುವುದು ಮುಂದುವರಿಯುತ್ತಿದೆ ಎಂಬ ಬಗ್ಗೆ ತಮಗೆ ಅಧಿಕೃತ ಮೂಲಗಳಿಂದ ಮಾಹಿತಿ ದೊರೆತಿದೆ ಎಂದರು.

ಕಳೆದ ಎರಡು ವರ್ಷಗಳಿಂದ, ದೇವೇಗೌಡರು ಮುಖ್ಯಮಂತ್ರಿ ಆದಾಗಿನಿಂದ ದೂರವಾಣಿ ಕದ್ದಾಲಿಕೆ ನಡೆಯುತ್ತಿದೆ ಎಂದು ಅವರು ಹೇಳಿದರು.

50 ವರ್ಷಗಳ ಹಿಂದೆ

ಮಂಗಳವಾರ, 3-8-1971

• ಸಾಂದ್ರ ಪರಿಹಾರ ಕ್ರಮ: ಕಂದಾಯ ತಕಾವಿ ಸಾಲ ವಸೂಲಿ ತಡೆಗೆ ಆದೇಶ

ಬೆಂಗಳೂರು, ಆ. 2– ಮಳೆಯಿಲ್ಲದ ಅಭಾವ ಕಾಲಿಟ್ಟಿರುವ ರಾಜ್ಯದ 42 ತಾಲ್ಲೂಕುಗಳಲ್ಲಿ ತಕ್ಷಣ ಸಾಂದ್ರ ಪರಿಹಾರ ಕಾಮಗಾರಿಗಳ ಆರಂಭಕ್ಕೆ ಕ್ರಮ ಕೈಗೊಳ್ಳಲಾಗಿದೆ.

ಈ ತಾಲ್ಲೂಕುಗಳು ಮತ್ತು ಇತರ ಕೆಲವು ಭಾಗಶಃ ಸಂಕಷ್ಟಪೀಡಿತ ತಾಲ್ಲೂಕುಗಳಲ್ಲಿ ಭೂಕಂದಾಯ ಹಾಗೂ ತಕಾವಿ ಸಾಲದ ವಸೂಲಿಯನ್ನು ತಾತ್ಕಾಲಿಕವಾಗಿ ನಿಲ್ಲಿಸಲು ರಾಜ್ಯಪಾಲ ಧರ್ಮವೀರ ಅವರು ಆದೇಶ ನೀಡಿದ್ದಾರೆ.

ನಲವತ್ತೆರಡು ತಾಲ್ಲೂಕುಗಳಲ್ಲಿ ಪರಿಹಾರ ಕಾಮಗಾರಿಗಳನ್ನು ಆರಂಭಿಸಲು 4.80 ಕೋಟಿ ರೂಪಾಯಿಗಳನ್ನು ಮಂಜೂರು ಮಾಡಲಾಗಿದೆ. ಇಲ್ಲಿ ಈಗಾಗಲೇ ಮುಂದುವರಿಯುತ್ತಿರುವ ಭೂ ಸಾರ ರಕ್ಷಣೆ, ಬಾವಿ ತೋಡುವಿಕೆಯಂಥ ಕಾಮಗಾರಿಗಳನ್ನು ತ್ವರಿತಗೊಳಿಸಲು ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ.

ಈ ಅವಘಡದಿಂದ ಜನರನ್ನು ರಕ್ಷಿಸಲು ಸರ್ಕಾರ ರಾಜಿರಹಿತ ಕ್ರಮಕ್ಕೆ ಮುಂದಾಗಬೇಕು

ಮೇಘಸ್ಫೋಟ: ನಿಸರ್ಗದ ಜಲಬಾಂಬ್

ವಿಶ್ಲೇಷಣೆ

ಟಿ.ಆರ್.ಅನಂತರಾಮು

ನೈಸರ್ಗಿಕ ವಿಕೋಪಗಳ ಪಟ್ಟಿಗೆ ಹೊಸ ಆತಂಕವಾದಿಯ ಹೆಸರು ಸೇರ್ಪಡೆಯಾಗಿದೆ. ಅದು ಮೇಘಸ್ಫೋಟ. ಪ್ರವಾಹ, ಭೂಕಂಪನ, ಬರ, ಅತಿವೃಷ್ಟಿ, ಅನಾವೃಷ್ಟಿ ಮುಂತಾದ ನೈಸರ್ಗಿಕ ಅವಘಡಗಳಿಗೆ ಜನ ಹೊಂದಿಕೊಂಡಿದ್ದಾರೆ. ಮೇಘಸ್ಫೋಟಕ್ಕೆ ಇನ್ನೂ ಹೊಂದಿಕೊಳ್ಳಬೇಕಾಗಿದೆ; ಸರ್ಕಾರಗಳೂ ಇಂಥ ತುರ್ತು ಪರಿಸ್ಥಿತಿಯನ್ನು ಎದುರಿಸಲು ಸದಾ ಸಜ್ಜಾಗಿರಬೇಕು.

ಇಂಥ ಪ್ರಕರಣಗಳಲ್ಲಿ ಪ್ರಾಣಹಾನಿಯಾದವರ ಕಥೆ ಒಂದಾದರೆ, ಜೀವವನ್ನು ಪಣಕ್ಕೊಡ್ಡಿ ಅಂಥ ದುರ್ಗಮ ಪ್ರದೇಶಗಳಿಗೆ ಹೋಗಿ ಜನ, ಜಾನುವಾರುಗಳನ್ನು ಉಳಿಸುವ ರಕ್ಷಣಾ ಪಡೆಗಳ ಕಥೆ ಇನ್ನೊಂದು. ಮಾಧ್ಯಮಗಳು ಈ ವಿಚಾರದಲ್ಲಿ ಚುರುಕಾಗಿವೆ. ಹೆಚ್ಚು ಕಡಿಮೆ ಪ್ರತಿವರ್ಷವೂ ಮಳೆಗಾಲದಲ್ಲಿ ಉತ್ತರ-ದಕ್ಷಿಣ ಎಂಬ ಭೇದವಿಲ್ಲದೆ ಭಾರತದ ನದಿಗಳು ಉಕ್ಕಿ ಹರಿಯುತ್ತವೆ. ಆಡಳಿತ ಮತ್ತು ನಿರ್ವಹಣೆಯ ತಾಕತ್ತನ್ನು ಪ್ರಶ್ನಿಸುವಷ್ಟು ಸವಾಲೊಡ್ಡುತ್ತವೆ. ವಿಕೋಪ ನಿರ್ವಹಣೆಗೆಂದೇ ಕೇಂದ್ರ ಸರ್ಕಾರ ಭಾರಿ ಮೊತ್ತವನ್ನು ಎತ್ತಿಟ್ಟಿದೆ, 'ರಾಷ್ಟ್ರೀಯ ವಿಕೋಪ ನಿಧಿ'ಯನ್ನು ಸೃಷ್ಟಿಸಿದೆ.

ರಾಜ್ಯ ಮಟ್ಟದಲ್ಲೂ 2005ರಿಂದ ಇದು ಕೆಲಸ ಮಾಡುತ್ತಿದೆ. ಕಳೆದ ವರ್ಷವಷ್ಟೇ ಕೇಂದ್ರ ವಿಕೋಪ ನಿರ್ವಹಣೆಗೆಂದೇ ಈ ನಿಧಿಯಿಂದ ರಾಜ್ಯಗಳಿಗೆ ₹ 30,000 ಕೋಟಿ ಬಿಡುಗಡೆ ಮಾಡಿತ್ತು. ರಾಜ್ಯದ ಪಾಲೂ ಸೇರಿದಂತೆ ₹ 1,400 ಕೋಟಿ ಸಿಕ್ಕಿತ್ತು ನಮಗೆ.

ನೈಸರ್ಗಿಕ ವಿಕೋಪಗಳನ್ನು ತಡೆಯುವುದು ಆಗದು, ನಿರ್ವಹಿಸಬೇಕು ಅಷ್ಟೇ. ಇದೊಂದು ಶಾಶ್ವತ ಪೀಡೆ. ಸರ್ಕಾರಗಳಿಗೂ ಗೊತ್ತು. ಆದ್ದರಿಂದಲೇ ಪರಿಹಾರ ನಿಧಿ ಎನ್ನುವುದಕ್ಕೆ ಕಾಯಂ ಜೀವ ಇರುತ್ತದೆ. ವಿಕೋಪದ ಪಟ್ಟಿಯಲ್ಲಿ ನುಸುಳಿ ಮೇಘಸ್ಫೋಟ ಹಿಂದಿಗಿಂತ ಈಗ ಹೆಚ್ಚಿನ ಪಾಲು ಕೇಳುತ್ತಿದೆ. ವಿಶೇಷವಾಗಿ ಹಿಮಾಲಯ ಪರ್ವತಗಳ ತಪ್ಪಲಲ್ಲಿರುವ ರಾಜ್ಯಗಳಿಗೆ ಕಳೆದ 15 ವರ್ಷಗಳಿಂದ ಮೇಘಸ್ಫೋಟ ಹೊಸ ಶತ್ರುವಾಗಿದೆ. ಪ್ರವಾಹದ ಜೊತೆಗೆ ಇದನ್ನೂ ನಿಭಾಯಿಸಬೇಕಾಗಿದೆ.

ಸದ್ಯದಲ್ಲಿ ಹಿಮಾಲಯ ಪ್ರದೇಶದ ಲಡಾಕ್, ಕಾಶ್ಮೀರ, ಹಿಮಾಚಲ ಪ್ರದೇಶಗಳು ಕಳೆದ ವಾರದ ಮೇಘಸ್ಫೋಟದಿಂದಾಗಿ ತತ್ತರಿಸಿಹೋಗಿವೆ. ಇದು ನಿಸರ್ಗವೇ ರೂಪಿಸಿರುವ ಜಲಬಾಂಬು ದಾಳಿ. ದಿಢೀರ್ ಪ್ರವಾಹವನ್ನು ನಿಭಾಯಿಸುವುದು ಸವಾಲಿನ ಕೆಲಸ. ಏಕೆಂದರೆ, ಹವಾಮಾನ ಅಧ್ಯಯನ ಮಾಡಿ ಚಂಡಮಾರುತಗಳ ಮುನ್ಸೂಚನೆ ಪಡೆಯಬಹುದು. ಮೇಘಸ್ಫೋಟ ಹಾಗಲ್ಲ. ದಿಢೀರೆಂದು ಸಂಭವಿಸಿ ಕೆಲವೇ ನಿಮಿಷಗಳಲ್ಲಿ ಜಲಪ್ರಳಯ ಉಂಟು ಮಾಡುತ್ತದೆ. ತಯಾರಿ ಮಾಡಿಕೊಂಡರೂ ಪ್ರಯೋಜನವಿಲ್ಲ. ಎಲ್ಲಿ, ಯಾವಾಗ ಎಂದು ಊಹಿಸಲೂ ಸಾಧ್ಯವಿಲ್ಲ. ಸಾಮಾನ್ಯವಾಗಿ ಮೇಘಸ್ಫೋಟ 20 ಚದರ ಕಿಲೊ ಮೀಟರ್ ಪ್ರದೇಶಕ್ಕೆ ಸೀಮಿತವಾಗಿರುತ್ತದೆ. ಈ ಸಲ ಅದು ಏಕಕಾಲಕ್ಕೆ ಹಲವು ರಾಜ್ಯಗಳ ಮೇಲೆ ದಾಳಿ ಮಾಡಿದೆ.

ಭಾರತದಲ್ಲಿ 1908ರಲ್ಲೇ ಕೃಷ್ಣಾ ನದಿಯ ಉಪ ನದಿಯಾದ ಮೂಸಿ ನದಿ ಹೊರಳಿ ಹೈದರಾಬಾದ್ ಸೇರಿದಂತೆ ಸುತ್ತಮುತ್ತ 50,000 ಮಂದಿ ಸತ್ತದ್ದು ಭಾರತದಲ್ಲಿ ಘಟಿಸಿದ ಮೊದಲ ಮೇಘಸ್ಫೋಟ ದುರಂತ. ಈಗ ಅದರ ಸಾಕ್ಷಿಯಾಗಿ ಯಾರೂ ಉಳಿದಿಲ್ಲ. ಆದರೆ 2013ರಲ್ಲಿ ಉತ್ತರಾಖಂಡದ ಚಮೋಲಿ ಜಿಲ್ಲೆಯಲ್ಲಾದ ಮೇಘಸ್ಫೋಟದಿಂದ 5,000 ಜನ ಪ್ರವಾಹಕ್ಕೆ ಸಿಕ್ಕಿ ಸತ್ತಮೇಲೆ ಮೇಘಸ್ಫೋಟವೆಂದರೇನು ಎಂದು ತಿಳಿದದ್ದು ಆಗ. ಇದಕ್ಕಿಂತ ಜನರಿಗೆ ಹೆಚ್ಚು ಆಘಾತ ಮತ್ತು ಆತಂಕ ತಂದದ್ದು ಕೇವಲ 8ರಿಂದ 10 ಗಂಟೆಯೊಳಗೆ 2005ರಲ್ಲಿ ಮುಂಬೈನಲ್ಲಿ 950 ಮಿಲಿ ಮೀಟರ್ ಮಳೆ ಬಿದ್ದದ್ದು. ಪರ್ವತ ಪ್ರದೇಶಗಳಿಗೆ ಸೀಮಿತವಾಗಿದ್ದ ಈ ಅವಘಡ ಅರಬ್ಬಿ ಸಮುದ್ರವನ್ನು ಕಾಡಿದ್ದು ಹೇಗೆ ಎಂಬುದು ಹವಾಗುಣ ವಿಜ್ಞಾನಿಗಳಿಗೂ ಗೊಂದಲ ತಂದಿತ್ತು. ಇದರ ನಂತರ ಮೇಘಸ್ಫೋಟ ಹಿಮಾಲಯದ ಬುಡದಲ್ಲಿರುವ ರಾಜ್ಯಗಳನ್ನು ಪದೇ ಪದೇ ಕಾಡುತ್ತಲೇ ಇದೆ.

ಮೇಘಸ್ಫೋಟದ ಹಿಂದಿನ ಕಾರಣ ಈಗ ಗುಟ್ಟಾಗಿ ಉಳಿದಿಲ್ಲ. ಹವಾಮಾನ ತಜ್ಞರು ಇದರ ಎಲ್ಲ ಮಗ್ಗುಲನ್ನೂ ಅಳೆದಿದ್ದಾರೆ. ಸೀಮಿತ ಪ್ರದೇಶದಲ್ಲಿ ದಿಢೀರೆಂದು ಗಂಟೆಗೆ 100 ಮಿಲಿ ಮೀಟರ್ ಮಳೆಯಾದಾಗ ಆ ಪ್ರದೇಶದಲ್ಲಿ ಪ್ರವಾಹ ಉಂಟಾಗುತ್ತದೆ. ಇದಕ್ಕೂ ಒಂದು ಹಿನ್ನೆಲೆ ಬೇಕು. 1,000ದಿಂದ 2,500 ಮೀಟರ್ ಎತ್ತರದ ಪರ್ವತ ಪ್ರದೇಶಗಳಲ್ಲಿ ವಾಯುಭಾರ ಕುಸಿತವಾಗಿ, ಅತಿ ಒತ್ತಡದಲ್ಲಿ ಕಣಿವೆಯಲ್ಲಿದ್ದ ಮಳೆ ಮೋಡ ಅತಿ ವೇಗದಲ್ಲಿ ಮೇಲಕ್ಕೆ ನುಗ್ಗುತ್ತದೆ, ಶೃಂಗಗಳಿಗೆ ಬಡಿಯುತ್ತದೆ. ನೀರು ಬಿಡುಗಡೆಯಾಗಿ ಕುಂಭದ್ರೋಣ ಮಳೆಯಾಗುತ್ತದೆ. ವೇಟ್ ಲಿಫ್ಟಿಂಗ್ ಕ್ರೀಡಾಪಟು 100 ಕಿಲೊ ಗ್ರಾಂ ಭಾರವನ್ನು ಎತ್ತಿ ಆನಂತರ ದಿಢೀರೆಂದು ಕೆಳಗೆ ಬಿಸುಟ ಹಾಗೆ ಈ ಮೇಘಸ್ಫೋಟ. ಜೀವನದಿಗಳ ತವರಾಗಿ ಹಿಮಾಲಯ ಪರ್ವತಗಳ ಕಣಿವೆಗಳು ಈ ಹೆಚ್ಚುವರಿ ನೀರನ್ನು ತಡೆಯುವ ಶಕ್ತಿ ಕಳೆದುಕೊಂಡಿವೆ. ಕೆಳ ಹರಿವಿನಲ್ಲಿರುವ ವಸಾಹತುಗಳನ್ನು ಇದು ಅನಿರೀಕ್ಷಿತ ಅಪಾಯಕ್ಕೆ ಒಡ್ಡುತ್ತದೆ. ಸದ್ಯದಲ್ಲಿ ಉತ್ತರಾಖಂಡ, ಜಮ್ಮು ಕಾಶ್ಮೀರ, ಲಡಾಕ್ ಪ್ರದೇಶಗಳು ಮೇಘಸ್ಫೋಟವೆಂಬ ಆತಂಕವಾದಿಯ ಜೊತೆಯಲ್ಲೇ ಬದುಕಬೇಕಾದ ಪರಿಸ್ಥಿತಿ ಇದೆ.

ಇದರಿಂದ ಕಲಿತ ಪಾಠವೇನು? ಯಾವ ಶಕ್ತಿಯಿಂದಲೂ ಇದನ್ನು ನಿಯಂತ್ರಿಸಲು ಆಗುವುದಿಲ್ಲ. ಈ ಸಂದರ್ಭದಲ್ಲಿ ಒಂದು ಸಂಗತಿಯನ್ನು ನೆನಪಿಸಿಕೊಳ್ಳಬಹುದು. ಇದೇ ಫೆಬ್ರುವರಿಯಲ್ಲಿ ನಂದಾದೇವಿಯ ಹಿಮನದಿಯೊಂದರ ತುದಿ ಕಳಚಿಬಿದ್ದು ಅಲಕಾನಂದ ನದಿ ಉಕ್ಕಿ ಹರಿದು 150ಕ್ಕೂ ಹೆಚ್ಚು ಮಂದಿ ಸತ್ತರು. ನ್ಯಾಷನಲ್ ಥರ್ಮಲ್ ಪವರ್‌ನ ನಾಲ್ಕು ಜಲವಿದ್ಯುತ್ ಯೋಜನೆಗಳು ಕೊಚ್ಚಿಹೋದವು. ಶ್ರೀನಗರ ಅಣೆಕಟ್ಟನ್ನು ಖಾಲಿ ಮಾಡಬೇಕಾಯಿತು, ಅಷ್ಟು ಪ್ರವಾಹ ಹರಿದುಬಂದಿತ್ತು. ಪೊಲೀಸ್, ರಕ್ಷಣಾ ಪಡೆ, ಟಿಬೆಟ್‌ನ ಗಡಿ ಪಡೆ, ರಾಜ್ಯದ ವಿಕೋಪ ನಿರ್ವಹಣಾ ತಂಡ ಜನರ ಸಂರಕ್ಷಣೆಗಾಗಿ ಪ್ರಾಣವನ್ನು ಪಣಕ್ಕಿಟ್ಟಿದ್ದವು. ಆನಂತರ ಗಂಗಾ ನದಿಯ ಉಪನದಿಗಳ ಪಾತ್ರದಲ್ಲಿ ಹೊಸತಾಗಿ ಯಾವ ವಿದ್ಯುತ್ ಉತ್ಪಾದನಾ ಕೇಂದ್ರಗಳನ್ನೂ ಸ್ಥಾಪಿಸಬಾರದೆಂದು ಕೇಂದ್ರ ಸರ್ಕಾರ ಆದೇಶ ನೀಡುವ ಪರಿಸ್ಥಿತಿ ಎದುರಾಯಿತು. ವಾಸ್ತವವಾಗಿ 2015ರಲ್ಲೇ ರಾಷ್ಟ್ರೀಯ ಹಸಿರು ನ್ಯಾಯಪೀಠವು ಅಲಕಾ ನದಿ ಪಾತ್ರ ಕುರಿತಂತೆ ಆಚೀಚೆ 100 ಮೀಟರ್‌ವರೆಗೆ ಜನವಸತಿ ಅಥವಾ ಯಾವುದೇ ಹೊಸ ಕಟ್ಟಡಗಳನ್ನು ಕಟ್ಟಬಾರದೆಂದು ಕಟ್ಟಲೆ ಹೊರಡಿಸಿತ್ತು. ನದಿ ಉಕ್ಕಿ ಹರಿದಾಗ ಅಪಾಯವಾಗದಿರಲೆಂಬುದು ಇದರ ಉದ್ದೇಶ. ಕಟ್ಟಲೆಗಳು ಇವೆ, ಅವಕ್ಕೆ ಹಲ್ಲೂ ಇದೆ, ಆದರೆ ಕಚ್ಚುವುದಿಲ್ಲ. ಅದೇ ಒಂದು ದುರಂತ.

ಮೇಘಸ್ಫೋಟ ತರುವ ಸ್ಥಿತಿಯೂ ಇದಕ್ಕಿಂತ ಬೇರೆಯಲ್ಲ. ಭಾರಿ ಇಳಿಜಾರಿದ್ದರೆ ಅಪಾಯವಿಲ್ಲ. ಬಿದ್ದ ಮಳೆ ಹರಿದುಹೋಗುತ್ತದೆ. ಆದರೆ ಕಣಿವೆಯಲ್ಲಿ ಇಂಥ ಸ್ಥಿತಿ ಇರುವುದಿಲ್ಲ. ಅಲ್ಲಿನ ನದಿಗಳು ಉಕ್ಕಲೇಬೇಕು. ಮೇಘಸ್ಫೋಟವನ್ನು ನಿಭಾಯಿಸಲು ಕೂಡ ಕೇಂದ್ರ ಸರ್ಕಾರ ಅದೇ ನೀತಿಯನ್ನು ಅನುಸರಿಸಬೇಕು. ಒಂದೆರಡು ಬದಲಾವಣೆಗಳ ಸಹಿತ. ಅದೆಂದರೆ ಹಿಮಾಲಯದಲ್ಲಿ ಪದೇ ಪದೇ ಕಾಡುವ, ಪ್ರವಾಹ ಎಬ್ಬಿಸುವ ನದಿಗಳ ಆಚೀಚೆ ಎರಡು ಕಿಲೊ ಮೀಟರ್ ದೂರದವರೆಗೆ ಜನವಸತಿಗೆ ಅವಕಾಶ ಕೊಡಬಾರದು. ಈ ವಿಚಾರದಲ್ಲಿ ಯಾವುದೇ ರಾಜಿ ಮಾಡಿಕೊಳ್ಳಬಾರದು. ಆಗ ಪ್ರವಾಹದ ಪರಿಣಾಮದಿಂದ ಪ್ರಾಣ, ಆಸ್ತಿಯನ್ನು ಬಚಾವು ಮಾಡಬಹುದು. ಇದಕ್ಕಾಗಿ ಸಹಜವಾಗಿಯೇ ದೊಡ್ಡ ಮೊತ್ತದ ಹಣವನ್ನು ತೊಡಗಿಸಬೇಕು. ಜನರನ್ನು ಸ್ಥಳಾಂತರಿಸುವುದು ಸುಲಭವಲ್ಲ. ಆದರೆ ಪ್ರವಾಹ ನಿರ್ವಹಣೆಗಾಗಿ ಖರ್ಚು ಮಾಡುತ್ತಿರುವ ಹಣವನ್ನು ಪರಿಗಣಿಸಿದರೆ ಪುನರ್ವಸತೀಕರಣಕ್ಕೆ ವಿನಿಯೋಗಿಸುವುದು ಸದ್ಯಕ್ಕೆ ದುಬಾರಿ ಎನ್ನಿಸಿದರೂ ತಾರ್ಕಿಕವಾಗಿ ಸ್ವಾಗತಿಸಬೇಕಾದ ವಿಚಾರ.

ಇನ್ನು ಧಾರ್ಮಿಕ ಕ್ಷೇತ್ರಗಳು ಬಹುತೇಕ ನದಿ ದಡಗಳಲ್ಲೇ ಹೆಚ್ಚಾಗಿ ಸ್ಥಾಪನೆಯಾಗಿವೆ. ಅಲ್ಲಿಯೂ ಸರ್ಕಾರ ಒಂದು ನಿರ್ಣಯ ತೆಗೆದುಕೊಳ್ಳಬೇಕು. ಹಿಮಾಲಯದ ತಪ್ಪಲಿನಲ್ಲಿರುವ ಅಥವಾ ಉನ್ನತ ಪ್ರದೇಶದಲ್ಲಿರುವ ಧಾರ್ಮಿಕ ಕ್ಷೇತ್ರಗಳನ್ನು ಮಳೆಗಾಲದ ಮಟ್ಟಿಗೆ ಮುಚ್ಚಬೇಕು. ಇದು ರಾಜಕೀಯವಾಗದಂತೆ ನಿರ್ವಹಿಸಬೇಕು. ಏಕೆಂದರೆ ಅಂತಿಮವಾಗಿ ಜನರ ರಕ್ಷಣೆ ಮುಖ್ಯವಾಗುತ್ತದೆ.

ಚುರುಮುರಿ

ಗೊಂಬೆ ಆಡ್ಸೋನು!

• ಲಿಂಗರಾಜು ಡಿ.ಎಸ್.

'ಸಾರ್ ತಮಗೆ ಅಭಿನಂದನೆಗಳು. 'ತುರಿಕೆ' ಪತ್ರಿಕೆಯ ಸಂದರ್ಶನಕ್ಕೆ ಸ್ವಾಗತ. ರಾಜ್ಯದ ಪರಿಸ್ಥಿತಿ ಉತ್ತಮಗೊಳಿಸೋಕೆ ತಮ್ಮ ಮುಂದಿನ ಯೋಜನೆಗಳೇನು?'

'ನಾನು ವರಿಷ್ಠರ ಜೊತೆಗೆ ಸಮಾಲೋಚನೆ ಮಾಡಿ ನಿಮಗೆ ತಿಳಿಸ್ತೀನಿ!'

'ಇನ್ನೂ ಸಂಪುಟ ರಚನೆ ಆಗಿಲ್ಲ. ಏನು ಕಾರಣ ಸಾರ್?'

'ಮಂತ್ರಿ ಪದವಿಗೆ ಒಳ್ಳೆ ವೇಟ್ ಇರೋರು ಬೇಕು ಅಂತ ವರಿಷ್ಠರು ಹೇಳಿರೋದ್ರಿಂದ ಎಲ್ಲಾರೂ ಡೆಲ್ಲೀಲಿ ವೇಟ್ ಚೆಕ್ ಮಾಡಿಸ್ತಿದ್ದಾರೆ. ಜಾಸ್ತಿ ವೇಟ್ ಇರೋರು ಅಪಾಯಿಂಟ್ ಆಗಿ ಬರ್ತರೆ ತಡೀರಿ!'

'ಸದಾನಂದ, ಶೆಟ್ಟರಾದ ಮೇಲೆ ನೀವೇ ಮೂರನೇ ಅಲೆಯಂತೆ?'

'ಒಬ್ಬರು ರೆಸ್ಟಲ್ಲವರೆ, ಇನ್ನೊಬ್ರು ಸಂಪುಟಕ್ಕೆ ಬರಲ್ಲ ಅಂದವ್ರೆ! ಅವರೂ ನಮ್ಮ ಕಳ್ಳು-ಬಳ್ಳಿ ಇದ್ದಂಗೆ. ಮೂರನೇ ಅಲೆ ಭಾಳ ಪವರ್‌ಫುಲ್ ಕಣ್ರೀ'

'ಮೊನ್ನೆ ಇಬ್ಬರು ಮಾಜಿ ಮಂತ್ರಿಗಳು ತಾರಾಮಾರ ಬೈದಾಡಿಕೊಂಡಿದಾರಂತೆ!'

'ಅವರಿಬ್ಬರ ಹೆಸರಲ್ಲೂ ಸೋ, ಶೋ ಇದೆ. ಸೋ ಅಧಿಕಾರಕ್ಕಾಗಿ ಶೋ ಮಸ್ಟ್ ಗೋ ಆನ್! ಸುಮ್ನೆ ಮಜಾ ನೋಡಿ'.

'ದೇವೇಗೌಡರನ್ನ ಭೇಟಿ ಮಾಡಿದ್ರಂತೆ?'

'ಅವರು ನಮ್ಮ ಪಿತಾಮಹರು. ಅದು ನಮ್ಮ ತವರುಮನೆ ಇದ್ದಂಗೆ! ಪವರ್ ಉಳಿಸಿಕಳಕ್ಕೆ ಅವಸರಕ್ಕೊಬ್ಬಣ್ಣ ಬೇಕಾಯ್ತನೆ'.

'ಗಣಿ ದೂಳು ಎಲ್ಲಾ ಕಡೆ ತುಂಬಿಕೊಂಡದಲ್ಲಾ ಸಾರ್. ನಿಮ್ಮ ಯೋಜನೆ ಏನು?'

'ಗಣಿ ಕೊರೆಯೋ ಕಳ್ಳ ಅಪ್ಪಿಲಿ, ಅವ್ವಿಲಿ, ಸಣ್ಣಿಲಿ, ದೊಡ್ಡಿಲಿಗಳಿಗೆ ಸಮಯ ಸಂದರ್ಭ ನೋಡಿಕಂಡು ಇಲಿ ಪಾಷಾಣ ಹಾಕ್ತೀವಿ! ಒಳ್ಳೆ ಇಲಿಗಳೆಲ್ಲಾ ಕಿಂದರಿಜೋಗಿ ಹಿಂದೆ ಬಂದಂಗೆ ನನ್ನಿಂದೆ ಬರ್ತವೆ'.

'ಕರ್ನಾಟಕದ ರಾಜಕೀಯದಲ್ಲಿ ಶುರುವಾಗಿರೋ ಕಾವಿ ಬ್ರಿಗೇಡ್ ಬಗ್ಗೆ ನಿಮ್ಮ ಅಭಿಪ್ರಾಯ ಏನು?'

'ಇದು ಕರ್ನಾಟಕದಲ್ಲಿ ಉತ್ತರಪ್ರದೇಶದ ಥರವೇ ಆರಂಭ ಆಗಿರೋ ಮಾರ್ಮಿಕ ಕಾವಿ ಕ್ರಾಂತಿ. ನನ್ನನ್ನ ಅವರು ಒಪ್ಪಿಕೊಂಡು ಭಾಳ ಪ್ರಬುದ್ಧತೆ, ಬುದ್ಧಿವಂತಿಕೆ ತೋರಿಸವ್ರೆ! ಅವರ ಮಾತೇ ಶಾಸನ!'

ಸಂಗತ

ಕಲಿಸದೆ ಪದವಿ ನೀಡಬಹುದೇ?

ಏನನ್ನೂ ಕಲಿಸದೆ ಪದವಿ ನೀಡಿ ನಮ್ಮನ್ನು ವಂಚಿಸಬೇಡಿ ಎನ್ನುವ ನಿಲುವು ತಾಳಿರುವ ವಿದ್ಯಾರ್ಥಿ ಸಮೂಹವೂ ಇದೆ ಎಂಬುದನ್ನು ಮರೆಯಬಾರದು

• ಎಚ್.ಕೆ.ಶರತ್

'ಮುಂಬರುವ ದಿನಗಳಲ್ಲಿ ಲಾಭದಾಯಕವಾಗಿ ನಡೆಸಬಹುದಾದ ಉದ್ಯಮವೆಂದರೆ ಅದು ಶಿಕ್ಷಣ ಸಂಸ್ಥೆ, ಅದರಲ್ಲೂ ವೃತ್ತಿಪರ ಶಿಕ್ಷಣ ಸಂಸ್ಥೆಯೊಂದನ್ನು ನಡೆಸುವುದು. ಹುಸಿ ಆಶ್ವಾಸನೆಗಳನ್ನು ನೀಡುತ್ತ ಕಾಲೇಜಿನ ಕುರಿತು ಒಂದಿಷ್ಟು ಪ್ರಚಾರ ಮಾಡಿ, ವಿದ್ಯಾರ್ಥಿಗಳನ್ನು ದಾಖಲಿಸಿಕೊಂಡು, ಅವರಿಂದ ಶುಲ್ಕ ವಸೂಲಿ ಮಾಡಿದರೆ ಸಾಕು. ಆನಂತರ ಮಾಮೂಲಿನಂತೆ ಮತ್ತೊಮ್ಮೆ ಲಾಕ್‌ಡೌನ್ ಘೋಷಣೆಯಾಗಿ ಬಿಡುತ್ತದೆ. ಆಮೇಲೆ ಕಲಿಯಲು ವಿದ್ಯಾರ್ಥಿಗಳೇ ಆಸಕ್ತಿ ತೋರಲಿಲ್ಲ ಎನ್ನುವ ಸಬೂಬು ಹೇಳಿ ಅವರಿಗೆ ಪದವಿ ಪ್ರಮಾಣಪತ್ರ ನೀಡಿ ಸಾಗಹಾಕಿದರೆ ಸಾಕು. ಅಲ್ಲಿಗೆ ಎಲ್ಲವೂ ಮುಗಿಯಿತು. ಹೆಚ್ಚೇನು ಬಂಡವಾಳ ಹೂಡದಿದ್ದರೂ ಲಾಭ ಮಾತ್ರ ಅತ್ಯಧಿಕ'.

ಇನ್ನೇನು ಎಂಜಿನಿಯರಿಂಗ್ ಪದವೀಧರನಾಗಿ ಹೊರಹೊಮ್ಮಲಿರುವ ವಿದ್ಯಾರ್ಥಿಯೊಬ್ಬ ಫೇಸ್‌ಬುಕ್‌ನಲ್ಲಿ ಇತ್ತೀಚೆಗೆ ಬರೆದ ಪೋಸ್ಟ್‌ನ ಸಾರಾಂಶವಿದು. ಕೊರೊನಾ ಪ್ರಕರಣಗಳ ಸಂಖ್ಯೆ ಇಳಿಮುಖವಾದ ಹಿನ್ನೆಲೆಯಲ್ಲಿ ಕೆಲ ಸೆಮಿಸ್ಟರ್‌ಗಳಿಗೆ ಪರೀಕ್ಷೆಗಳನ್ನು ನಡೆಸುತ್ತಿದ್ದರೆ, ಮತ್ತೆ ಕೆಲ ಸೆಮಿಸ್ಟರ್‌ಗಳಿಗೆ ಪರೀಕ್ಷೆ ನಡೆಸದೆ ವಿದ್ಯಾರ್ಥಿಗಳನ್ನು ಮುಂದಿನ ಸೆಮಿಸ್ಟರ್‌ಗಳಿಗೆ ಪ್ರಮೋಟ್ ಮಾಡುವ ನಿರ್ಧಾರವನ್ನು ಕೆಲವು ವಿಶ್ವವಿದ್ಯಾಲಯಗಳು ಕೈಗೊಳ್ಳುತ್ತಿವೆ. ನಾನಾ ಕಾರಣಗಳಿಂದಾಗಿ ಆನ್‌ಲೈನ್ ಬೋಧನೆ ಪರಿಣಾಮಕಾರಿಯಾಗಿ ನಡೆಯದೆ ಇರುವುದರಿಂದ ಪರೀಕ್ಷೆ ನಡೆಸಬೇಕೋ ಬೇಡವೋ ಎನ್ನುವ ಕುರಿತೇ ಚರ್ಚೆ ಕೇಂದ್ರೀಕೃತವಾಗಿದೆ. ವಿದ್ಯಾರ್ಥಿ ಸಂಘಟನೆಗಳು ಕೂಡ ಪರೀಕ್ಷೆ ನಡೆಸುವುದು ಬೇಡವೆನ್ನುವ ಆಗ್ರಹವನ್ನು ಕಳೆದ ವರ್ಷದಿಂದಲೂ ಮಾಡುತ್ತಲೇ ಇವೆ.

ಕಲಿಕೆಯನ್ನು ಪರೀಕ್ಷೆ ಮತ್ತು ಅಂಕ ಗಳಿಕೆಯ ವೃತ್ತದೊಳಗೆ ಬಂಧಿಸಿರುವ ಹೊತ್ತಿನಲ್ಲಿ, ಪಾಸ್ ಆಗುವುದೆಂದರೆ ಕಲಿತಂತೆ ಎನ್ನುವ ಹುಸಿ ಆಶಾವಾದ ವಿದ್ಯಾರ್ಥಿಗಳ ಮನದಲ್ಲೂ ಮೂಡಿರುವುದು ಸ್ವಾಭಾವಿಕವೇ. ಕಲಿತೋ ಕಲಿಯದೆಯೋ ಹೇಗಾದರೂ ಸರಿ, ಒಟ್ಟಾರೆ ಉತ್ತಮ ಅಂಕಗಳನ್ನು ಪಡೆದು ಪದವಿ ಪೂರೈಸಿದರೆ ಸಾಕೆಂಬ ನಿಲುವಿಗೆ ಅಂಟಿಕೊಂಡಿರುವ ವಿದ್ಯಾರ್ಥಿಗಳು, ಕಲಿಸದೆಯೂ ತಮ್ಮನ್ನು ಮುಂದಿನ ಸೆಮಿಸ್ಟರ್‌ಗಳಿಗೆ ದೂಡುವ ವಿಶ್ವವಿದ್ಯಾಲಯಗಳ ನಿರ್ಧಾರಕ್ಕೆ ತಲೆಬಾಗುತ್ತ, ಒಂದು ವೇಳೆ ಪರೀಕ್ಷೆ ನಡೆಸಲು ಮುಂದಾದರೆ ಮಾತ್ರ ಪ್ರತಿರೋಧ ತೋರುತ್ತಿರುವುದು ಢಾಳಾಗಿಯೇ ಗೋಚರಿಸುತ್ತಿದೆ.

ಈ ನಡುವೆ, ಪದವಿ ಶಿಕ್ಷಣ ಪಡೆಯುವುದೆಂದರೆ ಕೇವಲ ಅಂಕಪಟ್ಟಿಗಳನ್ನು ದಕ್ಕಿಸಿಕೊಳ್ಳುವುದಲ್ಲ ಎನ್ನುವ ಅರಿವಿರುವ ವಿದ್ಯಾರ್ಥಿ ಸಮೂಹದ ಅಳಲು ಆಲಿಸುವ ಸಂಯಮ ಯಾರಿಗೂ ಇರುವಂತೆ ತೋರುತ್ತಿಲ್ಲ.

'ನಾವು ಪದವಿ ಪೂರೈಸುವುದು ತಡವಾದರೂ ಚಿಂತೆಯಿಲ್ಲ. ಪದವಿಗಾಗಿ ಅಧ್ಯಯನದ ಭಾಗವಾಗಿ ನಮಗೆ ಕಲಿಸಬೇಕಿರುವುದನ್ನೆಲ್ಲ ಮೊದಲು ಕಲಿಸಿ. ಆನಂತರ ನಾವು ಕಲಿತಿದ್ದೇವೆಯೋ ಇಲ್ಲವೋ ಎನ್ನುವುದನ್ನು ಪರೀಕ್ಷಿಸಿ ನಮಗೆ ಪದವಿ ನೀಡಿ. ಏನನ್ನೂ ಕಲಿಸದೆ ಪದವಿ ನೀಡಿ ನಮ್ಮನ್ನು ವಂಚಿಸಬೇಡಿ' ಎನ್ನುವ ನಿಲುವು ತಾಳಿರುವ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ ಇರಬಹುದಾದರೂ, ಅವರ ಆಗ್ರಹಕ್ಕೂ ಮನ್ನಣೆ ದೊರಕಬೇಕಲ್ಲವೇ?

'ನಾವು ಪಾವತಿಸಿರುವ ಶುಲ್ಕಕ್ಕೆ ಪ್ರತಿಯಾಗಿ ನಮಗೆ ಕಲಿಸಬೇಕಿರುವುದನ್ನು ಮೊದಲು ಕಲಿಸಿ. ನಮಗೆ ಪದವಿ ಪ್ರಮಾಣಪತ್ರ ನೀಡುವುದು ತಡವಾದರೂ ಪರವಾಗಿಲ್ಲ' ಎಂದು ಆಗ್ರಹಿಸುವ ವಿದ್ಯಾರ್ಥಿ ಸಮೂಹದ ದನಿಯನ್ನೂ ಆಲಿಸುವ ಸಂಯಮ ಶೈಕ್ಷಣಿಕ ವಲಯದ ನೀತಿ ನಿರೂಪಕರಲ್ಲಿ ಇರಬೇಕಲ್ಲವೇ?



ಎಂಜಿನಿಯರಿಂಗ್‌ನಂತಹ ವೃತ್ತಿಪರ ಶಿಕ್ಷಣ ಪದವಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು, ತಮ್ಮ ಪದವಿ ವ್ಯಾಸಂಗದ ವೇಳೆ ಮೈಗೂಡಿಸಿಕೊಳ್ಳಲು ಸಾಧ್ಯವಿದ್ದ ಕೌಶಲಗಳನ್ನು, ಚೂರುಪಾರಾದರೂ ದಕ್ಕಿಸಿಕೊಳ್ಳಲು ಸಾಧ್ಯವಿದ್ದ ಪ್ರಾಯೋಗಿಕ ಜ್ಞಾನವನ್ನು ಲಾಕ್‌ಡೌನ್ ಮತ್ತು ಪರಿಣಾಮಕಾರಿಯಲ್ಲದ ಆನ್‌ಲೈನ್ ಬೋಧನೆಯ ಕಾರಣದಿಂದ ಹೊಂದಲು ಸಾಧ್ಯವಾಗಿಲ್ಲ. ಎಂಜಿನಿಯರಿಂಗ್ ಪದವಿ ಓದಿನ ವೇಳೆ ಕಾಲೇಜಿನಲ್ಲೇ ಕಲಿಯಬಹುದಾಗಿದ್ದನ್ನು ಹೊರಗೆ ಕಲಿಯಲು ಮತ್ತಷ್ಟು ಹಣ ಹಾಗೂ ಸಮಯ ವಿನಿಯೋಗಿಸಬೇಕಿದೆ.

ಕಲಿಸದೆ ಪರೀಕ್ಷಿಸಬಾರದು ಎನ್ನುವುದು ಶಿಕ್ಷಕರಿಗೆ ಹೇಳಿಕೊಡುವ ನೈತಿಕ ಪಾಠಗಳಲ್ಲೊಂದು. ಈ ಸಂದರ್ಭದಲ್ಲಿ 'ಕಲಿಸದೆ ಪದವಿ ನೀಡಬಹುದೇ' ಎನ್ನುವ ಪ್ರಶ್ನೆಗೂ ಉತ್ತರ ಕಂಡುಕೊಳ್ಳಬೇಕಿದೆ. ಕಲಿಯಲೆಂದು ಪದವಿ ಕಾಲೇಜುಗಳ ಮೆಟ್ಟಿಲೇರಿದ ವಿದ್ಯಾರ್ಥಿಗಳ ಕೈಗೆ ಕಲಿಕೆಯ ಗುಣಮಟ್ಟ ಪ್ರತಿಬಿಂಬಿಸದ ಪದವಿ ಪ್ರಮಾಣಪತ್ರ ನೀಡುವುದು ಆತ್ಮಘಾತುಕ ನಡೆ ಆಗುವುದಿಲ್ಲವೇ?

ನಮಗೆ ಕಲಿಸಿ, ಕಲಿಸದೆ ನಮ್ಮನ್ನು ಕಾಲೇಜುಗಳಿಂದ ಹೊರದೂಡಬೇಡಿ ಎಂದು ಆಗ್ರಹಿಸುವ ಪ್ರಜ್ಞಾವಂತ ವಿದ್ಯಾರ್ಥಿ ಸಮೂಹದ ಬೆನ್ನು ತಟ್ಟುವ ಬದಲು, ಅವರನ್ನು ಅವರದೇ ಸಹಪಾಠಿಗಳಂತೆ ಗೇಲಿ ಮಾಡಲು ಶಿಕ್ಷಣ ವ್ಯವಸ್ಥೆಯೇ ಮುಂದಾಗಬಹುದೇ?

ವಿದ್ಯಾರ್ಥಿಗಳು ಕಲಿಯಲಿ ಬಿಡಲಿ, ಆ ಕುರಿತು ಹೆಚ್ಚು ತಲೆ ಕೆಡಿಸಿಕೊಳ್ಳದೆ ನೂತನ ಶೈಕ್ಷಣಿಕ ವರ್ಷದ ವೇಳಾಪಟ್ಟಿ ಬಿಡುಗಡೆ ಮಾಡಲು ಹೆಚ್ಚು ಮುತುವರ್ಜಿ ತೋರುವ ನೀತಿ ನಿರೂಪಕರು ಕಾಯಲು ಹೊರಟಿರುವುದು ಯಾರ ಹಿತ? ವಿದ್ಯಾರ್ಥಿಗಳದ್ದು ಎಂದು ಭಾವಿಸಲು ಸಕಾರಣಗಳಿವೆಯೇ?

ವಾಚಕರ ವಾಣಿ

ಈ ಜಲನಿಧಿ ಜಲಧಿಯ ಪಾಲಾಗಬಾರದು

ರಾಜ್ಯದ ಆರು ಜಿಲ್ಲೆಗಳು ಜಲಾವೃತ ಆಗಿವೆ. ಇನ್ನೊಂದೆರಡು ವಾರಗಳಲ್ಲಿ ನೀರೆಲ್ಲ ಖಾಲಿಯಾಗಿ ವರ್ಷಾಂತ್ಯದಲ್ಲಿ ಬರಗಾಲದ ಸಮಸ್ಯೆ ಎದುರಾಗುವಂಥ ವಿಲಕ್ಷಣ ಕಾಲಘಟ್ಟ ಇದು. ಈಗ ಸಂಚಯವಾದ ನೀರನ್ನು ಕೆಲವು ಸ್ಥಳಗಳಲ್ಲಿ ಕೆಲವು ಕಾಲವಾದರೂ ಹಿಡಿದಿಟ್ಟು, ಅದು ನೆಲದೊಳಕ್ಕೆ ಇಂಗುವಂತೆ ಮಾಡಲು ನೀರಾವರಿ ಇಲಾಖೆ ಜನರಿಗೆ ಪ್ರೇರಣೆ ನೀಡಬಹುದೆ? ಹಿಂದಿನ ವರ್ಷ ದೆಹಲಿಯ ಕೇಜ್ರಿವಾಲ್ ನೇತೃತ್ವದ ಸರ್ಕಾರ ಅಂಥದ್ದೊಂದು ಯೋಜನೆಯನ್ನು ರೂಪಿಸಿತ್ತು: ನೀರನ್ನು ತಮ್ಮಲ್ಲೇ ಎರಡು ತಿಂಗಳು ಕಾಲ ಹಿಡಿದಿಟ್ಟುಕೊಂಡ ಯಮುನಾ ತೀರದ ರೈತರಿಗೆ ಅದು ಹಣ ನೀಡುವುದಾಗಿ ಘೋಷಿಸಿತ್ತು. ಅದರಿಂದ ಪ್ರಯೋಜನವಾಗಿದ್ದೇ ಹೌದಾದರೆ ನಮ್ಮಲ್ಲೂ ಅಂಥದ್ದೊಂದು ಕ್ರಮಕ್ಕೆ ತುರ್ತು ಚಾಲನೆ ಕೊಡಬಹುದೆ?

ಯಾರು ಎಷ್ಟು ನೀರನ್ನು ಸೆರೆ ಹಿಡಿದಿದ್ದಾರೆ ಎಂಬುದರ ಸಮೀಕ್ಷೆಗೆ ಇಸ್ರೊ ನೆರವಾಗಬಹುದು. ಯಾಕೆ ಅಂಥದ್ದೊಂದು ಪ್ರಯೋಗವನ್ನು ಮಾಡಿ ನೋಡಬಾರದು? ಮಾಡದಿದ್ದರೆ, ಈ ಮಳೆಯಲ್ಲಿ ಮೇಲ್ಮಣ್ಣು, ಸರ್ಕಾರಿ ಗೊಬ್ಬರ, ರೈತರ ಶ್ರಮ ಎಲ್ಲವೂ ನೀರುಪಾಲಾಗಿ ಅಣೆಕಟ್ಟೆ ಸೇರಿ, ಅಲ್ಲಿ ಹೂಳು ತುಂಬಿ ರೈತರ ಭವಿಷ್ಯ ಇನ್ನಷ್ಟು ಕರಾಳ ಆದೀತು. ನಮ್ಮ ಶಾಸಕಾಂಗ ಹಾಗೂ ಕಾರ್ಯಾಂಗ ಅಂಥ ದೂರದರ್ಶಿತ್ವವನ್ನು ಪ್ರದರ್ಶಿಸಬೇಕು. ಅದನ್ನು ಬಿಟ್ಟು ತುರ್ತು ಪರಿಹಾರದ ನಾಟಕದಲ್ಲೇ ಮುಳುಗಿದ್ದರೆ ನಾಳಿನ ಕರ್ನಾಟಕಕ್ಕೆ ಅದು ಭಾರೀ ಹೊರೆಯಾದೀತು.

ನಾಗೇಶ ಹೆಗಡೆ, ಕೆಂಗೇರಿ

ಮೋಹ- ವ್ಯಾಮೋಹ?!

ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಈ ಯಮ್ಮಂಗೆ
(ಆಸ್ಟ್ರೇಲಿಯಾದ ಎಮ್ಮಾ ಮೆಕಿಯನ್)
ಒಂದಲ್ಲ ಎರಡಲ್ಲ ... ಏಳು
ಚಿನ್ನದ ಪದಕ ಈಜಿನಲ್ಲಿ!
'ಈಸಬೇಕು, ಈಸಿ ಜಯಿಸಬೇಕು' ಎನ್ನುವ
ನಾಣ್ಣುಡಿಗೆ ಖಂಡಿತ ಒಪ್ಪುತ್ತದೆ!
ಬಹುಶಃ ಈಕೆಗೆ ಚಿನ್ನದ ಅಂಗಡಿಯಲ್ಲಿ
ಹಣ ಕೊಟ್ಟು ಚಿನ್ನ ಖರೀದಿಸುವ
'ವ್ಯಾಮೋಹ' ಇರಲಿಕ್ಕಿಲ್ಲ!
ಈಸಿ ಚಿನ್ನ (ಪದಕ) ಗಳಿಸುವ
'ಮೋಹ'ವೇ ಹೆಚ್ಚಿರಬೇಕು!

ನಗರ ಗುರುದೇವ್ ಭಂಡಾರ್ಕರ್, ಹೊಸನಗರ

ಕುರಿ ಕಾಯಲು ತೋಳಗಳ ನೇಮಕ!

ಬೆಂಬಲ ಬೆಲೆ ಯೋಜನೆ (ಎಂಎಸ್‌ಪಿ) ಅಡಿ ಖರೀದಿಸಿ ದಾಸ್ತಾನು ಮಾಡಿದ್ದ ಭತ್ತವು ಗಿರಣಿಗಳಿಂದಲೇ ನಾಪತ್ತೆ ಆಗಿರುವ ಸುದ್ದಿ (ಪ್ರ.ವಾ., ಆ. 2) ತಿಳಿದು ಅಚ್ಚರಿಯಾಯಿತು. ಇದು ಅಧಿಕಾರಿಗಳ ಕಾರ್ಯದಕ್ಷತೆಯ ಕೊರತೆಯನ್ನು, ಕಳ್ಳಕಾಕರ ಹಸ್ತ ಎಷ್ಟು ಬೃಹತ್ತಾಗಿದೆ ಎಂಬುದನ್ನು ಎತ್ತಿ ತೋರಿಸುತ್ತದೆ. 22,285 ಕ್ವಿಂಟಲ್‌ನಷ್ಟು ಬೃಹತ್ ಪ್ರಮಾಣದ ಭತ್ತ ರವಾನೆಯಾಗಬೇಕಾದರೆ ಅದಕ್ಕೆ ಎಷ್ಟು ಲಾರಿಗಳು ಬೇಕಾಗಬಹುದು. ಪ್ರಕರಣದ ತನಿಖೆಗೆ ವ್ಯಯವಾಗಲಿರುವ ಹಣವನ್ನೂ ಪರಿಗಣಿಸಿದರೆ ಈ ಭತ್ತವು ಮಾರುಕಟ್ಟೆಯ ಭತ್ತದ ಬೆಲೆಗೆ ಸಮನಾಗುತ್ತದೆ. ಇನ್ನಾದರೂ ಸರ್ಕಾರ ಇಂತಹ ಸಂದರ್ಭದಲ್ಲಿ ಕಾವಲು ಕಾಯಲು ದಕ್ಷ ಅಧಿಕಾರಿಗಳನ್ನು ನೇಮಿಸಿ ಕಳ್ಳತನಕ್ಕೆ ಕಡಿವಾಣ ಹಾಕಲಿ.

ಬಾಲಕೃಷ್ಣ ಎಂ.ಆರ್., ಬೆಂಗಳೂರು

ಹೇಳುವುದು ಆಚಾರ...

'ಕರ್ತವ್ಯ ನಿರ್ವಹಿಸಿದ ಮಠಾಧೀಶರ ಮಹಾಸಭಾ' ಎಂಬ ಡಾ. ಶಿವಮೂರ್ತಿ ಮುರುಘಾ ಶರಣರ ಬರಹ (ಪ್ರ.ವಾ., ಜುಲೈ 31) ಓದಿ ವ್ಯಥೆಯಾಯಿತು. ಅವರಿಗೆ ತಾವು ಹೇಳಬೇಕಿರುವುದೇನು ಎಂಬುದರ ಸ್ಪಷ್ಟತೆ ಇಲ್ಲದಿದ್ದುದು ಲೇಖನದಲ್ಲಿ ಎದ್ದು ಕಾಣುತ್ತಿತ್ತು.

ಈ ಒಂದು ತಿಂಗಳ ಕಾಲ ರಾಜ್ಯದಲ್ಲಿ ನಡೆದ ರಾಜಕೀಯ ಪ್ರಹಸನ ಮತ್ತು ಮಠಾಧೀಶರ ತತ್ವರಹಿತ ನಿಲುವುಗಳು ವಾಕರಿಕೆ ಬರಿಸುವಂತಿದ್ದವು. ಅವರ ಒಟ್ಟಾರೆ ಬರಹವನ್ನು ಸಾಂದ್ರೀಕರಿಸಿದಾಗ ಧ್ವನಿತವಾಗುವ ಎರಡು ಉಕ್ತಿಗಳೆಂದರೆ, ಜಟ್ಟಿ ಬಿದ್ದರೂ ಮೀಸೆ ಮಣ್ಣಾಗಲಿಲ್ಲ ಮತ್ತು ಹೇಳುವುದು ಆಚಾರ ತಿನ್ನುವುದು ಬದನೆಕಾಯಿ!

ಆನಂದ ರಾಮತೀರ್ಥ, ಜಮಖಂಡಿ

ಸಾಮಾಜಿಕ ಜವಾಬ್ದಾರಿ ಹೊಂದಿದ ಬರಹ

'ಸಂಸದೀಯ ನಡಾವಳಿಯ ಸಂರಕ್ಷಣೆ' ಎಂಬ ಬರಗೂರು ರಾಮಚಂದ್ರಪ್ಪ ಅವರ ಲೇಖನ (ಪ್ರ.ವಾ., ಆ. 2) ಓದಿದೆ. ಸಾಮಾಜಿಕ ಜವಾಬ್ದಾರಿ ಹೊಂದಿದ ಲೇಖಕ ರಾಜಕೀಯ ಅರಿವನ್ನು ಹೊಂದಿರಬೇಕು. ಪ್ರಜಾಸತ್ತಾತ್ಮಕ ನಡೆಗಳು ತನ್ನ ಕಣ್ಣೆದುರೇ ಕುಸಿದು ಬಿದ್ದಾಗ ಅದನ್ನು ಸಂವಿಧಾನದ ಅಡಿ ಹೇಗೆ ರಕ್ಷಿಸಬೇಕು ಎಂಬ ಅರಿವನ್ನು ಈ ಲೇಖನ ಸ್ಪಷ್ಟವಾಗಿ ಹೇಳುತ್ತದೆ. ಯಾವುದೇ ಪಕ್ಷದಲ್ಲೂ 'ಹೈಕಮಾಂಡ್' ಡೊಡ್ಡಪ್ಪನಾಗೇ ಮೆರೆಯುತ್ತದೆ ಎಂಬುದಕ್ಕೆ ಈ ಬರಹದಲ್ಲೂ ಪುರಾವೆಗಳಿವೆ. ಮಂತ್ರಿಮಂಡಲವೇ ಇಲ್ಲದೆ, ಕ್ಯಾಬಿನೆಟ್ ತೀರ್ಮಾನವೂ ಆಗದೆ, ಹೊಸದಾಗಿ ಪ್ರಮಾಣವಚನ ಸ್ವೀಕರಿಸಿದ ಮುಖ್ಯಮಂತ್ರಿ ಯಾವುದಾದರೂ ಆಶ್ವಾಸನೆ ನೀಡಬಹುದೇ ಎಂಬ ಪ್ರಶ್ನೆಯೂ ಇಲ್ಲಿ ಚರ್ಚೆಗೊಳಗಾಗಿದೆ. ಇಂಥ ಅರಿವು ಮೂಡಿಸುವ ವಿಚಾರಗಳನ್ನು ಬಂಡಾಯದ ಮುಂಚೂಣಿಯ ಹಿರಿಯ ಲೇಖಕರೊಬ್ಬರು ಮಾಡಬೇಕಾದ ಅನಿವಾರ್ಯ ಬಂದದ್ದು ವಿಪರ್ಯಾಸ.

ಆರ್.ಜಿ.ಹಳ್ಳಿ ನಾಗರಾಜ, ಬೆಂಗಳೂರು

ಪೈಪ್‌ಲೈನ್‌ಗೆ ಎಲ್ಲಿದೆ ಭದ್ರತೆ?

ಡೀಸೆಲ್, ಪೆಟ್ರೋಲ್ ಸಾಗಣೆಗೆಂದು ಮಂಗಳೂರು- ಬೆಂಗಳೂರು ನಡುವೆ ಪೆಟ್ರೋನೆಟ್ ಸಂಸ್ಥೆ ಅಳವಡಿಸಿರುವ ಪೈಪ್‌ಲೈನ್‌ನಿಂದ ಡೀಸೆಲ್ ಕಳುವಾಗಿರುವುದು ವರದಿಯಾಗಿದೆ (ಪ್ರ.ವಾ., ಜುಲೈ 31). ಈ ಮೊದಲೂ ಅನೇಕ ಬಾರಿ ಇಂಥ ಪ್ರಕರಣಗಳು ದಾಖಲಾದರೂ ಕಾರಣಕರ್ತರು ಶಿಕ್ಷೆಗೆ ಒಳಗಾದರೇ ಅಥವಾ ನುಸುಳಿಕೊಂಡರೇ ಎಂಬ ಬಗ್ಗೆ ಯಾವ ವಿಷಯವೂ ಹೊರಗೆ ಬಂದಿಲ್ಲ. ಹಾಗಾಗಿ ಸಂಸ್ಥೆಯ ಸಿಬ್ಬಂದಿಯೂ ಇದರಲ್ಲಿ ಶಾಮೀಲಾಗಿರುವ ಸಾಧ್ಯತೆಯನ್ನು ಅಲ್ಲಗಳೆಯಲಾಗದು. ಹೀಗೆ ಅಕ್ರಮವಾಗಿ ಇಂಧನವನ್ನು ಸಂಗ್ರಹಿಸುವಾಗ ಬೆಂಕಿ ಅನಾಹುತ ಸಂಭವಿಸಿದರೆ ಅದರಿಂದ ಪರಿಸರ ಅಥವಾ ಸ್ಥಳೀಯ ನಿವಾಸಿಗಳ ಮೇಲಾಗುವ ಪರಿಣಾಮ ಎಂಥದ್ದು ಮತ್ತು ಇದಕ್ಕೆ ಬೆಲೆ ತೆರುವವರಾರು? ಕಟ್ಟುನಿಟ್ಟಿನ ನಿಯಮಗಳಿದ್ದರೂ ಈ ಪೈಪ್‌ಲೈನ್‌ಗೆ ಭದ್ರತೆ ಇಲ್ಲದಿರುವುದಕ್ಕೆ ಹೊಣೆ ಯಾರು?

ಗೋಪು ಗೋಖಲೆ, ಶಿಶಿಲ, ಬೆಳ್ತಂಗಡಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಸನಿಹದಲ್ಲಿದೆಯೇ ಮತ್ತೊಂದು ಅಲೆ?

ದೇಶದಾದ್ಯಂತ ಪ್ರತಿದಿನ ಪತ್ತೆಯಾಗುತ್ತಿದ್ದ ಕೋವಿಡ್ ಹೊಸ ಪ್ರಕರಣಗಳ ಸಂಖ್ಯೆಯಲ್ಲಿ ಸತತ 50 ದಿನ ಸ್ಥಿರತೆ ಕಂಡುಬಂದಿತ್ತು. ಆದರೆ ಜುಲೈ ಕೊನೆಯ ವಾರದಲ್ಲಿ ಹೊಸ ಪ್ರಕರಣಗಳ ಸಂಖ್ಯೆಯಲ್ಲಿ ತುಸು ಏರಿಕೆಯಾಗಿದೆ. ಎಲ್ಲಕ್ಕಿಂತ ಮುಖ್ಯವಾಗಿ ಕೋವಿಡ್ ದೃಢಪಡುವಿಕೆ ದರ (ಪಾಸಿಟಿವಿಟಿ) ಏರಿಕೆಯಾಗಿದೆ. ಇದು ಕೋವಿಡ್ 3ನೇ ಅಲೆಯ ಆರಂಭದ ಸೂಚನೆ ಎಂದು ವಿಶ್ಲೇಷಿಸಲಾಗುತ್ತದೆ. ಆದರೆ ಇದು ಕೋವಿಡ್‌ನ ಮೂರನೇ ಅಲೆ ಎಂದು ಸರ್ಕಾರ ಅಧಿಕೃತವಾಗಿ ಘೋಷಿಸಿಲ್ಲ. ಬದಲಿಗೆ, ಕೋವಿಡ್ ನಿಯಂತ್ರಣ ಕ್ರಮಗಳನ್ನು ಕಟ್ಟುನಿಟ್ಟಾಗಿ ಜಾರಿಗೆ ತರುವಂತೆ ರಾಜ್ಯ ಸರ್ಕಾರಗಳಿಗೆ ಸೂಚನೆ ನೀಡಿದೆ.



- ಜುಲೈ ಮೂರನೇ ವಾರದಲ್ಲಿ ದೇಶದಾದ್ಯಂತ ನಡೆಸಲಾಗುತ್ತಿದ್ದ ಕೋವಿಡ್ ಪತ್ತೆ ಪರೀಕ್ಷೆಗಳಲ್ಲಿ, ಪತ್ತೆಯಾಗುತ್ತಿದ್ದ ಪಾಸಿಟಿವ್ ಪ್ರಕರಣಗಳ ಪ್ರಮಾಣ ಶೇ 1.9-ಶೇ 2ರಷ್ಟಿತ್ತು
- ಜುಲೈ ನಾಲ್ಕನೇ ವಾರದ ಅಂತ್ಯದ ವೇಳೆಗೆ ದೇಶದಾದ್ಯಂತ ನಡೆಸಲಾದ ಕೋವಿಡ್ ಪತ್ತೆ ಪರೀಕ್ಷೆಗಳಲ್ಲಿ, ಪತ್ತೆಯಾದ ಪಾಸಿಟಿವ್ ಪ್ರಕರಣಗಳ ಪ್ರಮಾಣ ಶೇ 2.3- ಶೇ 2.8ರವರೆಗೆ ಏರಿಕೆಯಾಗಿದೆ
- ಜುಲೈ ಮೂರನೇ ವಾರದಲ್ಲಿ ಕೇರಳದಲ್ಲಿ ನಡೆಸಲಾಗುತ್ತಿದ್ದ ಕೋವಿಡ್ ಪತ್ತೆ ಪರೀಕ್ಷೆಗಳಲ್ಲಿ, ಪತ್ತೆಯಾಗುತ್ತಿದ್ದ ಪಾಸಿಟಿವ್ ಪ್ರಕರಣಗಳ ಪ್ರಮಾಣ ಶೇ 11ರಿಂದ ಶೇ 11.2ರಷ್ಟಿತ್ತು
- ಜುಲೈ ನಾಲ್ಕನೇ ವಾರದ ಅಂತ್ಯದ ವೇಳೆಗೆ ಕೇರಳದಲ್ಲಿ ನಡೆಸಲಾದ ಕೋವಿಡ್ ಪತ್ತೆ ಪರೀಕ್ಷೆಗಳಲ್ಲಿ, ಪತ್ತೆಯಾದ ಪಾಸಿಟಿವ್ ಪ್ರಕರಣಗಳ ಪ್ರಮಾಣ ಶೇ 12.3- ಶೇ 13ರವರೆಗೆ ಏರಿಕೆಯಾಗಿದೆ



- ಜುಲೈ ಮೂರನೇ ವಾರದಲ್ಲಿ ಕೇರಳದಲ್ಲಿ ಪ್ರತಿದಿನ ಪತ್ತೆಯಾದ ಹೊಸ ಪ್ರಕರಣಗಳ ಸರಾಸರಿ ಸಂಖ್ಯೆ 12,000ದಷ್ಟು ಇತ್ತು. ಜುಲೈ ನಾಲ್ಕನೇ ವಾರದಲ್ಲಿ ಪ್ರತಿದಿನ ಪತ್ತೆಯಾಗುತ್ತಿರುವ ಹೊಸ ಪ್ರಕರಣಗಳ ಸರಾಸರಿ ಸಂಖ್ಯೆ 21,000ಕ್ಕೆ ಏರಿಕೆಯಾಗಿದೆ
- ಜುಲೈ ಮೂರನೇ ವಾರದಲ್ಲಿ ದೇಶದಲ್ಲಿ ಪ್ರತಿದಿನ ಪತ್ತೆಯಾದ ಹೊಸ ಪ್ರಕರಣಗಳ ಸರಾಸರಿ ಸಂಖ್ಯೆ 37,600ದಷ್ಟು ಇತ್ತು. ಜುಲೈ ನಾಲ್ಕನೇ ವಾರದಲ್ಲಿ ಪ್ರತಿದಿನ ಪತ್ತೆಯಾಗುತ್ತಿರುವ ಹೊಸ ಪ್ರಕರಣಗಳ ಸರಾಸರಿ ಸಂಖ್ಯೆ 40,800ಕ್ಕೆ ಏರಿಕೆಯಾಗಿದೆ

ಆಧಾರ: ಪಿಟಿಐ, ಕೇಂದ್ರ ಆರೋಗ್ಯ ಸಚಿವಾಲಯ, ಕೋವಿಡ್19ಇಂಡಿಯಾ.ಒಆರ್‌ಜಿ — ಪ್ರಜಾವಾಣಿ ಗ್ರಾಫಿಕ್ಸ್

ಎರಡನೇ ಮತ್ತು ಮೂರನೇ ಅಲೆಯ ಸಾಮ್ಯ

ವಿಶ್ವದಲ್ಲಿ ಕೋವಿಡ್‌ನ ಎರಡನೇ ಅಲೆ ಆರಂಭವಾದ ನಂತರದ ಕೆಲವೇ ವಾರಗಳಲ್ಲಿ ಭಾರತದಲ್ಲೂ ಎರಡನೇ ಅಲೆ ಆರಂಭವಾಗಿತ್ತು. ವಿಶ್ವದಲ್ಲಿ ಎರಡನೇ ಅಲೆ ತೀವ್ರವಾಗಿದ್ದ ಅವಧಿಯಲ್ಲಿ ಅಮೆರಿಕ, ಬ್ರಿಟನ್, ಬ್ರೆಜಿಲ್ ಮತ್ತು ಯೂರೋಪ್‌ನ ಹಲವು ದೇಶಗಳಲ್ಲಿ ಅತಿಹೆಚ್ಚು ಪ್ರಕರಣಗಳು ಪತ್ತೆಯಾಗುತ್ತಿದ್ದವು. ಈ ದೇಶಗಳಲ್ಲಿ ಎರಡನೇ ಅಲೆಯಲ್ಲಿ ಪ್ರತಿದಿನ ಪತ್ತೆಯಾಗುತ್ತಿದ್ದ ಪ್ರಕರಣಗಳ ಸಂಖ್ಯೆ ಗರಿಷ್ಠಮಟ್ಟ ಮುಟ್ಟಿದ ಮೇಲೆ ಭಾರತದಲ್ಲಿ ಕೋವಿಡ್‌ನ ಎರಡನೇ ಅಲೆ ತೀವ್ರತೆ ಪಡೆಯಲು ಆರಂಭವಾಗಿತ್ತು.

ಈ ದೇಶಗಳಲ್ಲಿ ಕೋವಿಡ್‌ನ ಎರಡನೇ ಅಲೆಯಲ್ಲಿ ಪ್ರತಿದಿನ ಪತ್ತೆಯಾಗುತ್ತಿದ್ದ ಹೊಸ ಪ್ರಕರಣಗಳ ಸಂಖ್ಯೆ ಇಳಿಕೆಯಾಗಲು ಆರಂಭವಾದ ನಂತರ ಭಾರತದಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಭಾರಿ ಪ್ರಮಾಣದಲ್ಲಿ ಏರಿಕೆಯಾಗುತ್ತಿತ್ತು. ಈ ಎಲ್ಲಾ ದೇಶಗಳಲ್ಲಿ ಪ್ರತಿದಿನ ಪತ್ತೆಯಾಗುತ್ತಿದ್ದ ಹೊಸ ಪ್ರಕರಣಗಳ ಸಂಖ್ಯೆಯಲ್ಲಿ ಇಳಿಕೆಯಾದರೂ, ಭಾರತದಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಏರಿಕೆಯಾಗುತ್ತಲೇ ಇತ್ತು.

ತೀವ್ರತೆ ಕಡಿಮೆ: ಅಕ್ಟೋಬರ್‌ನಲ್ಲಿ ಗರಿಷ್ಠ ಮಟ್ಟಕ್ಕೆ

'ಭಾರತದಲ್ಲಿ ಕೋವಿಡ್ ಮೂರನೇ ಅಲೆಯ ತೀವ್ರತೆ ಕಡಿಮೆ ಇರಲಿದೆ. ತೀವ್ರತೆ ಗರಿಷ್ಠಮಟ್ಟ ತಲುಪಿದ ವೇಳೆಯಲ್ಲಿ ನಿಯಂತ್ರಣ ಕ್ರಮಗಳು ಪರಿಣಾಮಕಾರಿಯಾಗಿದ್ದರೆ ಪ್ರತಿದಿನ 1 ಲಕ್ಷಕ್ಕಿಂತಲೂ ಕಡಿಮೆ ಪ್ರಕರಣಗಳು ಪತ್ತೆಯಾಗಬಹುದು. ನಿಯಂತ್ರಣ ಕ್ರಮ ಪರಿಣಾಮಕಾರಿಯಾಗಿಲ್ಲದೇ ಇದ್ದರೆ, ಪ್ರತಿದಿನ ಗರಿಷ್ಠ 1.5 ಲಕ್ಷ ಹೊಸ ಪ್ರಕರಣಗಳು ಪತ್ತೆಯಾಗಬಹುದು. ಗಣಿತೀಯ ಮಾದರಿ ಲೆಕ್ಕಾಚಾರಗಳ ಪ್ರಕಾರ ಮೂರನೇ ಅಲೆಯು ಅಕ್ಟೋಬರ್‌ನಲ್ಲಿ ಗರಿಷ್ಠಮಟ್ಟ ಮುಟ್ಟಬಹುದು' ಎಂದು ಹೈದರಾಬಾದ್ ಐಐಟಿಯ ಸಂಶೋಧಕ ಎಂ.ವಿದ್ಯಾಸಾಗರ್ ಮತ್ತು ಕಾನ್ಪುರ ಐಐಟಿ ಸಂಶೋಧಕ ಮಣೀಂದ್ರ ಅಗರ್‌ವಾಲ್ ಅವರು ಹೇಳಿದ್ದಾರೆ.

ಎರಡನೇ ಅಲೆಯು ತೀವ್ರವಾಗಿರಲಿದೆ ಎಂದು ಈ ಇಬ್ಬರೂ ಸಂಶೋಧಕರು ತಮ್ಮ ಗಣಿತೀಯ ಮಾದರಿ ಲೆಕ್ಕಾಚಾರಗಳ ಪ್ರಕಾರ ವರದಿ ನೀಡಿದ್ದರು. 'ಮೂರನೇ ಅಲೆಯ ಅವಧಿ ದೀರ್ಘವಾಗಿದ್ದರೂ, ತೀವ್ರತೆ ಕಡಿಮೆ ಇರಲಿದೆ' ಎಂದು ಅವರು ಹೇಳಿದ್ದಾರೆ.

ಕೋವಿಡ್ ಎರಡನೇ ಅಲೆಯಲ್ಲಿ ಭಾರತದಲ್ಲಿ ಮೊದಲು ಪತ್ತೆಯಾದ ಡೆಲ್ಟಾ ತಳಿಯು ಈಗ ವಿಶ್ವದ 88ಕ್ಕೂ ಹೆಚ್ಚು ದೇಶಗಳಲ್ಲಿ ಹರಡಿದೆ.

ಈ ದೇಶಗಳಲ್ಲಿ ಕೋವಿಡ್ ಮೂರನೇ ಅಲೆ ತೀವ್ರವಾಗಲು ಡೆಲ್ಟಾ ತಳಿಯೇ ಪ್ರಧಾನ ಕಾರಣವಾಗಲಿದೆ ಎಂದು ವಿಶ್ವ ಆರೋಗ್ಯ ಸಂಸ್ಥೆ ಜುಲೈ ಎರಡನೇ ವಾರದ ಆರಂಭದಲ್ಲಿ ಹೇಳಿತ್ತು.

ಅಮೆರಿಕದಲ್ಲಿ ಈಗ ಪ್ರತಿದಿನ 90,000ಕ್ಕೂ ಹೆಚ್ಚು ಹೊಸ ಪ್ರಕರಣಗಳು ಪತ್ತೆಯಾಗುತ್ತಿವೆ. ಬ್ರೆಜಿಲ್‌ನಲ್ಲಿ ಪ್ರತಿದಿನ 40,000ಕ್ಕೂ ಹೆಚ್ಚು ಪ್ರಕರಣಗಳು ಪತ್ತೆಯಾಗುತ್ತಿವೆ. ಬ್ರಿಟನ್‌ನಲ್ಲಿ ಪ್ರತಿದಿನ 35-40 ಸಾವಿರ ಹೊಸ ಪ್ರಕರಣಗಳು ಪತ್ತೆಯಾಗುತ್ತಿವೆ. ರಷ್ಯಾ, ಆಸ್ಟ್ರೇಲಿಯಾ, ಚೀನಾ ಮತ್ತು ಆಗ್ನೇಯ ಏಷ್ಯಾದ ಹಲವು ದೇಶಗಳಲ್ಲಿ ಕೋವಿಡ್‌ನ ಮೂರನೇ ಅಲೆ ತೀವ್ರತೆ ಪಡೆಯುತ್ತಿದೆ.

ಭಾರತದಲ್ಲಿ ಕೋವಿಡ್‌ನ ಮೂರನೇ ಅಲೆಯು ಈಗ ಆರಂಭಿಕ ಹಂತದಲ್ಲಿದೆ ಎಂದು ಗುರುತಿಸಲಾಗಿದೆ. ಮೇಲೆ ಹೇಳಲಾದ ದೇಶಗಳಲ್ಲಿ ಕೋವಿಡ್‌ನ ಮೂರನೇ ಅಲೆ ಗರಿಷ್ಠಮಟ್ಟ ಮುಟ್ಟುವ ವೇಳೆಗೆ ಭಾರತದಲ್ಲಿ ಮೂರನೇ ಅಲೆಯ ತೀವ್ರತೆ ಆರಂಭವಾಗಲಿದೆ ಎನ್ನಲಾಗಿದೆ.

- ವಿಶ್ವದ ಹಲವು ದೇಶಗಳಲ್ಲಿ 2020ರ ಡಿಸೆಂಬರ್-2021ರ ಜನವರಿ, ಫೆಬ್ರುವರಿಯಲ್ಲಿ ಕೋವಿಡ್‌ನ ಎರಡನೇ ಅಲೆ ಗರಿಷ್ಠಮಟ್ಟದಲ್ಲಿ ಇತ್ತು. ಆನಂತರದ ದಿನಗಳಲ್ಲಿ ಇಳಿಕೆಯತ್ತ ಸಾಗಿತ್ತು
- ಭಾರತದಲ್ಲಿ 2021ರ ಮಾರ್ಚ್ ನಂತರ ಕೋವಿಡ್‌ನ ಮೂರನೇ ಅಲೆ ಆರಂಭವಾಗಿತ್ತು. ಏಪ್ರಿಲ್‌ನಲ್ಲಿ ತೀವ್ರ ಸ್ವರೂಪ ಪಡೆದಿತ್ತು. ಜೂನ್ ಮೊದಲ ವಾರದ ನಂತರ ಇಳಿಕೆಯತ್ತ ಸಾಗಿತ್ತು
- ಜೂನ್ ಅಂತ್ಯ ಮತ್ತು ಜುಲೈ ಮೊದಲ ವಾರದಲ್ಲಿ ವಿಶ್ವದ ಹಲವೆಡೆ ಕೋವಿಡ್ ಮೂರನೇ ಅಲೆ ಕಾಣಿಸಿಕೊಂಡಿದೆ. ಆಗಸ್ಟ್ ಮೂರನೇ ವಾರದ ವೇಳೆಗೆ ಇದು ತೀವ್ರ ಸ್ವರೂಪ ಪಡೆಯಲಿದೆ ಎಂದು ಅಂದಾಜಿಸಲಾಗಿದೆ
- ಭಾರತದಲ್ಲಿ ಆಗಸ್ಟ್ ಅಂತ್ಯ ಮತ್ತು ಸೆಪ್ಟೆಂಬರ್ ಆರಂಭದಲ್ಲಿ ಕೋವಿಡ್‌ನ ಮೂರನೇ ಅಲೆ ಏರಿಕೆಯಾಗಲಿದ್ದು, ಅಕ್ಟೋಬರ್‌ನಲ್ಲಿ ಗರಿಷ್ಠಮಟ್ಟ ಮುಟ್ಟಲಿದೆ ಎಂದು ಅಂದಾಜಿಸಲಾಗಿದೆ

ಎದುರಿಸಲು ಹಲವು ಕ್ರಮ

ದೇಶವು ಕೋವಿಡ್ ಮೂರನೇ ಅಲೆಯ ಹೊಡೆತ ಎದುರಿಸಲು ಸಿದ್ಧತೆ ನಡೆಸುತ್ತಿದೆ. ಜನದಟ್ಟಣೆ ನಿರ್ಬಂಧಿಸುವುದು ಒಂದು ಕ್ರಮವಾದರೆ, ಸೋಂಕಿತರಿಗೆ ಚಿಕಿತ್ಸೆ ನೀಡಲು ಬೇಕಿರುವ ಅಗತ್ಯ ವೈದ್ಯಕೀಯ ಮೂಲಸೌಕರ್ಯಗಳನ್ನು ಸನ್ನದ್ಧ ಸ್ಥಿತಿಯಲ್ಲಿಡುವುದು ಮತ್ತೊಂದು ಕ್ರಮ. ಈ ಎರಡೂ ನಿಟ್ಟಿನಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಈಗಾಗಲೇ ಕಾರ್ಯಪ್ರವೃತ್ತವಾಗಿವೆ. ಕೇಂದ್ರ ಸರ್ಕಾರವು ವೈದ್ಯಕೀಯ ಮೂಲಸೌಕರ್ಯ, ಔಷಧಿ ಪೂರೈಕೆಯತ್ತ ಗಮನ ಹರಿಸಿದ್ದರೆ, ರಾಜ್ಯಗಳು ಸ್ಥಳೀಯವಾಗಿ ನಿರ್ಬಂಧ ವಿಧಿಸುವ, ಆಸ್ಪತ್ರೆಗಳನ್ನು ಸಜ್ಜುಗೊಳಿಸುವ ಕೆಲಸ ಮಾಡುತ್ತಿವೆ.

ಕರ್ನಾಟಕ ಸೇರಿ 10 ರಾಜ್ಯಗಳ 52 ಜಿಲ್ಲೆಗಳಲ್ಲಿ ಕಟ್ಟೆಚ್ಚರಕ್ಕೆ ಕೇಂದ್ರ ಸರ್ಕಾರ ಸೂಚಿಸಿದೆ. ಇದರ ಬೆನ್ನಲ್ಲೇ ಕರ್ನಾಟಕದ ಜಿಲ್ಲಾಡಳಿತಗಳು ಕೋವಿಡ್ ಮಾರ್ಗಸೂಚಿಗಳನ್ನು ಜಾರಿಗೆ ತಂದಿವೆ. ಸೋಂಕು ಅಧಿಕವಾಗಿರುವ ನೆರೆಯ ಕೇರಳ, ಮಹಾರಾಷ್ಟ್ರದಿಂದ ರಾಜ್ಯಕ್ಕೆ ಬರುವವರಿಗೆ ಕೋವಿಡ್ ನೆಗೆಟಿವ್ ವರದಿ ಕಡ್ಡಾಯ ಮಾಡಲಾಗಿದೆ. ಕೇರಳಕ್ಕೆ ಒಂದು ವಾರ ಬಸ್ ಸಂಚಾರ ಸ್ಥಗಿತಗೊಳಿಸಲಾಗಿದೆ. ಮದುವೆ ಮೊದಲಾದ ಸಮಾರಂಭಗಳಿಗೆ 100ಕ್ಕಿಂತ ಹೆಚ್ಚು ಜನ, ಅಂತ್ಯಸಂಸ್ಕಾರಕ್ಕೆ 20ಕ್ಕಿಂತ ಹೆಚ್ಚು ಜನ ಸೇರದಂತೆ ನಿರ್ಬಂಧಿಸಲಾಗಿದೆ. ಯಾವುದೇ ಧಾರ್ಮಿಕ, ರಾಜಕೀಯ ಸಮ್ಮೇಳನಗಳನ್ನು ನಡೆಸುವಂತಿಲ್ಲ. ರಾತ್ರಿ ಕರ್ಫ್ಯೂ ಮತ್ತು ವಾರಾಂತ್ಯ ಕರ್ಫ್ಯೂ ಹೇರಿಕೆಯ ಚಿಂತನೆ ಇದೆ.

ಪಕ್ಕದ ತಮಿಳುನಾಡಿನಲ್ಲೂ ಪ್ರಕರಣಗಳು ಏರುತ್ತಿದ್ದು, ಸ್ಥಳೀಯವಾಗಿ ಕಂಟೇನ್ಮೆಂಟ್ ವಲಯ ಜಾರಿಗೊಳಿಸಲು ಸರ್ಕಾರ ನಿರ್ಧರಿಸಿದೆ.

ಜನದಟ್ಟಣೆ ತಪ್ಪಿಸಲು ಪ್ರಸಿದ್ಧ ದೇವಸ್ಥಾನಗಳನ್ನು ಮುಚ್ಚುವಂತೆ ಆದೇಶಿಸಿದೆ. ಜನದಟ್ಟಣೆಯ ಮಾರುಕಟ್ಟೆಗಳನ್ನು ಆಗಸ್ಟ್ 9ರವರೆಗೆ ಮುಚ್ಚಲಾಗಿದೆ. ಇತರ ರಾಜ್ಯಗಳಲ್ಲೂ ಕಠಿಣ ನಿರ್ಬಂಧಗಳನ್ನು ಹಂತಹಂತವಾಗಿ ವಿಧಿಸಲಾಗುತ್ತಿದೆ.

ಕೋವಿಡ್ ಎರಡನೇ ಅಲೆಯಲ್ಲಿ ಬಹುವಾಗಿ ಕಾಡಿದ್ದು ವೈದ್ಯಕೀಯ ಆಮ್ಲಜನಕ ಕೊರತೆ. ಈ ಬಾರಿ ಕೊರತೆಯಾಗದಂತೆ ಸರ್ಕಾರ ಹೆಚ್ಚು ಒತ್ತು ನೀಡಿದೆ. ವೈದ್ಯಕೀಯ ಆಮ್ಲಜನಕ ಉತ್ಪಾದನೆಯನ್ನು ಗಣನೀಯವಾಗಿ ಹೆಚ್ಚಿಸಲಾಗಿದೆ. ನಿತ್ಯ 5,700 ಟನ್ ಇದ್ದ ಉತ್ಪಾದನೆಯು 9,690 ಟನ್‌ಗೆ ಏರಿಕೆಯಾಗಿದೆ. ಆಸ್ಪತ್ರೆಗಳಲ್ಲೇ ಆಮ್ಲಜನಕ ಉತ್ಪಾದನೆ ಘಟಕಗಳನ್ನು ನಿರ್ಮಿಸುವ ಕೆಲಸ ನಡೆಯುತ್ತಿದೆ.

ಕೋವಿಡ್ ಚಿಕಿತ್ಸೆಗೆ ಬಳಸುವ ಔಷಧಿಗಳ ಸುಗಮ ಪೂರೈಕೆಯನ್ನು ಮೇಲ್ವಿಚಾರಣೆ ಮಾಡಲು ಔಷಧ ಇಲಾಖೆಯಲ್ಲಿ ಕೋವಿಡ್ ಡ್ರಗ್ಸ್ ಮ್ಯಾನೇಜ್‌ಮೆಂಟ್ ಸೆಲ್ (ಸಿಡಿಎಂಸಿ) ಸ್ಥಾಪಿಸಲಾಗಿದೆ. ರೆಮ್‌ಡಿಸಿವಿರ್ ಉತ್ಪಾದನಾ ಸಾಮರ್ಥ್ಯವನ್ನು ತಿಂಗಳಿಗೆ 38 ಲಕ್ಷ ಬಾಟಲಿಗಳಿಂದ ತಿಂಗಳಿಗೆ 1.22 ಕೋಟಿ ಬಾಟಲಿಗಳಿಗೆ ಹೆಚ್ಚಿಸಲಾಗಿದೆ.

ರಾಜ್ಯಸಭೆಯಲ್ಲಿ ಸೋಮವಾರವೂ ಗದ್ದಲ ನಡೆಯಿತು

ಪೆಗಾಸಸ್ ಪ್ರಕರಣ: ಇಂದು ಸಭೆ

ಹೋರಾಟದ ಬಲಕ್ಕಾಗಿ ರಾಹುಲ್ ಚಹಾಕೂಟ

ಪ್ರಜಾವಾಣಿ ವಾರ್ತೆ

ನವದೆಹಲಿ: ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರದ ವಿರುದ್ಧದ ಹೋರಾಟವನ್ನು ಇನ್ನಷ್ಟು ಸುಸಂಘಟಿತಗೊಳಿಸಲು ಕಾಂಗ್ರೆಸ್ ಸಂಸದ ರಾಹುಲ್ ಗಾಂಧಿ ಮುಂದಾಗಿದ್ದಾರೆ. ಸಮಾನಮನಸ್ಕ ಪಕ್ಷಗಳ ಜತೆಗಿನ ತಮ್ಮ ಒಡನಾಟವನ್ನು ಅವರು ಹೆಚ್ಚಿಸಿದ್ದಾರೆ. ವಿರೋಧ ಪಕ್ಷಗಳ ಸಂಸದರಿಗೆ ರಾಹುಲ್ ಅವರು ಮಂಗಳವಾರ ಬೆಳಿಗ್ಗೆ ಚಹಾಕೂಟ ಏರ್ಪಡಿಸಿದ್ದಾರೆ.

ಪೆಗಾಸಸ್ ಕುತಂತ್ರಾಂಶ ಬಳಸಿ ಗೂಢಚರ್ಯೆ ನಡೆಸಲಾಗಿದೆ ಎಂಬ ಪ್ರಕರಣದ ಬಗ್ಗೆ ಚರ್ಚೆಗೆ ವಿರೋಧ ಪಕ್ಷಗಳು ಪಟ್ಟು ಹಿಡಿದಿರುವುದರಿಂದ ಸಂಸತ್ ಕಲಾಪಕ್ಕೆ ಬಿಕ್ಕಟ್ಟು ಎದುರಾಗಿದೆ. ಪೆಗಾಸಸ್ ಪ್ರಕರಣವು ಚರ್ಚೆ ನಡೆಸುವಂತಹ ಪ್ರಕರಣವೇ ಅಲ್ಲ ಎಂದು ಸರ್ಕಾರ ಹೇಳುತ್ತಿದೆ. ಈ ಹಿನ್ನೆಲೆಯಲ್ಲಿ, ರಾಹುಲ್ ಅವರು ಏರ್ಪಡಿಸಿರುವ ಚಹಾಕೂಟವು ಮಹತ್ವ ಪಡೆದಿದೆ. ರಾಹುಲ್ ಅವರು ವಿರೋಧ ಪಕ್ಷಗಳ ಸಂಸದರಿಗೆ ಚಹಾಕೂಟ ಏರ್ಪಡಿಸಿದ್ದು ಇದೇ ಮೊದಲು.

ಲೋಕಸಭೆಯಲ್ಲಿ ವಿರೋಧ ಪಕ್ಷಗಳ ನಾಯಕರ ಜತೆಗೆ ರಾಹುಲ್ ಅವರು ಜುಲೈ 27ರಂದು ಸಭೆ ನಡೆಸಿದ್ದರು. ರಾಜ್ಯಸಭೆಯಲ್ಲಿ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ನಾಯಕತ್ವದಲ್ಲಿ ಎರಡೂ ಸದನಗಳಲ್ಲಿ ವಿವಿಧ ಪಕ್ಷಗಳ ಸದನ ನಾಯಕರ ಜತೆಗೆ ಜುಲೈ 28ರಂದು ನಡೆದ ಸಭೆಯಲ್ಲಿಯೂ ರಾಹುಲ್ ಭಾಗಿಯಾಗಿದ್ದರು. ಪೆಗಾಸಸ್ ವಿಚಾರದಲ್ಲಿ ಸರ್ಕಾರದ ವಿರುದ್ಧದ ಹೋರಾಟವನ್ನು ಇನ್ನಷ್ಟು ಮುಂದಕ್ಕೆ ಒಯ್ಯಲು ಮಂಗಳವಾರದ ಸಭೆಯು ನೆರವಾಗಬಹುದು ಎಂದು ವಿಶ್ಲೇಷಿಸಲಾಗಿದೆ.

ಸಂಸತ್ತಿನಲ್ಲಿ ಚರ್ಚೆ ಇಲ್ಲದೆ ಮತ್ತು ಸಂಸದೀಯ ಸ್ಥಾಯಿ ಸಮಿತಿಯ ಪರಿಶೀಲನೆ ಇಲ್ಲದೆ ಮಸೂದೆಗಳನ್ನು ಅಂಗೀಕರಿಸಲು ಈಗಿನ ಬಿಕ್ಕಟ್ಟನ್ನು ಸರ್ಕಾರ ಬಳಸಿಕೊಳ್ಳುತ್ತಿದೆ ಎಂಬ ಭಾವನೆಯು ವಿರೋಧ ಪಕ್ಷಗಳ ಕೆಲವರಲ್ಲಿ ಇದೆ.

ಪುರಿ ವಿರುದ್ಧ ದೂರು

ಪೆಟ್ರೋಲಿಯಂ ಸಚಿವ ಹರದೀಪ್ ಪುರಿ ಅವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂಬ ಒತ್ತಡವನ್ನು ತೃಣಮೂಲ ಕಾಂಗ್ರೆಸ್ (ಟಿಎಂಸಿ) ಹೆಚ್ಚಿಸಿದೆ. ಈಗ ಅಮಾನತಾಗಿರುವ ರಾಜ್ಯಸಭಾ ಸದಸ್ಯ ಡಾ. ಶಂತನು ಅವರನ್ನು ಪುರಿ ನಿಂದಿಸಿದ್ದಾರೆ ಮತ್ತು ಅವರಿಗೆ ಬೆದರಿಕೆ ಒಡ್ಡಿದ್ದಾರೆ ಎಂದು ಟಿಎಂಸಿ ಆರೋಪಿಸಿದೆ. ರಾಜ್ಯಸಭೆಯ ಸಭಾಪತಿ ವೆಂಕಯ್ಯ ನಾಯ್ಡು ಅವರ ಮುಂದೆ 12 ಸಂಸದರನ್ನು ಸಾಕ್ಷಿಗಳಾಗಿ ಹಾಜರುಪಡಿಸಲಾಗಿದೆ.

ಟಿಎಂಸಿ ಹಾಜರುಪಡಿಸಿರುವ ಸಂಸದರಲ್ಲಿ ಕಾಂಗ್ರೆಸ್‌ನ ಪಿ. ಚಿದಂಬರಂ, ದಿಗ್ವಿಜಯ್ ಸಿಂಗ್, ಅಮೀ ಯಾಜ್ಞಿ ಮತ್ತು ಶಕ್ತಿಸಿಂಗ್ ಗೋಹಿಲ್, ಎಸ್‌ಪಿಯ ರಾಮಗೋಪಾಲ್ ಯಾದವ್, ಡಿಎಂಕೆಯ ತಿರುಚ್ಚಿ ಶಿವಾ, ಎಂಡಿಎಂಕೆಯ ವೈಕೊ, ಆರ್‌ಜೆಡಿಯ ಮನೋಜ್ ಕೆ. ಝಾ, ಎಡಪಕ್ಷಗಳ ವಿಕಾಸ್ ರಂಜನ್ ಭಟ್ಟಾಚಾರ್ಯ ಮತ್ತು ಎಲಮರಂ ಕರೀಮ್ ಇದ್ದಾರೆ.

ಮಾಹಿತಿ ತಂತ್ರಜ್ಞಾನ ಸಚಿವ ಅಶ್ವಿನಿ ವೈಷ್ಣವ್ ಅವರ ಕೈಯಲ್ಲಿದ್ದ ಪೆಗಾಸಸ್ ಪ್ರಕರಣ ಕುರಿತ ಹೇಳಿಕೆಯ ಪ್ರತಿಯನ್ನು ಕಸಿದುಕೊಂಡು ಹರಿದು ಹಾಕಿದ ಆರೋಪದಲ್ಲಿ ಶಂತನು ಅವರನ್ನು ಜುಲೈ 22ರಂದು ಅಮಾನತು ಮಾಡಲಾಗಿದೆ.

ಹೇಳಿಕೆ ಹರಿದು ಹಾಕಿದ ಪ್ರಕರಣದ ನಂತರ ಪುರಿ ಅವರು ಶಂತನು ಅವರತ್ತ ಧಾವಿಸಿದ್ದರು. ಆಕ್ರಮಣಶೀಲರಾಗಿ ಮುನ್ನುಗ್ಗಿದ್ದ ಪುರಿ ಅವರನ್ನು ಮಾರ್ಷಲ್‌ಗಳು ತಡೆದರು. ಹಾಗಿದ್ದರೂ, 'ಪರಿಣಾಮ ನೆಟ್ಟಗಿರುವುದಿಲ್ಲ' ಎಂದು ಬೆದರಿಕೆ ಹಾಕಿದ್ದರು ಎಂದು ಆರೋಪಿಸಲಾಗಿದೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಕೇಂದ್ರ ನಾಗರಿಕ ವಿಮಾನಯಾನ ಸಚಿವಾಲಯವು ಇತ್ತೀಚೆಗೆ ಟ್ವೀಟ್ ಮಾಡಿದ ವಿಮಾನ ನಿಲ್ದಾಣದ ಚಿತ್ರಗಳ ಬಗ್ಗೆ ಚರ್ಚೆ ನಡೆಯುತ್ತಿದೆ. ಟ್ವೀಟ್‌ನಲ್ಲಿರುವ ಮೂರು ಚಿತ್ರಗಳು ಚೆನ್ನೈ ವಿಮಾನ ನಿಲ್ದಾಣದ ಅದ್ಭುತ ವಿನ್ಯಾಸ ಹಾಗೂ ಸ್ವಚ್ಛತೆ ಬಗ್ಗೆ ಗಮನ ಸೆಳೆದಿವೆ. 'ಅದ್ಭುತ ಭಾರತೀಯ ವಿಮಾನ ನಿಲ್ದಾಣಗಳು! ಏಷ್ಯಾದ ಡೆಟ್ರಾಯಿಟ್ ಎಂದು ಖ್ಯಾತಿ ಪಡೆದಿರುವ ಚೆನ್ನೈನ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವು ಪ್ರಯಾಣಿಕರ ದಟ್ಟಣೆಯ ದೃಷ್ಟಿಯಿಂದ ಭಾರತದ ನಾಲ್ಕನೇ ಅತ್ಯಂತ ಜನನಿಬಿಡ ವಿಮಾನ ನಿಲ್ದಾಣ ಎನಿಸಿದೆ. 2020ನೇ ಇಸವಿಯಲ್ಲಿ ಚೆನ್ನೈ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವು ಸುಮಾರು 2.2 ಕೋಟಿ ಪ್ರಯಾಣಿಕರನ್ನು ನಿರ್ವಹಿಸಿದೆ' ಎಂದು ಟ್ವೀಟ್‌ನಲ್ಲಿ ಹೇಳಲಾಗಿದೆ.

ಸಚಿವಾಲಯದ ಟ್ವೀಟ್‌ಗೆ ಹಲವು ಸಾಮಾಜಿಕ ಜಾಲತಾಣ ಬಳಕೆದಾರರು ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಮೂರು ಚಿತ್ರಗಳ ಪೈಕಿ ಒಂದು ಚಿತ್ರವು ಚೆನ್ನೈ ವಿಮಾನ ನಿಲ್ದಾಣದ್ದಲ್ಲ ಎಂದು ಪ್ರತಿಕ್ರಿಯಿಸಿದ್ದಾರೆ. ಲಾಜಿಕಲ್ ಫ್ಯಾಕ್ಟ್ ಚೆಕ್ ತಂಡವು ರಿವರ್ಸ್ ಇಮೇಜ್ ಮೂಲಕ ಪರಿಶೀಲಿಸಿದಾಗ, ಸಚಿವಾಲಯ ಪ್ರಕಟಿಸಿದ ಒಂದು ಚಿತ್ರವು ಬ್ಯಾಂಕಾಕ್ ವಿಮಾನ ನಿಲ್ದಾಣದ್ದು ಎಂಬುದು ದೃಢಪಟ್ಟಿದೆ. ಹಲವಾರು ಬಳಕೆದಾರರು ಈ ಬಗ್ಗೆ ಪ್ರತಿಕ್ರಿಯಿಸಿದ್ದರಿಂದ, ಸಚಿವಾಲಯವು ಚೆನ್ನೈಗೆ ಸೇರಿದ ಎರಡು ಚಿತ್ರಗಳನ್ನು ಉಳಿಸಿಕೊಂಡು ಬ್ಯಾಂಕಾಕ್ ವಿಮಾನ ನಿಲ್ದಾಣದ ಚಿತ್ರವನ್ನು ತೆಗೆದುಹಾಕಿದೆ.

ಗುಂಡಣ್ಣ

ಬೆರಗಿನ ಬೆಳಕು

ಗುರುರಾಜ ಕರಜಗಿ

ಅಮೃತವಾದ ಕ್ಷಣಗಳು

ಕ್ಷಣವದೊಂದೆ ಅನಂತಕಾಲ ತಾನಾಗುವುದು |
ಅನುಭವಕೆ ಸತ್ತ್ವ ಶಿವ ಸುಂದರಗಳಮರೆ ||
ಮನ ತುಂಬುಶಶಿಯಾಗಿ, ನೆನಪಮೃತವಾಗುವುದು |
ಕ್ಷಣದೊಳಕ್ಷಯ ಕಾಣೊ – ಮಂಕುತಿಮ್ಮ || 445 ||

ಪದ-ಅರ್ಥ: ಕ್ಷಣವದೊಂದೆ = ಕ್ಷಣವು + ಅದು + ಒಂದೆ, ಸುಂದರಗಳಮರೆ = ಸುಂದರಗಳು + ಅಮರೆ(ಅಂಟಿಕೊಂಡರೆ), ನೆನಪಮೃತವಾಗುವುದು = ನೆನಪು + ಅಮೃತವಾಗುವುದು, ಕ್ಷಣದೊಳಕ್ಷಯ = ಕ್ಷಣದೊಳು + ಅಕ್ಷಯ.

ವಾಚ್ಯಾರ್ಥ: ಯಾವ ಅನುಭವಕ್ಕೆ ಸತ್ತ್ವ, ಶಿವ, ಸುಂದರತೆಗಳ ಸಂಪರ್ಕವಾಗುವುದೋ, ಅದೊಂದೇ ಕ್ಷಣ ಅನಂತವಾಗುವುದು. ಮನಸ್ಸು ಪೂರ್ಣಿಮೆಯ ಚಂದ್ರನ ಬೆಳಕಿನಂತೆ ತಂಪಾಗುತ್ತದೆ, ನೆನಪು ಅಮೃತವಾಗುತ್ತದೆ. ಹೀಗೆ ಪ್ರತಿಯೊಂದು ಕ್ಷಣ ಅಕ್ಷಯವಾಗುತ್ತದೆ.

ವಿವರಣೆ: ನಾನೊಮ್ಮೆ ಬದರಿನಾಥನಲ್ಲಿದ್ದೆ. ಬೆಳಿಗ್ಗೆ ಎದ್ದು ಹಿಮಾಚ್ಛಾದಿತವಾದ ಪರ್ವತಗಳನ್ನು ನೋಡುತ್ತ ನಿಂತಿದ್ದೆ. ಆಗ ಸೂರ್ಯೋದಯವಾಯಿತು. ಒಂದರೆಕ್ಷಣದಲ್ಲಿ ನಾನು ನೋಡುತ್ತಿದ್ದ ಹಿಮಶಿಖರಗಳಿಗೆ ಬೆಂಕಿ ಹೊತ್ತಿ ಧಗಧಗನೆ ಉರಿಯುವಂತೆ ಕಂಡಿತು. ನಾನು ಬೆರಗಾಗಿ ನೋಡುತ್ತಿದ್ದಂತೆ ಆ ಬೆಂಕಿಯ ಜ್ವಾಲೆಗಳು ನಿಧಾನಕ್ಕೆ ಕರಗಿದರೂ ಶಿಖರಗಳು ಹೊನ್ನ ಕಳಶಗಳಂತೆ ಹೊಳೆಯತೊಡಗಿದವು. ಇದು ಬೆಳಕಿನ ಸೂರ್ಯಕಿರಣಗಳು ಹಿಮದ ಕೋಡುಗಳ ಮೇಲೆ ಬಿದ್ದು ಪ್ರತಿಫಲಿಸಿದಾಗ ಆದ ವೈಭವದ ದೃಶ್ಯ. ಅದು ಎಷ್ಟು ಹೊತ್ತು ಆಗಿದ್ದೀತು? ಐದು ನಿಮಿಷವೋ, ಹೆಚ್ಚೆಂದರೆ ಹತ್ತು ನಿಮಿಷವಾಗಿದ್ದೀತು. ಆದರೆ ಅದು ನನ್ನ ಮನಃಪಟಲದಲ್ಲಿ ಅಚ್ಚೊತ್ತಿ ನಿಂತು, ಬದುಕಿರುವವರೆಗೂ ಪುನಃ ಪುನಃ ಸ್ಮರಿಸಿಕೊಳ್ಳುವಂತೆ ಮಾಡುತ್ತಿದೆ. ಆ ನಿಸರ್ಗದ ಅನನ್ಯ ಸೌಂದರ್ಯದ ಕ್ಷಣ ಅಮೃತವಾಗಿದೆ.

ಎರಡು ದಶಕಗಳ ಹಿಂದೆ ವಾರಾಣಸಿಗೆ ಹೋದಾಗ ಭಾರತರತ್ನ, ಪಂಡಿತ ಬಿಸ್ಮಿಲ್ಲಾ ಖಾನ್ ಸಾಹೇಬರ ಮನೆಗೆ ಹೋಗಿದ್ದೆ. ಆಗ ಅವರಿಗೆ, 'ಸರ್, ನೀವು ಇಷ್ಟೊಂದು ದೇಶಗಳಲ್ಲಿ, ಅಷ್ಟೊಂದು ದೊಡ್ಡ ದೊಡ್ಡವರ ಮುಂದೆ ಕಾರ್ಯಕ್ರಮ ಕೊಟ್ಟಿದ್ದೀರಿ. ನಿಮ್ಮ ಬದುಕಿನಲ್ಲಿ ಮರೆಯಲಾರದಂತಹ ಘಟನೆ ಯಾವುದು?' ಎಂದು ಕೇಳಿದೆ. ಅದಕ್ಕವರು, 'ಒಂದು ನಿಮಿಷ ಇರಿ' ಎಂದು ಮೂಲೆಯಲ್ಲಿದ್ದ ಕಪಾಟಿನಿಂದ ಒಂದು ಪ್ಲಾಸ್ಟಿಕ್ ಲಕೋಟೆಯನ್ನು ತಂದರು. ನನ್ನ ಭುಜ ಹಿಡಿದು ಮನೆಯ ಮುಂದಿನ ಬಾಗಿಲಿಗೆ ಕರೆತಂದು ತೋರಿಸಿದರು. ಆ ಲಕೋಟೆಯಲ್ಲಿದ್ದದ್ದು, ಸಂಗೀತಗಾರರು ಕಾರ್ಯಕ್ರಮ ನೀಡುವಾಗ ಶೇರ್‌ವಾನಿಯ ಮೇಲೆ ಹಾಕಿಕೊಳ್ಳುವಂಥ ಜಾಕೆಟ್. ಅದನ್ನು ದಿಟ್ಟಿಸಿ ನೋಡುತ್ತ, ಜಾಕೆಟ್‌ನ ಒಂದು ಭಾಗವನ್ನು ತೋರಿಸುತ್ತ, 'ನೋಡಿ, ಇಲ್ಲಿಯೇ ಗಾಂಧೀಜಿ ಕೈ ಇಟ್ಟಿದ್ದರು' ಎಂದರು! ಅದು ಆದದ್ದು 1939 ರ ಸುಮಾರಿನಲ್ಲಿ. ಇವರ ಶಹನಾಯಿಯ ವಾದವನ್ನು ಮೆಚ್ಚಿಕೊಂಡ ಗಾಂಧೀಜಿ, ಇವರ ಹೆಗಲ ಮೇಲೆ ಕೈ ಇಟ್ಟು 'ಬಹುತ್ ಅಚ್ಛಾ' ಎಂದಿದ್ದರಂತೆ. ಕೈ ಇಟ್ಟದ್ದು ಎಷ್ಟು ಹೊತ್ತು? ಐದು ಸೆಕೆಂಡೋ, ಹತ್ತು ಸೆಕೆಂಡೋ? ಆದರೆ ಅ ಕ್ಷಣ ಪಂಡಿತ್‌ಜೀಯವರ ಬಾಳಿನುದ್ದಕ್ಕೂ ಬೆಳದಿಂಗಳಾಗಿ ಹರಡಿತ್ತು. ಮೃತಕ್ಷಣ ಅಮೃತಕ್ಷಣವಾಗಿತ್ತು!

ಇದು ಎಲ್ಲರ ಅನುಭವಕ್ಕೂ ಬಂದ ವಿಷಯ. ನಮ್ಮ ಬದುಕಿನಲ್ಲಿ ಆದ ಸಂತಸದ, ಆತಂಕದ, ಸಾಧನೆಯ, ಧನ್ಯತೆಯ ಕ್ಷಣಗಳು ಬದುಕಿದ್ದು ಕೆಲವೇ ಕಾಲ. ಆದರೆ ಅವುಗಳ ನೆನಪು ಬಾಳಿನಲ್ಲಿ ತುಂಬಿಕೊಂಡಿದೆ. ಈ ಮಾತನ್ನು ಕಗ್ಗ ಹೇಳುತ್ತದೆ. ಯಾವ ಅನುಭವಕ್ಕೆ ಸತ್ತ್ವದ (ಸತ್ಯದ), ಶಿವದ, ಸುಂದರದ ಸ್ಪರ್ಶವಾಗಿದೆಯೋ ಅದರ ನೆನಪು ಬೆಳದಿಂಗಳಾಗಿ ಮನ ತುಂಬುತ್ತದೆ, ಅಮೃತವಾಗುತ್ತದೆ.

ದಿನ ಭವಿಷ್ಯ

ಮಂಗಳವಾರ ಆಗಸ್ಟ್ 3, 2021

ಶ್ರೀಪ್ಲವ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ಆಷಾಢ ಮಾಸ ಕೃಷ್ಣಪಕ್ಷ ಮಳೆ ನಕ್ಷತ್ರ ಆಶ್ಲೇಷಾ ದಶಮಿ ಗಂ. 14-0 (ಹ. 11-49) ಮಂಗಳವಾರ ನಿತ್ಯ ನಕ್ಷತ್ರ ರೋಹಿಣಿ ಗಂ. 48-21 (ರಾ. 1-33) ಧ್ರುವ ನಾಮ ಯೋಗ ಗಂ. 46-52 ಭದ್ರೆ ಕರಣ ಗಂ. 14-0 ವಿಷ ಗಂ. 26-8 ಅಮೃತ ಗಂ. 39-25 : ರಾಹುಕಾಲ: ಮ. ಗಂ. 3-00 ರಿಂದ 4-30 ಗುಳಿಕ ಕಾಲ ಮ. ಗಂ 12-00 ರಿಂದ 1-30 ಯಮಗಂಡ ಕಾಲ ಬೆ. ಗಂ 9-00 ರಿಂದ 10-30 : ಸೂರ್ಯೋದಯ: 6-09 ಸೂರ್ಯಾಸ್ತ: 6-42 ಅದೃಷ್ಟ ಸಂಖ್ಯೆ 2, 6

ಮೇಷ: ಬೇರೆಯವರ ಥಳುಕು ಬಳುಕಿನ ಮಾತಿಗೆ ಮರುಳಾಗಿ ಮೋಸ ಹೋಗುವ ಸಾಧ್ಯತೆ. ಹಿರಿಯರ ಹಿತನುಡಿಗಳನ್ನು ಮನ್ನಿಸಿ ಅವರ ಆರೋಗ್ಯದ ಕಡೆಗೆ ಗಮನ ವಹಿಸಿ. ದಿನದ ಮಟ್ಟಿಗೆ ದೂರದ ಪ್ರಯಾಣ ಬೇಡ.

ವೃಷಭ: ಸತ್ಯವನ್ನು ಬಯಲುಗೊಳಿಸಲು ಹೋಗಿ ಅವಘಡಕ್ಕೆ ತುತ್ತಾಗುವ ಸಾಧ್ಯತೆ. ಅಂತಹ ಸಂದರ್ಭಗಳನ್ನು ಮುಂದೂಡುವುದೇ ಲೇಸು. ವಾಹನ ಖರೀದಿ ಯೋಗ. ಹಿತೈಷಿಗಳ ಸಲಹೆ ಪಡೆಯಿರಿ.

ಮಿಥುನ: ನಿಮ್ಮ ವಿರುದ್ಧ ಸಹೋದ್ಯೋಗಿಗಳಿಂದ ಸಣ್ಣ ಪಿತೂರಿಯೊಂದು ರೂಪುಗೊಳ್ಳುವ ಸಾಧ್ಯತೆಯಿದ್ದು, ಆ ಬಗ್ಗೆ ತಲೆಕೆಡಿಸಿಕೊಳ್ಳದೇ ಮುಗ್ಧತೆ ಕಾಪಾಡುವುದು ಒಳ್ಳೆಯದು. ಸಹೋದರಿಯರಿಂದ ಸಕಾಲಿಕ ಸಾಂತ್ವನ.

ಕರ್ಕಾಟಕ: ಗೆಳೆಯರೊಂದಿಗೆ ಸಮಾಲೋಚನೆ ಸಾಧ್ಯತೆ. ಕೆಲಸಕಾರ್ಯಗಳಲ್ಲಿ ನಿಮ್ಮ ಸ್ವಭಾವದಿಂದಾಗಿ ಹಿನ್ನಡೆ. ದೃಢನಿರ್ಧಾರದಿಂದ ವ್ಯವಹರಿಸಿ. ಹಿರಿಯರ ಬೆಂಬಲದಿಂದಾಗಿ ಯಶಸ್ಸು. ಶನೀಶ್ವರ ಸ್ಮರಣೆ ಮಾಡಿ.

ಸಿಂಹ: ಗುಂಪುಗಾರಿಕೆಯಿಂದಾಗಿ ಧನಮಾನಗಳ ಹಾನಿ ಸಾಧ್ಯತೆ. ಅನ್ಯರ ಮೇಲೆ ವಿನಾ ಸಂಶಯ ಒಳ್ಳೆಯದಲ್ಲ. ದೂರದಲ್ಲಿರುವ ಮಕ್ಕಳ ಆಗಮನ ಸಾಧ್ಯತೆ. ಧಾರ್ಮಿಕ ಕಾರ್ಯಕ್ರಮಗಳಲ್ಲಿ ಭಾಗಿಯಾಗುವಿರಿ.

ಕನ್ಯಾ: ಸಾಲ ಕೊಟ್ಟವರು ಎಡಬಿಡದೆ ಮರುಪಾವತಿಗಾಗಿ ತಗಾದೆ ಹೂಡಬಹುದು. ದ್ವೇಷಕ್ಕೆ ಮುಂದಾಗದೇ ಉಪಾಯದಿಂದ ಪಾರಾಗುವ ಬಗ್ಗೆ ಯೋಚಿಸಿ. ಸಂಗಾತಿಯೊಂದಿಗೆ ಸಮಾಲೋಚಿಸಿ ಉತ್ತಮ ನಿರ್ಣಯ ಕೈಗೊಳ್ಳಿ.

ತುಲಾ: ನಿಮ್ಮ ಇಂದಿನ ಅನಿವಾರ್ಯವಲ್ಲದ ಕೆಲಸ ಕಾರ್ಯಗಳನ್ನು ಮುಂದೂಡುವುದು ಉತ್ತಮ. ದೂರ ಪ್ರಯಾಣ ಖಂಡಿತ ಬೇಡ. ಮಕ್ಕಳಿಂದ ಮನಸ್ಸಿಗೆ ಸಂತಸ. ಮಡದಿ ನಿಮ್ಮ ಚಿಂತೆಗಳನ್ನು ದೂರ ಮಾಡಲಿದ್ದಾಳೆ.

ವೃಶ್ಚಿಕ: ಧಾರ್ಮಿಕ ಕಾರ್ಯಗಳಲ್ಲಿ ಭಾಗವಹಿಸುವ ಸಾಧ್ಯತೆ. ಮನಸ್ಸಿಗೆ ನೆಮ್ಮದಿ ನೀಡುವ ಹೊಸ ಮಾರ್ಗವೊಂದು ಗೋಚರವಾಗಲಿದೆ. ವ್ಯಾಪಾರಸ್ಥರಿಗೆ ಗಣನೀಯ ಲಾಭ ದೊರಕುವುದು.

ಧನು: ಸಂಬಂಧವಿಲ್ಲದ ವಿಷಯಗಳು ನಿಮ್ಮನ್ನು ಗೊಂದಲಕ್ಕೆ ಸಿಕ್ಕಿಸುವ ಸಾಧ್ಯತೆ. ಅಂತಹ ವಿಷಯಗಳಲ್ಲಿ ಅತ್ಯುತ್ಸಾಹ ಸಲ್ಲ. ದೇವತಾ ದರ್ಶನ ಭಾಗ್ಯ ಕಂಡುಬರುತ್ತಿದೆ. ಆರೋಗ್ಯದಲ್ಲಿ ವೃದ್ಧಿಯಾಗಿ ಸಂತಸ ಮೂಡುವುದು.

ಮಕರ: ಮನಸ್ಸಿನಲ್ಲಿ ಹರಿಯುತ್ತಿರುವ ಪ್ರೀತಿ ಪ್ರೇಮಗಳ ಹುಚ್ಚು ಹೊಳೆಗೆ ಲಗಾಮು ಹಾಕಿಕೊಳ್ಳಿ. ಸ್ನೇಹದ ವಿಷಯದಲ್ಲಿ ಎಡವಿ ಬೀಳುವ ಸಾಧ್ಯತೆ. ಅಪರಿಚಿತ ವ್ಯಕ್ತಿಗಳೊಡನೆ ವ್ಯವಹರಿಸುವಾಗ ಎಚ್ಚರವಿರಲಿ.

ಕುಂಭ: ನಿಮ್ಮ ಹೆಸರನ್ನು ದುರ್ಬಳಕೆ ಮಾಡಿಕೊಂಡು ಲಾಭ ಪಡೆಯುವವರ ವಿಷಯದಲ್ಲಿ ಎಚ್ಚರದಿಂದಿರಿ. ಬಾಲ ಬಡುಕರನ್ನು ದಿನದ ಮಟ್ಟಿಗೆ ದೂರವಿಡಿ. ಹಿರಿಯರ ಆರೋಗ್ಯದ ಬಗ್ಗೆ ಗಮನವಿರಲಿ.

ಮೀನ: ಕೆಲವರೊಂದಿಗೆ ಅತಿಯಾದ ಸ್ನೇಹ ಸಂಬಂಧ ವೃದ್ಧಿಸುವ ಸಾಧ್ಯತೆ. ವ್ಯವಹಾರಗಳಲ್ಲಿ ಸಂಬಂಧ ಹಳಸದಂತೆ ಎಚ್ಚರಿಕೆ ಅಗತ್ಯ. ವಿದ್ಯಾರ್ಥಿಗಳಿಗೆ ಗುರು ವೃಂದದವರಿಂದ ಸೂಕ್ತ ಮಾರ್ಗದರ್ಶನ ದೊರೆಯಲಿದೆ.

ನಿಮ್ಮ ಜನ್ಮದಿನ 3-ಆಗಸ್ಟ್: ಇಂದು ಅತ್ಯಂತ ಶುಭದಾಯಕ. ವಿವಿಧ ಮೂಲಗಳಿಂದ ಆರ್ಥಿಕ ಸದೃಢತೆ ದೊರಕಲಿದೆ. ಉನ್ನತ ಹುದ್ದೆಯಲ್ಲಿರುವ ಮಹಿಳೆಯರಿಗೆ ಬಿಡುವಿಲ್ಲದ ಕೆಲಸದಿಂದಾಗಿ ಅಧಿಕಶ್ರಮ ಹಾಗೂ ಮಾನಸಿಕ ನೆಮ್ಮದಿ ಕೆಡುವ ಸಾಧ್ಯತೆ. ವಿದ್ಯಾರ್ಥಿಗಳಿಗೆ ಉನ್ನತ ವ್ಯಾಸಂಗದಲ್ಲಿ ಯಶಸ್ಸು. ಆರೋಗ್ಯದಲ್ಲಿ ಕೊಂಚಮಟ್ಟಿನ ವ್ಯತ್ಯಯ.

ಪದಬಂಧ 4677

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಹೆರಿಗೆಯ ಕೋಣೆಯಿದು (5)
4.ಉತ್ತ ಮೇಲೆ ನೆಲವನ್ನು ಮಟ್ಟ ಮಾಡುವ ಸಾಧನ (3)
5.ಬಳ್ಳಿ ಇಲ್ಲಿದೆ (3)
6.ವನದೊಳಗಿನ ಬೆಳವಣಿಗೆ ಕಾಣುತ್ತಿದೆಯೇ? (3)
7.ನೂಲು ತೆಗೆಯುವ ಸಾಧನ (3)
9.ಶಂಕೆಯೇ ಬೇಡ! ಇದು ಹತೋಟಿ! (2)
10.ಗುರಿಯಿಲ್ಲದೆ ತಿರುಗಾಡು (2)
12.ವೈಮನಸ್ಯವಿದು (3)
14.ಪ್ರೇಮಿಗಳ ಅಗಲಿಕೆಯ ನೋವು (3)
15.ತಿರುವು ಮುರುವಾದ ಕೆಲಸ (3)
16.ದನಕರುಗಳ ಮೂತ್ರ (3)
17.ಯುದ್ಧದ ಕೇಸರಿ (5)

ಮೇಲಿಂದ ಕೆಳಕ್ಕೆ
1.ಆರಂಭ ಅಥವಾ ಪೀಠಿಕೆ ಎಂದರೂ ಸರಿ (4)
2.ಅರಿವು ಈ ರೀತಿ ಬಂದಿದೆ (5)
3.ವನದ ಕೊನೆಗೆ ಮಾಡಿದ ಹೋಮ (3)
4.ಹರಿ ಮೊದಲಿದ್ದಾಗಿನ ತೀಕ್ಷ್ಣತೆ (3)
8.ಇದೊಂದು ಬಗೆಯ ದ್ವಿದಳಧಾನ್ಯ (3)
9.ಮೊಳಕೆ ಇಲ್ಲಿ ಕಾಣುತ್ತಿದೆ (3)
10.ಸಹಕಾರ ಇಲ್ಲದಿರುವಿಕೆ (5)
11.ಅತಿಯಾದ ಬಾಯಾರಿಕೆ (4)
13. ಇದು ಸಂಪೂರ್ಣವಾದುದು (3)
14. ಅರಳುವಿಕೆ ಅಥವಾ ಬಿರಿಯುವಿಕೆ (3)



4676ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಸಭಾಪತಿ 3.ಅಂತರ್ಮುಖಿ 4.ಸೀಮಿತ 5.ವನಚರ 7.ರಜತ 9.ಸುದಾಮ 11.ಮಧುಕರಿ 13.ಮಲಯ 14.ಕಟ್ಟುಕತೆ 15.ಸಂಗಡಿಗ

ಮೇಲಿಂದ ಕೆಳಕ್ಕೆ: 1.ಸಚಿವ 2.ತಿಸೀರ 3.ಅಂತರ 6.ನಳನಳಿಸು 8.ತಲೆಹರುಕ 10.ಮಮತೆ 11.ಮಯಸ 12.ರಿಡಾಗ

ಸುಡೊಕು 5063

	7			5		2		8
5		4	1		8			
	8			7			5	
	6		9	3		1		2
2		5					8	
	3			8	2	5		6
			5		6		2	
3		2					6	
	5			2		4		1

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5062 ಸುಡೊಕು

7	5	9	3	1	6	4	8	2
2	3	6	8	4	9	5	1	7
4	1	8	7	5	2	3	9	6
9	7	3	4	2	1	6	5	8
5	6	4	9	3	8	2	7	1
8	2	1	6	7	5	9	3	4
6	8	7	2	9	3	1	4	5
1	9	2	5	8	4	7	6	3
3	4	5	1	6	7	8	2	9

₹16 ಕೋಟಿ ಮೊತ್ತದ ಇಂಜೆಕ್ಷನ್ ಪಡೆದರೂ ಬದುಕುಳಿಯದ ಬಾಲಕಿ

ಪುಣೆ (ಪಿಟಿಐ): ಅಪರೂಪದ ಅನುವಂಶೀಯ ಕಾಯಿಲೆಯಿಂದ ಬಳಲುತ್ತಿದ್ದ ಒಂದು ವರ್ಷದ ಬಾಲಕಿಯ ಚಿಕಿತ್ಸೆಗೆ ನೆರವಿನ ಮಹಾಪೂರವೇ ಹರಿದು ಬಂದಿದ್ದರೂ ಜೀವ ಉಳಿಸಲು ಸಾಧ್ಯವಾಗಲಿಲ್ಲ.

ಚಿಕಿತ್ಸೆಗೆ ಸ್ಪಂದಿಸದ ಬಾಲಕಿ ವೇದಿಕಾ ಶಿಂದೆ ಭಾನುವಾರ ಸಂಜೆ ಸಾವಿಗೀಡಾಗಿದ್ದಾಳೆ. ಬೆನ್ನುಮೂಳೆಯ ಸ್ನಾಯು ಕ್ಷೀಣತೆಯಿಂದ (ಎಸ್‌ಎಂಎ) ಬಳಲುತ್ತಿದ್ದ ಈ ಬಾಲಕಿಗೆ ₹16 ಕೋಟಿ ಮೊತ್ತದ 'ಇಂಜೆಕ್ಷನ್' ಅನ್ನು ಜೂನ್ ತಿಂಗಳಲ್ಲಿ ನೀಡಲಾಗಿತ್ತು.

ಬಾಲಕಿಯ ಅಪರೂಪದ ಕಾಯಿಲೆ ಮತ್ತು ಚಿಕಿತ್ಸೆಗೆ ಅಗತ್ಯವಿದ್ದ ನೆರವು ನೀಡುವ ವಿಷಯ ಸಾಮಾಜಿಕ ಮಾಧ್ಯಮಗಳಲ್ಲಿ ಅಪಾರ ಪರಿಣಾಮ ಬೀರಿತ್ತು. ಇದರಿಂದಾಗಿ, ನೆಟ್ಟಿಗರು ಮತ್ತು ಇತರರು ₹14 ಕೋಟಿ ದೇಣಿಗೆ ನೀಡಿದ್ದರು. ಬಳಿಕ, ಜೂನ್ ತಿಂಗಳಲ್ಲಿ ಇಲ್ಲಿನ ದೀನನಾಥ್ ಮಂಗೇಶ್ಕರ್ ಆಸ್ಪತ್ರೆಯಲ್ಲಿ ಇಂಜೆಕ್ಷನ್ ನೀಡಲಾಗಿತ್ತು.

'ವೇದಿಕಾ ಆರೋಗ್ಯ ಸ್ಥಿತಿ ಚಿಕಿತ್ಸೆಗೆ ಸುಧಾರಿಸಿತ್ತು, ಅವಳು ಬದುಕುಳಿಯುವ ಆಶಾಭಾವವೂ ಇತ್ತು. ಆದರೆ, ಉಳಿಸಿಕೊಳ್ಳಲು ಸಾಧ್ಯವಾಗಲಿಲ್ಲ' ಎಂದು ಸಂಬಂಧಿಕರೊಬ್ಬರು ತಿಳಿಸಿದ್ದಾರೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form

ಸವಿನೆನಪು

ಜನನ: 18.07.1950 ಮರಣ: 03.08.2020

ಸುಧಾ. ಬಿ

ನಮ್ಮನ್ನಗಲಿ ಈ ದಿನಕ್ಕೆ ಒಂದು ವರ್ಷವಾದರೂ, ನಿಮ್ಮ ಸವಿನೆನಪು ನಮ್ಮ ಹೃದಯದಲ್ಲಿ ಸದಾ ಹಸಿರು

ದುಃಖತಪ್ತರು

ಪತಿ ಎಂ.ಎಸ್. ಭೈರಪ್ಪ, ಮತ್ತಿಕೆರೆ, B'lore
ಮಗಳು ಇಂದು, ಅಳಿಯ ರಮೇಶ್,
ಮೊಮ್ಮಗಳು ದಿಯಾ ರಮೇಶ್ USA

ಉತ್ತರ ಕ್ರಿಯಾದಿ

ಶ್ರೀ ಆರ್. ನಾರಾಯಣಪ್ಪ ನವರು

ದಿ. 25.07.2021 ರಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರ ವೈಕುಂಠ ಸಮಾರಾಧನೆಯನ್ನು ದಿ. 04.08.2021ನೇ ಬುಧವಾರ ಬೆಳಿಗ್ಗೆ 10:30 ಗಂಟೆಗೆ ಮೃತರ ಸ್ವಗೃಹ ಕೋಡಿಪಾಳ್ಯ, ಕೆಂಗೇರಿ ಟೌನ್, ಬೆಂಗಳೂರು ಇಲ್ಲಿ ಏರ್ಪಡಿಸಲಾಗಿದೆ.

ಇಂತಿ ದು:ಖತಪ್ತರು:

ಮೃತರ ಪತ್ನಿ ಶ್ರೀಮತಿ ಚಿಕ್ಕಮ್ಮನವರು, ಮಕ್ಕಳು, ಮೊಮ್ಮಕ್ಕಳು ಹಾಗೂ ಬಂಧು ಮಿತ್ರರು.
ಮೊ: 9880092354, 7795687680

18ನೇ ವರ್ಷದ ಪುಣ್ಯಸ್ಮರಣೆ

ಪದ್ಮಶಾಲಿ ಕನಮಾಕಲು
ಶ್ರೀಮತಿ ಜಯಮ್ಮನವರು
(ದಿವಂಗತ ಕೆ.ಪಿ.ಎಂ. ನಂಜಪ್ಪನವರ ಧರ್ಮಪತ್ನಿ)
ನಿಧನ: 03-08-2003.

ನಿಮ್ಮ ಸವಿನೆನಪು ಸದಾ ನಮ್ಮಲ್ಲಿ ಅಚ್ಚಳಿಯದೆ ಉಳಿದಿದೆ. ನಿಮ್ಮ ಆತ್ಮಕ್ಕೆ ಚಿರಶಾಂತಿ ಕೋರುವ: ಮಕ್ಕಳು ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧುವರ್ಗದವರು

LOOKING TO BUILD, BUY OR SELL A PROPERTY

Please refer Classifieds on Sunday

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ

ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ದಯವಿಟ್ಟು ಸಂಪರ್ಕಿಸಿ:

Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036

ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಅಲಕ್ಷಿತ ಸಮುದಾಯಗಳ ಏಳಿಗೆಗೆ ನೆರವು

'ಡೆಕ್ಕನ್ ಹೆರಾಲ್ಡ್-ಪ್ರಜಾವಾಣಿ ಕೋವಿಡ್-19 ಪರಿಹಾರ ನಿಧಿ'ಯಡಿ ಸಂಗ್ರಹವಾಗಿರುವ ದೇಣಿಗೆಯಲ್ಲಿ ಈಗಾಗಲೇ 18 ಎನ್‌ಜಿಒಗಳಿಗೆ ತಲಾ ₹5 ಲಕ್ಷ ನೆರವು ನೀಡಿದ್ದೇವೆ. ಹೊಸದಾಗಿ ಮತ್ತೆ ಮೂರು ಎನ್‌ಜಿಒಗಳಿಗೆ ತಲಾ ₹5 ಲಕ್ಷ ನೆರವು ನೀಡಲಾಗುತ್ತಿದೆ. ಇದಲ್ಲದೆ ಉಳಿದಿರುವ ಮೊತ್ತವನ್ನು ಎಲ್ಲ 21 ಸಂಸ್ಥೆಗಳಿಗೆ ಸಮಾನವಾಗಿ ಹಂಚಲಿದ್ದೇವೆ.

ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್

ಮೈಸೂರು ಜಿಲ್ಲೆಯ ಎಚ್.ಡಿ.ಕೋಟೆ ತಾಲ್ಲೂಕಿನ 'ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್' (ಎಸ್‌ವಿವೈಎಂ), ಸಮುದಾಯವನ್ನು ತಳಮಟ್ಟದಲ್ಲಿ ಅಭಿವೃದ್ಧಿಪಡಿಸುವ ಸಂಸ್ಥೆ. 'ಇದು ಬುಡಕಟ್ಟು ಮತ್ತು ಇತರ ಅಲಕ್ಷಿತ ಸಮುದಾಯದವರ ಏಳಿಗೆಗಾಗಿ ಕಾರ್ಯ ನಿರ್ವಹಿಸುತ್ತಿದೆ. ಈ ಜನರ ಆರೋಗ್ಯ, ಶಿಕ್ಷಣ, ಸಾಮಾಜಿಕ, ಆರ್ಥಿಕ ಕ್ಷೇತ್ರದ ಸಬಲೀಕರಣಕ್ಕಾಗಿ ಶ್ರಮಿಸುತ್ತಿದೆ. ಸ್ಥಳೀಯ, ಹೊಸಬಗೆಯ ಹಾಗೂ ಕಡಿಮೆ ವೆಚ್ಚದ ಪರಿಣಾಮಕಾರಿ ಪರಿಹಾರಗಳನ್ನು ಬಳಸಿಕೊಂಡು ಈ ಜನರ ಪ್ರಗತಿಗೆ ಕಾರ್ಯತಂತ್ರ ಮಾರ್ಗಗಳನ್ನು ಅನುಷ್ಠಾನಗೊಳಿಸುತ್ತಿದೆ.

ಕೋವಿಡ್-19ರ ಪೀಡಿತ ಕುಟುಂಬಗಳ ಜೀವನವನ್ನು ಸರಿದೂಗಿಸುವ ಗುರಿಯನ್ನು ಎಸ್‌ವಿವೈಎಂ ಹೊಂದಿದೆ. ಈ ನಿಟ್ಟಿನಲ್ಲಿ ಮೈಸೂರು ಜಿಲ್ಲೆಯ ನಾಲ್ಕು ತಾಲ್ಲೂಕುಗಳಲ್ಲಿ ವೃತ್ತಿಪರ ತರಬೇತಿ ಕೋರ್ಸ್‌ಗಳನ್ನು ನಡೆಸಲು ಯೋಜಿಸಿದೆ. ಕೃಷಿ ಆಧಾರಿತ ತರಬೇತಿ (ಹೈನುಗಾರಿಕೆ, ಜೇನು ಕೃಷಿ, ರೇಷ್ಮೆ), ಉದ್ಯಮಶೀಲತಾ ಅಭಿವೃದ್ಧಿ, ಫ್ಯಾಷನ್ ಡಿಸೈನಿಂಗ್, ಬ್ಯೂಟಿಷಿಯನ್ ಕೋರ್ಸ್‌ಗಳು, ಕಂಪ್ಯೂಟರ್ ತರಬೇತಿ, ಎಲೆಕ್ಟ್ರಿಷಿಯನ್ ಮತ್ತು ಪ್ಲಂಬಿಂಗ್ ವಿಷಯಗಳಲ್ಲಿ ತರಬೇತಿ ನೀಡಲು ಯೋಜನೆ ರೂಪಿಸಿದೆ.

ಯೂತ್ ಫಾರ್ ಸೇವಾ

ಬೆಂಗಳೂರು ಬಿಟ್ಟು ಉಳಿದೆಡೆ ಹಲವಾರು ಕಾರ್ಯಕ್ರಮಗಳಲ್ಲಿ ತೊಡಗಿರುವ 'ಯೂತ್ ಫಾರ್ ಸೇವಾ', ರಾಷ್ಟ್ರವ್ಯಾಪಿ ಸ್ವಯಂ ಸೇವಕರನ್ನು ಹೊಂದಿರುವ ಸಂಸ್ಥೆ. ಸ್ವಯಂ ಸೇವಕರ ಮೂಲಕ ಬದಲಾವಣೆ ತರುವ ಗುರಿಯನ್ನು ಇದು ಹೊಂದಿದೆ.

ಸಮಾಜದಲ್ಲಿನ ಹಿಂದುಳಿದ ವರ್ಗದವರ ಮಕ್ಕಳ ಶಿಕ್ಷಣವನ್ನು ಬೆಂಬಲಿಸಲು 2009ರಲ್ಲಿ 'ವಿದ್ಯಾ ಚೇತನಾ' ಕಾರ್ಯಕ್ರಮವನ್ನು ಸಂಸ್ಥೆ ಆರಂಭಿಸಿತು. 'ಇದರಡಿ ಇಲ್ಲಿಯವರೆಗೆ ಸುಮಾರು 5,000 ಮಕ್ಕಳು ಪ್ರಯೋಜನ ಪಡೆದುಕೊಂಡಿದ್ದಾರೆ.

'ಇದೀಗ 'ವಿದ್ಯಾ ಚೇತನಾ- ಆಲಂಬನ್' ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಕೋವಿಡ್-19ರಿಂದ ಒಬ್ಬರು ಅಥವಾ ಇಬ್ಬರು ಪೋಷಕರನ್ನು ಕಳೆದುಕೊಂಡ ಮಕ್ಕಳ ಶಿಕ್ಷಣಕ್ಕೆ ನೆರವಾಗುವ ಉದ್ದೇಶವನ್ನು ಈ ಯೋಜನೆ ಹೊಂದಿದೆ. ನಾಲ್ಕು ಸಾವಿರ ಮಕ್ಕಳಿಗೆ ನೆರವು ನೀಡುವ ಗುರಿ ಹೊಂದಿರುವ ಈ ಕಾರ್ಯಕ್ರಮಕ್ಕೆ ಇಲ್ಲಿಯವರೆಗೆ 2,500 ಮಕ್ಕಳನ್ನು ಗುರುತಿಸಲಾಗಿದೆ.

ದಿ ಸೊಸೈಟಿ ಫಾರ್ ಎಂಪವರ್‌ಮೆಂಟ್ ಥ್ರೂ ವಾಲೆಂಟರಿ ಆಕ್ಷನ್ ಇನ್ ಕರ್ನಾಟಕ (ಸೇವಕ್)

ಬೆಳಗಾವಿ ಜಿಲ್ಲೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ 'ದಿ ಸೊಸೈಟಿ ಫಾರ್ ಎಂಪವರ್‌ಮೆಂಟ್ ಥ್ರೂ ವಾಲೆಂಟರಿ ಆಕ್ಷನ್ ಇನ್ ಕರ್ನಾಟಕ' (ಎಸ್‌ಇವಿಎಕೆ- ಸೇವಕ್) ಸಮುದಾಯ ಆಧಾರಿತ ಸಂಸ್ಥೆಗಳನ್ನು ರೂಪಿಸುವ ಮತ್ತು ಬಲಪಡಿಸುವ ನಿಟ್ಟಿನಲ್ಲಿ ಕಾರ್ಯೋನ್ಮುಖವಾಗಿದೆ.

'ಇದು ಸಾಮಾಜಿಕ ಮತ್ತು ಆರ್ಥಿಕವಾಗಿ ಹಿಂದುಳಿದಿರುವ ಸಮುದಾಯಗಳ ಜನರ ಜೀವನ ಮಟ್ಟವನ್ನು ಸುಧಾರಿಸುವ ಚಟುವಟಿಕೆಗಳನ್ನು ಕೈಗೊಂಡಿದೆ. ಅಲ್ಲದೆ ಈ ಜನರಿಗೆ ಆರೋಗ್ಯ ಮತ್ತು ಶೈಕ್ಷಣಿಕ ಸೌಲಭ್ಯಗಳನ್ನು ಒದಗಿಸಲು ಶ್ರಮಿಸುತ್ತಿದೆ.

ಕೋವಿಡ್ ಪಿಡುಗಿನಿಂದ ಸಂಕಷ್ಟಕ್ಕೆ ಒಳಗಾದವರಿಗೆ ಸ್ಪಂದಿಸುವ ಉದ್ದೇಶದಿಂದ 'ಸೇವಕ್' ಅಲಕ್ಷಿತ ಸಮುದಾಯಗಳ ಕುಟುಂಬಗಳನ್ನು ಗುರುತಿಸಿದೆ. ದೇವದಾಸಿಯರ ಕುಟುಂಬಗಳು, ಮನೆ ಕೆಲಸಗಾರರು, ಮಹಿಳೆಯರ ನೇತೃತ್ವದ ಕುಟುಂಬಗಳು ಮತ್ತು ಪ್ರಬುದ್ಧರಾಗುವ ಮೊದಲೇ ವಿವಾಹವಾದವರಿಗೆ ನೆರವಾಗುತ್ತಿದೆ. ಸಣ್ಣ ಉದ್ಯಮಗಳನ್ನು ಸ್ಥಾಪಿಸಲು ಈ ಕುಟುಂಬಗಳಿಗೆ ಸಹಾಯ ಮಾಡುವ ಮೂಲಕ ಅವರ ಆದಾಯ ವೃದ್ಧಿಗೆ ನೆರವಾಗುವ ಗುರಿಯನ್ನು ಹೊಂದಿದೆ. 'ಇದಲ್ಲದೆ, ಕೋವಿಡ್ ಲಸಿಕೆಯ ಅಭಿಯಾನದಲ್ಲಿ ಇದು ಬೆಳಗಾವಿ ಜಿಲ್ಲೆಯ ನೋಡಲ್ ಏಜೆನ್ಸಿಯಾಗಿ ಕೆಲಸ ಮಾಡುತ್ತಿದೆ. ಈ ಮೂಲಕ ಕೋವಿಡ್‌ಗೆ ಸಂಬಂಧಿಸಿದಂತೆ ಜನರಲ್ಲಿ ಜಾಗೃತಿ ಮೂಡಿಸುತ್ತಿದೆ.

ಇತ್ತೀಚಿನ ಮಹತ್ವದ ಬೆಳವಣಿಗೆಗಳಿಂದ ಭಾರತೀಯರಿಗೆ ಹರ್ಷ: ಮೋದಿ

ನವದೆಹಲಿ (ಪಿಟಿಐ): ಭಾರತದ ಸ್ವಾತಂತ್ರ್ಯೋತ್ಸವದ 'ಅಮೃತ ಮಹೋತ್ಸವ' ಆರಂಭವಾಗುತ್ತಿದ್ದಂತೆ ಹಲವು ಮಹತ್ವದ ಬೆಳವಣಿಗೆಗಳು ನಡೆದಿದ್ದು, ಇದು ಭಾರತೀಯರಿಗೆ ಹರ್ಷ ತಂದಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಸೋಮವಾರ ಹೇಳಿದರು.

'ಭಾರತವು ಆಗಸ್ಟ್ ತಿಂಗಳು (ಅಮೃತ ಮಹೋತ್ಸವ ಪ್ರಾರಂಭ) ಪ್ರವೇಶಿಸುತ್ತಿದ್ದಂತೆ ಹಲವು ಮಹತ್ವದ ಘಟನೆಗಳು ನಡೆದಿವೆ. ದಾಖಲೆ ಪ್ರಮಾಣದಲ್ಲಿ ಲಸಿಕೆ ವಿತರಣೆ, ಜಿಎಸ್‌ಟಿ ಸಂಗ್ರಹದಲ್ಲಿ ಹೆಚ್ಚಳ ಸೇರಿದಂತೆ ಇತರೆ ಬೆಳವಣಿಗೆಗಳು ಭಾರತೀಯರಿಗೆ ಹರ್ಷ ತಂದುಕೊಟ್ಟಿದೆ. ಅಲ್ಲದೆ ಇದು ದೇಶದ ಆರ್ಥಿಕತೆ ಚೇತರಿಸಿಕೊಳ್ಳುತ್ತಿದೆ ಎಂಬುದನ್ನು ಸೂಚಿಸುತ್ತದೆ' ಎಂದು ಅವರು ಟ್ವೀಟ್ ಮೂಲಕ ಹರ್ಷ ವ್ಯಕ್ತಪಡಿಸಿದರು.

'ಒಲಿಂಪಿಕ್ಸ್‌ನಲ್ಲಿ ಪಿ.ವಿ. ಸಿಂಧು ಅವರು ದೇಶಕ್ಕಾಗಿ ಪದಕ ಗಳಿಸಿದ್ದರಲ್ಲದೇ ನಮ್ಮ ಮಹಿಳಾ ಮತ್ತು ಪುರುಷ ಹಾಕಿ ತಂಡವು ಉತ್ತಮ ಪ್ರದರ್ಶನ ನೀಡುತ್ತಿದೆ' ಎಂದು ಶ್ಲಾಘಿಸಿದರು.

'ಭಾರತದ 130 ಕೋಟಿ ಜನರು ಅಮೃತ ಮಹೋತ್ಸವದ ಈ ಸಂದರ್ಭದಲ್ಲಿ ಭಾರತದ ಏಳಿಗೆಗಾಗಿ ಇನ್ನಷ್ಟು ಶ್ರಮಿಸಲಿದ್ದಾರೆ ಎಂಬ ನಿರೀಕ್ಷೆ ನನಗಿದೆ' ಎಂದರು.

ಮೋದಿ ಭೇಟಿ ಮಾಡಿದ ಈಶಾನ್ಯ ಭಾಗದ ಬಿಜೆಪಿ ಸಂಸದರ ನಿಯೋಗ

'ಗಡುವಿನೊಳಗೆ ಗಡಿ ವಿವಾದ ಪರಿಹಾರ'

ಪ್ರಜಾವಾಣಿ ವಾರ್ತೆ

ನವದೆಹಲಿ: ಅಸ್ಸಾಂ-ಮಿಜೋರಾಂ ಗಡಿ ಸಮಸ್ಯೆಯನ್ನು ನಿಗದಿತ ಕಾಲಮಿತಿಯೊಳಗೆ ಬಗೆಹರಿಸಲಾಗುವುದು ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಈಶಾನ್ಯ ರಾಜ್ಯಗಳ ಸಂಸದರ ನಿಯೋಗಕ್ಕೆ ಸೋಮವಾರ ಭರವಸೆ ನೀಡಿದರು. ಅಸ್ಸಾಂ ಮತ್ತು ಮಿಜೋರಾಂ ನಡುವೆ ಇತ್ತೀಚೆಗೆ ಉಂಟಾಗಿದ್ದ ಗಡಿ ಉದ್ವಿಗ್ನತೆಯ ಹಿನ್ನೆಲೆಯಲ್ಲಿ, ಈಶಾನ್ಯ ರಾಜ್ಯಗಳ ಬಿಜೆಪಿ ಸಂಸದರು ಪ್ರಧಾನಿ ಮೋದಿ ಅವರನ್ನು ಭೇಟಿಯಾಗಿ ಮಾತುಕತೆ ನಡೆಸಿದರು.

ಕೇಂದ್ರ ಸಚಿವರಾದ ಸರ್ವಾನಂದ ಸೋನೊವಾಲ್, ಕಿರಣ್ ರಿಜಿಜು, ಪ್ರತಿಮಾ ಭೌಮಿಕ್, ರಾಮೇಶ್ವರ ತೇಲಿ ಸೇರಿದಂತೆ ಸಂಸದರ ನಿಯೋಗವು ಪ್ರಧಾನಿಯನ್ನು ಭೇಟಿಯಾಗಿ ತಮ್ಮ ರಾಜ್ಯಗಳಿಗೆ ಸಂಬಂಧಿಸಿದ ಸಮಸ್ಯೆಗಳು, ಇತರ ನೆರೆಯ ರಾಜ್ಯಗಳು ಹಾಗೂ ಅಸ್ಸಾಂ ನಡುವೆ ನಡೆಯುತ್ತಿರುವ ಗಡಿ ವಿವಾದವನ್ನೂ ಚರ್ಚಿಸಿತು.

ಅಸ್ಸಾಂನಿಂದ 12, ಅರುಣಾಚಲ ಪ್ರದೇಶದಿಂದ ಇಬ್ಬರು ಮತ್ತು ಮಣಿಪುರ ಮತ್ತು ತ್ರಿಪುರಾದ ತಲಾ ಒಬ್ಬರು ಸೇರಿ ಒಟ್ಟು 16 ಸಂಸದರು ಸಭೆಯಲ್ಲಿ ಇದ್ದರು.

'ಈ ಸಮಸ್ಯೆಯನ್ನು ಸಕಾರಾತ್ಮಕ ರೀತಿಯಲ್ಲಿ ಮತ್ತು ನಿಗದಿತ ಕಾಲಮಿತಿಯೊಳಗೆ ಪರಿಹರಿಸುವುದಾಗಿ ಪ್ರಧಾನಿ ನಮಗೆ ಭರವಸೆ ನೀಡಿದ್ದಾರೆ' ಎಂದು ಅಸ್ಸಾಂನ ಬಿಜೆಪಿ ಲೋಕಸಭಾ ಸದಸ್ಯ ದಿಲೀಪ್ ಸೈಕಿಯಾ ಸಭೆಯ ನಂತರ ಸುದ್ದಿಗಾರರಿಗೆ ತಿಳಿಸಿದರು.

ಕಾಂಗ್ರೆಸ್ ಪಕ್ಷವು ಇಂತಹ ಸೂಕ್ಷ್ಮ ವಿಚಾರದಲ್ಲಿ ರಾಜಕೀಯ ಮಾಡುತ್ತಿದೆ ಎಂದು ಆರೋಪಿಸಿದ ಕೇಂದ್ರ ಸಚಿವ ಕಿರಣ್ ರಿಜಿಜು, ವಿದೇಶಿ ಶಕ್ತಿಗಳು ಪ್ರಚೋದನಾತ್ಮಕ ಹೇಳಿಕೆಗಳನ್ನು ನೀಡುವ ಮೂಲಕ ಈಶಾನ್ಯ ರಾಜ್ಯಗಳಲ್ಲಿ ಉದ್ವಿಗ್ನತೆ ಹೆಚ್ಚಿಸುತ್ತಿದೆ ಎಂದರು.

ಕಳೆದ ಕೆಲವು ದಿನಗಳಿಂದ ಎರಡೂ ರಾಜ್ಯಗಳ ಜನರಲ್ಲಿ ಆತ್ಮವಿಶ್ವಾಸವನ್ನು ಹೆಚ್ಚಿಸುವ ಯತ್ನಗಳು ಸಹ ನಡೆದಿವೆ ಎಂದು ಸಂಸದರು ಗಮನ ಸೆಳೆದರು.

'ಅಸ್ಸಾಂ-ಮಿಜೋರಾಂ ಸಮಸ್ಯೆಯನ್ನು ಭಾರತದಲ್ಲಿ ಗೊಂದಲ ಹರಡುವ ಸಾಧನವಾಗಿ ಬಳಸಿಕೊಳ್ಳುವ ಹುನ್ನಾರವು ಯಶಸ್ವಿಯಾಗುವುದಿಲ್ಲ' ಎಂಬುದಾಗಿ ಪ್ರಧಾನಿಗೆ ಸಲ್ಲಿಸಿದ ಮನವಿ ಪತ್ರದಲ್ಲಿ ಸಂಸದರು ಉಲ್ಲೇಖಿಸಿದ್ದಾರೆ. ಮೋದಿ ನೇತೃತ್ವದ ಎನ್‌ಡಿಎ ಸರ್ಕಾರದ ಅವಧಿಯಲ್ಲಿ ಈಶಾನ್ಯದಲ್ಲಿ ನಡೆದ ಅಭಿವೃದ್ಧಿ ಕಾರ್ಯಗಳು ಐತಿಹಾಸಿಕ ಮತ್ತು ಸಾಟಿಯಿಲ್ಲದವು ಎಂದು ನಿಸ್ಸಂಶಯವಾಗಿ ಹೇಳಲು ಬಯಸುತ್ತೇವೆ ಎಂದು ಸಂಸದರು ಉಲ್ಲೇಖಿಸಿದ್ದಾರೆ.

'ಈಶಾನ್ಯ ಭಾಗದ ಬಗ್ಗೆ ಮೋದಿ ಅವರಷ್ಟು ಮಹತ್ವಾಕಾಂಕ್ಷೆಯನ್ನು ಈ ಹಿಂದಿನ ಯಾವ ಪ್ರಧಾನಿಯೂ ಹೊಂದಿರಲಿಲ್ಲ. ಈಶಾನ್ಯವನ್ನು ಭಾರತದ ಪ್ರಗತಿಯ 'ಅಷ್ಟಲಕ್ಷ್ಮಿ' ಎಂದು ವಿವರಿಸುವ ಮೂಲಕ ನಮ್ಮ ಪ್ರದೇಶದ ಜನರನ್ನು ಆಳವಾಗಿ ಸ್ಪರ್ಶಿಸಿದ್ದಾರೆ' ಎಂದು ಪತ್ರದಲ್ಲಿ ಉಲ್ಲೇಖಿಸಲಾಗಿದೆ.

ಮಿಜೋರಾಂ ರಾಜ್ಯಪಾಲ ಹರಿಬಾಬು ಅವರು ಪ್ರಧಾನಿ ನರೇಂದ್ರ ಮೋದಿ ಅವರನ್ನು ದೆಹಲಿಯಲ್ಲಿ ಸೋಮವಾರ ಭೇಟಿ ಮಾಡಿದರು –ಪಿಟಿಐ ಚಿತ್ರ

- ಮಿಜೋರಾಂ ಸಂಸದ ಕೆ. ವನ್ಲಾಲ್ವೇನಾ ವಿರುದ್ಧ ದಾಖಲಿಸಿರುವ ಎಫ್‌ಐಆರ್ ಹಿಂಪಡೆಯುವಂತೆ ಪೊಲೀಸರಿಗೆ ಆದೇಶಿಸಿದ್ದೇನೆ ಎಂದು ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮಾ ಅವರು ಸೋಮವಾರ ಹೇಳಿದ್ದಾರೆ. ಆದಾಗ್ಯೂ, ಮಿಜೋರಾಂನ ಆರು ಸರ್ಕಾರಿ ಅಧಿಕಾರಿಗಳ ವಿರುದ್ಧ ದಾಖಲಾಗಿರುವ ಪ್ರಕರಣದ ತನಿಖೆ ಮುಂದುವರಿಸಲಾಗುವುದು ಎಂದಿದ್ದಾರೆ.
- ಗಡಿ ಸಂಘರ್ಷದ ಕಾರಣ, ಅಗತ್ಯ ವಸ್ತುಗಳ ಸಾಗಾಟಕ್ಕೆ ಅಡ್ಡಿಯಾಗಿದೆ. ಅಸ್ಸಾಂನಿಂದ ಬರಬೇಕಿದ್ದ ಕೋವಿಡ್ ಪರೀಕ್ಷಾ ಕಿಟ್‌ಗಳು, ರೆಮ್‌ಡಿಸಿವಿರ್ ಮತ್ತು ಇತರ ಔಷಧಗಳು ಸೇರಿದಂತೆ ವೈದ್ಯಕೀಯ ಸಾಮಗ್ರಿಗಳ ಸಾಗಾಟ ತೀವ್ರವಾಗಿ ಅಸ್ತವ್ಯಸ್ತಗೊಂಡಿದೆ ಎಂದು ಮಿಜೋರಾಂ ಅಧಿಕಾರಿಗಳು ಮತ್ತು ವ್ಯಾಪಾರ ಸಂಘಟನೆ ಪ್ರತಿನಿಧಿಗಳು ತಿಳಿಸಿದ್ದಾರೆ.
- ಅಸ್ಸಾಂ ಪೊಲೀಸರು ಮತ್ತು ಅರಣ್ಯ ಅಧಿಕಾರಿಗಳು ಇತ್ತೀಚೆಗೆ ಸಿಯೊಂಗ್ ಜಿಲ್ಲೆಯ ಕಂಗು ವೃತ್ತದ ವ್ಯಾಪ್ತಿಯ ಹಲವಾರು ಗ್ರಾಮಗಳಲ್ಲಿ ನಡೆಸಿರುವ ಅಕ್ರಮಗಳ ಕುರಿತು ಅತ್ಯುನ್ನತ ಮಟ್ಟದಲ್ಲಿ ಪ್ರತಿಭಟನೆ ದಾಖಲಿಸುವಂತೆ ಅರುಣಾಚಲ ಪ್ರದೇಶ ವಿದ್ಯಾರ್ಥಿ ಸಂಘಟನೆಯು (ಎಎಪಿಎಸ್‌ಯು) ರಾಜ್ಯ ಸರ್ಕಾರವನ್ನು ಒತ್ತಾಯಿಸಿದೆ.

ಕೇಂದ್ರದಿಂದ ಪರಿಹಾರ: ರಾಜ್ಯಪಾಲ

ಮಿಜೋರಾಂ ರಾಜ್ಯಪಾಲ ಕೆ.ಹರಿಬಾಬು ಅವರು ಪ್ರಧಾನಿ ನರೇಂದ್ರ ಮೋದಿ ಅವರನ್ನು ಸೋಮವಾರ ಭೇಟಿಯಾಗಿ ಮಾತುಕತೆ ನಡೆಸಿದರು. ಕೇಂದ್ರ ಸರ್ಕಾರವು ಗಡಿ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಪ್ರಯತ್ನಿಸುತ್ತಿದೆ ಎಂದು ಹೇಳಿದರು.

ನಂತರ, ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಭೇಟಿ ಮಾಡಿದ ರಾಜ್ಯಪಾಲರು, ರಾಜ್ಯದ ಪ್ರಚಲಿತ ಪರಿಸ್ಥಿತಿ ಕುರಿತು ಚರ್ಚಿಸಿದರು. ಗೃಹ ಸಚಿವರು ಪರಿಸ್ಥಿತಿಯನ್ನು ಪರಿಹರಿಸುತ್ತಾರೆ ಎಂದು ಹೇಳಿದರು.

'ಘಟನೆ ದುರದೃಷ್ಟಕರ. ಸಮಸ್ಯೆ ಪರಿಹರಿಸಲು ಗೃಹಸಚಿವರು ಯತ್ನಿಸುತ್ತಿದ್ದಾರೆ. ಶಾಂತಿ ಸ್ಥಾಪನೆಗೆ ಎರಡೂ ರಾಜ್ಯಗಳ ಮುಖ್ಯಮಂತ್ರಿಗಳು ಬದ್ಧತೆ ವ್ಯಕ್ತಪಡಿಸಿದ್ದಾರೆ' ಎಂದರು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

Wanted

ಬಂದ ದಿನವೇ ಕೆಲಸ (ಮಾರ್ಕೆಟಿಂಗ್‌ಅಲ್ಲ) MNC ಕಂಪನಿಗಳಿಗೆ Primary,SSLC, PUC, ITI, any Degree Pass/Fail. ಯುವಕ, ಯುವತಿಯರು ಕೆಲಸಕ್ಕೆ ಬೇಕಾಗಿದ್ದಾರೆ. ESI/ PFನೊಂದಿಗೆ ಊಟ, ವಸತಿಯಿರುತ್ತದೆ. ಸಂಬಳ+ಓಟಿ.15,000 86,000. 7259685221, 7760116548

ಖಾಸಗಿ ಬ್ಯಾಂಕ್ ಗಳಲ್ಲಿ ಕೆಲಸಮಾಡಲು ಯುವಕ, ಯುವತಿಯರು ಬೇಕಾಗಿದ್ದಾರೆ SSLC, PUC, Degree ಸಂಬಳ 15000-28000 ಸಂಪರ್ಕಿಸಿರಿ 9980814578, 9980812378.

ಸಿನಿಮಾ ಸೀರಿಯಲ್ಲಲ್ಲಿ ನಟ/ ನಟಿ ನಿರ್ದೇಶಕರಾಗಲೂ ಹೊಸ ಪ್ರತಿಭೆಗಳಿಗೆ ಮಕ್ಕಳಿಗೆ ತರಬೇತಿಯೊಂದಿಗೆ ಅವಕಾಶವಿದೆ. ವಯೋಮಿತಿ ಇಲ್ಲ. ಸಿಲಿಜನ್ ಸಂಪರ್ಕಿಸಿ: 9731650962.

General

ಇಂದೇ ಬೇಕಾಗಿದ್ದಾರೆ ಬೆಂಗಳೂರಿನ ಸುಪ್ರಸಿದ್ಧ ಕಂಪನಿಯಲ್ಲಿ ಆಫೀಸ್ ಕೆಲಸಮಾಡಲು ಯುವಕ/ಯುವತಿಯರು ಬೇಕಾಗಿದ್ದಾರೆ (SSLC to Any Degree Pass/Fail) ಸಂಬಳ 18,000/-ರಿಂದ 65,000/-ದವರೆಗೆ ವಸತಿಯೂಟದೊಂದಿಗೆ ಇಂದೇ ಸಂಪರ್ಕಿಸಿ: ಸುಪ್ರಿಯಾ- 9538032277, 9538075599

ತಕ್ಷಣ ಬೇಕಾಗಿದ್ದಾರೆ ಬೆಂಗಳೂರು&ಕರ್ನಾಟಕದಾದ್ಯಂತ ಕಂಪನಿಗಳಿಗೆ, ಆಫೀಸ್‌ಗಳಿಗೆ,ಬ್ಯಾಂಕ್‌ಗಳಿಗೆ,ಶೋರೂಂಗಳಿಗೆಯಾವುದೇ ವಿದ್ಯಾರ್ಹತೆಯಿರುವ ವಿದ್ಯಾರ್ಹತೆಯಿಲದವರಿಗೂ ವಸತಿಯೂಟದೊಂದಿಗೆ ಸಂಬಳ+OT,17,200/- 47000/-.8884412822, 9986083666

ಬೇಕಾಗಿದ್ದಾರೆ: TATAಮೋಟಾರ್ಸ್, TOYOTA, ಬ್ರಿಟಾನಿಯಾ ಆನ್‌ಲೈನ್ ಕಂಪನಿಗಳಿಗೆ, ಆಫೀಸ್‌ಗಳಿಗೆ, ಶೋರೂಂಗಳಿಗೆ ಯುವಕ-ಯುವತಿಯರು ನೇರನೇಮಕಾತಿ.18,000- 56,000/-ವಸತಿಯೂಟವಿದೆ. 7204396011, 7204853296

ತಕ್ಷಣ ಬೇಕಾಗಿದ್ದಾರೆ ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲಿನ ಕಂಪನಿಗಳಿಗೆ ಹಾಗೂ ಆಫೀಸ್‌ಗಳಿಗೆ ಯುವಕ/ಯುವತಿಯರು ಕೆಲಸಕ್ಕೆ ಬೇಕಾಗಿದ್ದಾರೆ7th, SSLC,PUC,ITI Degree Pass/Fail ಆದವರಿಗೆ, (ವಿದ್ಯಾರ್ಹತೆಯಿಲ್ಲದವರಿಗೂ) ಉಚಿತ ವಸತಿಯೂಟದೊಂದಿಗೆ ESI/PFನೊಂದಿಗೆ ಸಂಬಳ:16,500ರಿಂದ 45000/-ದವರೆಗೆ. 9538250222, 9538191333

WORK FROM HOME
ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8095377333/ 8095377444

TVS ಬ್ರಿಟಾನಿಯಾ ವಿಡಿಯೋಕಾನ್ ಗಳಿಗೆ 7th,SSLC,PUC, ಡಿಗ್ರಿಯವರು ITI ನವರುಗಳು ಕರ್ನಾಟಕದ ಎಲ್ಲಾ ಜಿಲ್ಲೆಗಳಿಗೆ ನೇರನೇಮಕಾತಿಯಿರುತ್ತದೆ. ESI, PF ನೊಂದಿಗೆ 16,600- 60,000/- ವಸತಿಯೂಟವಿರುತ್ತದೆ. ಸಂಪರ್ಕಿಸಿ: 7760014526, 9739544856

ವಿಡಿಯೋಕಾನ್, TVS, ಟಯೋಟ, ಬ್ರಿಟಾನಿಯಾ ಕಂಪನಿಗಳಿಗೆ SSLC, PUC, ITI ನವರು ವಿದ್ಯಾರ್ಹತೆಯಿಲ್ಲದವರು ನೇರನೇಮಕಾತಿ ಸಂಬಳ: 16,600-56,000/- ವಸತಿಯೂಟವಿದೆ. 9611715755

EDUCATION SPECIAL
We are coming out with special offer for Admission Notice, Education Success Congratulation Ads
For details contact: Jerry: 9731810277
Vishal: 9845114560 Tanveer: 9886213331
E-mail: dhclassifieds@deccanherald.co.in

HEALTH SPECIAL

ವಿಜಯ ಇಂಟರ್‌ನ್ಯಾಷನಲ್ ಹೆಲ್ತ್‌ಕೇರ್
ಯಾವುದೇ ಅಡ್ಡಪರಿಣಾಮವಿಲ್ಲದೆ ಹಲವು ಸಮಸ್ಯೆಗಳ ಚಿಕಿತ್ಸೆಗೆ ಸಂಪರ್ಕಿಸಿ

ಲೈಂಗಿಕ ರೋಗಗಳು
ಲೈಂಗಿಕ ನಿರಾಸಕ್ತಿ
ಶೀಘ್ರ ಸ್ಖಲನ
ನರ ದೌರ್ಬಲ್ಯ
ಆತಂಕ, ದೌರ್ಬಲ್ಯ
ಮುಷ್ಠಿ ಮೈಥುನದ ಅಡ್ಡಪರಿಣಾಮ
ಉದ್ರೇಕದ ಸಮಸ್ಯೆ
ನಿದ್ರಾ ಸ್ಖಲನ
ಲಿಂಗ ಚಿಕ್ಕದಾಗುವುದು
ಅವಧಿಗೆ ಮೊದಲೇ ಸ್ಖಲನ
ಕಡಿಮೆ ವೀರ್ಯಾಣು
NO SIDE EFFECTS 100%
ಪರೀಕ್ಷಿಸಲು ಭಯಬೇಡ, ನಮ್ಮ ಹೆಲ್ತ್‌ಕೇರ್‌ನಲ್ಲಿ ಹಿರಿಯ ತಜ್ಞರಿರುತ್ತಾರೆ
1ನೇ ಮಹಡಿ, ಮಲ್ಲೇಶ್ವರಂ ಆರ್ಕೇಡ್, 7ನೇ ಕ್ರಾಸ್ ಮಾರ್ಗೋಸಾ ರಸ್ತೆ
Above Axis Bank, ಮಲ್ಲೇಶ್ವರಂ, ಬೆಂಗಳೂರು-03 97422 72259

ಭವಿಷ್ಯ

Astrology

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ 100% ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್.ಉಚಿತ ಭವಿಷ್ಯ ಖಚಿತ ಪರಿಹಾರ ಶ್ರೀಕ್ಷೇತ್ರ ಧರ್ಮಸ್ಥಳ, 7022443071

★ಉಚಿತ ಭವಿಷ್ಯ★ ಖಚಿತ ಪರಿಹಾರ:ನಿಮ್ಮ ಸಮಸ್ಯೆಗಳು ಯಾವುದೇ ಇರಲಿ ಸ್ತ್ರೀವಶೀಕರಣ, ಪುರುಷವಶೀಕರಣ ಲೈಂಗಿಕ ಸಮಸ್ಯೆ,ನಿಮ್ಮ ಯಾವುದೇ ಸಮಸ್ಯೆಗಳಿದ್ದರು 100% ಶಾಶ್ವತ ಪರಿಹಾರ.ಮಂತ್ರಾಲಯ. ಪಂಡಿತ್.ಸಾಗರ್ ಶರ್ಮ.8217374106

★ಶ್ರೀಸಾಯಿಗುರು ಜ್ಯೋತಿಷ್ಯ★ ಸ್ತ್ರೀಪುರುಷ ವಶೀಕರಣ, ಗಂಡ ಹೆಂಡತಿ ಕಲಹ, ಸಂತಾನಭಾಗ್ಯ, ಇನ್ಯಾವುದೇ ಎಲ್ಲಿಯೂ ಪರಿಹಾರ ಕಾಣದ ಎಷ್ಟೇಕಠಿಣವಾದ ಗುಪ್ತಸಮಸ್ಯೆಗಳಿಗೆ100% ಪರಿಹಾರ. 7829724990

ಸ್ತ್ರೀವಶೀಕರಣ, ಪುರುಷವಶೀಕರಣ ಪ್ರೀತಿಪ್ರೇಮ ಇಷ್ಟಪಟ್ಟವರು ನಿಮ್ಮಂತಾಗಲು 11ಗಂಟೆಗಳಲ್ಲಿ ಸ್ತ್ರೀಯರಿಗೆ ಕಡಿಮೆ ಖರ್ಚಿನಲ್ಲಿ ಪರಿಹಾರ. 9845544363

★||ಸಿಗಂದೂರು ಚೌಡೇಶ್ವರಿ||★ ವಶೀಕರಣಆಗಬೇಕಾದವರಿಗೆ ಹಚ್ಚುವುದಾಗಲಿ,ತಿನ್ನಿಸುವುದಾಗಲಿ, ಬಟ್ಟೆ,ಫೋಟೋ, ಕೂದಲು ಇಲ್ಲದಿದ್ದರೂ ಸ್ತ್ರೀಪುರುಷ ಲೈಂಗಿಕ ವಶೀಕರಣ, ಸ್ತ್ರೀಯರಿಗೆ 7ಗಂಟೆಗಳಲ್ಲಿ ಉಚಿತ ಪರಿಹಾರ.9845153558

★ಅಂಭಾಭವಾನಿ★ ಜ್ಯೋತಿಷ್ಯಾಲಯ ಕೊಳ್ಳೆಗಾಲದ ನಂ.1 'ವಶೀಕರಣ ಸ್ಪೆಷಲಿಸ್ಟ್' ದೇವಿಪ್ರಸಾದ್. (ಉಚಿತ ಭವಿಷ್ಯ ಖಚಿತ ಪರಿಹಾರ) ನಿಮ್ಮ ಸಮಸ್ಯೆಗಳೇನೇಯಿರಲಿ 2ದಿನದಲ್ಲಿ ಪರಿಹಾರ.9886755306

||★ಉಚಿತ ಭವಿಷ್ಯವಾಣಿ★|| ವಶೀಕರಣ ಸ್ಪೆಷಲಿಸ್ಟ್, ಸರ್ವಸಿದ್ಧಿ ಸಾಧಕರು ಮಂಜುನಾಥಶಾಸ್ತ್ರಿ 9900277438. ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ. 100% ಗ್ಯಾರಂಟಿ ಪರಿಹಾರ.

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ರಾಜ್ಯಸಭೆಯಲ್ಲಿ ಗದ್ದಲದ ನಡುವೆ ಮಸೂದೆಗೆ ಅನುಮೋದನೆ

ನವದೆಹಲಿ(ಪಿಟಿಐ): ರಾಜ್ಯಸಭೆಯಲ್ಲಿ ಸೋಮವಾರವೂ ಪೆಗಾಸಸ್ ಗೂಢಚರ್ಯೆ ವಿಷಯಕ್ಕೆ ಸಂಬಂಧಿಸಿಂತೆ ಗದ್ದಲ ಉಂಟಾಗಿದ್ದರಿಂದ ಹಲವು ಬಾರಿ ಸದನವನ್ನು ಮುಂದೂಡಲಾಯಿತು.

ಈ ಗದ್ದಲದ ನಡುವೆಯೇ 'ಒಳನಾಡು ಜಲಸಾರಿಗೆ ಮಸೂದೆ–2021'ಕ್ಕೆ ಅನುಮೋದನೆ ನೀಡಲಾಯಿತು. ವಿಪಕ್ಷಗಳ ಸದಸ್ಯರ ಪ್ರತಿಭಟನೆ ನಡುವೆಯೇ ಬಂದರು ಸಚಿವ ಸರ್ಬಾನಂದ್ ಸೊನೊವಾಲಾ ಅವರು ಮಸೂದೆ ಮಂಡಿಸಿದರು.

ಲೋಕಸಭೆ: ಕಲಾಪ ಮುಂದೂಡಿಕೆ

ಸಾಮಾನ್ಯ ವಿಮಾ ರಾಷ್ಟ್ರೀಕರಣ ತಿದ್ದುಪಡಿ ಮಸೂದೆ ಅಂಗೀಕಾರ

ನವದೆಹಲಿ(ಪಿಟಿಐ): ಪೆಗಾಸಸ್ ಗೂಢಚರ್ಯೆ ವಿವಾದ ಹಾಗೂ ಇತರ ವಿಷಯ ಕುರಿತು ವಿರೋಧಪಕ್ಷದ ಸದಸ್ಯರು ಸೋಮವಾರ ಲೋಕಸಭೆಯಲ್ಲಿ ಪ್ರತಿಭಟನೆ ಮುಂದುವರಿಸಿದ್ದರಿಂದ ಕಲಾಪವನ್ನು ಒಂದು ದಿನದ ಮಟ್ಟಿಗೆ ಮುಂದೂಡಲಾಯಿತು.

ಸ್ಪೀಕರ್ ಸ್ಥಾನದಲ್ಲಿದ್ದ ರಮಾದೇವಿ ಅವರು ಕಲಾಪವನ್ನು ಮುಂದೂಡುವ ಮುನ್ನ, ಸಾಮಾನ್ಯ ವಿಮಾ ವ್ಯವಹಾರ (ರಾಷ್ಟ್ರೀಕರಣ) ತಿದ್ದುಪಡಿ ಮಸೂದೆಯನ್ನು ಸದನವು ಧ್ವನಿಮತದ ಮೂಲಕ ಅಂಗೀಕರಿಸಿತು.

ಮಧ್ಯಾಹ್ನ 3.30ರ ವೇಳೆಗೆ ಸದನ ಮತ್ತೆ ಸಭೆ ಸೇರಿದಾಗ, ಕಾಂಗ್ರೆಸ್ ನಾಯಕ ಅಧೀರ್ ರಂಜನ್ ಚೌಧರಿ ಅವರು ಚರ್ಚೆಗೊಡ್ಡಿದ ವಿಷಯದ ಕುರಿತು ಪ್ರತಿಕ್ರಿಯಿಸಲು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಮುಂದಾದರು. ಆದರೆ, ಅದೇ ವೇಳೆ ವಿರೋಧಪಕ್ಷದ ಸದಸ್ಯರು ತಮ್ಮ ಪ್ರತಿಭಟನೆಯನ್ನು ಮುಂದುವರಿಸಿದರು.

ಗದ್ದಲ ಮುಂದುವರಿದಂತೆ, ಮಸೂದೆಯನ್ನು ಅಂಗೀಕರಿಸಲು ಸಚಿವರು ಪ್ರಯತ್ನಿಸಿದರು. ಕೊನೆಗೆ ಸಾಮಾನ್ಯ ವಿಮಾ ವ್ಯವಹಾರ (ರಾಷ್ಟ್ರೀಕರಣ) ತಿದ್ದುಪಡಿ ಮಸೂದೆಯನ್ನು ಧ್ವನಿ ಮತದ ಮೂಲಕ ಸದನವು ಅನುಮೋದಿಸಿತು. ನಂತರ ಕಲಾಪ ಮುಂದೂಡಲಾಯಿತು.

ಲಸಿಕೆಗಾಗಿ ನೂಕುನುಗ್ಗಲು

ಒಂದನೇ ಪುಟದಿಂದ...

ಸರ್ಕಾರಿ ಆಸ್ಪತ್ರೆ ಎದುರು ಜನರು ಕುಳಿತುಕೊಳ್ಳಲು ಶೆಡ್ ವ್ಯವಸ್ಥೆ ಮಾಡಲಾಗಿದೆ. ಆದರೆ ಪುರಭವನದ ಹೊರಗೆ ಯಾವುದೇ ವ್ಯವಸ್ಥೆ ಇಲ್ಲ. ನಸುಕಿನಲ್ಲಿ ಐದು ಗಂಟೆಗೆ ಕೊಡೆ ಹಿಡಿದು 300ಕ್ಕೂ ಹೆಚ್ಚು ಜನರು ಕೂಪನ್ ಪಡೆಯಲು ಸರತಿ ಸಾಲಿನಲ್ಲಿ ನಿಂತಿದ್ದರು.

'ಕೋವ್ಯಾಕ್ಸಿನ್ ಲಸಿಕೆ ಪಡೆಯುವವರಿಗೆ ಬೆಳಿಗ್ಗೆ 9 ಗಂಟೆಯಿಂದ ಪುರಭವನದಲ್ಲಿ ಕೂಪನ್ ನೀಡಲಾಗುತ್ತದೆ ಎಂದು ಮಾಧ್ಯಮಗಳಲ್ಲಿ ಮಾಹಿತಿ ನೀಡಲಾಗಿದೆ. ಜನರು ಮಳೆಯಲ್ಲಿ ಬೆಳಗಿನ ಜಾವ ಸರತಿಯ ಸಾಲಿನಲ್ಲಿ ನಿಲ್ಲುವ ಅಗತ್ಯವಿಲ್ಲ' ಎಂದು ಕುಮಟಾ ತಾಲ್ಲೂಕು ಆರೋಗ್ಯಾಧಿಕಾರಿ ಡಾ.ಆಜ್ಞಾ ನಾಯಕ ಸ್ಪಷ್ಟಪಡಿಸಿದರು.

ದಾಂಡೇಲಿ ನಗರದ ನಾಲ್ಕು ಕೋವಿಡ್ ಲಸಿಕಾ ಕೇಂದ್ರದಲ್ಲಿ 18 ವರ್ಷ ಮೇಲ್ಪಟ್ಟವರಿಗೆ ಮೊದಲ ಡೋಸ್‌ಅನ್ನು ನೀಡುವ ಕಾರ್ಯಕ್ಕೆ ಸೋಮವಾರ ಚಾಲನೆ ನೀಡಲಾಯಿತು. ಐದು ಕೇಂದ್ರಗಳಲ್ಲಿ ತಲಾ 250 ಡೋಸ್ ಲಸಿಕೆ ಮಾತ್ರ ನೀಡಲಾಗಿತ್ತು. ಪ್ರತಿ ಲಸಿಕಾ ಕೇಂದ್ರದ ಮುಂದೆ ಲಸಿಕೆ ಪಡೆಯಲು ಅಂತರ ಮರೆತು ಜನರ ನೂಕುನುಗ್ಗಲು ಸಾಮಾನ್ಯವಾಗಿತ್ತು.

ಲಸಿಕೆಗಾಗಿ ಜನ ಸಂದಣಿ ಉಂಟಾದಾಗ ಕೆಲವರು ಗೊಂದಲ ಸೃಷ್ಟಿಸಿದರು. ತಕ್ಷಣ ಅಲ್ಲಿಗೆ ಹೋಗಿ ಎಲ್ಲರಿಗೂ ಲಸಿಕೆ ನೀಡುವ ಬಗ್ಗೆ ಜನರಿಗೆ ಸಮಾಧಾನ ಹೇಳಿ ಬಂದೆ

ದಿನಕರ ಶೆಟ್ಟಿ, ಶಾಸಕ, ಕುಮಟಾ

'3,500 ಡೋಸ್ ಲಸಿಕೆ ಮಾತ್ರ ದಿನವೊಂದಕ್ಕೆ ಪೂರೈಕೆಯಾಗಿದೆ. ಆದರೆ ಹೆಚ್ಚಿನ ಸಂಖ್ಯೆಯಲ್ಲಿ ಜನರು ಕೇಂದ್ರಕ್ಕೆ ಬಂದಿದ್ದರಿಂದ ಸಮಸ್ಯೆ ಉಂಟಾಯಿತು

ಡಾ.ವಿನಾಯಕ ಭಟ್ಟ, ತಾಲ್ಲೂಕು ಆರೋಗ್ಯಾಧಿಕಾರಿ, ಶಿರಸಿ

ಆಯಾ ವಾರ್ಡುಗಳ ಸದಸ್ಯರು ಮೊದಲೇ ಟೋಕನ್ ಪಡೆದುಕೊಂಡಿದ್ದಾರೆ. ಅವರಿಗೆ ಬೇಕಾದವರಿಗೆ ಹಂಚಿಕೆ ಮಾಡಿದ್ದಾರೆ

ಪ್ರಕಾಶ್, ಸ್ಟಿಫನ್, ಸ್ಥಳೀಯರು, ಶಿರಸಿ

ಝಿಕಾ ಸೋಂಕು: ಮಹಾರಾಷ್ಟ್ರಕ್ಕೆ ಕೇಂದ್ರದ ತಂಡ

ನವದೆಹಲಿ (ಪಿಟಿಐ): ಝಿಕಾ ಸೋಂಕು ಪರಿಸ್ಥಿತಿಯ ಅಂದಾಜು ಹಾಗೂ ರಾಜ್ಯ ಸರ್ಕಾರಕ್ಕೆ ಅಗತ್ಯ ನೆರವು ನೀಡಲು ಕೇಂದ್ರ ಸರ್ಕಾರವು ಉನ್ನತ ಮಟ್ಟದ ತಂಡವನ್ನು ಮಹಾರಾಷ್ಟ್ರಕ್ಕೆ ಕಳುಹಿಸಿಕೊಟ್ಟಿದೆ. ಪುಣೆಯಲ್ಲಿ ಈಚೆಗೆ ಝಿಕಾ ಸೋಂಕಿನ ಒಂದು ಪ್ರಕರಣ ಪತ್ತೆಯಾಗಿತ್ತು ಎಂದು ಆರೋಗ್ಯ ಸಚಿವಾಲಯವು ಈ ಕುರಿತು ನೀಡಿದ ಹೇಳಿಕೆಯಲ್ಲಿ ತಿಳಿಸಿದೆ.

ಪುಣೆಯ ಸಾರ್ವಜನಿಕ ಆರೋಗ್ಯ ಪರಿಣತರು, ನವದೆಹಲಿಯ ಲೇಡಿ ಹಾರ್ಡಿಂಗ್ ವೈದ್ಯ ಕಾಲೇಜಿನ ಸ್ತ್ರೀರೋಗ ತಜ್ಞೆ, ಎನ್‌ಐಎಂಆರ್‌ನ ಸೂಕ್ಷ್ಮಾಣುಜೀವಿ ತಜ್ಞರು ಈ ತಂಡದಲ್ಲಿ ಇದ್ದಾರೆ.

ರಾಜ್ಯ ಆರೋಗ್ಯ ಇಲಾಖೆಯ ಸಹಯೋಗದಲ್ಲಿ ತಂಡವು ಪರಿಸ್ಥಿತಿಯನ್ನು ಅವಲೋಕಿಸಲಿದೆ. ಝಿಕಾ ನಿರ್ವಹಣೆಗೆ ಕೇಂದ್ರದ ಕ್ರಿಯಾ ಯೋಜನೆ ಜಾರಿಗೊಳಿಸುವ ಕುರಿತು ಸಲಹೆ ನೀಡಲಿದೆ ಎಂದು ಹೇಳಿಕೆ ತಿಳಿಸಿದೆ.

ಅಭಿಷೇಕ್ ಬ್ಯಾನರ್ಜಿಗೆ ಪ್ರತಿಭಟನೆ ಬಿಸಿ

ಅಗರ್ತಲಾ (ಪಿಟಿಐ): ತ್ರಿಪುರಾದ ಅಗರ್ತಲಾ ವಿಮಾನ ನಿಲ್ದಾಣದಿಂದ ತ್ರಿಪುರೇಶ್ವರಿ ದೇವಸ್ಥಾನಕ್ಕೆ ಹೋಗುವ ಮಾರ್ಗದಲ್ಲಿ ಟಿಎಂಸಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅಭಿಷೇಕ್ ಬ್ಯಾನರ್ಜಿಯವರ ಬೆಂಗಾವಲು ವಾಹನವನ್ನು ಬಿಜೆಪಿ ಕಾರ್ಯಕರ್ತರು ಹಲವು ಬಾರಿ ತಡೆಯಲು ಪ್ರಯತ್ನಿಸಿ, ಪ್ರತಿಭಟನೆ ನಡೆಸಿದರು ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಬ್ಯಾನರ್ಜಿಯವರ ಬೆಂಗಾವಲು ವಾಹನವನ್ನು ಪಶ್ಚಿಮ ತ್ರಿಪುರಾ ಜಿಲ್ಲೆಯ ಚರಿಲಂನಲ್ಲಿ, ನಂತರ ಸಿಪಹಿಜಾಲ ಜಿಲ್ಲೆಯ ಕಮಲಸಾಗರದಲ್ಲಿ ತಡೆಯಲಾಯಿತು ಎಂದು ಮೂಲಗಳು ಹೇಳಿವೆ.

ಟಿಎಂಸಿ ಸಂಸದ ಅಭಿಷೇಕ್ ಬ್ಯಾನರ್ಜಿ ಅವರು ಸೋಮವಾರ ಉದಯಪುರದ ತ್ರಿಪುರೇಶ್ವರಿ ದೇವಸ್ಥಾನಕ್ಕೆ ಭೇಟಿ ನೀಡಿದರು (ಪಿಟಿಐ ಚಿತ್ರ)

ರಾಜ್ಯ ಸಚಿವ ಸಂಪುಟ ವಿಸ್ತರಣೆ ತಯಾರಿ: ಮಹಿಳಾ ಪ್ರಾತಿನಿಧ್ಯದ ಕುರಿತು ಹೆಚ್ಚಿದ ಚರ್ಚೆ

‘ಮಹಿಳಾ ಪ್ರಾತಿನಿಧ್ಯ: ಸಾಂಕೇತಿಕ ಆಗದಿರಲಿ’

ಬೆಂಗಳೂರು: ರಾಜ್ಯ ಸಚಿವ ಸಂಪುಟ ವಿಸ್ತರಣೆಗೆ ತಯಾರಿ ನಡೆಯುತ್ತಿದೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಸಂಪುಟದಲ್ಲಿ ಯಾರಿಗೆ ಅವಕಾಶ ಸಿಗಲಿದೆ ಎಂಬ ಚರ್ಚೆಗಳು ನಡೆಯುತ್ತಿವೆ. ಮಹಿಳೆಯರಿಗೆ ಪ್ರಾತಿನಿಧ್ಯ ಸಿಗಲಿದೆಯೇ, ಸಿಕ್ಕರೂ ಸಾಂಕೇತಿಕವೇ? ‘ಪ್ರಜಾವಾಣಿ’ ಸೋಮವಾರ ಹಮ್ಮಿಕೊಂಡಿದ್ದ ಸಂವಾದದಲ್ಲಿ ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಆರ್.ಪ್ರಮೀಳಾ ನಾಯ್ಡು, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಆರ್.ಮಂಜುಳಾ ನಾಯ್ಡು, ಸಿಪಿಐ ರಾಜ್ಯ ಸಮಿತಿ ಸದಸ್ಯೆ ಜ್ಯೋತಿ ಅನಂತಸುಬ್ಬರಾವ್, ಹಿರಿಯ ಪತ್ರಕರ್ತೆ ಸಿ.ಜಿ.ಮಂಜುಳಾ ಅವರು ಹಂಚಿಕೊಂಡ ಅಭಿಪ್ರಾಯಗಳ ಸಂಕ್ಷಿಪ್ತ ವಿವರ ಇಲ್ಲಿದೆ.

ಪ್ರಜಾವಾಣಿ ಸಂವಾದ

‘ಮಹಿಳೆಯರಿಗೂ ಸಾಮರ್ಥ್ಯ ಇದೆ’

ಮಹಿಳೆಯರೂ ಸಮರ್ಥವಾಗಿ ಅಧಿಕಾರ ನಿಭಾಯಿಸಬಲ್ಲರು ಎಂಬುದಕ್ಕೆ ಸಾಕಷ್ಟು ನಿದರ್ಶನಗಳಿವೆ. ರಾಜಕೀಯದಲ್ಲಿ ಮಹಿಳಾ ಪ್ರಾತಿನಿಧ್ಯ ಶೇ 33 ಅಲ್ಲ, ಶೇ 50ರಷ್ಟು ಆಗಬೇಕು. ಮಹಿಳಾ ಮೀಸಲಾತಿ ಬಗ್ಗೆ ಪಕ್ಷಾತೀತವಾಗಿ ಹೋರಾಟ ಮಾಡಬೇಕಿದೆ. ಎಲ್ಲಾ ಪಕ್ಷದ ಮಹಿಳಾ ಘಟಕಗಳ ಪ್ರತಿನಿಧಿಗಳು, ಮಹಿಳಾ ಹೋರಾಟಗಾರರನ್ನು ಒಗ್ಗೂಡಿಸುವ ಕೆಲಸ ಮಾಡಲಾಗುವುದು. ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿ ಚುನಾಯಿತ ಮಹಿಳಾ ಪ್ರತಿನಿಧಿಗಳಿಗೆ ಜಾಗೃತಿ ಕಾರ್ಯಕ್ರಮಗಳನ್ನು ರಾಜ್ಯ ಮಹಿಳಾ ಆಯೋಗದಿಂದ ಆಯೋಜಿಸಲಾಗುವುದು. ಸಂಪುಟದಲ್ಲಿ ಮಹಿಳೆಯರಿಗೆ ಹೆಚ್ಚಿನ ಅವಕಾಶಗಳು ಸಿಗಬೇಕು.

–**ಆರ್.ಪ್ರಮೀಳಾ ನಾಯ್ಡು,** ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ

‘ಪಕ್ಷಗಳು ಆತ್ಮಾವಲೋಕನ ಮಾಡಿಕೊಳ್ಳಲಿ’

ಎಸ್.ಎಂ.ಕೃಷ್ಣ ಮುಖ್ಯಮಂತ್ರಿ ಆಗಿದ್ದ ಅವಧಿಯಲ್ಲಿ ನಾಲ್ವರು ಸಚಿವೆಯರಿದ್ದರು. ಬಳಿಕ ಅಷ್ಟು ಸ್ಥಾನ ಬೇರೆ ಅವಧಿಗಳಲ್ಲಿ ಸಿಕ್ಕಿಲ್ಲ. ಕೇಂದ್ರದಲ್ಲಿ 66 ಸಚಿವರಿದ್ದು, 11 ಮಹಿಳೆಯರಿಗೆ ಅವಕಾಶ ದೊರೆತಿದೆ. ಅಂದರೆ ಶೇ 14ರಷ್ಟು ಮಾತ್ರ. ಬಿಜೆಪಿಯ ನಾರಿಶಕ್ತಿ ಎಂದರೆ ಇದೇನಾ? ದೇಶದ 4,128 ವಿಧಾನಸಭಾ ಕ್ಷೇತ್ರಗಳ ಪೈಕಿ 364 ಕ್ಷೇತ್ರಗಳಲ್ಲಿ ಶಾಸಕಿಯರಿದ್ದಾರೆ. ರಾಜ್ಯದಲ್ಲಿ ಶೇ 20ರ ರಷ್ಟು ಮಾತ್ರ ಸ್ಥಾನ ಸಿಕ್ಕಿದೆ. ಕೆಲ ರಾಜ್ಯಗಳಲ್ಲಿ ಒಬ್ಬರೂ ಇಲ್ಲ. ರಾಜಕೀಯ ಪಕ್ಷದಲ್ಲಿ ಮಹಿಳಾ ಘಟಕಗಳು ಸಾಂಕೇತಿಕವಾಗಿ ಇವೆ. ಎಲ್ಲಾ ಪಕ್ಷಗಳು ಆತ್ಮಾವಲೋಕನ ಮಾಡಿಕೊಳ್ಳುವ ಅಗತ್ಯವಿದೆ. ಮಹಿಳೆಯರಿಗೆ ಟಿಕೆಟ್ ನೀಡಿದರೆ ಗೆಲ್ಲುವುದಿಲ್ಲ ಎಂಬುದು ಸರಿಯಲ್ಲ. ಮಹಿಳೆಯರಲ್ಲೂ ರಾಜಕೀಯ ಆಕಾಂಕ್ಷಿಗಳು ಬೆಳೆಯುತ್ತಿವೆ. ಅವರ ಆತ್ಮಸ್ಥೈರ್ಯ ಕಸಿಯುವ ಪ್ರಯತ್ನವನ್ನು ಪುರುಷ ಪ್ರಧಾನ ವ್ಯವಸ್ಥೆ ಮಾಡುತ್ತಿದೆ. ಬೀಜಿಂಗ್ ಮಹಿಳಾ ಸಮ್ಮೇಳನದ ಆಶಯದಂತೆ ನಿಜವಾದ ಪ್ರಜಾಪ್ರಭುತ್ವ ಎನಿಸಿಕೊಳ್ಳಲು ಮಹಿಳಾ ಪ್ರಾತಿನಿಧ್ಯ ಮುನ್ನೆಲೆಗೆ ಬರಬೇಕು.

–**ಸಿ.ಜಿ. ಮಂಜುಳಾ,** ಹಿರಿಯ ಪತ್ರಕರ್ತೆ

‘ಮೀಸಲಾತಿ ಮಸೂದೆ ಅಂಗೀಕಾರವಾಗಬೇಕು’

ರಾಜಕೀಯದಲ್ಲಿ ಮಹಿಳಾ ಪ್ರಾತಿನಿಧ್ಯವನ್ನು ಶೇ 33ರಷ್ಟು ನೀಡುವ ಉದ್ದೇಶದಿಂದ ರೂಪಿಸಿದ ಮಸೂದೆ ಜಾರಿಯಾಗದ ನನೆಗುದಿಗೆ ಬಿದ್ದಿದೆ. ಮಹಿಳಾ ಪ್ರಾತಿನಿಧ್ಯಕ್ಕೆ ಪಕ್ಷದೊಳಗೂ ಸಾಕಷ್ಟು ಹೋರಾಟಗಳನ್ನು ನಾವು ಮಾಡಿಕೊಂಡು ಬಂದಿದ್ದೇವೆ. 2013ರ ವಿಧಾನಸಭೆ ಚುನಾವಣೆಯಲ್ಲಿ 7 ಕ್ಷೇತ್ರಗಳಲ್ಲಿ ಮಹಿಳೆಯರಿಗೆ ಕಾಂಗ್ರೆಸ್ ಟಿಕೆಟ್ ನೀಡಿತ್ತು. 2018ರಲ್ಲಿ ಅದು 15ಕ್ಕೆ ಏರಿಕೆಯಾಯಿತು. ಮುಂದಿನ ದಿನಗಳಲ್ಲಿ 30 ಸ್ಥಾನಗಳಿಗೆ ಹೋರಾಟ ಮಾಡುತ್ತೇವೆ. ಎಲ್ಲಾ ರಾಜಕೀಯ ಪಕ್ಷಗಳ ಮನಸ್ಥಿತಿ ಬದಲಾಗಬೇಕು. ಬಿಜೆಪಿ ಈಗ ಬಹುಮತ ಹೊಂದಿದೆ. ಸಂಸತ್‌ನಲ್ಲಿ ನನೆಗುದಿಗೆ ಬಿದ್ದಿರುವ ಮಹಿಳೆಯರಿಗೆ ರಾಜಕೀಯದಲ್ಲಿ ಮೀಸಲಾತಿ ನೀಡುವ ಮಸೂದೆಯನ್ನು ಅಂಗೀಕರಿಸಬೇಕು. ಪ್ರಸ್ತುತ ರಾಜ್ಯ ಸಚಿವ ಸಂಪುಟದಲ್ಲಿ ಕನಿಷ್ಠ ಮೂವರು ಮಹಿಳೆಯರಿಗೆ ಸ್ಥಾನ ನೀಡಬೇಕು.

– **ಆರ್. ಮಂಜುಳಾ ನಾಯ್ಡು,** ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ

‘ಮೀಸಲಾತಿ ಭಿಕ್ಷೆ ಅಥವಾ ದಾನವಲ್ಲ’

ಮಹಿಳೆಯರಿಗೆ ಮೀಸಲಾತಿ ನೀಡುವುದು ಭಿಕ್ಷೆ ಅಥವಾ ದಾನ ಅಲ್ಲ. ಅದು ಸಾಂವಿಧಾನಿಕವಾಗಿ ಮತ್ತು ಹುಟ್ಟಿನಿಂದ ಬಂದಿರುವ ಹಕ್ಕು. ಪುರುಷ ಪ್ರಧಾನ ವ್ಯವಸ್ಥೆಯ ರಾಜಕೀಯ ಪ್ರಾತಿನಿಧ್ಯ ಕೊಡುತ್ತಿಲ್ಲ. 25 ವರ್ಷದಿಂದ ಮೀಸಲಾತಿ ಕೇಳುತ್ತಿದ್ದೇವೆ. ಮಹಿಳೆಯರು ಮನೆಯಲ್ಲೇ ಇರಬೇಕು ಎಂದು ಬಯಸುವ ಆರ್‌ಎಸ್‌ಎಸ್ ಅಡಿಯಲ್ಲಿ ಇರುವ ಬಿಜೆಪಿ ಪಕ್ಷದಿಂದ ಮಹಿಳೆಯರ ಮೀಸಲಾತಿ ಬಯಕೆ ಈಡೇರುವುದು ಕಷ್ಟ. ತೋಳ್ಬಲ, ಜಾತಿ, ಧರ್ಮದ ಆಧಾರದಲ್ಲಿ ಚುನಾವಣಾ ವ್ಯವಸ್ಥೆ ನಿಂತಿದೆ. ಕಮ್ಯುನಿಸ್ಟ್ ಪಕ್ಷಗಳು ಕೂಡ ಈ ವಿಷಯದಲ್ಲಿ ಸುಧಾರಣೆ ಆಗಬೇಕು. ಕೇರಳದಲ್ಲಿನ 21 ಸಚಿವರಲ್ಲಿ ಮೂವರು ಮಾತ್ರ ಮಹಿಳೆಯರಿದ್ದಾರೆ. ಕಮ್ಯುನಿಸ್ಟ್ ಪಕ್ಷಗಳಲ್ಲಿ ಇರುವವರು ಕೂಡ ಇದೇ ಸಮಾಜದಿಂದ ಬಂದವರೇ ಆಗಿದ್ದಾರೆ. ಬೇರೆ ಪಕ್ಷಗಳಲ್ಲಿ ಚುನಾವಣೆಗೆ ನಿಲ್ಲಲು ಟಿಕೆಟ್ ಖರೀದಿಸಬೇಕಾದ ಸ್ಥಿತಿ ಇದೆ. ಇವೆಲ್ಲವುಗಳ ವಿರುದ್ಧ ಹೋರಾಟಗಳು ನಡೆಯಬೇಕಿದೆ.

–**ಜ್ಯೋತಿ ಅನಂತಸುಬ್ಬರಾವ್,** ಸಿಪಿಐ ರಾಜ್ಯ ಸಮಿತಿ ಸದಸ್ಯೆ

ಪೂರ್ಣ ಸಂವಾದ ವೀಕ್ಷಿಸಲು: https://www.facebook.com/prajavani.net/videos

ಕೃಷ್ಣಾ ಪ್ರವಾಹ ಇಳಿಮುಖ

ಪ್ರಜಾವಾಣಿ ವಾರ್ತೆ

ರಾಯಚೂರು/ಯಾದಗಿರಿ: ಕೃಷ್ಣಾ ನದಿ ಪ್ರವಾಹ ಇಳಿಕೆಯಾಗಿದೆ. ರಾಯಚೂರು ಜಿಲ್ಲೆಯ ಹೂವಿನಹೆಡಗಿ ಮತ್ತು ಲಿಂಗಸುಗೂರು ತಾಲ್ಲೂಕಿನ ಶೀಲಹಳ್ಳಿ ಸೇತುವೆ ಮೇಲಿನ ನೀರು ತೆರವಾಗಿದೆ.

ಸೇತುವೆಯಿಂದ ಜ್ವಾಲ್ಲ ತೆರವು ಗೊಳಿಸಿ ವಾಹನಗಳ ಸಂಚಾರಕ್ಕೆ ಮಂಗಳ ವಾರದಿಂದ ಅವಕಾಶ ಮಾಡಿಕೊಡಲಾ ಗುವುದು ಎಂದು ಅಧಿಕಾರಿಗಳು ತಿಳಿಸಿ ದ್ದಾರೆ. ಯಾದಗಿರಿ ಜಿಲ್ಲೆಯ ಸುರಪುರ, ಶಹಾಪುರ ಮತ್ತು ವಡಗೇರಾ ತಾಲ್ಲೂಕಿನಲ್ಲಿ ಸಾವಿರಾರು ಹೆಕ್ಟೇರ್ ಪ್ರದೇಶದಲ್ಲಿ ಭತ್ತ, ಹತ್ತಿ ಬೆಳೆ ಹಾನಿಯಾಗಿದೆ.

ಭದ್ರಾ ಭರ್ತಿಗೆ 4 ಅಡಿ ಬಾಕಿ (ಶಿವಮೊಗ್ಗ ವರದಿ): ಭದ್ರಾ ಜಲಾಶಯ ಪಾತ್ರದಲ್ಲಿ ಮಳೆ ಮುಂದುವರಿದಿದೆ. ಭದ್ರೆ ಭರ್ತಿಗೆ ನಾಲ್ಕು ಅಡಿ ಬಾಕಿ ಇದೆ. 186 ಅಡಿ ಸಾಮರ್ಥ್ಯದ ಜಲಾಶಯದ ಈಗಿನ ಮಟ್ಟ 182 ಅಡಿ. ಲಿಂಗನಮಕ್ಕಿ ಜಲಾಶಯದ ಮಟ್ಟ 1,807 ಅಡಿಗೆ ತಲುಪಿದ್ದು, ಭರ್ತಿಗೆ 12 ಅಡಿ ಬಾಕಿ ಇದೆ. ತುಂಗಾ ಜಲಾಶಯದಿಂದ 16 ಸಾವಿರ ಕ್ಯುಸೆಕ್ ನೀರು ಹೊರಗೆ ಹರಿಸಲಾಗುತ್ತಿದೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು
ಕೆಆರ್‌ಎಸ್*	124.80	115.36	8,815	5,453
ಹಾರಂಗಿ	2,859	2,855.91	3,618	3,425
ಕಬಿನಿ	2284.00	2,279.95	5,000	1,000
ಹೇಮಾವತಿ	2,922	2,919.35	6,332	5,525
ಲಿಂಗನಮಕ್ಕಿ	1,819	1,807.20	14,481	-
ಸೂಪಾ (ಮೀ)	564	552.30	14,019	2,584
ವಾಣಿ	594	582.34	2,170	-
ತುಂಗಭದ್ರಾ	1,633	1,632.07	37,462	36286
ಮಲಪ್ರಭಾ	2079.5	2,075.20	4,692	1,684
ಘಟಪ್ರಭಾ	2175	2,172.75	10,258	15,493
ಭದ್ರಾ	186	182.8	7,854	3,143
ಆಲಮಟ್ಟಿ (ಮೀ)	519.6	517.48	3,45,671	2,73,253
ನಾರಾಯಣಪುರ (ಮೀ)	492.25	490.46	3200000	154960

* ನೆಲಮಟ್ಟದಿಂದ

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	15,763
ಇಂದಿನ ಅಂತ್ಯ	15,885
▲	122
ದಿನದ ಗರಿಷ್ಠ	15,892

ವಿನಿಮಯ ದರ

$ ಡಾಲರ್	74.34
£ ಪೌಂಡ್	103.5
€ ಯುರೊ	88.46
¥ ಯೆನ್ (100ಕ್ಕೆ)	68

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹455
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹457

ಜುಲೈನಲ್ಲಿ ರಫ್ತು ಶೇ 47ರಷ್ಟು ಹೆಚ್ಚಳ

ನವದೆಹಲಿ (ಪಿಟಿಐ): ದೇಶದ ರಫ್ತು ವಹಿವಾಟು ಜುಲೈನಲ್ಲಿ ಶೇಕಡ 47ರಷ್ಟು ಹೆಚ್ಚಾಗಿದ್ದು, ಮೌಲ್ಯದ ಲೆಕ್ಕದಲ್ಲಿ ₹ 2.60 ಲಕ್ಷ ಕೋಟಿಗೆ ಏರಿದೆ.

ಎಂಜಿನಿಯರಿಂಗ್, ಪೆಟ್ರೋಲಿಯಂ, ಹರಳು ಮತ್ತು ಚಿನ್ನಾಭರಣ ರಫ್ತು ಉತ್ತಮ ಬೆಳವಣಿಗೆ ಕಂಡಿದ್ದರಿಂದ ಈ ಪ್ರಮಾಣದ ಪ್ರಗತಿ ಸಾಧ್ಯವಾಗಿದೆ ಎಂದು ಕೇಂದ್ರ ವಾಣಿಜ್ಯ ಸಚಿವಾಲಯ ಮಾಹಿತಿ ನೀಡಿದೆ.

ಆಮದು ವಹಿವಾಟು ಜುಲೈನಲ್ಲಿ ಶೇ 59ರಷ್ಟು ಹೆಚ್ಚಾಗಿದ್ದು ₹ 3.43 ಲಕ್ಷ ಕೋಟಿಗೆ ಏರಿಕೆ ಕಂಡಿದೆ.

ಬೇಡಿಕೆಯಲ್ಲಿ ಸುಧಾರಣೆ, ಲಾಕ್‌ಡೌನ್ ನಿರ್ಬಂಧ ಸಡಿಲ

ಜುಲೈನಲ್ಲಿ ಚೇತರಿಸಿಕೊಂಡ ತಯಾರಿಕಾ ವಲಯ

ನವದೆಹಲಿ (ಪಿಟಿಐ): ಬೇಡಿಕೆಯಲ್ಲಿ ಸುಧಾರಣೆ ಕಂಡುಬಂದಿದ್ದು ಮತ್ತು ಸ್ಥಳೀಯವಾಗಿ ಜಾರಿಯಲ್ಲಿದ್ದ ಕೋವಿಡ್ ನಿರ್ಬಂಧಗಳನ್ನು ಕೆಲವು ಕಡೆಗಳಲ್ಲಿ ಸಡಿಲಿಸಿದ ಪರಿಣಾಮವಾಗಿ ದೇಶದ ತಯಾರಿಕಾ ವಲಯದ ಚಟುವಟಿಕೆಯು ಜುಲೈನಲ್ಲಿ ಉತ್ತಮ ಬೆಳವಣಿಗೆ ಕಂಡಿದೆ ಎಂದು ಐಎಚ್‌ಎಸ್ ಮರ್ಕಿಟ್ ಇಂಡಿಯಾ ಸಂಸ್ಥೆ ಹೇಳಿದೆ.

ಮ್ಯಾನುಫ್ಯಾಕ್ಚರಿಂಗ್ ಪರ್ಚೇಸಿಂಗ್ ಮ್ಯಾನೇಜರ್ಸ್ ಇಂಡೆಕ್ಸ್ (ಪಿಎಂಐ) ಜೂನ್‌ನಲ್ಲಿ 48.1ರಷ್ಟು ಇತ್ತು. ಇದು ಜುಲೈನಲ್ಲಿ 55.3ಕ್ಕೆ ಏರಿಕೆ ಆಗಿದೆ. ಮೂರು ತಿಂಗಳಿನಲ್ಲಿ ಅತ್ಯಂತ ವೇಗದ ಬೆಳವಣಿಗೆ ದರ ಇದಾಗಿದೆ ಎಂದು ಸಂಸ್ಥೆ ತಿಳಿಸಿದೆ.

ದೇಶದ ತಯಾರಿಕಾ ವಲಯವು ಜೂನ್‌ನಲ್ಲಿ ಕಂಡಿದ್ದಂತಹ ಇಳಿಕೆಯಿಂದ ಚೇತರಿಸಿಕೊಂಡಿದೆ ಎನ್ನುವುದು ಉತ್ತೇಜನ ನೀಡುವ ಸಂಗತಿ. ಪ್ರತಿ ಮೂರು ಕಂಪನಿಗಳ ಪೈಕಿ ಒಂದು ಕಂಪನಿಯ ತಿಂಗಳ ತಯಾರಿಕೆ ಪ್ರಮಾಣದಲ್ಲಿ ಹೆಚ್ಚಳ ಕಂಡುಬಂದಿದೆ ಎಂದು ಐಎಚ್‌ಎಸ್ ಮರ್ಕಿಟ್‌ನ ಅರ್ಥಶಾಸ್ತ್ರ ವಿಭಾಗದ ಸಹಾಯಕ ನಿರ್ದೇಶಕಿ ಪಾಲಿಯಾನಾ ಡಿ. ಲಿಮಾ ಹೇಳಿದ್ದಾರೆ.

ಸಾಂಕ್ರಾಮಿಕ ಹರಡುವಿಕೆಯು ಕಡಿಮೆಯಾಗುತ್ತಾ ಬಂದರೆ 2021ರ ಕ್ಯಾಲೆಂಡರ್ ವರ್ಷಕ್ಕೆ ಕೈಗಾರಿಕಾ ಉತ್ಪಾದನೆಯಲ್ಲಿ ಶೇಕಡ 9.7ರ ಪ್ರಮಾಣದಲ್ಲಿ ವಾರ್ಷಿಕ ಹೆಚ್ಚಳವನ್ನು ತಾವು ನಿರೀಕ್ಷಿಸುವುದಾಗಿ ಅವರು ಹೇಳಿದ್ದಾರೆ.

ಉದ್ಯೋಗಕ್ಕೆ ಸಂಬಂಧಿಸಿದಂತೆ ಜುಲೈನಲ್ಲಿ ಅಲ್ಪ ಏರಿಕೆ ಕಂಡುಬಂದಿದ್ದು, ಸತತ 15 ತಿಂಗಳ ಉದ್ಯೋಗ ನಷ್ಟದಿಂದ ಹೊರಬಂದಂತಾಗಿದೆ.

ಹಣದುಬ್ಬರದ ಪ್ರಮಾಣ ತುಸು ತಗ್ಗಿದ್ದರೂ ತಯಾರಿಕಾ ವೆಚ್ಚವು ಗಣನೀಯವಾಗಿ ಹೆಚ್ಚುತ್ತಿದೆ. ಆದರೆ, ಮಾರಾಟ ಹೆಚ್ಚಿಸುವ ಉದ್ದೇಶದಿಂದ ಹಲವು ಕಂಪನಿಗಳು ತಯಾರಿಕಾ ವೆಚ್ಚದ ಮೇಲಿನ ಹೆಚ್ಚುವರಿ ಹೊರೆಯನ್ನು ತಾವೇ ಭರಿಸುತ್ತಿವೆ ಎಂದು ತಿಳಿಸಿದ್ದಾರೆ.

ಐಟಿ ಕಾಯ್ದೆಯ ರದ್ದಾಗಿರುವ ಸೆಕ್ಷನ್ 66ಎ: ರಾಜ್ಯಗಳು, ಹೈಕೋರ್ಟ್‌ಗಳಿಗೆ ನೋಟಿಸ್

ನವದೆಹಲಿ (ಪಿಟಿಐ): ಮಾಹಿತಿ ತಂತ್ರಜ್ಞಾನ ಕಾಯ್ದೆಯ ರದ್ದುಪಡಿಸಲಾದ ಸೆಕ್ಷನ್ 66ಎ ಅಡಿಯಲ್ಲಿ ಈಗಲೂ ಪ್ರಕರಣ ದಾಖಲಿಸಲಾಗುತ್ತಿದೆ ಎಂದು ಆರೋಪಿಸಿ ಸಲ್ಲಿಸಲಾದ ಅರ್ಜಿಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ಸೋಮವಾರ ಎಲ್ಲಾ ರಾಜ್ಯಗಳು, ಕೇಂದ್ರಾಡಳಿತ ಪ್ರದೇಶಗಳು ಹಾಗೂ ಹೈಕೋರ್ಟ್‌ಗಳಿಗೆ ನೋಟಿಸ್ ಜಾರಿಗೊಳಿಸಿದೆ.

ಸರ್ಕಾರೇತರ ಸಂಘಟನೆ ಪೀಪಲ್ಸ್ ಯೂನಿಯನ್ ಫಾರ್ ಸಿವಿಲ್ ಲಿಬರ್ಟೀಸ್ (ಪಿಯುಸಿಎಲ್) ಸಲ್ಲಿಸಿರುವ ಅರ್ಜಿಯ ಮೇರೆಗೆ ಪೊಲೀಸ್ ವಿಷಯ ರಾಜ್ಯಗಳ ವ್ಯಾಪ್ತಿಗೆ ಬರುವ ಹಿನ್ನೆಲೆಯಲ್ಲಿ ನ್ಯಾಯಮೂರ್ತಿಗಳಾದ ಆರ್.ಎಫ್.ನರೀಮನ್ ಮತ್ತು ಬಿ.ಆರ್.ಗವಾಯಿ ಅವರಿದ್ದ ಪೀಠ ಈ ನೋಟಿಸ್ ಜಾರಿಗೊಳಿಸಿತು. ‘ನಾವು ಇದರ ಬಗ್ಗೆ ಒಂದು ಸಮಗ್ರ ಆದೇಶವನ್ನು ಹೊರಡಿಸಿ ವಿಷಯವನ್ನು ಶಾಶ್ವತವಾಗಿ ಕೊನೆಗೊಳಿಸಬಹುದಾಗಿದೆ’ ಎಂದು ಪೀಠ ಹೇಳಿತು. ನೋಟಿಸ್‌ಗೆ ನಾಲ್ಕು ವಾರದೊಳಗೆ ಉತ್ತರ ನೀಡಬೇಕು ಎಂದು ಪೀಠ ಸೂಚಿಸಿತು.

ರಾಜ್ಯಗಳ ಹೊಣೆ: ಇದಕ್ಕೆ ಮೊದಲು ಪೀಠದ ಮುಂದೆ ಪ್ರಮಾಣಪತ್ರ ಸಲ್ಲಿಸಿದ ಕೇಂದ್ರ ಸರ್ಕಾರ, ಸಂವಿಧಾನದಲ್ಲಿನ ನಿಯಮಗಳ ಅನುಸಾರ ‘ಪೊಲೀಸ್’ ಮತ್ತು ‘ಸಾರ್ವಜನಿಕ ಆದೇಶ’ಗಳು ರಾಜ್ಯ ಸರ್ಕಾರಕ್ಕೆ ಸಂಬಂಧಿಸಿದ ವಿಷಯಗಳಾಗಿದ್ದು, ‘ಮಾಹಿತಿ ತಂತ್ರಜ್ಞಾನ ಕಾಯ್ದೆಯ ಸೆಕ್ಷನ್ 66 ಎ ರದ್ದುಗೊಳಿಸಿ ಆದೇಶಿಸಿರುವ 2015ರ‘ ತೀರ್ಪನ್ನು ಜಾರಿಗೊಳಿಸುವ ಪ್ರಾಥಮಿಕ ಜವಾಬ್ದಾರಿಯೂ ರಾಜ್ಯ ಸರ್ಕಾರಗಳ ಕಾನೂನು ಜಾರಿ ಸಂಸ್ಥೆಗಳಿಗೆ ಸೇರಿದೆ ಎಂದು ಹೇಳಿತ್ತು.

2015ರಲ್ಲಿ ರದ್ದಾಗಿರುವ ಕಾಯ್ದೆಯ ಸೆಕ್ಷನ್ 66ಎ ದುರ್ಬಳಕೆಯಾಗುತ್ತಿದೆ. ಈ ಕಾಯ್ದೆಯನ್ನು ಸಮರ್ಪಕವಾಗಿ ಜಾರಿ ಮಾಡಿಲ್ಲ ಎಂದು ಆರೋಪಿಸಿ ಪಿಯುಸಿಎಲ್ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿತ್ತು. ಈ ಅರ್ಜಿಗೆ ಪ್ರತಿಕ್ರಿಯೆ ನೀಡುವಂತೆ ಸುಪ್ರೀಂ ಕೋರ್ಟ್ ಕೇಂದ್ರಕ್ಕೆ ನೋಟಿಸ್ ಜಾರಿ ಮಾಡಿತ್ತು.

ರದ್ದಾಗಿರುವ ಸೆಕ್ಷನ್ ಅಡಿಯಲ್ಲಿ, ಸಾಮಾಜಿಕ ಜಾಲತಾಣಗಳಲ್ಲಿ ಆಕ್ರಮಣಕಾರಿ ಸಂದೇಶಗಳನ್ನು ಪೋಸ್ಟ್ ಮಾಡುವ ವ್ಯಕ್ತಿಗೆ ಮೂರು ವರ್ಷಗಳವರೆಗೆ ಜೈಲು ಶಿಕ್ಷೆ ವಿಧಿಸಬಹುದು ಮತ್ತು ದಂಡ ವಿಧಿಸಬಹುದಾಗಿದೆ.

ಆಗಸ್ಟ್, ಸೆಪ್ಟೆಂಬರ್‌ನಲ್ಲಿ ಹೆಚ್ಚು ಮಳೆಯಾಗುವ ಸಾಧ್ಯತೆ

ನವದೆಹಲಿ(ಪಿಟಿಐ): ನಾಲ್ಕು ತಿಂಗಳ ಮಳೆಗಾಲದ ಋತುವಿನ ಆಗಸ್ಟ್ ಮತ್ತು ಸೆಪ್ಟೆಂಬರ್ ತಿಂಗಳಲ್ಲಿ ವಾಡಿಕೆಗಿಂತಲೂ ಹೆಚ್ಚು ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಸೋಮವಾರ ತಿಳಿಸಿದೆ.

ಕರ್ನಾಟಕ, ತಮಿಳುನಾಡು, ತೆಲಂಗಾಣ, ಆಂಧ್ರಪ್ರದೇಶದ ರಾಯಲಸೀಮೆ ಪ್ರದೇಶ, ಕೊಂಕಣ ಮತ್ತು ಗೋವಾ, ಮಹಾರಾಷ್ಟ್ರದ ಮಧ್ಯಭಾಗ, ದಕ್ಷಿಣ ಗುಜರಾತ್, ಈಶಾನ್ಯ ರಾಜ್ಯಗಳು ಮತ್ತು ಬಿಹಾರದಲ್ಲಿ ಆಗಸ್ಟ್ ತಿಂಗಳಲ್ಲಿ ವಾಡಿಕೆಗಿಂತಲೂ ಹೆಚ್ಚು ಮಳೆಯಾಬಹುದು ಎಂದು ಭಾರತೀಯ ಹವಾಮಾನ ಇಲಾಖೆಯ ಮಹಾ ನಿರ್ದೇಶಕ ಮೃತ್ಯುಂಜಯ ಮೊಹಾಪಾತ್ರ ತಿಳಿಸಿದ್ದಾರೆ.

ಮಧ್ಯಪ್ರದೇಶ, ರಾಜಸ್ಥಾನ ಸೇರಿದಂತೆ ಕೆಲವು ರಾಜ್ಯಗಳಲ್ಲಿ ಆಗಸ್ಟ್ ತಿಂಗಳಲ್ಲಿ ವಾಡಿಕೆಗಿಂತಲೂ ಕಡಿಮೆ ಮಳೆಯಾಗಬಹುದು ಎಂದು ಅವರು ತಿಳಿಸಿದ್ದಾರೆ.

ಡೆಲ್ಟಾ ಪ್ಲಸ್ ವಿರುದ್ಧ ಕೋವ್ಯಾಕ್ಸಿನ್ ಪರಿಣಾಮಕಾರಿ: ಐಸಿಎಂಆರ್

ಹೈದರಾಬಾದ್(ಪಿಟಿಐ): ಭಾರತ್ ಬಯೊಟೆಕ್‌ನ ಕೋವಿಡ್–19 ಲಸಿಕೆ ‘ಕೋವ್ಯಾಕ್ಸಿನ್’ (ಬಿಬಿವಿ152) ಡೆಲ್ಟಾ ಪ್ಲಸ್ ತಳಿ ವಿರುದ್ಧ ಪರಿಣಾಮಕಾರಿಯಾಗಿದೆ ಎಂದು ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿಯ (ಐಸಿಎಂಆರ್) ತಿಳಿಸಿದೆ.

’ಡೆಲ್ಟಾ, ಡೆಲ್ಟಾ ಎವೈ.1 ಮತ್ತು ಬಿ.1.617.3 ತಳಿಗಳ ವಿರುದ್ಧ ಕೋವ್ಯಾಕ್ಸಿನ್ ಪರಿಣಾಕಾರಿಯಾಗಿದೆ ಎನ್ನುವುದು ಅಧ್ಯಯನದಿಂದ ತಿಳಿದು ಬಂದಿದೆ’ ಎಂದು ಐಸಿಎಂಆರ್ ತಿಳಿಸಿದೆ.

‘ವಿವಿಧ ಆಯಾಮಗಳಲ್ಲಿ ಲಸಿಕೆಯ ಪರೀಕ್ಷೆ ನಡೆಸಲಾಗಿದೆ. ಕೋವ್ಯಾಕ್ಸಿನ್ ಲಸಿಕೆ ಡೆಲ್ಟಾ ರೂಪಾಂತರ ತಳಿಯನ್ನು ಪರಿಣಾಮಕಾರಿಯಾಗಿ ನಿಷ್ಕ್ರಿಯಗೊಳಿಸುತ್ತದೆ’ ಎಂದು ಅದು ತಿಳಿಸಿದೆ.

ಭಾರತದಲ್ಲಿ ಮೊದಲ ಬಾರಿ ಏಪ್ರಿಲ್ ತಿಂಗಳಲ್ಲಿ ಡೆಲ್ಟಾ ತಳಿ ಪತ್ತೆಯಾಗಿತ್ತು. ನಂತರ, 20 ದೇಶಗಳಲ್ಲಿ ಇದೇ ತಳಿ ಪತ್ತೆಯಾಗಿತ್ತು.

ಕೋವಿಡ್: ವಾಹನ ಮೇಳ ಮುಂದಕ್ಕೆ

ನವದೆಹಲಿ (ಪಿಟಿಐ): ಮುಂದಿನ ವರ್ಷದ ಫೆಬ್ರುವರಿಯಲ್ಲಿ ಗ್ರೇಟರ್ ನೊಯಿಡಾದಲ್ಲಿ ನಡೆಯಬೇಕಿದ್ದ ವಾಹನ ಪ್ರದರ್ಶನ ಮೇಳವನ್ನು (ಆಟೊ ಎಕ್ಸ್‌ಪೊ) ಕೋವಿಡ್–19 ಸಾಂಕ್ರಾಮಿಕದ ಕಾರಣದಿಂದಾಗಿ ಮುಂದೂಡಲಾಗಿದೆ ಎಂದು ಭಾರತೀಯ ವಾಹನ ತಯಾರಕರ ಒಕ್ಕೂಟ (ಎಸ್‌ಐಎಎಂ) ಸೋಮವಾರ ತಿಳಿಸಿದೆ.

ಈ ಮೇಳಕ್ಕೆ ಭಾರಿ ಸಂಖ್ಯೆಯಲ್ಲಿ ಜನ ಸೇರುವುದರಿಂದ ಪರಸ್ಪರ ಅಂತರ ಕಾಯ್ದುಕೊಳ್ಳುವಂತೆ ನಿಗಾ ವಹಿಸುವುದು ಕಷ್ಟವಾಗಲಿದೆ. ಸೋಂಕು ಹರಡುವ ಸಾಧ್ಯತೆಯು ಗರಿಷ್ಠ ಮಟ್ಟದಲ್ಲಿ ಇರುತ್ತದೆ. ಈ ಕಾರಣಗಳಿಂದಾಗಿ ವಾಹನಗಳ ಪ್ರದರ್ಶನ ಮೇಳವನ್ನು ಮುಂದೂಡಲು ನಿರ್ಧರಿಸಲಾಗಿದೆ ಎಂದು ಒಕ್ಕೂಟದ ಪ್ರಧಾನ ನಿರ್ದೇಶಕ ರಾಜೇಶ್ ಮೆನನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

‘ನಿರುದ್ಯೋಗ ಪ್ರಮಾಣ ಶೇ 13’

ನವದೆಹಲಿ (ಪಿಟಿಐ): 2020ರ ಜುಲೈ–ಸೆಪ್ಟೆಂಬರ್ ಅವಧಿಯಲ್ಲಿ ದೇಶದಲ್ಲಿ ನಿರುದ್ಯೋಗ ಪ್ರಮಾಣವು ಶೇಕಡ 13.3ಕ್ಕೆ ಏರಿಕೆ ಆಗಿತ್ತು ಎಂದು ರಾಷ್ಟ್ರೀಯ ಸಾಂಖ್ಯಿಕ ಕಚೇರಿಯ (ಎನ್‌ಎಸ್‌ಒ) ಸಮೀಕ್ಷೆಯ ವರದಿ ಹೇಳಿದೆ. 2019ರ ಇದೇ ಅವಧಿಯಲ್ಲಿ ನಿರುದ್ಯೋಗ ಪ್ರಮಾಣವು ಶೇ 8.4ರಷ್ಟು ಇತ್ತು.

2020ರ ಏಪ್ರಿಲ್–ಜೂನ್ ಅವಧಿಯಲ್ಲಿ ನಿರುದ್ಯೋಗ ಪ್ರಮಾಣವು ಶೇ 20.9ರಷ್ಟು ಇತ್ತು.

ವೊಡಾಫೋನ್ ಐಡಿಯಾ: ಸರ್ಕಾರಕ್ಕೆ ಷೇರು ವರ್ಗಾಯಿಸಲು ಮುಂದಾದ ಬಿರ್ಲಾ

ನವದೆಹಲಿ (ಪಿಟಿಐ): ಸಾಲದ ಸುಳಿಗೆ ಸಿಲುಕಿರುವ ವೊಡಾಫೋನ್ ಐಡಿಯಾ ಲಿಮಿಟೆಡ್ (ವಿಐಎಲ್) ಕಂಪನಿಯಲ್ಲಿ ತಾವು ಹೊಂದಿರುವ ಷೇರುಗಳನ್ನು ಸರ್ಕಾರಕ್ಕೆ ವರ್ಗಾವಣೆ ಮಾಡಲು ಆದಿತ್ಯ ಬಿರ್ಲಾ ಸಮೂಹದ ಅಧ್ಯಕ್ಷ ಕುಮಾರಮಂಗಲಂ ಬಿರ್ಲಾ ಮುಂದೆ ಬಂದಿದ್ದಾರೆ. ಸರ್ಕಾರ ಮಾತ್ರವೇ ಅಲ್ಲದೆ, ವಿಐಎಲ್ ಕಂಪನಿಯನ್ನು ಮುನ್ನಡೆಸುವ ಶಕ್ತಿ ಇದೆ ಎಂದು ಸರ್ಕಾರ ಗುರುತಿಸುವ ಇತರ ಯಾವುದೇ ಕಂಪನಿಗೆ ಕೂಡ ಷೇರು ವರ್ಗಾವಣೆ ಮಾಡಲು ಅವರು ಮುಂದಾಗಿದ್ದಾರೆ.

ಬಿರ್ಲಾ ಅವರು ಸಂಪುಟ ಕಾರ್ಯದರ್ಶಿ ರಾಜೀವ್ ಗೌಬಾ ಅವರಿಗೆ ಜೂನ್ 7ರಂದು ಬರೆದಿರುವ ಪತ್ರದಲ್ಲಿ ಈ ವಿಚಾರ ಪ್ರಸ್ತಾಪಿಸಿದ್ದಾರೆ. ಅಧಿಕೃತ ಅಂಕಿ–ಅಂಶಗಳ ಪ್ರಕಾರ ವಿಐಎಲ್ ಕಂಪನಿಯು ಹೊಂದಾಣಿಕೆ ಮಾಡಿದ ಒಟ್ಟು ಆದಾಯ (ಎಜಿಆರ್) ರೂಪದಲ್ಲಿ ಕೇಂದ್ರ ಸರ್ಕಾರಕ್ಕೆ ₹ 50,399 ಕೋಟಿ ಇನ್ನಷ್ಟೇ ಪಾವತಿಸಬೇಕಿದೆ.

ಎಜಿಆರ್ ಲೆಕ್ಕಹಾಕಿದ್ದು ಸರಿಯಾಗಿಲ್ಲ ಎಂದು ವಿಐಎಲ್ ಸುಪ್ರೀಂ ಕೋರ್ಟ್ ಮೆಟ್ಟಿಲೇರಿತ್ತು. ಆದರೆ, ಕಂಪನಿಯ ಅರ್ಜಿಯನ್ನು ಸುಪ್ರೀಂ ಕೋರ್ಟ್ ತಿರಸ್ಕರಿಸಿದೆ. ‘ಎಜಿಆರ್ ಬಾಕಿ, ತರಂಗಾಂತರಕ್ಕೆ ಸಂಬಂಧಿಸಿದ ಪಾವತಿಗೆ ಸಾಕಷ್ಟು ಕಾಲಾವಕಾಶ, ಸೇವಾ ವೆಚ್ಚಕ್ಕಿಂತಹೆಚ್ಚಿನಮಟ್ಟದಲ್ಲಿಶುಲ್ಕನಿಗದಿ ಮಾಡುವ ವಿಚಾರದಲ್ಲಿ ಸ್ಪಷ್ಟತೆ ಇಲ್ಲದಿರುವಾಗ ಹೂಡಿಕೆದಾರರು ಕಂಪನಿಯಲ್ಲಿ ಹಣ ಹೂಡಿಕೆ ಮಾಡಲು ಸಿದ್ಧರಿಲ್ಲ’ ಎಂದು ಬಿರ್ಲಾ ಅವರು ಪತ್ರದಲ್ಲಿ ಬರೆದಿದ್ದಾರೆ. ಅವರು ಕಂಪನಿಯಲ್ಲಿ ಶೇಕಡ 27ರಷ್ಟು ಷೇರು ಹೊಂದಿದ್ದಾರೆ.

ಕೇಂದ್ರ ಸರ್ಕಾರದಿಂದ ಈ ಮೂರು ವಿಚಾರಗಳ ಬಗ್ಗೆ ತಕ್ಷಣ ಸಹಾಯ ಸಿಗದೆ ಇದ್ದರೆ ಕಂಪನಿಯ ಹಣಕಾಸಿನ ಸ್ಥಿತಿಯು ‘ಕುಸಿದುಬೀಳುವ ಹಂತಕ್ಕೆ’ ತಲುಪುತ್ತದೆ ಎಂದೂ ಅವರು ಪತ್ರದಲ್ಲಿ ಹೇಳಿದ್ದಾರೆ. ಈ ವಿಚಾರವಾಗಿ ಆದಿತ್ಯ ಬಿರ್ಲಾ ಸಮೂಹ ಹಾಗೂ ವಿಐಎಲ್ ಕಡೆಯಿಂದ ತಕ್ಷಣಕ್ಕೆ ಪ್ರತಿಕ್ರಿಯೆ ಲಭ್ಯವಾಗಿಲ್ಲ.

ಬಿರ್ಲಾ ಅವರು ಪತ್ರ ಬರೆದ ನಂತರದಲ್ಲಿ ಯಾವುದಾದರೂ ಮಾತುಕತೆಗಳು ನಡೆದಿವೆಯೇ ಎಂಬುದು ಖಚಿತವಾಗಿಲ್ಲ. 2020ರ ಸೆಪ್ಟೆಂಬರ್‌ನಲ್ಲಿ ವಿಐಎಲ್ ಕಂಪನಿಗೆ ₹ 25 ಸಾವಿರ ಕೋಟಿ ಬಂಡವಾಳ ಸಂಗ್ರಹಿಸಲು ಕಂಪನಿಯ ಆಡಳಿತ ಮಂಡಳಿ ಸಮ್ಮತಿ ನೀಡಿತ್ತು. ಆದರೆ, ಅಷ್ಟು ಮೊತ್ತ ಸಂಗ್ರಹಿಸಲು ಕಂಪನಿಗೆ ಸಾಧ್ಯವಾಗಿಲ್ಲ.

‘ನಿವ್ವಳ ತೆರಿಗೆ ವರಮಾನ ಸಂಗ್ರಹ ಹೆಚ್ಚಳ’

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರದ ನಿವ್ವಳ ತೆರಿಗೆ ವರಮಾನವು ಈ ವರ್ಷದ ಮಾರ್ಚ್ 31ರ ಅಂತ್ಯಕ್ಕೆ ಶೇಕಡ 5ರಷ್ಟು ಹೆಚ್ಚಾಗಿದೆ ಎಂದು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಸೋಮವಾರ ಹೇಳಿದ್ದಾರೆ.

2019–20ನೇ ಹಣಕಾಸು ವರ್ಷದಲ್ಲಿ ನಿವ್ವಳ ತೆರಿಗೆ ವರಮಾನವು ₹ 13.56 ಲಕ್ಷ ಕೋಟಿಯಷ್ಟಿತ್ತು. 2020–21ನೇ ಹಣಕಾಸು ವರ್ಷದಲ್ಲಿ ₹ 14.24 ಲಕ್ಷ ಕೋಟಿಗೆ ತಲುಪಿ, ಶೇ 5ರಷ್ಟು ಏರಿಕೆ ಕಂಡಿದೆ ಎಂದು ಅವರು ಲೋಕಸಭೆಗೆ ಮಾಹಿತಿ ನೀಡಿದ್ದಾರೆ.

ತೆರಿಗೆಯೇತರ ವರಮಾನ ಸಂಗ್ರಹವು 2019–20ರಲ್ಲಿ ಆಗಿದ್ದ ₹ 3.27 ಲಕ್ಷ ಕೋಟಿಗೆ ಹೋಲಿಸಿದರೆ 2020–21ರಲ್ಲಿ ಶೇ 36ರಷ್ಟು ಇಳಿಕೆ ಆಗಿದ್ದು ₹ 2.08 ಲಕ್ಷ ಕೋಟಿಯಷ್ಟಾಗಿದೆ.

ತೆರಿಗೆ ಮತ್ತು ತೆರಿಗೆಯೇತರ ವರಮಾನವನ್ನು ಒಳಗೊಂಡು ಒಟ್ಟಾರೆ ನಿವ್ವಳ ವರಮಾನ ಸಂಗ್ರಹವು ಶೇ 3.09ರಷ್ಟು ಇಳಿಕೆ ಆಗಿದ್ದು ₹ 16.32 ಲಕ್ಷ ಕೋಟಿಗೆ ತಲುಪಿದೆ.

ಬೆಂಗಳೂರು ಈರುಳ್ಳಿ ಧಾರಣೆ

	ಕ್ವಿಂಟಲ್‌ಗೆ
ದೊಡ್ಡ	₹1600-2000
ಮಧ್ಯಮ	₹1400-1600
ಸಣ್ಣ	₹1000-1400

ಖಾದ್ಯ ತೈಲ ಮುಂಬೈ

	(10 ಕೆಜಿಗೆ)
ಶೇಂಗಾ (ರಿಫೈನ್ಡ್)	₹1475 (1480)
ಸೋಯಾ (ರಿಫೈನ್ಡ್)	₹1400 (1400)
ಸೂರ್ಯಕಾಂತಿ (ರಿಫೈನ್ಡ್)	₹1475(1480)
ಪಾಮೋಲಿನ್	₹1252 (1272)

ಮುಂಬೈ ಧಾರಣೆ

ಶೇಂಗಾ

2-8-2021

ಜಾವಾ 70/80(ಹೊಸ)	10000-10050
ಜಾವಾ 80/90(ಹೊಸ)	9100-9150
ದಪ್ಪ ಮಧ್ಯಪ್ರದೇಶ(ಹೊಸ)	9600-9700
ದಪ್ಪ ಗುಜರಾತ್(ಹೊಸ)	9300-9400

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1485 (1490)
ಒಂದು ವಾರದ ಡೆಲಿವರಿ	1480 (1485)
ಸೋಯಾ ಕಚ್ಚಾ	1365 (1390)
ಪಾಮ್ ವಾರದ ಡೆಲಿವರಿ	1250 (1270)
ಸೂರ್ಯಕಾಂತಿ ಎಣ್ಣೆ ಕಚ್ಚಾ	1390 (1400)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ 47,900 (48,000)

ಬೆಳ್ಳಿ ಕೆ.ಜಿ 67,850 (68,000)

ಆವರಣದಲ್ಲಿ ಶನಿವಾರದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	600-6500
ನಡುಗೋಲು	700-750
ರಾಶಿ	800-850
ರಾಶಿ ಉತ್ತಮ	900-950
ಜರಡಿ	1000-1050
ಹೆರಕಿದ್ದು	1200-1300
ಹಸಿರು ಸಾಧಾರಣ	800-850
ಹಸಿರು ಉತ್ತಮ	1000-1050
ಹಸಿರು ಅತಿ ಉತ್ತಮ	1300-1400
ಕಾಳು ಮೆಣಸು	380
ಅಡಿಕೆ	
ಬಂಟ್ವಾಳ	
ಕೋಕ	10000-22500
ಹೊಸತು	23500-45000
ಹಳತು	42500-52000
ಪುತ್ತೂರು	
ಹೊಸತು	31000-45000
ಕುಮಟ	
ಬಿಳಿಗೋಟು	23429-24599
ಕೋಕ	22019-32089
ಫ್ಯಾಕ್ಟರಿ	15269-19811
ಹಳೆಚಾಲಿ	42569-45009
ಹೊಸಚಾಲಿ	38899-41469
ಸಿದ್ದಾಪುರ	
ಬಿಳಿಗೋಟು	27699-35199
ಚಾಲಿ	37099-41099
ಕೋಕ	24680-32312
ಕೆಂಪುಗೋಟು	26099-32099
ರಾಶಿ	39012-41099
ತಟ್ಟಿಬೆಟ್ಟೆ	34699-34699
ಶಿರಸಿ	
ಬೆಟ್ಟೆ	34899-38609
ಬಿಳಿಗೋಟು	28011-36599
ಚಾಲಿ	35699-41699
ರಾಶಿ	38399-41099
ಶಿವಮೊಗ್ಗ (ಎಪಿಎಂಸಿ)	
ಬೆಟ್ಟೆ	45000-46119
ಗೊರಬಲು	14009-35469
ರಾಶಿ	39799-42369
ಸರಕು	47450-71996
ಸಾಗರ	
ಬಿಳಿಗೋಟು	28700-3366
ಚಾಲಿ	35509-39199
ಕೋಕ	11500-35599
ಕೆಂಪುಗೋಟು	22369-35519
ರಾಶಿ	36570-42971
ಸಿಪ್ಪೆಗೋಟು	8119-23019
ರಾಮನಗರ ರೇಷ್ಮೆ	
ಮಿಶ್ರತಳಿ	238-491
ದ್ವಿತಳಿ	266-519

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ: ಮುದ್ರೆಮನೆ	ಹಾಸನ: ಪ್ಲಾಂಟರ್ಸ್	ಹಾಸನ: ಅಲ್ಲಾನಾ	ನ್ಯೂಯಾರ್ಕ್
ಎಪಿ	---	12300	12200	196.5ಸೆಂಟ್ಸ್
ಎಸಿ	---	4800	4850	
ಆರ್‌ಪಿ	---	5800	6000	ಲಂಡನ್
ಆರ್‌ಸಿ	---	3400	3425	1885 ಡಾಲರ್ಸ್

ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)

#19/4, 2ನೇ ಮಹಡಿ, ಸೈರ್‌ಬಾಗ್ ಬಿಲ್ಡಿಂಗ್, ಕನ್ನಿಂಗ್ ಹ್ಯಾಂ ರೋಡ್, ಬೆಂಗಳೂರು–560052, ಕಛೇರಿ ದೂರವಾಣಿ:080–22285561,62,63,65

E-mail:ktdclit@gmail.com, Website: www.banjarathanda.kar.nic.in

2021–22ನೇ ಸಾಲಿನ ವಿವಿಧ ಯೋಜನೆಗಳಿಗೆ ಪರಿಶಿಷ್ಟ ಜಾತಿಯ ಬಂಜಾರ /ಲಂಬಾಣಿ ಫಲಾಪೇಕ್ಷಿಗಳಿಂದ ಅರ್ಜಿ ಆಹ್ವಾನ

ಯೋಜನೆಗಳು

1. ಸ್ವಯಂ ಉದ್ಯೋಗ ಯೋಜನೆ

• ನೇರ ಸಾಲ ಯೋಜನೆ :

ಚಟುವಟಿಕೆಗಳು :– ಹಣ್ಣು ಹಂಪಲು, ಮೀನು, ಮಾಂಸ, ಕುರಿ, ಹಂದಿ, ಮೊಲ, ಹಸು, ಸಾಕಾಣಿಕೆ, ಮಳಿಗೆ / ತಳ್ಳುಗಾಡಿ ದುಡಿಮೆ/ ಇತ್ಯಾದಿ, ಕಿರು ಆರ್ಥಿಕ ಚಟುವಟಿಕೆಗಳಿಗೆ **ಘಟಕ ವೆಚ್ಚ ರೂ.50,000/–ಗಳ (ಗರಿಷ್ಟ ಸಹಾಯಧನ ರೂ.25,000/–, ಸಾಲ ರೂ.25,000) ಸೌಲಭ್ಯವನ್ನು ನಿಗಮದಿಂದ ನೇರವಾಗಿ ಮಂಜೂರಾತಿ ಮಾಡಲಾಗುವುದು.**

• ಉದ್ಯಮ ಶೀಲತಾ ಅಭಿವೃದ್ಧಿ ಯೋಜನೆ (ಐ.ಎಸ್.ಬಿ)

ಚಟುವಟಿಕೆಗಳು :– ಪರಿಶಿಷ್ಟ ಜಾತಿಯ ಲಂಬಾಣಿ/ಬಂಜಾರ/ಲಮಾಣಿ ಜನಾಂಗದ ಅರ್ಹ ನಿರುದ್ಯೋಗಿಗಳು ಸ್ವಯಂ ಉದ್ಯೋಗದಲ್ಲಿ ತೊಡಗಿಕೊಂಡು, ಆದಾಯ ಗಳಿಸಲು ಘಟಕ ವೆಚ್ಚಕ್ಕೆ ಬ್ಯಾಂಕಿನಿಂದ ಮಂಜೂರಾದ ಸಾಲದ **ಶೇ. 70 ರಷ್ಟು ಅಥವಾ ಗರಿಷ್ಠ ರೂ.2.00 ಲಕ್ಷದವರೆಗೆ ಸಹಾಯಧನವನ್ನು ನಿಗಮದಿಂದ ಮಂಜೂರು ಮಾಡಲಾಗುವುದು.**

• ಪ್ರೇರಣಾ (ಮೈಕ್ರೋ ಕ್ರೆಡಿಟ್ ಫೈನಾನ್ಸ್)ಯೋಜನೆ:

ಚಟುವಟಿಕೆಗಳು:– ಮಹಿಳೆಯರಲ್ಲಿ ಗುಂಪು ಚಟುವಟಿಕೆಗಳಿಗೆ ಉತ್ತೇಜನ ನೀಡಲು ಮಹಿಳಾ ಗುಂಪುಗಳು ಸ್ವಯಂ ಉದ್ಯೋಗ ಕೈಗೊಂಡು ಆದಾಯ ಗಳಿಸಲು ಕನಿಷ್ಠ 10 ಸಂಖ್ಯೆಯ ಸದಸ್ಯರಿರುವ ನೋಂದಾಯಿತ ಮಹಿಳಾ ಸ್ವಸಹಾಯ ಸಂಘಗಳಿಗೆ **ರೂ.2.50 ಲಕ್ಷಗಳ (ಪ್ರತಿ ಸದಸ್ಯರಿಗೆ ರೂ.15,000/–ಗಳ ಸಹಾಯಧನ ಮತ್ತು ರೂ.10,000/–ಗಳ ಬೀಜಧನ) ಸೌಲಭ್ಯವನ್ನು ನಿಗಮದಿಂದ ಮಂಜೂರು ಮಾಡಲಾಗುವುದು.**

2. ಗಂಗಾ ಕಲ್ಯಾಣ ಯೋಜನೆ:

ಸಣ್ಣ ಮತ್ತು ಅತಿಸಣ್ಣ ರೈತರು ಹೊಂದಿರುವ ಖುಷ್ಕಿ ಜಮೀನಿಗೆ **ರೂ.3.50/4.50 ಲಕ್ಷಗಳ** ಘಟಕ ವೆಚ್ಚದಲ್ಲಿ ಕೊಳವೆಬಾವಿ ನೀರಾವರಿ ಸೌಲಭ್ಯ ಕಲ್ಪಿಸಲಾಗುವುದು.

3. ಭೂ – ಒಡೆತನ ಯೋಜನೆ:

ಭೂ ರಹಿತ ಮಹಿಳಾ ಕೃಷಿ ಕಾರ್ಮಿಕರಿಗೆ **ರೂ.15.00/20.00 ಲಕ್ಷಗಳ** ಘಟಕ ವೆಚ್ಚದಲ್ಲಿ, ಕೃಷಿಗೆ ಯೋಗ್ಯವಾದ ಜಮೀನನ್ನು ಪ್ರತಿ ಘಟಕದಲ್ಲಿ 2.00 ಎಕರೆ ಖುಷ್ಕಿ ಅಥವಾ 1.00 ಎಕರೆ ತರಿ ಅಥವಾ ಕನಿಷ್ಠ 1/2 ಎಕರೆ (20 ಗುಂಟೆ) ಭಾಗಾಯ್ತು ಅಥವಾ ಘಟಕ ವೆಚ್ಚಕ್ಕೆ ಲಭ್ಯವಾಗುವಷ್ಟು ಜಮೀನನ್ನು ನಿಗಮದಿಂದ ಖರೀದಿಸಿ ನೊಂದಣಿ ಮಾಡಿಸಿಕೊಡಲಾಗುವುದು.

ಅರ್ಜಿ ಸಲ್ಲಿಸುವ ವಿಧಾನ: ಫಲಾಪೇಕ್ಷಿಗಳು ಆನ್‌ಲೈನ್ ಮೂಲಕ ಅರ್ಜಿಯನ್ನು ಮತ್ತು ದಾಖಲೆಗಳನ್ನು ನಿಗಮದ ವೆಬ್‌ಸೈಟ್ www.banjarathanda.kar.nic.in ನಲ್ಲಿ ಅಪ್‌ಲೋಡ್ ಮಾಡಬಹುದು.

ಅರ್ಜಿ ಸಲ್ಲಿಸಲು

ಪ್ರಾರಂಭಿಕ ದಿನಾಂಕ : 05.08.2021 ಕೊನೆಯ ದಿನಾಂಕ : 05.09.2021

ಹೆಚ್ಚಿನ ಮಾಹಿತಿಗಾಗಿ ಆಯಾ ಜಿಲ್ಲಾ ವ್ಯವಸ್ಥಾಪಕರು, ಡಾ. ಬಿ. ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ರವರನ್ನು ಸಂಪರ್ಕಿಸಬಹುದು.

ಸಹಿ/–
(ಯು. ಚಂದ್ರಾನಾಯಕ್)
ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು

ವಾಸಾಸಂಇ/ಜಿಂ.ನ./ಜೆಎ/1021/2021–22

ಕೋವಿಡ್–19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ರಾಣಿ ಬಳಗದ ಕಣ್ಮಣಿಗಳು...

ಗುಂಪು ಹಂತದ ಎಲ್ಲ ಪಂದ್ಯಗಳನ್ನು ಗೆದ್ದು ಆತ್ಮವಿಶ್ವಾಸದಲ್ಲಿದ್ದ ಬಲಿಷ್ಠ ಆಸ್ಟ್ರೇಲಿಯಾವನ್ನು ಎಲ್ಲ ವಿಭಾಗಗಳಲ್ಲೂ ಕಟ್ಟಿಹಾಕಿದ ಭಾರತದ ಮಹಿಳೆಯರು ಒಲಿಂಪಿಕ್ಸ್ ಹಾಕಿಯ ಸೆಮಿಫೈನಲ್ ಪ್ರವೇಶಿಸಿದ್ದಾರೆ. ಸೋಮವಾರ ನಡೆದ ಕ್ವಾರ್ಟರ್ ಫೈನಲ್‌ನಲ್ಲಿ ಆಸ್ಟ್ರೇಲಿಯಾವನ್ನು ಭಾರತ 1–0ರಲ್ಲಿ ಸೋಲಿಸಿತು. ಈ ಮೂಲಕ ಇತಿಹಾಸವನ್ನೂ ಸೃಷ್ಟಿಸಿತು. ಒಲಿಂಪಿಕ್ಸ್‌ನಲ್ಲಿ ಭಾರತದ ಮಹಿಳಾ ತಂಡ ಸೆಮಿಫೈನಲ್ ತಲುಪಿರುವುದು ಇದೇ ಮೊದಲು. ಬೆಂಗಳೂರಿನ ಭಾರತ ಕ್ರೀಡಾ ಪ್ರಾಧಿಕಾರದ ಪ್ರಾದೇಶಿಕ ಕೇಂದ್ರದಲ್ಲಿ ತರಬೇತಿ ಪಡೆದಿರುವ ತಂಡದಲ್ಲಿ ದೇಶದ ವಿವಿಧ ಭಾಗಗಳ 16 ಪ್ರತಿಭೆಗಳಿದ್ದಾರೆ.

ಭಾರತದ ಆಟಗಾರ್ತಿಯರ ಸಂಭ್ರಮದ ನಡುವೆ ಆಸ್ಟ್ರೇಲಿಯಾದ ಆಟಗಾರ್ತಿ ಬೇಸರದಲ್ಲಿ ಕುಳಿತರು –ಪಿಟಿಐ ಚಿತ್ರ

ರಾಣಿ ರಾಂಪಾಲ್ (ನಾಯಕಿ)

ವಯಸ್ಸು: 26, ರಾಜ್ಯ: ಹರಿಯಾಣ
ಸ್ಥಾನ: ಫಾರ್ವರ್ಡ್, ಪಂದ್ಯಗಳು: 226, ಗೋಲು:112

ಶಹಬಾದ್ ಮರಕಂದಾದಲ್ಲಿ ಜನಿಸಿದ ರಾಣಿ ಆರನೇ ವಯಸ್ಸಿನಲ್ಲಿಯೇ ಹಾಕಿಪ್ರೀತಿ ಬೆಳೆಸಿಕೊಂಡರು. ಅವರಿಗೆ ಹಾಕಿ ಸ್ಟಿಕ್ ಕೊಡಿಸುವಷ್ಟು ಹಣವೂ ತಂದೆ ರಾಂಪಾಲ್ ಬಳಿ ಇರಲಿಲ್ಲ. ಅಪ್ಪ ಕುದುರೆ ಬಂಡಿಯಲ್ಲಿ ಸಾಮಾನು ಸಾಗಿರುವ ಕೆಲಸದಿಂದ ಬರುತ್ತಿದ್ದ ಆದಾಯವೇ ಕುಟುಂಬಕ್ಕೆ ಆಸರೆಯಾಗಿತ್ತು. ಈ ಕಷ್ಟದ ನಡುವೆಯೂ ರಾಣಿ ಆಟ ಕಲಿತರು. 14ನೇ ವಯಸ್ಸಿನಲ್ಲಿಯೇ ಸೀನಿಯರ್ ತಂಡದಲ್ಲಿ ಸ್ಥಾನ ಪಡೆದರು. ಕಳೆದ 12 ವರ್ಷಗಳಲ್ಲಿ ಭಾರತ ತಂಡದ ನಾಯಕಿಯಾಗಿ ಬೆಳೆದಿದ್ದಾರೆ.

ದೀಪ್ ಗ್ರೇಸ್ ಎಕ್ಕಾ

ವಯಸ್ಸು: 27 ವರ್ಷ, ರಾಜ್ಯ: ಒಡಿಶಾ
ಸ್ಥಾನ: ಡಿಫೆನ್ಸ್, ಪಂದ್ಯ: 240, ಗೋಲು: 64

15ನೇ ವಯಸ್ಸಿನಲ್ಲೇ ಹಾಕಿ ಆಡಲು ಆರಂಭಿಸಿದ ದೀಪ್ ಮೂಲತಃ ಕೊಕ್ಕೊ ಆಟಗಾರ್ತಿ. ಆ ಕ್ರೀಡೆಯಲ್ಲಿ ರಾಷ್ಟ್ರೀಯ ಟೂರ್ನಿಯಲ್ಲಿ ಆಡಿದ್ದಾರೆ. ಕುಸ್ತಿಪಟು ಆಗಿದ್ದ ತಂದೆ ಮಕ್ಕಳನ್ನು ಕ್ರೀಡಾಕ್ಷೇತ್ರದಲ್ಲಿ ಬೆಳೆಸಲು ಮುತುವರ್ಜಿ ವಹಿಸಿದ್ದರು. ದೈಹಿಕ ಫಿಟ್‌ನೆಸ್ ಮತ್ತು ಸ್ಪ್ರಿಂಟಿಂಗ್ ಸಾಮರ್ಥ್ಯವನ್ನು ಕಂಡ ಕೋಚ್ ಹಾಕಿ ಕ್ಷೇತ್ರಕ್ಕೆ ಕರೆತಂದರು. ಏಷ್ಯಾಕಪ್, ಏಷ್ಯನ್ ಗೇಮ್ಸ್ ಮತ್ತು ವಿಶ್ವಕಪ್‌ಗಳಲ್ಲಿ ಆಡಿದ್ದು ಇದು ಅವರು ಪಾಲ್ಗೊಳ್ಳುತ್ತಿರುವ ಎರಡನೇ ಒಲಿಂಪಿಕ್ಸ್.

ಮೋನಿಕಾ

ವಯಸ್ಸು: 27, ರಾಜ್ಯ: ಚಂಡೀಗಢ,
ಸ್ಥಾನ: ಮಿಡ್‌ಫೀಲ್ಡ್, ಪಂದ್ಯ: 150, ಗೋಲು: 8

ಅಥ್ಲೆಟಿಕ್ಸ್‌ನಲ್ಲಿ ಆಸಕ್ತರಾಗಿದ್ದ ಮೋನಿಕಾ ಅವರನ್ನು ಕುಸ್ತಿಪಟು ಮಾಡಬೇಕೆಂಬುದು ತಂದೆಯ ಆಸೆಯಾಗಿತ್ತು. ಆದರೆ ಹಾಕಿಯ ಕಡೆಗೆ ಮನಸ್ಸು ಸಾಗಿದ ನಂತರ ಎಲ್ಲವೂ ಬದಲಾಯಿತು. 2007ರಿಂದ ಹಾಕಿ ಆಡುತ್ತಿರುವ ಅವರು 2012ರಲ್ಲಿ ನೆದರ್ಲೆಂಡ್ಸ್ ವಿರುದ್ಧದ ಪಂದ್ಯದಲ್ಲಿ ಭಾರತ ತಂಡಕ್ಕೆ ಪದಾರ್ಪಣೆ ಮಾಡಿದ್ದರು. ಮಿಡ್‌ಫೀಲ್ಡ್‌ನಲ್ಲಿ ಚೆಂಡನ್ನು ನಿಯಂತ್ರಿಸುವುದು ಪ್ರಮುಖ ಜವಾಬ್ದಾರಿ.

ಲಾಲ್‌ರೆಮ್ಸಿಯಾಮಿ



ವಯಸ್ಸು: 21
ರಾಜ್ಯ: ಮಿಜೋರಾಂ
ಸ್ಥಾನ: ಫಾರ್ವರ್ಡ್
ಪಂದ್ಯ: 64, ಗೋಲು: 23

ಐಜ್ವಾಲ್‌ನಿಂದ 80 ಕಿ.ಮೀ ದೂರದ ಪುಟ್ಟ ಹಳ್ಳಿ ಕೊಲಾಸಿಬ್‌ನವರು. ತಂದೆ ಲಾಲ್ತಾನ್‌ಸಂಗಾ ಜೋಟ್ಲೆ ಸಣ್ಣ ರೈತ. 11ನೇ ವಯಸ್ಸಿನಲ್ಲಿ ಲಾಲ್‌ರೆಮ್ಸಿಯಾಮಿ ತೇಂಜಾಲ್ವನಲ್ಲಿದ್ದ ರಾಜ್ಯ ಸರ್ಕಾರದ ಕ್ರೀಡಾಶಾಲೆಗೆ ಆಯ್ಕೆಯಾದರು.

ಗುರ್ಜೀತ್ ಕೌರ್

ವಯಸ್ಸು 25, ರಾಜ್ಯ: ಪಂಜಾಬ್
ಸ್ಥಾನ: ಡಿಫೆಂಡರ್, ಪಂದ್ಯ: 72, ಗೋಲು: 33

ರೈತರಾಗಿರುವ ಸತ್ನಾಮ್ ಸಿಂಗ್ ಮತ್ತು ಹರ್ಜಿಂದರ್ ಕೌರ್ ತಮ್ಮಿಬ್ಬರು ಹೆಣ್ಣುಮಕ್ಕಳು ಗುರ್ಜಿತ್ ಮತ್ತು ಪ್ರದೀಪ್ ಕೌರ್ ಚೆನ್ನಾಗಿ ಓದಬೇಕೆಂಬ ಆಸೆಯಿಂದ ಸ್ವಗ್ರಾಮದಿಂದ ದೂರವಿರುವ ಬೋರ್ಡಿಂಗ್ ಶಾಲೆಗೆ ಸೇರಿಸಿದರು. ಕೈರನ್‌ನಲ್ಲಿದ್ದ ಆ ಶಾಲೆಯಲ್ಲಿ ಬಾಲಕಿಯರ ಹಾಕಿ ಕ್ರೀಡೆಗೆ ಕೊಟ್ಟ ಕೊಡುಗೆ ದೊಡ್ಡದು. ಅಲ್ಲಿ ಹಾಕಿ ಆಡಲು ಆರಂಭಿಸಿದ ಗುರ್ಜಿತ್ ಟೋಕಿಯೊ ಒಲಿಂಪಿಕ್ಸ್ ಕ್ವಾರ್ಟರ್‌ಫೈನಲ್‌ನಲ್ಲಿ ಭಾರತ ತಂಡದ ಗೆಲುವಿನ ರೂವಾರಿಯಾಗಿದ್ದಾರೆ.

ಶರ್ಮಿಳಾ ದೇವಿ

ವಯಸ್ಸು: 19
ರಾಜ್ಯ: ಹರಿಯಾಣ
ಸ್ಥಾನ: ಫಾರ್ವರ್ಡ್
ಪಂದ್ಯ: 9, ಗೋಲು: 1

ಹಿಸಾರ್ ಪಟ್ಟಣದ ಶರ್ಮಿಳಾದೇವಿ ಕುಟುಂಬದಲ್ಲಿ ಹಾಕಿ ಆಟಗಾರರಿದ್ದರು. ಅಜ್ಜ, ಅಣ್ಣ ಕೂಡ ಆಡಿದ್ದವರು. ಮಗಳಿಗೆ ಹಾಕಿ ಆಡಲು ಹೇಳಿಕೊಟ್ಟಿದ್ದು ಅಪ್ಪ. ತಮ್ಮ ಮಗಳು ಒಲಿಂಪಿಕ್‌ನಲ್ಲಿ ಆಡುವ ಕನಸು ಕಂಡಿದ್ದ ಅವರ ಸಂತಸ ಈಗ ಮುಗಿಲು ಮುಟ್ಟಿದೆ. 2019ರಲ್ಲಿ ಟೋಕಿಯೊದಲ್ಲಿ ನಡೆದಿದ್ದ ಟೂರ್ನಿಯಲ್ಲಿ ಪದಾರ್ಪಣೆ ಮಾಡಿದ್ದರು.

ನಿಕ್ಕಿ ಪ್ರಧಾನ್

ವಯಸ್ಸು: 27
ರಾಜ್ಯ: ಜಾರ್ಖಂಡ್
ಸ್ಥಾನ: ಮಿಡ್‌ಫೀಲ್ಡರ್
ಪಂದ್ಯ: 76

ಕ್ರಾಂತಿಕಾರಿ ಬಿರ್ಸಾ ಮುಂಡಾ ಅವರ ಗ್ರಾಮ ಕುಂತಿ. ಈ ಅದಿವಾಸಿ ಗ್ರಾಮದವರು ನಿಕಿ ಪ್ರಧಾನ್. ತಂದೆ ಸೋಮಾಪ್ರಧಾನ್ ಪೊಲೀಸ್ ಕಾನ್‌ಸ್ಟೆಬಲ್ ಆಗಿದ್ದಾರೆ. ತಮ್ಮ ಊರಲ್ಲಿ ಸೌಲಭ್ಯಗಳಿಲ್ಲದ ಕಾರಣಕ್ಕೆ ನಿಕಿಯನ್ನು ಬರಿಯಾಟು ಎಂಬಲ್ಲಿರುವ ಶಾಲೆಗೆ ಸೇರಿಸಲಾಯಿತು. ಅದೇ ಶಾಲೆಯಲ್ಲಿ ಭಾರತ ತಂಡದ ಅಟಗಾರ್ತಿಯಾಗಿದ್ದ ಅಸುಂತಾ ಲಾಕ್ರಾ ಕೂಡ ಓದಿದ್ದರು.

ಗುರ್ಜೀತ್ ಕೌರ್ ಗಳಿಸಿದ ಆ ಗೋಲು...

ಟೋಕಿಯೊ (ಎಎಫ್‌ಪಿ): ವಿಶ್ವ ಕ್ರಮಾಂಕದಲ್ಲಿ ಎರಡನೇ ಸ್ಥಾನದಲ್ಲಿರುವ ಮತ್ತು ಒಲಿಂಪಿಕ್ಸ್‌ನಲ್ಲಿ ಮೂರು ಬಾರಿ ಚಾಂಪಿಯನ್ ಆಗಿರುವ ಆಸ್ಟ್ರೇಲಿಯಾದ ಬಲಿಷ್ಠ ರಕ್ಷಣಾ ಕೋಟೆಯನ್ನು ಭೇದಿಸಿ ಭಾರತಕ್ಕೆ ಗೆಲುವಿನ ಗೋಲು ತಂದುಕೊಟ್ಟವರು ಗುರ್ಜೀತ್ ಕೌರ್.

ಆರಂಭದಿಂದಲೇ ಆಕ್ರಮಣಕಾರಿ ಆಟಕ್ಕೆ ಮುಂದಾದ ಭಾರತ ದಿಟ್ಟತನ ಮೆರೆದು ಎದುರಾಳಿ ಆಟಗಾರ್ತಿಯರನ್ನು ಕಂಗೆಡಿಸಿದರು. ಚೆಂಡಿನ ಮೇಲೆ ನಿರಂತರವಾಗಿ ಹಿಡಿತ ಸಾಧಿಸಿದ ಭಾರತ ಮೊದಲ ಕ್ವಾರ್ಟರ್ ಮುಗಿದಾಗ ಭರವಸೆಯಿಂದಲೇ ವಿರಾಮಕ್ಕೆ ತೆರಳಿದರು. ಎರಡನೇ ಕ್ವಾರ್ಟರ್‌ನಲ್ಲಿ, 22ನೇ ನಿಮಿಷದಲ್ಲಿ ಲಭಿಸಿದ ಪೆನಾಲ್ಟಿ ಕಾರ್ನರ್ ಅವಕಾಶದಲ್ಲಿ ಡ್ರ್ಯಾಗ್ ಫ್ಲಿಕ್ಕರ್ ಗುರ್ಜೀತ್ ಕೌರ್ ಆಸ್ಟ್ರೇಲಿಯಾದ ಡಿಫೆಂಡರ್‌ಗಳ ನಡುವಿನಲ್ಲೇ ಚೆಂಡನ್ನು ತೂರಿಬಿಟ್ಟರು. ಗೋಲ್‌ಕೀಪರ್ ತಡೆಯಲು ಪ್ರಯತ್ನಿಸಿದರೂ ಚೆಂಡು ಗೋಲುಪೆಟ್ಟಿಗೆಯ ಒಳಗೆ ಸೇರಿತು. ಅಷ್ಟರಲ್ಲಿ ಭಾರತದ ಪಾಳಯದಲ್ಲಿ ಸಂಭ್ರಮ ಅಲೆಯಾಡಿತು.

ಫಲಿತಾಂಶ		ಪೆನಾಲ್ಟಿ ಕಾರ್ನರ್	
1	0	1/1	9/0
ಭಾರತ	ಆಸ್ಟ್ರೇಲಿಯಾ	ಭಾರತ	ಆಸ್ಟ್ರೇಲಿಯಾ

ಸವಿತಾ ಪುನಿಯಾ

ವಯಸ್ಸು: 31, ರಾಜ್ಯ: ಹರಿಯಾಣ,
ಸ್ಥಾನ: ಗೋಲ್‌ಕೀಪಿಂಗ್
ಪಂದ್ಯ: 202

ಸಿರ್ಸಾ ಜಿಲ್ಲೆಯ ಜೋದ್‌ಕನ್‌ನಲ್ಲಿ ಜನಿಸಿದ ಸವಿತಾ ತಾತ ಮಹಿಂದರ್ ಸಿಂಗ್ ಅವರ ಪ್ರೇರಣೆಯಿಂದ ಹಾಕಿ ಕ್ರೀಡೆಗೆ ಕಾಲಿಟ್ಟರು. ಹಿಸ್ಸಾರ್‌ನಲ್ಲಿ ಭಾರತ ಕ್ರೀಡಾ ಪ್ರಾಧಿಕಾರ ಕೇಂದ್ರಕ್ಕೆ ಸೇರಿಕೊಂಡ ಅವರು ಕೋಚ್ ಸುಂದರ್ ಸಿಂಗ್ ತರಬೇತಿಯಲ್ಲಿ ಪಳಗಿದರು. ಆರಂಭದಲ್ಲಿ ಕ್ರೀಡೆಯ ಬಗ್ಗೆ ಉತ್ಸಾಹ ಕಳೆದುಕೊಂಡಿದ್ದರು ಸವಿತಾ. ಆದರೆ ಅವರ ತಂದೆ ಕಿಟ್ ಖರೀದಿಗಾಗಿ 20 ಸಾವಿರ ರೂಪಾಯಿ ಖರ್ಚು ಮಾಡಿದಾಗ ಆಟದಲ್ಲಿ ಗಂಭೀರವಾಗಿ ತೊಡಗಿಸಿಕೊಂಡರು.

ನವನೀತ್ ಕೌರ್

ವಯಸ್ಸು: 25, ರಾಜ್ಯ: ಹರಿಯಾಣ
ಸ್ಥಾನ: ಫಾರ್ವರ್ಡ್, ಪಂದ್ಯ: 79, ಗೋಲು: 24

2005ರಿಂದ ಹಾಕಿ ಆಡುತ್ತಿರುವ ನವನೀತ್ ಕೌರ್ ಶಾಹಬಾದ್ ಹಾಕಿ ಅಕಾಡೆಮಿಯ ಸಮೀಪದ ಶಾಲೆಯಲ್ಲಿ ಕಲಿತವರು. ಹಾಕಿ ಸ್ಟಿಕ್‌ಗಳ ಸದ್ದು ಕೇಳುತ್ತಲೇ ಬೆಳೆದವರು. ಅದೇ ಕ್ಲಬ್‌ನಲ್ಲಿ ಪ್ರವೇಶ ಪಡೆದು ಹಾಕಿ ಕ್ರೀಡೆಯ ತಂತ್ರಗಳನ್ನು ಕರಗತ ಮಾಡಿಕೊಂಡಿದ್ದರು. ವಿಶ್ವಕಪ್, ಏಷ್ಯನ್ ಗೇಮ್ಸ್ ಮತ್ತು ಏಷ್ಯಾಕಪ್ ಟೂರ್ನಿಗಳಲ್ಲಿ ಪಾಲ್ಗೊಂಡ ಅನುಭವ ಇದೆ.

ನವಜ್ಯೋತ್ ಕೌರ್

ವಯಸ್ಸು: 26, ರಾಜ್ಯ: ಹರಿಯಾಣ,
ಸ್ಥಾನ: ಫಾರ್ವರ್ಡ್, ಪಂದ್ಯ: 172, ಗೋಲು:18

ರಾಷ್ಟ್ರೀಯ ತಂಡದ ಆಕ್ರಮಣ ವಿಭಾಗದ ಪ್ರಮುಖ ಆಟಗಾರ್ತಿಯರಲ್ಲಿ ಒಬ್ಬರಾಗಿರುವ ನವಜ್ಯೋತ್ ಕೌರ್ ಅವರು ತಂದೆಯ ಆಸೆಯಂತೆ ಹಾಕಿ ಆಡಲು ಆರಂಭಿಸಿದ್ದರು. ರಾಣಿ ರಾಂಪಾಲ್ ಅವರಿಗೆ ನೆಚ್ಚಿನ ಆಟಗಾರ್ತಿಯನ್ನಾಗಿ ಮನಸ್ಸಿನಲ್ಲಿ ಸ್ಥಾನ ನೀಡಿರುವ ಅವರು ಇದೀಗ ಅದೇ ಆಟಗಾರ್ತಿಯ ನಾಯಕತ್ವದಲ್ಲಿ ಕಣಕ್ಕೆ ಇಳಿಯುತ್ತಿದ್ದಾರೆ. ವಿಶ್ವಕಪ್, ಏಷ್ಯನ್ ಗೇಮ್ಸ್ ಮತ್ತು ಏಷ್ಯಾಕಪ್‌ನಲ್ಲಿ ಆಡಿರುವ ಅವರಿಗೆ ಇದು ಎರಡನೇ ಒಲಿಂಪಿಕ್ಸ್.

ವಂದನಾ ಕಟಾರಿಯ

ವಯಸ್ಸು: 29, ರಾಜ್ಯ ಉತ್ತರ ಪ್ರದೇಶ,
ಸ್ಥಾನ: ಫಾರ್ವರ್ಡ್, ಪಂದ್ಯ: 240, ಗೋಲು: 64

ವಂದನಾ ಅವರದು ಕ್ರೀಡಾಕುಟುಂಬ. ಸಹೋದರಿಯರಾದ ರೀನಾ ಮತ್ತು ರೀಟಾ ರಾಷ್ಟ್ರೀಯ ಮಟ್ಟದ ಹಾಕಿಪಟುಗಳಾಗಿದ್ದರೆ, ಸಹೋದರ ರಾಹುಲ್ ಅವರು ಟೇಕ್ವಾಂಡೊದಲ್ಲಿ ಬ್ಲ್ಯಾಕ್ ಬೆಲ್ಟ್ ಗಳಿಸಿದ್ದಾರೆ. ಕೊಕ್ಕೊ ಆಟಗಾರ್ತಿಯಾಗಿದ್ದ ಅವರು 2002ನೇ ಇಸವಿಯಿಂದ ಹಾಕಿ ಅಂಗಣದಲ್ಲಿದ್ದಾರೆ. 2009ರಲ್ಲಿ ಭಾರತ ತಂಡಕ್ಕೆ ಪದಾರ್ಪಣೆ ಮಾಡಿದ್ದರು. ರಿಯೊ ಒಲಿಂಪಿಕ್ಸ್‌ನಲ್ಲೂ ಆಡಿದ್ದು ವಿಶ್ವಕಪ್, ಏಷ್ಯನ್ ಗೇಮ್ಸ್ ಮತ್ತು ಏಷ್ಯಾಕಪ್‌ಗಳಲ್ಲಿ ಭಾರತವನ್ನು ಪ್ರತಿನಿಧಿಸಿದ್ದಾರೆ.

ಸಲೀಮಾ ಟೆಟೆ

ವಯಸ್ಸು: 19, ರಾಜ್ಯ: ಜಾರ್ಖಂಡ್
ಸ್ಥಾನ: ಮಿಡ್‌ಫೀಲ್ಡರ್
ಪಂದ್ಯಗಳು: 29

ಭಾರತ ಮಹಿಳಾ ಹಾಕಿ ತಂಡದಲ್ಲಿರುವ ಅತಿ ಕಿರಿಯ ಆಟಗಾರ್ತಿ. ಸಿಮ್ಡೇಗಾ ಜಿಲ್ಲೆಯ ನಕ್ಸಲ್‌ಪೀಡಿತ ಕುಗ್ರಾಮದ ಹುಡುಗಿ. ಸಣ್ಣ ರೈತರಾಗಿರುವ ಅಪ್ಪ ತಮ್ಮ ಬಾಲ್ಯದಲ್ಲಿ ಹಾಕಿ ಆಡಿದವರು. ಅಪ್ಪನಿಂದ ಪ್ರೇರಣೆಗೊಂಡು ಹಾಕಿ ಸ್ಟಿಕ್ ಹಿಡಿದರು ಸಲೀಮಾ. ತಮ್ಮ ಮನೆ ಸಮೀಪದ ಮೈದಾನವನ್ನು ತನ್ನ ಓರಗೆಯ ಮಕ್ಕಳೊಂದಿಗೆ ಒಪ್ಪಗೊಳಿಸಿ ಆಡಲು ಆರಂಭಿಸಿದವರು. 2017ರಲ್ಲಿ ಯೂತ್ ಒಲಿಂಪಿಕ್ ಗೇಮ್ಸ್‌ನಲ್ಲಿ ಬೆಳ್ಳಿ ಗೆದ್ದ ಭಾರತ ತಂಡದಲ್ಲಿ ಆಡಿದರು.

ನಿಶಾ

ವಯಸ್ಸು: 26
ರಾಜ್ಯ: ಹರಿಯಾಣ
ಸ್ಥಾನ: ಡಿಫೆನ್ಸ್, ಪಂದ್ಯ: 9

ನಿಶಾ ಅವರು ಹಾಕಿ ಕ್ರೀಡೆಗೆ ಸೇರಲು ತಂದೆಯೇ ಪ್ರೇರಣೆ. ಟೇಲರ್ ವೃತ್ತಿ ಮಾಡುತ್ತಿದ್ದ ಅವರು ನಿಶಾ ಪ್ರತಿಭೆಯನ್ನು ಪೋಷಿಸಿದರು. ಮೂರು ಹೊತ್ತಿನ ಊಟಕ್ಕೂ ಪರದಾಡುತ್ತಿದ್ದ ಕುಟುಂಬ ಅವರದು. ಕಷ್ಟಪಟ್ಟು ಹಣ ಹೊಂದಿಸಿ ಟೂರ್ನಿಗಳಿಗೆ ಆಡಲು ನಿಶಾರನ್ನು ಕಳುಹಿಸಿದ ತಂದೆಯ ಮನದಲ್ಲಿ ಈಗ ಸಂಭ್ರಮದ ಹೊಳೆ. ನಿಶಾ ಅವರಿಗೆ ಇದು ಮೊದಲ ಒಲಿಂಪಿಕ್ಸ್ ಆಗಿದ್ದು ಸ್ಮರಣೀಯವಾಗಿರಿಕೊಳ್ಳುವ ಹಂಬಲದಲ್ಲಿದ್ದಾರೆ.

ಸುಶೀಲಾ ಚಾನು

ವಯಸ್ಸು: 25, ರಾಜ್ಯ: ಮಣಿಪುರ,
ಸ್ಥಾನ: ಮಿಡ್‌ಫೀಲ್ಡಿಂಗ್, ಪಂದ್ಯ:181, ಗೋಲು: 4

ಏಳನೇ ವಯಸ್ಸಿನಲ್ಲಿ ಹಾಕಿ ಅಂಗಣಕ್ಕಿಳಿದ ಸುಶೀಲಾ ಇಂಫಾಲ್‌ನ ಪ್ರತಿಭೆ. ತಂದೆಯದು ಚಾಲಕ ವೃತ್ತಿ. ಅಜ್ಜ ಪುಖ್ರಂಬಮ್ ಅಂಗಾಂಗ್ಬಾ ಯಶಸ್ವಿ ಪೋಲೊ ಆಟಗಾರ ಆಗಿದ್ದರು. 1999ರಲ್ಲಿ ಮಣಿಪುರದಲ್ಲಿ ನಡೆದ ರಾಷ್ಟ್ರೀಯ ಫುಟ್‌ಬಾಲ್ ಟೂರ್ನಿಯನ್ನು ನೋಡಲು ತಂದೆಯೊಂದಿಗೆ ತೆರಳಿದ್ದ ಸುಶೀಲಾ ಕ್ರೀಡಾಸಕ್ತಿ ಹೆಚ್ಚಿಸಿಕೊಂಡರು. 2008ರಲ್ಲಿ ಭಾರತ ತಂಡಕ್ಕೆ ಪದಾರ್ಪಣೆ ಮಾಡಿರುವ ಅವರು, ಕೆಲವು ಟೂರ್ನಿಗಳಿಗೆ ನಾಯಕತ್ವವನ್ನೂ ವಹಿಸಿದ್ದಾರೆ. ರೈಲ್ವೆ ಇಲಾಖೆಯಲ್ಲಿ ಸುಶೀಲಾ ಜೂನಿಯರ್ ಟಿಕೆಟ್ ಕಲೆಕ್ಟರ್ ಹುದ್ದೆಯಲ್ಲಿದ್ದಾರೆ.

ನೇಹಾ ಗೋಯಲ್

ವಯಸ್ಸು: 24
ರಾಜ್ಯ: ಹರಿಯಾಣ
ಸ್ಥಾನ: ಮಿಡ್‌ಫೀಲ್ಡಿಂಗ್
ಪಂದ್ಯ: 75, ಗೋಲು: 11

ಸೋನೆಪತ್ ಜಿಲ್ಲೆಯ ಬಡಕುಟುಂಬದಲ್ಲಿ ಜನಿಸಿದ ನೇಹಾ ಅವರಿಗೆ ಇಬ್ಬರು ಸಹೋದರಿಯರಿದ್ದಾರೆ. ತಂದೆ ಕುಡಿತಕ್ಕೆ ದಾಸನಾಗಿದ್ದ. ಸೈಕಲ್ ಫ್ಯಾಕ್ಟರಿಯಲ್ಲಿ ದಿನಗೂಲಿ ಮಾಡುತ್ತಿದ್ದ ತಾಯಿಯ ಆದಾಯವೇ ಕುಟುಂಬಕ್ಕೆ ಆಸರೆಯಾಗಿತ್ತು. ಹಾಕಿ ಸ್ಟಿಕ್, ಬೂಟುಗಳನ್ನು ಖರೀದಿಸಲು ನೇಹಾ ಪರದಾಡಬೇಕಾಗಿತ್ತು. ಭಾರತ ಮಹಿಳಾ ತಂಡದ ಮಾಜಿ ನಾಯಕಿ ಪ್ರೀತಮ್ ಸಿವಾಚ್ ಅವರ ಕಣ್ಣಿಗೆ ಬಿದ್ದ ನೇಹಾ ಅವರ ಅಕಾಡೆಮಿಯಲ್ಲಿ ತರಬೇತಿಗೆ ಸೇರುವಂತಾಯಿತು. 2014ರಲ್ಲಿ ಅವರು ಭಾರತ ತಂಡದ ಪರ ಪದಾರ್ಪಣೆ ಮಾಡಿದ್ದಾರೆ.

ಉದಿತಾ

ವಯಸ್ಸು: 23
ರಾಜ್ಯ:ಹರಿಯಾಣ
ಸ್ಥಾನ: ಫಾರ್ವರ್ಡ್
ಪಂದ್ಯ: 32, ಗೋಲು: 3

ಸಹಾಯಕ ಸಬ್ ಇನ್‌ಸ್ಪೆಕ್ಟರ್ ಪುತ್ರಿಯಾಗಿರುವ ಉದಿತಾ, ಶಾಲಾ ಹಂತದಲ್ಲಿ ಹ್ಯಾಂಡ್‌ಬಾಲ್ ಕ್ರೀಡೆಯಲ್ಲಿ ಆಸಕ್ತಿ ಬೆಳೆಸಿಕೊಂಡವರು. ಆದರೆ ಶಾಲಾ ಕೋಚ್ ಅವರನ್ನು ಆ ಹುದ್ದೆಯಿಂದ ತೆಗೆದ ಸಂದರ್ಭದಲ್ಲಿ ಉದಿತಾ ವಿಚಲಿತರಾದರು. ತಾನು ಕ್ರೀಡಾಪಟುವಾಗುವ ಆಸೆಯನ್ನು ತಾಯಿಯಲ್ಲಿ ಹೇಳಿಕೊಂಡರು. ಈ ವೇಳೆ ತಾಯಿ, ಶಾಲೆಯ ಹಾಕಿ ಕೋಚ್‌ಗೆ ಇವರನ್ನು ಪರಿಚಯಿಸಿದಾಗ ಸ್ಟಿಕ್ ಹಿಡಿದ ಉದಿತಾ ಆಮೇಲೆ ಹಿಂದಿರುಗಿ ನೋಡಲಿಲ್ಲ.

ಮರ್ೈನ್ ತೋರಿಸಿದ ಸಿನಿಮಾದ ಸ್ಫೂರ್ತಿ

ಟೋಕಿಯೊ (ಪಿಟಿಐ): ಭಾರತ ಮಹಿಳಾ ಹಾಕಿ ತಂಡವನ್ನು ಐತಿಹಾಸಿಕ ಜಯದತ್ತ ಮುನ್ನಡೆಸಿದ ನೆದರ್ಲೆಂಡ್ಸ್ ಮೂಲದ ಕೋಚ್ ಶೋರ್ಡ್ ಮರ್ೈನ್ ಈಗ ಸಾಮಾಜಿಕ ಜಾಲತಾಣಗಳಲ್ಲಿ ಭಾರಿ ಮೆಚ್ಚುಗೆಗೆ ಪಾತ್ರರಾಗಿದ್ದಾರೆ.

'ಚಕ್ ದೇ ಇಂಡಿಯಾ..' ಬಾಲಿವುಡ್ ಚಲನಚಿತ್ರದ ಕೋಚ್ ಕಬೀರ್ ಖಾನ್ ಅವರಿಗೆ ಹೋಲಿಕೆ ಮಾಡಿರುವ ದೃಶ್ಯ-ತುಣುಕುಗಳು ಓಡಾಡುತ್ತಿವೆ. ಅಲ್ಲದೇ ಭಾವುಕಾರಾಗಿ ಕಣ್ಣೀರು ಹಾಕುತ್ತಿರುವ ಮರ್ೈನ್ ವಿಡಿಯೊ ಕೂಡ ಓಡಾಡುತ್ತಿದೆ.

ಈ ನಡುವೆ ತಮ್ಮ ತಂಡದ ಆಟಗಾರ್ತಿಯರಲ್ಲಿ ಪ್ರೇರಣೆ ತುಂಬಲು ಮಾಡಿದ ತಂತ್ರದ ಕುರಿತು ಮರ್ೈನ್ ಹೇಳಿದ್ದಾರೆ.

'ಗುಂಪು ಹಂತದಲ್ಲಿ ಸತತ ಮೂರು ಸೋಲುಗಳಿಂದ ತಂಡವು ಕಂಗೆಟ್ಟಿತ್ತು. ಆಗ ಸ್ವಂತ ಸಾಮರ್ಥ್ಯದಲ್ಲಿ ನಂಬಿಕೆ ಬೆಳೆಸಿಕೊಳ್ಳುವ ಕುರಿತು ಒಂದು ಉತ್ತಮವಾದ ಚಲನಚಿತ್ರವನ್ನು ನೋಡಲು ಹೇಳಿದ್ದು ಫಲ ನೀಡಿತು. ಸ್ವಸಾಮರ್ಥ್ಯದ ಅರಿವು ಮತ್ತು ಮನೋಬಲದಿಂದ ಆಡಿದ್ದು ಈ ಹಂತಕ್ಕೆ ಬೆಳೆಯಲು ಕಾರಣವಾಯಿತು' ಎಂದು ಮರ್ೈನ್ ಹೇಳಿದರು.

ಚಲನಚಿತ್ರದ ಹೆಸರು ಬಹಿರಂಗಪಡಿಸದ ಮರ್ೈನ್, 'ಅದರ ಬಗ್ಗೆ ನನ್ನ ಪುಸ್ತಕದಲ್ಲಿ ಬರೆದಿದ್ದೇನೆ' ಎಂದರು.

ವಿಶ್ವದ ಎರಡನೇ ಶ್ರೇಯಾಂಕದ ತಂಡವಾಗಿರುವ ಆಸ್ಟ್ರೇಲಿಯಾವನ್ನು ಭಾರತ ಕ್ವಾರ್ಟರ್‌ಫೈನಲ್‌ನಲ್ಲಿ ಮಣಿಸಿತು. ಮೂರು ಬಾರಿ ಪದಕ ಜಯಿಸಿರುವ ಆಸ್ಟ್ರೇಲಿಯಾದ ಆಟಗಾರರು ಮೈದಾನದಲ್ಲಿ ದುಃಖಿತರಾಗಿ ಕುಳಿತರು.

ಭಾರತಕ್ಕೆ ಬೆಲ್ಜಿಯಂ ಸವಾಲು

ಭಾರತ ತಂಡದ ಆಟಗಾರರ ಬೆಲ್ಜಿಯಂ ಎದುರು ಗೆಲ್ಲುವ ಹುಮ್ಮಸ್ಸಿನಲ್ಲಿದ್ದಾರೆ

ಟೋಕಿಯೊ (ಪಿಟಿಐ): ಈ ಬಾರಿಯ ಒಲಿಂಪಿಕ್ಸ್‌ನಲ್ಲಿ ಚಿನ್ನದ ಪದಕದ ಮೇಲೆ ಕಣ್ಣಿಟ್ಟಿರುವ ಭಾರತದ ಪುರುಷರ ಹಾಕಿ ತಂಡವು ಈಗ ಮತ್ತೊಂದು ಸವಾಲಿಗೆ ಸಜ್ಜಾಗಿದೆ.

ಮಂಗಳವಾರ ನಡೆಯುವ ಸೆಮಿಫೈನಲ್ ಹಣಾಹಣಿಯಲ್ಲಿ ಮನ್‌ಪ್ರೀತ್ ಸಿಂಗ್ ಬಳಗವು ಬಲಿಷ್ಠ ಬೆಲ್ಜಿಯಂ ತಂಡವನ್ನು ಎದುರಿಸಲಿದೆ.

ಹಿಂದಿನ ಪಂದ್ಯದಲ್ಲಿ ಬ್ರಿಟನ್ ತಂಡವನ್ನು ಬಗ್ಗುಬಡಿದು ಬರೋಬ್ಬರಿ 49 ವರ್ಷಗಳ ನಂತರ ಸೆಮಿಫೈನಲ್‌ಗೆ ದಾಪುಗಾಲಿಟ್ಟಿರುವ ಭಾರತ ತಂಡ ಬೆಲ್ಜಿಯಂ ವಿರುದ್ಧವೂ ಆತ್ಮವಿಶ್ವಾಸದಿಂದ ಹೋರಾಡುವ ತವಕದಲ್ಲಿದೆ.

ಅನುಭವಿ ಹಾಗೂ ಯುವ ಆಟಗಾರರಿಂದ ಸಮ್ಮಿಳಿತಗೊಂಡಿರುವ ಮನ್‌ಪ್ರೀತ್ ಪಡೆ ಎಲ್ಲಾ ವಿಭಾಗಗಳಲ್ಲೂ ಶ್ರೇಷ್ಠ ಆಟ ಆಡಿದೆ. ಇದೇ ಸಾಮರ್ಥ್ಯವನ್ನು ಮುಂದುವರಿಸಿಕೊಂಡು ಹೋಗುವ ಸವಾಲು ಕೂಡ ತಂಡದ ಎದುರಿಗಿದೆ.

ದಿಲ್‌ಪ್ರೀತ್, ಗುರ್ಜಂತ್, ಹಾರ್ದಿಕ್, ಹರ್ಮನ್‌ಪ್ರೀತ್, ರೂಪಿಂದರ್ ಪಾಲ್ ಅವರು ಬೆಲ್ಜಿಯಂ ತಂಡದ ರಕ್ಷಣಾ ಕೋಟೆಗೆ ಸವಾಲಾಗಬಲ್ಲರು. ಅನುಭವಿ ಗೋಲ್‌ಕೀಪರ್ ಪಿ.ಆರ್. ಶ್ರೀಜೇಶ್ ಕೂಡ ಹಿಂದಿನ ಪಂದ್ಯಗಳಲ್ಲಿ ಎದುರಾಳಿಗಳ ಅನೇಕ ಪ್ರಯತ್ನಗಳನ್ನು ವಿಫಲಗೊಳಿಸಿದ್ದರು. ಹೀಗಾಗಿ ಅವರ ಮೇಲೂ ನಿರೀಕ್ಷೆ ಹೆಚ್ಚಿದೆ.

ಹೋದ ವರ್ಷ ನಡೆದಿದ್ದ ಎಫ್‌ಐಎಚ್ ಪ್ರೊ ಲೀಗ್‌ನ ಮೊದಲ ಪಂದ್ಯದಲ್ಲಿ ಬೆಲ್ಜಿಯಂ ತಂಡಕ್ಕೆ ಶರಣಾಗಿದ್ದ ಭಾರತ, ಎರಡನೇ ಪಂದ್ಯದಲ್ಲಿ ತಿರುಗೇಟು ನೀಡಿತ್ತು. ಆ ಗೆಲುವಿನ ಬಲ ಈಗ ತಂಡದ ಬೆನ್ನಿಗಿದೆ. 2019ರಲ್ಲಿ ನಡೆದಿದ್ದ ಟೆಸ್ಟ್ ಸರಣಿಯಲ್ಲಿ ಭಾರತವು ಎದುರಾಳಿಗಳ ವಿರುದ್ಧದ ಮೂರೂ ಪಂದ್ಯಗಳನ್ನೂ ಜಯಿಸಿತ್ತು. ಇದು ಕೂಡ ಆಟಗಾರರ ವಿಶ್ವಾಸ ಹೆಚ್ಚಲು ಕಾರಣವಾಗಿದೆ.

'ಬೆಲ್ಜಿಯಂ ಹಾಗೂ ಆಸ್ಟ್ರೇಲಿಯಾ ವಿಶ್ವದ ಬಲಿಷ್ಠ ತಂಡಗಳು. ಆ ತಂಡಗಳ ವಿರುದ್ಧದ ಹಣಾಹಣಿ ಸವಾಲಿನದ್ದಾಗಿರಲಿದೆ. ಹಿಂದಿನ ಕೆಲ ಟೂರ್ನಿಗಳಲ್ಲಿ ನಾವು ಬೆಲ್ಜಿಯಂ ವಿರುದ್ಧ ಚೆನ್ನಾಗಿಯೇ ಆಡಿದ್ದೇವೆ. ಇದರಿಂದ ನಮ್ಮ ವಿಶ್ವಾಸ ಇಮ್ಮಡಿಸಿದ್ದು, ರಕ್ಷಣಾ ವಿಭಾಗವನ್ನು ಬಲಪಡಿಸಿಕೊಂಡು ಆಡುವತ್ತ ಚಿತ್ತ ನೆಟ್ಟಿದ್ದೇವೆ' ಎಂದು ಭಾರತ ತಂಡದ ನಾಯಕ ಮನ್‌ಪ್ರೀತ್ ತಿಳಿಸಿದ್ದಾರೆ.

ಫವಾದ್ ಮಿರ್ಜಾ– ಪಿಟಿಐ ಚಿತ್ರ

62ರ ಹರಯ: ಪದಕದ ಸಾಧನೆ

ಟೋಕಿಯೊ (ಎಎಫ್‌ಪಿ/ಪಿಟಿಐ): ಆಸ್ಟ್ರೇಲಿಯಾದ ಆ್ಯಂಡ್ರ್ಯೂ ಹೊಯ್ 50 ವರ್ಷಗಳಲ್ಲಿ ಒಲಿಂಪಿಕ್ಸ್‌ನಲ್ಲಿ ಪದಕ ಗೆಲ್ಲುವ ಅತಿ ಹಿರಿಯ ಕ್ರೀಡಾಪಟು ಎನಿಸಿಕೊಂಡರು. ಸೋಮವಾರ ನಡೆದ ಈಕ್ವೆಸ್ಟ್ರಿಯನ್ ಈವೆಂಟಿಂಗ್ ತಂಡ ಸ್ಪರ್ಧೆಯಲ್ಲಿ ಕಂಚು ಗಳಿಸುವುದರೊಂದಿಗೆ ಅವರು ಈ ಸಾಧನೆ ಮಾಡಿದರು. ಅವರಿಗೆ ಈಗ 62 ವರ್ಷ ವಯಸ್ಸು.

ಆ್ಯಂಡ್ರ್ಯೂ ಹೊಯ್ ಒಲಿಂಪಿಕ್ಸ್‌ನಲ್ಲಿ ಈ ಹಿಂದೆ ನಾಲ್ಕು ಪದಕ ಗೆದ್ದಿದ್ದರು. ಆ ನಾಲ್ಕೂ ಚಿನ್ನದ ಪದಕವಾಗಿತ್ತು. ಆದರೆ 2000ನೇ ಇಸವಿಯ ಒಲಿಂಪಿಕ್ಸ್ ನಂತರ ಗಳಿಸಿದ ಮೊದಲ ಪದಕವಾಗಿತ್ತು ಇದು. ಮೆಕ್ಸಿಕೊದಲ್ಲಿ 1968ರಲ್ಲಿ ನಡೆದ ಒಲಿಂಪಿಕ್ಸ್‌ನಲ್ಲಿ ಬೆಳ್ಳಿ ಗಳಿಸಿದ ಸ್ವಿಟ್ಜರ್ಲೆಂಡ್‌ನ ಲೂಯಿಜ್ ನೊವೆರಾಜ್ ಪದಕ ಗೆದ್ದ ಅತಿ ಹಿರಿಯ ಅಥ್ಲೀಟ್ ಆಗಿದ್ದರು.



ಆ್ಯಂಡ್ರ್ಯೂ ಹೊಯ್ –ಎಎಫ್‌ಪಿ ಚಿತ್ರ

ಆಗ ಅವರಿಗೆ 66 ವರ್ಷವಾಗಿತ್ತು.

ಫವಾದ್ ಮಿರ್ಜಾಗೆ 23ನೇ ಸ್ಥಾನ: ಭಾರತದ ಫವಾದ್ ಮಿರ್ಜಾ ವೈಯಕ್ತಿಕ ಜಂಪಿಂಗ್ ವಿಭಾಗದಲ್ಲಿ ಫೈನಲ್ ತಲುಪಿದ ಭಾರತದ ಮೊದಲ ಸವಾರ ಎನಿಸಿಕೊಂಡರು. ಆದರೆ ಫೈನಲ್‌ನಲ್ಲಿ 23ನೇ ಸ್ಥಾನಕ್ಕೆ ಕುಸಿದರು. ಅರ್ಹತಾ ಸುತ್ತಿನಲ್ಲಿ 25ನೇ ಸ್ಥಾನ ಗಳಿಸಿದ್ದ ಬೆಂಗಳೂರಿನ ಫವಾದ್ ಫೈನಲ್‌ನಲ್ಲಿ ಅದೇ ಸಾಮರ್ಥ್ಯವನ್ನು ಮುಂದುವರಿಸುವಲ್ಲಿ ವಿಫಲರಾದರು.

ಜರ್ಮನಿಯ ಜೂಲಿಯಾ ಕ್ರಾಜೆವ್‌ಸ್ಕಿ ಚಿನ್ನ ಮತ್ತು ಬ್ರಿಟನ್ ಟಾಮ್ ಮೆಕ್‌ವೆನ್ ಬೆಳ್ಳಿ ಗೆದ್ದರು.

ಫೈನಲ್‌ಗೆ ಅರ್ಹತೆ ಪಡೆಯಲು ಅಗ್ರ 25ರೊಳಗೆ ಸ್ಥಾನ ಪಡೆಯಬೇಕಿತ್ತು. ತಮ್ಮ ನೆಚ್ಚಿನ ಸಿನೊರ್ ಮೆಡಿಕಾಟ್ ಕುದುರೆಯೊಂದಿಗೆ ಮುನ್ನುಗ್ಗಿದ ಫವಾದ್ ಎರಡು ತಡೆಗಳನ್ನು ದಾಟಿದರು. ಜಂಪಿಂಗ್ ಸುತ್ತಿನಲ್ಲಿ ಅವರಿಗೆ ಎಂಟು ಪೆನಾಲ್ಟಿ ಪಾಯಿಂಟ್ಸ್ ನೀಡಲಾಯಿತು. ಒಟ್ಟು 47.2 ಪೆನಾಲ್ಟಿ ಪಾಯಿಂಟ್ಸ್ ಪಡೆದ ಅವರು 25ನೇ ಸ್ಥಾನ ಗಳಿಸುವಲ್ಲಿ ಯಶಸ್ವಿಯಾದರು.

ಸ್ಪರ್ಧಾ ಸಮಯ

ಆರ್ಟಿಸ್ಟಿಕ್ ಜಿಮ್ನಾಸ್ಟಿಕ್ಸ್	
ಮಧ್ಯಾಹ್ನ 1.30	ಪುರುಷರ ಪ್ಯಾರಲಲ್ ಬಾರ್ಸ್ ಫೈನಲ್
ಮಧ್ಯಾಹ್ನ 2.20	ಮಹಿಳಾ ಬ್ಯಾಲೆನ್ಸ್ ಬೀಮ್ ಫೈನಲ್
ಮಧ್ಯಾಹ್ನ 3.09	ಪುರುಷರ ಹೊರಿಜೊಂಟಲ್ ಬಾರ್ ಫೈನಲ್
ಅಥ್ಲೆಟಿಕ್ಸ್	
ಬೆಳಿಗ್ಗೆ 5.50	ಮಹಿಳಾ ಜಾವೆಲಿನ್ ಥ್ರೊ ಅರ್ಹತಾ ಸುತ್ತು (ಅನ್ನು ರಾಣಿ)
ಬೆಳಿಗ್ಗೆ 7.20	ಮಹಿಳೆಯರ ಲಾಂಗ್ ಜಂಪ್ ಫೈನಲ್
ಬೆಳಿಗ್ಗೆ 8.50	ಪುರುಷರ 400 ಮೀ. ಹರ್ಡಲ್ಸ್ ಫೈನಲ್
ಮಧ್ಯಾಹ್ನ 3.45	ಪುರುಷರ ಶಾಟ್‌ಪಟ್ ಅರ್ಹತಾ ಸುತ್ತು (ತಜಿಂದರ್ ಸಿಂಗ್ ತೂರ್)
ಮಧ್ಯಾಹ್ನ 3.50	ಪುರುಷರ ಪೋಲ್‌ವಾಲ್ಟ್ ಫೈನಲ್
ಸಂಜೆ 5.05	ಮಹಿಳೆಯರ ಹ್ಯಾಮರ್ ಥ್ರೊ ಫೈನಲ್
ಸಂಜೆ 5.55	ಮಹಿಳೆಯರ 800 ಮೀ. ಓಟ ಫೈನಲ್
ಸಂಜೆ 6.20	ಮಹಿಳೆಯರ 200 ಮೀ. ಓಟ ಫೈನಲ್

ಈಕ್ವೆಸ್ಟ್ರಿಯನ್	
ಮಧ್ಯಾಹ್ನ 3.30	ಜಂಪಿಂಗ್ ವೈಯಕ್ತಿಕ ವಿಭಾಗದ ಅರ್ಹತಾ ಸುತ್ತು
ಡೈವಿಂಗ್	
ಬೆಳಿಗ್ಗೆ 11.30	ಮಹಿಳೆಯರ 3 ಮೀ. ಸ್ಪ್ರಿಂಗ್‌ಬೋರ್ಡ್ ಫೈನಲ್
ಹಾಕಿ (ಪುರುಷರ ತಂಡ)	
ಬೆಳಿಗ್ಗೆ 7 ಗಂಟೆ	ಭಾರತ–ಬೆಲ್ಜಿಯಂ ಸೆಮಿಫೈನಲ್
ಮಧ್ಯಾಹ್ನ 3.30	ಆಸ್ಟ್ರೇಲಿಯಾ–ಜರ್ಮನಿ ಸೆಮಿಫೈನಲ್
ವೇಟ್‌ಲಿಫ್ಟಿಂಗ್	
ಬೆಳಿಗ್ಗೆ 10.20	ಪುರುಷರ 109 ಕೆಜಿ ವಿಭಾಗದ ಗುಂಪು 'ಎ' ಫೈನಲ್
ಕುಸ್ತಿ	
ಬೆಳಿಗ್ಗೆ 8 ಗಂಟೆ	ಮಹಿಳೆಯರ 62 ಕೆಜಿ ವಿಭಾಗದ ಪ್ರೀಕ್ವಾರ್ಟರ್‌ಫೈನಲ್ ಮತ್ತು ಕ್ವಾರ್ಟರ್‌ಫೈನಲ್ (ಸೋನಮ್ ಮಲಿಕ್)
ಮಧ್ಯಾಹ್ನ 3 ಗಂಟೆ	ಮಹಿಳೆಯರ 62 ಕೆಜಿ ವಿಭಾಗದ ಸೆಮಿಫೈನಲ್
ಮಧ್ಯಾಹ್ನ 2.45	ಪುರುಷರ ಗ್ರೀಕೊ ರೋಮನ್ 77 ಕೆಜಿ, 97 ಕೆಜಿ ವಿಭಾಗದ ಫೈನಲ್ ಬೌಟ್‌ಗಳು ಮತ್ತು ಮಹಿಳೆಯರ ಫ್ರೀಸ್ಟೈಲ್ 68 ಕೆಜಿ ವಿಭಾಗದ ಫೈನಲ್.

(ಆವರಣದಲ್ಲಿ ಭಾರತದ ಸ್ಪರ್ಧಿಗಳು)

ಭಾರತೀಯ ಕಾಲಮಾನ — ಲೈವ್ ಸೋನಿ ನೆಟ್‌ವರ್ಕ್

ಮತ್ತೆ ಕಣಕ್ಕೆ ಬೈಲ್ಸ್

ಟೋಕಿಯೊ (ಎಎಫ್‌ಪಿ): ಮಾನಸಿಕ ಸದೃಢತೆಗಾಗಿ ಕಣದಿಂದ ವಿರಮಿಸಿದ್ದ ಅಮೆರಿಕದ ಜಿಮ್ನಾಸ್ಟ್ ಸಿಮೋನ್ ಬೈಲ್ಸ್ ಮಂಗಳವಾರ ಮತ್ತೆ ಸ್ಪರ್ಧಿಸಲಿದ್ದಾರೆ. ಬ್ಯಾಲೆನ್ಸ್ ಬೀಮ್ ವಿಭಾಗದ ಫೈನಲ್ ಮಂಗಳವಾರ ನಡೆಯಲಿದ್ದು ಅದರಲ್ಲಿ ಬೈಲ್ಸ್ ಕಾಣಿಸಿಕೊಳ್ಳಲಿದ್ದಾರೆ.

ಪದಕ ಪಟ್ಟಿ

ದೇಶ	ಚಿನ್ನ	ಬೆಳ್ಳಿ	ಕಂಚು	ಒಟ್ಟು
ಚೀನಾ	29	17	16	62
ಅಮೆರಿಕ	22	25	17	64
ಜಪಾನ್	17	6	10	33
ಆಸ್ಟ್ರೇಲಿಯಾ	14	4	15	33
ಆರ್‌ಒಸಿ	12	21	17	50
ಭಾರತ (62ನೇ ಸ್ಥಾನ)	0	1	1	2

ಮೊರಾಕ್ಕೊ, ಕ್ಯೂಬಾ ಕ್ರೀಡಾಪಟುಗಳ ಪಾರಮ್ಯ

ಮಳೆಯಲ್ಲೂ ನಿಲ್ಲದ ಪದಕ ಬೇಟೆ!

ಟೋಕಿಯೊ(ಎಎಫ್‌ಪಿ): ಏಕಾಏಕಿ ಸುರಿದ ಮಳೆ ಅಥ್ಲೀಟ್‌ಗಳನ್ನು ಕಕ್ಕಾಬಿಕ್ಕಿ ಮಾಡಿತು. ಸಂಘಟಕರೂ ಸಂಕಟಕ್ಕೆ ಒಳಗಾದರು. ಕೆಲಕಾಲ ಅಡ್ಡಿಯಾದರೂ ಒಲಿಂಪಿಕ್ಸ್ ಅಥ್ಲೆಟಿಕ್ಸ್‌ನ ಸೋಮವಾರ ಸಂಜೆಯ ಸ್ಪರ್ಧೆಗಳು ಮುಂದುವರಿದವು. ನೀರಿನಲ್ಲೇ ಓಡಿದ ಅಥ್ಲೀಟ್‌ಗಳು ಪದಕಗಳ ಬೇಟೆಯಾಡಿದರು. ಆದರೆ ಭಾರತದ ಕಮಲ್‌ಪ್ರೀತ್ ಕೌರ್ ಕನಸು ಕೊಚ್ಚಿಹೋಯಿತು.

ಮಹಿಳೆಯರ ಡಿಸ್ಕಸ್ ಥ್ರೋದಲ್ಲಿ ಅಮೆರಿಕದ ಅಲ್ಮಾನ್ ವಲರಿ ಅಮೋಘ ಸಾಮರ್ಥ್ಯ ತೋರಿದರು.

68.98 ದೂರದ ಸಾಧನೆ ಮಾಡಿದ ಅವರು ಚಿನ್ನ ಗೆದ್ದರೆ ಜರ್ಮನಿಯ ಪುಡೆನ್ಸ್ ಕ್ರಿಸ್ಟಿನ್ 66.86 ಮೀಟರ್‌ನೊಂದಿಗೆ ಬೆಳ್ಳಿ ಗಳಿಸಿದರು. ಯಯ್ಮಿ ಪೆರೆಜ್ (65.72) ಕಂಚಿನ ಪದಕ ತಮ್ಮದಾಗಿಸಿಕೊಂಡರು.

ಟ್ರ್ಯಾಕ್‌ನಲ್ಲಿ ನಿಂತಿದ್ದ ನೀರು ಕ್ರೀಡಾಪಟುಗಳ ಸಾಧನೆಗೆ ಅಡ್ಡಿಯಾಯಿತು. ಆದರೂ ಕ್ಯೂಬಾ ಮತ್ತು ಮೊರಾಕ್ಕೊದ ಅಥ್ಲೀಟ್‌ಗಳು ಮಿಂಚಿದರು.

ಪುರುಷರ 3000 ಮೀಟರ್ಸ್ ಸ್ಟೀಪಲ್‌ಚೇಸ್‌ನಲ್ಲಿ ಮೊರಾಕ್ಕೊದ ಎಲ್ ಬಕಾಲಿ ಸೌಫಿಯಾನ್ ಚಿನ್ನ ಗೆದ್ದರೆ ಇಥಿಯೋಪಿಯಾದ ಗಿರ್ಮಾ ಲಮೇಚಾ ಬೆಳ್ಳಿ ಪದಕ ಗೆದ್ದುಕೊಂಡರು. ಕೆನ್ಯಾದ ಕಿಗೆನ್ ಬೆಂಜಮಿನ್ ಕಂಚಿನ ಪದಕ ಗೆದ್ದುಕೊಂಡರು.

ಮಹಿಳೆಯರ ಐದು ಸಾವಿರ ಮೀಟರ್ಸ್ ಓಟದಲ್ಲಿ ನೆದರ್ಲೆಂಡ್ಸ್‌ನ ಸಿಫಾನ್ ಹಸನ್ (14 ನಿಮಿಷ 36.79ಸೆಕೆಂಡು) ಚಿನ್ನ ಗಳಿಸಿದರು. ಕೆನ್ಯಾದ ಎಬಿರಿ ಹೆಲೆನ್ ಮತ್ತು ಇಥಿಯೋಪಿಯಾದ ಸೆಗೆ ಗುಡಾಫ್ ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕ ಗಳಿಸಿದರು.

ಪುರುಷರ ಲಾಂಗ್‌ಜಂಪ್‌ನಲ್ಲಿ ಗ್ರೀಸ್ ಚಿನ್ನ ಗಳಿಸಿದರೆ ಬೆಳ್ಳಿ ಮತ್ತು ಕಂಚಿನ ಪದಕ ಕ್ಯೂಬಾ ಪಾಲಾಯಿತು. ಮಹಿಳೆಯರ 100 ಮೀಟರ್ಸ್ ಹರ್ಡಲ್ಸ್‌ನಲ್ಲಿ ಪೋರ್ಟೊ ರಿಕೊದ ಕಮಾಚೊ ಜಾಸ್ಮಿನ್ ಚಾಂಪಿಯನ್ ಆಗಿ ಆಚ್ಚರಿ ಮೂಡಿಸಿದರು. ಅಮೆರಿಕ ಮತ್ತು ಜಮೈಕಾ ಉಳಿದೆರಡು ಸ್ಥಾನಗಳನ್ನು ಗಳಿಸಿತು.

200 ಮೀಟರ್ಸ್ ಓಟದ ಅರ್ಹತಾ ಸುತ್ತಿನಲ್ಲಿ ಭಾರತದ ದ್ಯುತಿ ಚಾಂದ್ 23.85 ಸೆಕೆಂಡುಗಳಲ್ಲಿ ಗುರಿ ಮುಟ್ಟಿದರು. ಅವರ ಫೈನಲ್ ಕನಸು ನನಸಾಗಲಿಲ್ಲ.

ವಲರಿ ಅಲ್ಮಾನ್ –ರಾಯಿಟರ್ಸ್ ಚಿತ್ರ



ಸಿಫಾನ್ ಹಸನ್ –ಎಎಫ್‌ಪಿ ಚಿತ್ರ

ಎಲೈನ್ ಥಾಮ್ಸನ್‌ಗೆ ಡಬಲ್ ಚಿನ್ನದ ಕನಸು

ತಮ್ಮದೇ ದೇಶದ ಶೆಲ್ಲಿ ಆ್ಯನ್ ಫ್ರೇಸರ್ ಪ್ರೈಸ್ ಅವರನ್ನು ಮತ್ತೊಮ್ಮೆ ಹಿಂದಿಕ್ಕಿದ ಜಮೈಕಾದ ಎಲೈನ್ ಥಾಮ್ಸನ್ ಹೆರಾ 200 ಮೀಟರ್ಸ್ ಓಟದಲ್ಲೂ ಪದಕದ ಭರವಸೆ ಮೂಡಿಸಿದ್ದಾರೆ. ವೈಯಕ್ತಿಕ ಶ್ರೇಷ್ಠ ಸಾಧನೆಯೊಂದಿಗೆ (21.66 ಸೆ) ಅವರು ಫೈನಲ್ ಪ್ರವೇಶಿಸಿದ್ದಾರೆ.

ಥಾಮ್ಸನ್ ಹೆರಾ

29 ವರ್ಷದ ಎಲೈನ್ ಥಾಮ್ಸನ್ 100 ಮೀಟರ್ಸ್ ಓಟದಲ್ಲಿ ಶೆಲ್ಲಿ ಅವರನ್ನು ಹಿಂದಿಕ್ಕಿ ಚಿನ್ನ ಗೆದ್ದಿದ್ದರು. 200 ಮೀಟರ್ಸ್ ಫೈನಲ್ ಮಂಗಳವಾರ ನಡೆಯಲಿದೆ. 22.13 ಸೆಕೆಂಡುಗಳಲ್ಲಿ ಗುರಿ ಮುಟ್ಟಿದ ಶೆಲ್ಲಿ ಕೂಡ ಫೈನಲ್ ತಲುಪಿದ್ದಾರೆ. 18 ವರ್ಷದ ಓಟಗಾರ್ತಿ ನಮಿಬಿಯಾದ ಕ್ರಿಸ್ಟಿನ್ ಬೋಮಾ 21.97 ಸೆಕೆಂಡುಗಳಲ್ಲಿ ಗುರಿ ತಲುಪಿ 20 ವರ್ಷದೊಳಗಿನವರ ವಿಶ್ವ ದಾಖಲೆ ಸೃಷ್ಟಿಸಿದರು.

‘ಮಳೆಯಿಂದಾಗಿ ಪದಕದ ಆಸೆ ಕಮರಿತು’

ಚಂಡೀಗಡ (ಪಿಟಿಐ): ‘ದೇಶಕ್ಕಾಗಿ ಪದಕ ಗೆಲ್ಲಲು ಕಮಲ್‌ಪ್ರೀತ್ ಶಕ್ತಿಮೀರಿ ಪ್ರಯತ್ನಿಸಿದಳು. ಸ್ಪರ್ಧೆಯ ವೇಳೆ ಮಳೆ ಸುರಿದಿದ್ದರಿಂದ ಲಯ ಕಂಡುಕೊಳ್ಳಲು ಆಗಲಿಲ್ಲ. ಹೀಗಾಗಿ ಪದಕದ ಕನಸು ಕಮರಿತು’ ಎಂದು ಕಮಲ್‌ಪ್ರೀತ್ ಕುಟುಂಬದವರು ಪ್ರತಿಕ್ರಿಯಿಸಿದ್ದಾರೆ.

ಪಂಜಾಬ್‌ನ ಮುಕ್ತಸರ್ ಜಿಲ್ಲೆಯ ಖಬರ್‌ವಾಲಾ ಗ್ರಾಮದವರಾದ ಕಮಲ್‌ಪ್ರೀತ್, ಫೈನಲ್‌ನ ಮೂರನೇ ಪ್ರಯತ್ನದಲ್ಲಿ 63.70 ಮೀಟರ್ಸ್ ದೂರ ಡಿಸ್ಕಸ್ ಎಸೆದಿದ್ದರು. ಇದರೊಂದಿಗೆ 2012ರ ಲಂಡನ್ ಒಲಿಂಪಿಕ್ಸ್‌ನಲ್ಲಿ ಕೃಷ್ಣಾ ಪುನಿಯಾ (63.62) ಮಾಡಿದ್ದ ಸಾಧನೆ ಮೀರಿದ್ದರು.

ಕಮಲ್‌ಪ್ರೀತ್ ಸೋಮವಾರ ಫೈನಲ್‌ನಲ್ಲಿ ಪಾಲ್ಗೊಳ್ಳುತ್ತಿದ್ದುದರಿಂದ ಅವರ ಮನೆಯಲ್ಲಿ ಸಂಭ್ರಮದ ವಾತಾವರಣ ನೆಲೆಸಿತ್ತು. ಮನೆಯವರೆಲ್ಲಾ ಟಿ.ವಿ.ಎದುರು ಕುಳಿತು ಕುಟುಂಬದ ಕುಡಿಯ ಪ್ರದರ್ಶನ ಕಣ್ತುಂಬಿಕೊಂಡರು. ಅವರ ತಾಯಿ ರಾಜಿಂದರ್ ಕೌರ್ ಮಗಳು ಚಿನ್ನದೊಂದಿಗೆ ತವರಿಗೆ ಮರಳಲಿ ಎಂದು ಬೆಳಿಗ್ಗೆಯಿಂದಲೇ ದೇವರಲ್ಲಿ ಪ್ರಾರ್ಥಿಸುತ್ತಿದ್ದರು. ವಿಶೇಷ ಪೂಜೆಯನ್ನು ಮಾಡಿದ್ದರು.

‘ಫೈನಲ್‌ನಲ್ಲಿ ಕಮಲ್‌ಪ್ರೀತ್ ಕೊಂಚ ಒತ್ತಡಕ್ಕೆ ಒಳಗಾದಂತೆ ಕಂಡಳು. ಆಕೆಯ ಜೊತೆ ದೂರವಾಣಿ ಕರೆ ಮಾಡಿ ಮಾತನಾಡಿದಾಗ ಶ್ರೇಷ್ಠ ಸಾಮರ್ಥ್ಯ ತೋರಿ ದೇಶಕ್ಕೆ ಪದಕ ಗೆದ್ದುಕೊಡಲು ಪ್ರಯತ್ನಿಸುವುದಾಗಿ ತಿಳಿಸಿದ್ದಳು’ ಎಂದು ರಾಜಿಂದರ್ ಹೇಳಿದರು.

ಭಾರತದ ಕಮಲ್‌ಪ್ರೀತ್ ಕೌರ್ ನಿರಾಸೆಯ ಕ್ಷಣ –ಪಿಟಿಐ ಚಿತ್ರ

ಕುಸ್ತಿ: ದಾಖಲೆ ಬರೆದ ಲೊಪೆಜ್

ಟೋಕಿಯೊ (ರಾಯಿಟರ್ಸ್): ಕ್ಯೂಬಾದ ಮಿಜಾಯಿನ್ ಲೊಪೆಜ್ ನ್ಯೂನೆಜ್ ನಿರೀಕ್ಷೆಯಂತೆ ಎದುರಾಳಿಯನ್ನು ಚಿತ್ ಮಾಡಿ ಗ್ರೀಕೊ ರೋಮನ್ ಸೂಪರ್ ಹೆವಿವೇಟ್ ವಿಭಾಗದ ಕುಸ್ತಿಯಲ್ಲಿ ಚಾಂಪಿಯನ್ ಪಟ್ಟ ಧರಿಸಿದರು. ಸೋಮವಾರ 130 ಕೆಜಿ ವಿಭಾಗದ ಫೈನಲ್ ಬೌಟ್‌ನಲ್ಲಿ ಅವರು ಜಾರ್ಜಿಯಾದ ಕಜಾಯಿ ಅವರನ್ನು ಮಣಿಸಿ ಸತತ ನಾಲ್ಕು ಒಲಿಂಪಿಕ್ಸ್‌ಗಳಲ್ಲಿ ಚಿನ್ನ ಗೆದ್ದ ದಾಖಲೆ ಬರೆದರು.

ಒಂದೇ ವಿಭಾಗದಲ್ಲಿ ನಾಲ್ಕು ಒಲಿಂಪಿಕ್ಸ್‌ಗಳಲ್ಲಿ ಚಿನ್ನ ಗೆದ್ದ ವಿಶ್ವದ ನಾಲ್ಕನೇ ಅಥ್ಲೀಟ್ ಎಂಬ ಶ್ರೇಯ ಲೊಪೆಜ್ ಅವರದಾಯಿತು. ಇದರೊಂದಿಗೆ ಅವರು ಕಾರ್ಲ್ ಲೆವಿಸ್ (ಲಾಂಗ್ ಜಂಪ್), ಅಲ್ ಓರ್ಟರ್ (ಡಿಸ್ಕಸ್ ಥ್ರೊ), ಮೈಕೆಲ್ ಫೆಲ್ಪ್ಸ್ (ಈಜು, 200 ಮೀ. ಮೆಡ್ಲೆ) ಅವರ ಸಾಲಿಗೆ ಸೇರಿದರು.

ಮಖುಹಾರಿ ಮೆಸ್ಸೆ ಹಾಲ್‌ನಲ್ಲಿ ನಡೆದ ಪ್ರಶಸ್ತಿ ಹಣಾಹಣಿಯಲ್ಲಿ ಲೊಪೆಜ್ 5-0ಯಿಂದ ಎದುರಾಳಿಗೆ ಸೋಲುಣಿಸಿದರು.

ಟರ್ಕಿಯ ರಿಜಾ ಕಯಾಲ್ಪ್ ಮತ್ತು ರಷ್ಯಾದ ಸೆರ್ಜಿ ಸೆಮೊನೊಯ್ ಕಂಚಿನ ಪದಕಗಳನ್ನು ತಮ್ಮದಾಗಿಸಿಕೊಂಡರು.

ಲೊಪೆಜ್ ಅವರು 2008ರ ಬೀಜಿಂಗ್, 2012ರ ಲಂಡನ್ ಮತ್ತು 2016ರ ರಿಯೊ ಕೂಟಗಳಲ್ಲಿ ಚಿನ್ನದ ಪದಕ ಗೆದ್ದು-ಕೊಂಡಿದ್ದರು. ಇಲ್ಲಿ ಅಗ್ರಸ್ಥಾನ ಗಳಿಸುವ ಮೂಲಕ ನಾಲ್ಕು ಒಲಿಂಪಿಕ್ಸ್‌ಗಳಲ್ಲಿ ಚಾಂಪಿಯನ್ ಆದ ಮೊದಲ ಪುರುಷ ಕುಸ್ತಿಪಟು ಎಂಬ ಶ್ರೇಯವೂ ಅವರದಾಯಿತು. ಜಪಾನ್‌ನ ಫ್ರೀಸ್ಟೈಲ್ ಕುಸ್ತಿಪಟು ಕವೊರಿ ಇಚೊ ಅವರು ವೈಯಕ್ತಿಕ ವಿಭಾಗದಲ್ಲಿ ಸತತ ನಾಲ್ಕು ಒಲಿಂಪಿಕ್ಸ್‌ಗಳಲ್ಲಿ ಚಿನ್ನ ಗೆದ್ದ ಮೊದಲ ಮಹಿಳೆ ಎನಿಸಿಕೊಂಡಿದ್ದಾರೆ.

ಒರ್ಟಾಗೆ ಬ್ಯಾಂಟಮ್‌ವೇಟ್ ಚಿನ್ನ: ಗ್ರೀಕೊ ರೋಮನ್ ಬ್ಯಾಂಟಮ್‌ವೇಟ್‌ದ (60 ಕೆಜಿ ವಿಭಾಗ) ಚಿನ್ನವೂ ಕ್ಯೂಬಾ ದೇಶದ ಪಾಲಾಯಿತು. ಫೈನಲ್ ಹಣಾಹಣಿಯಲ್ಲಿ ಆ ದೇಶದ ಲೂಯಿಸ್ ಒರ್ಟಾ ಅವರು 5-1ರಿಂದ ಜಪಾನ್‌ನ ಕೆನಿಚಿರೊ ಫ್ಯುಮಿಟಾ ಅವರನ್ನು ಮಣಿಸಿದರು.

ಚೀನಾದ ವಾಲಿಹನ್ ಸೈಲಿಕೆ ಮತ್ತು ರಷ್ಯಾದ ಸೆರ್ಜ್ ಎಮೆಲಿನ್ ಕಂಚಿನ ಪದಕಗಳನ್ನು ತಮ್ಮದಾಗಿಸಿಕೊಂಡರು.



ಮಿಜಾಯಿನ್ ಲೊಪೆಜ್ (ಕೆಂಪು ಪೋಷಾಕು) ಮತ್ತು ಜಾರ್ಜಿಯಾದ ಇಯಾಕೊಬಿ ನಡುವಣ ಸೆಣಸಾಟ – ಎಎಫ್‌ಪಿ ಚಿತ್ರ

60 ಕೆಜಿ ವಿಭಾಗದಲ್ಲಿ ಚಿನ್ನ ಗೆದ್ದ ಲೂಯಿಸ್ ಒರ್ಟಾ – ರಾಯಿಟರ್ಸ್ ಚಿತ್ರ

ಚೀನಾದ ಜಾಂಗ್‌ಗೆ ಶೂಟಿಂಗ್ ಚಿನ್ನ

ಟೋಕಿಯೊ: ಚೀನಾದ ಜಾಂಗ್ ಚಾಂಗೊಂಗ್ ಅವರು ಪುರುಷರ 50 ಮೀಟರ್ಸ್ ರೈಫಲ್ 3 ಪೊಷಿಸನ್ ಶೂಟಿಂಗ್ ಸ್ಪರ್ಧೆಯಲ್ಲಿ ಚಿನ್ನದ ಪದಕ ಗೆದ್ದರು.

ಸೋಮವಾರ ನಡೆದ ಫೈನಲ್‌ನಲ್ಲಿ ಅವರು 466.0 ಪಾಯಿಂಟ್ಸ್ ಕಲೆಹಾಕಿ ಒಲಿಂಪಿಕ್ಸ್ ದಾಖಲೆ ಸರಿಗಟ್ಟಿದರು.

ರಷ್ಯಾ ಒಲಿಂಪಿಕ್ ಸಮಿತಿಯ ಸರ್ಜಿ ಕಮೆನ್ಸ್‌ಕಿ ಬೆಳ್ಳಿ ಪಡೆದರು. ಅವರು 464.2 ಪಾಯಿಂಟ್ಸ್ ಗಳಿಸಿದರು. ಸರ್ಬಿಯಾದ ಮಿಲೆಂಕೊ ಸೆಬಿಚ್ (448.2) ಕಂಚಿನ ಪದಕ ತಮ್ಮದಾಗಿಸಿಕೊಂಡರು.

ಭಾರತದ ಸ್ಪರ್ಧಿಗಳ ವೈಫಲ್ಯ: ಈ ವಿಭಾಗದಲ್ಲಿ ಕಣದಲ್ಲಿದ್ದ ಭಾರತದ ಐಶ್ವರ್ಯ ಪ್ರತಾಪ್ ಸಿಂಗ್ ತೋಮರ್ ಮತ್ತು ಸಂಜೀವ್ ರಾಜಪೂತ್ ಫೈನಲ್‌ಗೆ ಅರ್ಹತೆ ಗಳಿಸಲು ವಿಫಲರಾದರು. ಅರ್ಹತಾ ಸುತ್ತಿನಲ್ಲಿ ತೋಮರ್ 21ನೇ ಸ್ಥಾನ ಗಳಿಸಿದರೆ, ರಾಜಪೂತ್ 32ನೇ ಸ್ಥಾನದೊಂದಿಗೆ ಹೋರಾಟ ಮುಗಿಸಿದರು.

ಹೀಗಾಗಿ ಈ ಬಾರಿ ಶೂಟಿಂಗ್‌ನಲ್ಲಿ ಭಾರತಕ್ಕೆ ಪದಕ ಮರೀಚಿಕೆಯಾಯಿತು.



ಶೂಟಿಂಗ್ ಸ್ಪರ್ಧೆಯ ಪುರುಷರ 50 ಮೀಟರ್ಸ್ ರೈಫಲ್ 3 ಪೊಷಿಸನ್ ವಿಭಾಗದಲ್ಲಿ (ಎಡದಿಂದ) ಬೆಳ್ಳಿ ಪದಕ ಜಯಿಸಿದ ಸರ್ಜಿ ಕಮೆನ್ಸ್‌ಕಿ, ಚಿನ್ನ ಗೆದ್ದ ಜಾಂಗ್ ಚಾಂಗೊಂಗ್ ಮತ್ತು ಕಂಚಿನ ಪದಕ ಪಡೆದ ಮಿಲೆಂಕೊ ಸೆಬಿಚ್ ಸಂಭ್ರಮ –ರಾಯಿಟರ್ಸ್

ಕುಸ್ತಿಯಲ್ಲಿ ನಾಲ್ಕು ಪದಕ: ಸಾಕ್ಷಿ ಮಲಿಕ್ ನಿರೀಕ್ಷೆ

ಬೆಂಗಳೂರು: ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಭಾರತದ ಕುಸ್ತಿ ತಂಡವು ಕನಿಷ್ಠ ನಾಲ್ಕು ಪದಕಗಳನ್ನು ಜಯಿಸುವ ಸಾಮರ್ಥ್ಯ ಹೊಂದಿದೆ ಎಂದು ಒಲಿಂಪಿಯನ್ ಕುಸ್ತಿಪಟು ಸಾಕ್ಷಿ ಮಲಿಕ್ ಹೇಳಿದ್ದಾರೆ.



ರಿಯೊ ಡಿ ಜನೈರೊದಲ್ಲಿ ಐದು ವರ್ಷಗಳ ಹಿಂದೆ ನಡೆದಿದ್ದ ಒಲಿಂಪಿಕ್ಸ್‌ನಲ್ಲಿ ಮಹಿಳೆಯರ ಕುಸ್ತಿಯಲ್ಲಿ ಪದಕ ಜಯಿಸಿದ್ದ ಭಾರತದ ಸಾಕ್ಷಿ ಮಲಿಕ್ ಈ ಬಾರಿಯ ಕೂಟದಲ್ಲಿ ಸ್ಪರ್ಧಿಸುತ್ತಿಲ್ಲ. ಆದರೆ ಈ ಬಾರಿಯೂ ಭಾರತಕ್ಕೆ ಕುಸ್ತಿಯಲ್ಲಿ ಪದಕಗಳು ಲಭಿಸುವುದು ಖಚಿತ ಎಂದು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

‘ಭಾರತದ ಕುಸ್ತಿ ತಂಡವು ಬಲಿಷ್ಠವಾಗಿದೆ. ಬಜರಂಗ್ ಪೂನಿಯಾ, ವಿನೇಶ ಪೋಗಟ್, ಅನ್ಶು ಮಲಿಕ್ ಮತ್ತು ರವಿ ಪದಕ ಗೆಲ್ಲುವ ನಿರೀಕ್ಷೆ ಇದೆ‘ ಎಂದು ಸೋನಿ ಲಿವ್ ಏರ್ಪಡಿಸಿದ್ದ ಆನ್‌ಲೈನ್ ಸಂವಾದದಲ್ಲಿ ಅವರು ಹೇಳಿದರು.

‘ಅನ್ಶು ಮಲಿಕ್ ಅವರಿಗೆ ಇದು ಮೊದಲ ಒಲಿಂಪಿಕ್ಸ್. ಆದರೆ ಅವರಿಗೆ ಉತ್ತಮ ಕೌಶಲ ಹಾಗೂ ಆತ್ಮವಿಶ್ವಾಸವಿದೆ. ಆದ್ದರಿಂದ ಪದಕ ಜಯಿಸುವ ಸಾಧ್ಯತೆ ದಟ್ಟವಾಗಿದೆ’ ಎಂದರು.

‘ನಾನು ಅಭ್ಯಾಸ ಆರಂಭಿಸಿದ್ದೇನೆ. ಗಾಯದಿಂದ ಚೇತರಿಸಿಕೊಂಡಿದ್ದು, ಮತ್ತೆ ಕುಸ್ತಿ ಕಣಕ್ಕೆ ಮರಳುತ್ತಿದ್ದೇನೆ. ಮುಂದಿನ ದಿನಗಳಲ್ಲಿ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸ್ಪರ್ಧೆಗಳಲ್ಲಿ ಭಾಗವಹಿಸಲು ತಯಾರಿ ನಡೆಸುತ್ತೇನೆ’ ಎಂದು ಸಾಕ್ಷಿ ಹೇಳಿದರು.

ಬ್ಯಾಡ್ಮಿಂಟನ್: ಚಿನ್ನ ಗೆದ್ದು ದಾಖಲೆ ಬರೆದ ವಿಕ್ಟರ್

ಟೋಕಿಯೊ (ಪಿಟಿಐ): ಡೆನ್ಮಾರ್ಕ್‌ನ ವಿಕ್ಟರ್ ಆ್ಯಕ್ಸಲ್‌ಸನ್ ಸೋಮವಾರ ಟೋಕಿಯೊ ಅಂಗಳದಲ್ಲಿ ವಿಶಿಷ್ಟ ಸಾಧನೆ ಮಾಡಿದರು.

ಪುರುಷರ ಬ್ಯಾಡ್ಮಿಂಟನ್‌ನ ಸಿಂಗಲ್ಸ್‌ನಲ್ಲಿ ಚಿನ್ನದ ಪದಕ ಗೆದ್ದ ಅವರು ಏಷ್ಯಾ ಖಂಡದ ಆಟಗಾರರ ಪ್ರಾಬಲ್ಯಕ್ಕೆ ಕಡಿವಾಣ ಹಾಕಿದರು. 1996ರ ನಂತರ ಒಲಿಂಪಿಕ್ಸ್ ಬ್ಯಾಡ್ಮಿಂಟನ್‌ನಲ್ಲಿ ಏಷ್ಯಾ ರಾಷ್ಟ್ರಗಳ ಸ್ಪರ್ಧಿಗಳೇ ಪಾರಮ್ಯ ಮೆರೆದಿದ್ದರು.

ಈ ಸುದ್ದಿ ಗೊತ್ತಾಗುತ್ತಿದ್ದಂತೆ ಡೆನ್ಮಾರ್ಕ್‌ನ ರಾಜಕುಮಾರ ಫ್ರೆಡರಿಕ್ ಅವರು ಕರೆ ಮಾಡಿ ಆ್ಯಕ್ಸಲ್‌ಸನ್ ಅವರನ್ನು ಅಭಿನಂದಿಸಿದರು.

ಫೈನಲ್‌ನಲ್ಲಿ ವಿಕ್ಟರ್ 21-15, 21-12 ಪಾಯಿಂಟ್ಸ್‌ನಿಂದ ಚೀನಾದ ಚೆನ್ ಲಾಂಗ್ ಅವರನ್ನು ಸೋಲಿಸಿದರು. ಅಂತಿಮ ಗೇಮ್‌ನ ಕೊನೆಯಲ್ಲಿ ಚೆನ್ ಬಾರಿಸಿದ ಷಟಲ್ ಅಂಗಳದ ಆಚೆ ಬೀಳುತ್ತಿದ್ದಂತೆ ವಿಕ್ಟರ್, ಖುಷಿಯಿಂದ ಕಣ್ಣೀರಿಟ್ಟರು. ಅಂಗಳದಲ್ಲೇ ಅಂಗಾತ ಮಲಗಿ ರೋಧಿಸಿದರು. ಅಂಕಣದ ಮತ್ತೊಂದು ಬದಿಯಲ್ಲಿದ್ದ ಚೆನ್ ಅಭಿನಂದಿಸಲು ಬಂದಾಗ ಅವರನ್ನು ಬಿಗಿದಪ್ಪಿದ ವಿಕ್ಟರ್ ಬಿಕ್ಕಳಿಸಿದರು. ಬಳಿಕ ಇಬ್ಬರೂ ತಮ್ಮ ಜೆರ್ಸಿಯನ್ನು ಪರಸ್ಪರ ವಿನಿಮಯ ಮಾಡಿಕೊಂಡು ಕ್ರೀಡಾ ಸ್ಫೂರ್ತಿ ಮೆರೆದರು.

ವಿಶ್ವ ರ‍್ಯಾಂಕಿಂಗ್‌ನಲ್ಲಿ ಎರಡನೇ ಸ್ಥಾನ ಹೊಂದಿರುವ ವಿಕ್ಟರ್, ಪಂದ್ಯದ ಉದ್ದಕ್ಕೂ ಅಮೋಘ ಸಾಮರ್ಥ್ಯ ತೋರಿದರು. ಆಕರ್ಷಕ ಸ್ಮ್ಯಾಷ್ ಮತ್ತು ಚುರುಕಿನ ಡ್ರಾಪ್‌ಗಳ ಮೂಲಕ ರ‍್ಯಾಂಕಿಂಗ್‌ನಲ್ಲಿ ಆರನೇ ಸ್ಥಾನದಲ್ಲಿರುವ ಚೆನ್ ಅವರನ್ನು ಕಂಗೆಡಿಸಿದರು.

2016ರ ರಿಯೊ ಒಲಿಂಪಿಕ್ಸ್‌ನ ಸೆಮಿ-ಫೈನಲ್‌ನಲ್ಲಿ ವಿಕ್ಟರ್ ಅವರು ಚೆನ್ ವಿರುದ್ಧ ನಿರಾಸೆ ಕಂಡಿದ್ದರು. ಆ ಸೋಲಿಗೆ ಇಲ್ಲಿ ಮುಯ್ಯಿ ತೀರಿಸಿಕೊಂಡರು.

ಸಿನಿಸುಕಗೆ ಕಂಚು: ಇಂಡೊನೇಷ್ಯಾದ ಅಂಥೋಣಿ ಸಿನಿಸುಕಾ ಕಂಚಿನ ಪದಕ ಪಡೆದರು. ಮೂರನೇ ಸ್ಥಾನ ನಿರ್ಧರಿಸಲು ನಡೆದ ಹೋರಾಟದಲ್ಲಿ ಸಿನಿಸುಕ 21-11, 21-13ರಿಂದ ಕೆವಿನ್ ಕಾರ್ಡನ್ ಅವರನ್ನು ಪರಾಭವಗೊಳಿಸಿದರು.

ಪೊಲಿ-ರಹಾಯುಗೆ ಡಬಲ್ಸ್ ಗರಿ: ಮಹಿಳಾ ಡಬಲ್ಸ್‌ನಲ್ಲಿ ಇಂಡೊನೇಷ್ಯಾದ ಗ್ರೇಸಿಯಾ ಪೊಲಿ ಮತ್ತು ಅಪ್ರಿಯಾನಿ ರಹಾಯು ಚಾಂಪಿಯನ್ ಆದರು. ಇದರೊಂದಿಗೆ ಮಹಿಳಾ ಡಬಲ್ಸ್‌ನಲ್ಲಿ ದೇಶಕ್ಕೆ ಚಿನ್ನ ಗೆದ್ದುಕೊಟ್ಟ ಮೊದಲ ಜೋಡಿ ಎಂಬ ಹಿರಿಮೆಗೆ ಪಾತ್ರರಾದರು.

ಫೈನಲ್‌ನಲ್ಲಿ ಪೊಲಿ ಮತ್ತು ರಹಾಯು 21-19, 21-15ರಿಂದ ಚೀನಾದ ಚೆನ್ ಕ್ವಿಂಗ್ ಮತ್ತು ಜಿಯಾ ಯಿ ಫಾನ್ ಅವರನ್ನು ಮಣಿಸಿದರು.

ಮಹಿಳಾ ಡಬಲ್ಸ್‌ನಲ್ಲಿ ಚಿನ್ನದ ಪದಕ ಜಯಿಸಿದ ಇಂಡೊನೇಷ್ಯಾದ ಗ್ರೇಸಿಯಾ ಪೊಲಿ ಮತ್ತು ಅಪ್ರಿಯಾನಿ ಸಂಭ್ರಮ –ರಾಯಿಟರ್ಸ್ ಚಿತ್ರ

ಪುರುಷರ ಬ್ಯಾಡ್ಮಿಂಟನ್‌ನ ಸಿಂಗಲ್ಸ್ ವಿಭಾಗದ ಫೈನಲ್‌ನಲ್ಲಿ ಗೆದ್ದ ಬಳಿಕ ಡೆನ್ಮಾರ್ಕ್‌ನ ವಿಕ್ಟರ್ ಆ್ಯಕ್ಸಲ್‌ಸನ್ ಖುಷಿಯಿಂದ ಕಣ್ಣೀರಿಟ್ಟರು –ಎಎಫ್‌ಪಿ ಚಿತ್ರ

ಕ್ರಿಕೆಟ್: ಮೊಹಮ್ಮದ್ ಸಿರಾಜ್ ಎಸೆತದಲ್ಲಿ ಆರಂಭಿಕ ಬ್ಯಾಟ್ಸ್‌ಮನ್ ತಲೆಗೆ ಗಾಯ

ಮೊದಲ ಟೆಸ್ಟ್‌ಗೆ ಮಯಂಕ್ ಅಲಭ್ಯ

ಮಯಂಕ್ ಅಗರವಾಲ್ ಮತ್ತು ಮೊಹಮ್ಮದ್ ಸಿರಾಜ್ –ಎಎಫ್‌ಪಿ ಚಿತ್ರ

ಮುಖ್ಯಾಂಶಗಳು
- ಇಂಗ್ಲೆಂಡ್ ಎದುರಿನ ಮೊದಲ ಟೆಸ್ಟ್ ಆಗಸ್ಟ್ ನಾಲ್ಕರಂದು ಆರಂಭ
- ಮಯಂಕ್ ಆರೋಗ್ಯದ ಮೇಲೆ ವೈದ್ಯರ ನಿಗಾ
- ಕನ್ನಡಿಗ ಕೆ.ಎಲ್. ರಾಹುಲ್ ಇನಿಂಗ್ಸ್ ಆರಂಭಿಸುವ ಸಾಧ್ಯತೆ

ಲಂಡನ್ (ಎಎಫ್‌ಪಿ/ಪಿಟಿಐ): ಭಾರತ ಕ್ರಿಕೆಟ್ ತಂಡದ ಆರಂಭಿಕ ಬ್ಯಾಟ್ಸ್‌ಮನ್ ಮಯಂಕ್ ಅಗರವಾಲ್ ಅವರಿಗೆ ಗಂಭೀರ ಗಾಯವಾಗಿದ್ದು ಕಂಕಷನ್ ಪರೀಕ್ಷೆಗೆ ಒಳಗಾಗುವ ಸಾಧ್ಯತೆ ಇದೆ. ಹೀಗಾಗಿ ಇಂಗ್ಲೆಂಡ್ ಎದುರಿನ ಮೊದಲ ಟೆಸ್ಟ್‌ನಲ್ಲಿ ಅವರು ಆಡುವುದಿಲ್ಲ. ಟೆಸ್ಟ್ ಪಂದ್ಯಕ್ಕೆ ಸಜ್ಜಾಗುತ್ತಿರುವ ತಂಡ ಸೋಮವಾರ ನಾಟಿಂಗ್‌ಹ್ಯಾಂನ‌ಲ್ಲಿ ಅಭ್ಯಾಸದಲ್ಲಿ ತೊಡಗಿದ್ದ ವೇಳೆ ಮಯಂಕ್‌ಗೆ ಗಾಯವಾಗಿದೆ.

ವೇಗದ ಬೌಲರ್ ಮೊಹಮ್ಮದ್ ಸಿರಾಜ್ ಹಾಕಿದ ಶಾರ್ಟ್ ಎಸೆತ ಮಯಂಕ್ ಅವರ ತಲೆಯ ಹಿಂಭಾಗಕ್ಕೆ ಬಡಿದಿದೆ. 'ಮಯಂಕ್ ಅವರಿಗೆ ಗಂಭೀರ ಗಾಯವಾಗಿದ್ದು ವೈದ್ಯಕೀಯ ತಂಡ ಅವರ ಆರೋಗ್ಯದ ಮೇಲೆ ನಿಗಾ ಇರಿಸಿದೆ. ಮೊದಲ ಟೆಸ್ಟ್‌ನಲ್ಲಿ ಅವರನ್ನು ಕಣಕ್ಕೆ ಇಳಿಸದೇ ಇರಲು ನಿರ್ಧರಿಸಲಾಗಿದೆ' ಎಂದು ಬಿಸಿಸಿಐ ಮೂಲಗಳು ತಿಳಿಸಿವೆ.

ಚೆಂಡು ತಾಗಿದ ಕೂಡಲೇ ಹೆಲ್ಮೆಟ್ ತೆಗೆದು ನೆಲದಲ್ಲಿ ಕುಳಿತ ಮಯಂಕ್ ಅಸ್ವಸ್ಥರಾದಂತೆ ಕಂಡುಬಂದಿದ್ದರು. ಅಲ್ಲಿಗೆ ಬಂದ ಫಿಜಿಯೊ ನಿತಿನ್ ಪಟೇಲ್ ಚಿಕಿತ್ಸೆ ನೀಡಿದರು. ನೆಟ್ಸ್‌ನಿಂದ ಕರೆದುಕೊಂಡು ಹೋಗುವಾಗ ಮಯಂಕ್ ಅವರ ಕತ್ತಿನ ಮೇಲೆ ಅವರು ಒತ್ತುತ್ತಾ ಸಾಗಿದ್ದರು.

ಮಯಂಕ್ ಕಡ್ಡಾಯ ಕಂಕಷನ್ ಪರೀಕ್ಷೆಗೆ ಒಳಗಾಗುವ ಸಾಧ್ಯತೆ ಇದ್ದು ವೈದ್ಯರ ತಂಡದ ಅನುಮತಿ ಲಭಿಸಿದರೆ ಮಾತ್ರ ಪಂದ್ಯಗಳಲ್ಲಿ ಆಡಲು ಸಾಧ್ಯ. ಮೊದಲ ಟೆಸ್ಟ್ ಆಗಸ್ಟ್ ನಾಲ್ಕರಿಂದ ನಡೆಯಲಿದೆ.

ಮಯಂಕ್ ಅಲಭ್ಯರಾದರೆ ಕನ್ನಡಿಗ, ವಿಕೆಟ್ ಕೀಪರ್ ಕೆ.ಎಲ್. ರಾಹುಲ್ ಇನಿಂಗ್ಸ್ ಆರಂಭಿಸುವ ಸಾಧ್ಯತೆ ಇದೆ. ರಾಹುಲ್ ಉತ್ತಮ ಆರಂಭಿಕ ಬ್ಯಾಟ್ಸ್‌ಮನ್ ಆಗಿದ್ದರೂ ಮಧ್ಯಮ ಕ್ರಮಾಂಕದಲ್ಲಿ ಬ್ಯಾಟಿಂಗ್ ಮಾಡಲು ಬಯಸುತ್ತಾರೆ. ಅಭಿಮನ್ಯು ಈಶ್ವರನ್ ಕೂಡ ಆರಂಭಿಕ ಬ್ಯಾಟ್ಸ್‌ಮನ್ ಆಗಿ ಆಡುವ ಸಾಧ್ಯತೆ ಇದೆ.

ಮಂಗಳೂರು ಬಿಸಿ ತಂಡದ ಶಶಾಂಕ್ ರೈ (ಎಡ) ಮತ್ತು ಡಿವೈಇಎಸ್‌ನ ಲಲಿತ್ ನಡುವೆ ಚೆಂಡಿಗಾಗಿ ಪೈಪೋಟಿ – ಪ್ರಜಾವಾಣಿ ಚಿತ್ರ

ಬ್ಯಾಸ್ಕೆಟ್‌ಬಾಲ್: ಮಂಗಳೂರಿಗೆ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಶಾಂಕ್ ರೈ (31 ಪಾಯಿಂಟ್ಸ್) ಮತ್ತೆ ಮಿಂಚಿದರು. ಅವರ ಭರ್ಜರಿ ಆಟದ ನೆರವಿನಿಂದ ಮಂಗಳೂರು ಬಿಸಿ ತಂಡವು ಜಯ ಗಳಿಸಿತು. ಪ್ರೊ. ಪರಪ್ಪ ಸ್ಮಾರಕ ಟ್ರೋಫಿಗಾಗಿ ನಡೆಯುತ್ತಿರುವ ರಾಜ್ಯ 'ಎ' ಡಿವಿಷನ್ ಬ್ಯಾಸ್ಕೆಟ್‌ಬಾಲ್ ಲೀಗ್ ಚಾಂಪಿಯನ್‌ಷಿಪ್‌ನಲ್ಲಿ ಸೋಮವಾರ 59–54ರಿಂದ ಡಿವೈಇಎಸ್ ಬೆಂಗಳೂರು ತಂಡವನ್ನು ಸೋಲಿಸಿತು.

ಕಂಠೀರವ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಡಿವೈಇಎಸ್ ತಂಡದ ಪರ ಅಕ್ಷಯ್ 22 ಮತ್ತು ರಕ್ಷಿತ್ 14 ಪಾಯಿಂಟ್ಸ್ ಕಲೆಹಾಕಿದರು.

ಮತ್ತೊಂದು ಪಂದ್ಯದಲ್ಲಿ ಮಂಗಳೂರು 51–40ರಿಂದ ಜೆಎಸ್‌ಸಿ ತಂಡ ವನ್ನು ಪರಾಭವಗೊಳಿಸಿತು. ವಿಜೇತ ತಂಡದ ಪರ ಶಶಾಂಕ್ 18 ಮತ್ತು ನರಸಿಂಹ 10 ಪಾಯಿಂಟ್ಸ್ ಗಳಿಸಿದರು. ರೈಸಿಂಗ್ ಸ್ಟಾರ್ ಮೈಸೂರು ತಂಡ ಹಿಂದೆ ಸರಿದಿದ್ದರಿಂದ ಎಸ್. ಬ್ಲ್ಯೂಸ್ ಮತ್ತು ಜಿಎಸ್‌ಟಿ ಆ್ಯಂಡ್ ಕಸ್ಟಮ್ಸ್ ತಂಡಗಳಿಗೆ ವಾಕ್‌ಓವರ್ ದೊರೆಯಿತು.

ಬೆಂಗಳೂರಿನಲ್ಲಿ ಬ್ಯಾಡ್ಮಿಂಟನ್ ಟೂರ್ನಿ 27ರಿಂದ

ಸೈನಾ ನೆಹ್ವಾಲ್

ನವದೆಹಲಿ (ಪಿಟಿಐ): ದೇಶಿ ಟೂರ್ನಿಗಳನ್ನು ಆಗಸ್ಟ್ 27ರಿಂದ ಆರಂಭಿಸಲಾಗುವುದು ಎಂದು ರಾಷ್ಟ್ರೀಯ ಬ್ಯಾಡ್ಮಿಂಟನ್ ಸಂಸ್ಥೆ (ಬಿಎಐ) ಸೋಮವಾರ ತಿಳಿಸಿದೆ.

ಬೆಂಗಳೂರಿನಲ್ಲಿ ಸೀನಿಯರ್ ವಿಭಾಗದ (ಪುರುಷ ಮತ್ತು ಮಹಿಳಾ) ಟೂರ್ನಿಗಳ ಮೂಲಕ ಋತುವನ್ನು ಆರಂಭಿಸಲಾಗುತ್ತದೆ. ಆಗಸ್ಟ್ 27ರಿಂದ ಸೆಪ್ಟೆಂಬರ್ 3ರವರೆಗೆ ಮತ್ತು ಸೆಪ್ಟೆಂಬರ್ 4ರಿಂದ 11ರವರೆಗೆ ಈ ಟೂರ್ನಿಗಳು ಉದ್ಯಾನನಗರಿಯಲ್ಲಿ ನಡೆಯಲಿವೆ ಎಂದು ಬಿಎಐ ಹೊರಡಿಸಿರುವ ಸುತ್ತೋಲೆಯಲ್ಲಿ ತಿಳಿಸಲಾಗಿದೆ.

ಕಟ್ಟುನಿಟ್ಟಿನ ಕೋವಿಡ್ ಮಾರ್ಗಸೂಚಿಗಳ ಅಡಿಯಲ್ಲಿ ದೇಶಿ ಋತುವನ್ನು ಪುನರಾರಂಭಿಸುವ ಪ್ರಯತ್ನದಲ್ಲಿ, ಈ ತಿಂಗಳ ಮೊದಲ ವಾರ ರಾಷ್ಟ್ರೀಯ ಶಿಬಿರ ಆಯೋಜಿಸಲು ಒಪ್ಪಿಗೆ ನೀಡುವಂತೆ ಭಾರತ ಕ್ರೀಡಾ ಪ್ರಾಧಿಕಾರಕ್ಕೆ (ಎಸ್‌ಎಐ) ಬಿಎಐ ಮನವಿ ಮಾಡಿತ್ತು.

ಹೈದರಾಬಾದ್, ಗುವಾಹಟಿ ಮತ್ತು ಬೆಂಗಳೂರು ನಗರಗಳಲ್ಲಿ ಕಟ್ಟುನಿಟ್ಟಾದ ಕೋವಿಡ್ ನಿಯಮಗಳಡಿ ಸೀನಿಯರ್ ಮತ್ತು ಜೂನಿಯರ್ ಬ್ಯಾಡ್ಮಿಂಟನ್ ಆಟ ಗಾರರ ಶಿಬಿರಗಳು ನಡೆಯಲಿವೆ ಎಂದು ಬಿಎಐನ ಪ್ರಸ್ತಾವನೆಯಲ್ಲಿ ತಿಳಿಸಲಾಗಿದೆ.

ಸೈನಾ ನೆಹ್ವಾಲ್, ಕಿಡಂಬಿ ಶ್ರೀಕಾಂತ್, ಎಚ್ ಎಸ್ ಪ್ರಣಯ್, ಎನ್ ಸಿಕ್ಕಿ ರೆಡ್ಡಿ ಮತ್ತು ಅಶ್ವಿನಿ ಪೊನ್ನಪ್ಪ ಸೇರಿದಂತೆ ಸುಮಾರು 70-75 ಆಟಗಾರರು ಶಿಬಿರದ ಭಾಗವಾಗಲಿದ್ದಾರೆ ಎಂದು ಬಿಎಐ ತಿಳಿಸಿದೆ.

ಸುಶೀಲ್ ಕುಮಾರ್ ವಿರುದ್ಧ ದೋಷಾರೋಪ ಪಟ್ಟಿ ಸಲ್ಲಿಕೆ

ಸುಶೀಲ್

ನವದೆಹಲಿ: ಛತ್ರಸಾಲ ಕ್ರೀಡಾಂಗಣದಲ್ಲಿ ರಾಷ್ಟ್ರೀಯ ಜೂನಿಯರ್ ಕುಸ್ತಿ ಮಾಜಿ ಚಾಂಪಿಯನ್ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ದೆಹಲಿ ಪೊಲೀಸರು ಸೋಮವಾರ ಒಲಿಂಪಿಕ್ಸ್ ಪದಕ ವಿಜೇತ ಕುಸ್ತಿ ಪಟು ಸುಶೀಲ್ ಕುಮಾರ್ ಮತ್ತು 19 ಇತರ ಮಂದಿ ವಿರುದ್ಧ ದೋಷಾರೋಪ ಪಟ್ಟಿ ಸಲ್ಲಿಸಿದ್ದಾರೆ.

ಸುಶೀಲ್ ಕುಮಾರ್ ಅವರನ್ನು ಮುಖ್ಯ ಆರೋಪಿಯನ್ನಾಗಿ ಹೆಸರಿಸಿದ ಅಂತಿಮ ವರದಿಯನ್ನು ಮುಖ್ಯ ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್ (ಸಿಎಂಎಂ) ಸತ್ವೀರ್ ಸಿಂಗ್ ಲಂಬಾ ಅವರಿಗೆ ಸಲ್ಲಿಸಲಾಗಿದೆ.

ಪ್ರಕರಣದಲ್ಲಿ ಹದಿನೈದು ಆರೋಪಿಗಳನ್ನು ಬಂಧಿಸಲಾಗಿದ್ದು, ಐವರು ತಲೆಮರೆಸಿಕೊಂಡಿದ್ದಾರೆ.

ಮೇ 4ರ ಮಧ್ಯರಾತ್ರಿ ಸುಶೀಲ್ ಮತ್ತು ಆತನ ಸಹಚರರು ಸಾಗರ್ ಧನ್‌ಕರ್ ಹಾಗೂ ಅವನ ಇಬ್ಬರು ಸ್ನೇಹಿತರಾದ ಸೋನು ಮತ್ತು ಅಮಿತ್ ಕುಮಾರ್ ಮೇಲೆ ಹಲ್ಲೆ ನಡೆಸಿದ್ದಾರೆ ಎನ್ನಲಾಗಿದೆ. ಗಂಭೀರವಾಗಿ ಗಾಯಗೊಂಡಿದ್ದ ಧನ್‌ಕರ್ ಮೃತಪಟ್ಟಿದ್ದರು.

ಸಿಬಿಎಸ್‌ಇ: 12ನೇ ತರಗತಿ ಫಲಿತಾಂಶ ಒಪ್ಪದವರಿಗೆ ಆ.16ರಿಂದ ಪರೀಕ್ಷೆ

ನವದೆಹಲಿ: ಕೇಂದ್ರ ಪ್ರೌಢಶಿಕ್ಷಣ ಮಂಡಳಿ (ಸಿಬಿಎಸ್‌ಇ) 12ನೇ ತರಗತಿ ಫಲಿತಾಂಶದ ಬಗ್ಗೆ ತೃಪ್ತಿ ಇಲ್ಲದ ವಿದ್ಯಾರ್ಥಿಗಳಿಗೆ ಆಗಸ್ಟ್ 16ರಿಂದ ಸೆಪ್ಟೆಂಬರ್ 15ರ ವರೆಗೆ ಪರೀಕ್ಷೆ ನಡೆಸಲಿದೆ.

ಈ ಕುರಿತು ಮಂಡಳಿ ಪ್ರಕಟಣೆ ನೀಡಿದೆ. ಕೋವಿಡ್ ಸಾಂಕ್ರಾಮಿಕದ ಕಾರಣ ಈ ಬಾರಿ ಸಿಬಿಎಸ್‌ಇ 12ನೇ ತರಗತಿ ಪರೀಕ್ಷೆ ರದ್ದುಗೊಳಿಸಲಾಗಿತ್ತು. ಪರ್ಯಾಯ ಮೌಲ್ಯಮಾಪನ ಕ್ರಮ ಆಧರಿಸಿ ಫಲಿತಾಂಶವನ್ನು ಪ್ರಕಟಿಸಲಾಗಿತ್ತು.

ಕಳ್ಳಬಟ್ಟಿ ಪ್ರಕರಣ: ಜೀವಾವಧಿ ಶಿಕ್ಷೆ

ಕೋಲ್ಕತ್ತ (ಪಿಟಿಐ): 172 ಜನರು ಮೃತಪಟ್ಟಿದ್ದ 2011ರ ಕಳ್ಳಬಟ್ಟಿ ದುರಂತದ ಪ್ರಮುಖ ಅಪರಾಧಿ ಖೋರಾ ಬಾದಶಾ ಅಲಿಯಾಸ್ ನೂರ್ ಇಸ್ಲಾಂ ಫಕೀರ್‌ಗೆ ಇಲ್ಲಿನ ನ್ಯಾಯಾಲಯ ಸೋಮವಾರ ಜೀವಾವಧಿ ಶಿಕ್ಷೆ ವಿಧಿಸಿದೆ.

ದಕ್ಷಿಣ 24 ಪರಗಣ ಜಿಲ್ಲೆಯ ಮಾಗ್ರಹತ್, ಉಸ್ತಿ ಮತ್ತು ಮಂದಿರ್ ಬಜಾರ್‌ನಲ್ಲಿ 2011ರ ಡಿಸೆಂಬರ್ 14 ರಂದು ಈ ಸಾವು ಆಗಿತ್ತು.

ಕೆಎಸ್‌ಎಫ್‌ಎ–ಬಿಡಿಎಫ್‌ಎ 'ಸಿ' ಡಿವಿಷನ್ ಫುಟ್‌ಬಾಲ್

ರೂಟ್ಸ್ ತಂಡಕ್ಕೆ ಭರ್ಜರಿ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಾಶ್ವತ್ ಗಳಿಸಿದ ಎರಡು ಗೋಲುಗಳು ರೂಟ್ಸ್ ಫುಟ್‌ಬಾಲ್ ತಂಡಕ್ಕೆ ಗೆಲುವು ತಂದುಕೊಟ್ಟವು. ಅವರ ಆಟದ ಬಲದಿಂದ ಇಲ್ಲಿ ನಡೆಯುತ್ತಿರುವ ಕೆಎಸ್‌ಎಫ್‌ಎ–ಬಿಡಿಎಫ್‌ಎ 'ಸಿ' ಡಿವಿಷನ್ ನಾಕೌಟ್ ಫುಟ್‌ಬಾಲ್ ಟೂರ್ನಿಯಲ್ಲಿ ರೂಟ್ಸ್ 5–1ರಿಂದ ಎಜಾನ್ ಎಫ್‌ಸಿ ತಂಡವನ್ನು ಪರಾಭವಗೊಳಿಸಿತು.

ಸೋಮವಾರ ನಡೆದ ಪಂದ್ಯದಲ್ಲಿ ವಿಜೇತ ತಂಡದ ಪರ ಶಾಶ್ವತ್ 15 ಮತ್ತು 16ನೇ ನಿಮಿಷಗಳಲ್ಲಿ ಗೋಲು ದಾಖಲಿಸಿದರು. ಯೋಹಾನ್ (31ನೇ ನಿಮಿಷ), ಜೊಹಾನ್ (46ನೇ ನಿಮಿಷ) ಹಾಗೂ ವಿಶಾಲ್ (60ನೇ ನಿಮಿಷ) ತಲಾ ಒಂದು ಗೋಲು ಹೊಡೆದರು. ಎಜಾನ್ ತಂಡದ ಪ್ರವೀಣ್ 17ನೇ ನಿಮಿಷದಲ್ಲಿ ಕಾಲ್ಚಳಕ ತೋರಿದರು.

ಇನ್ನೊಂದು ಪಂದ್ಯದಲ್ಲಿ ರಾಮನ್ ಸ್ಪೋರ್ಟ್ಸ್ ಅಕಾಡೆಮಿ ತಂಡವು 1–0ಯಿಂದ ಸ್ಟ್ರೈಡ್ ಎಫ್‌ಸಿ ಎದುರು ಗೆದ್ದಿತು. ರಾಮನ್ ಸ್ಪೋರ್ಟ್ಸ್ ಅಕಾಡೆಮಿಯ ಹರ್ಷಿತ್ ಐದನೇ ನಿಮಿಷದಲ್ಲಿ ಗೋಲು ಹೊಡೆದರು.

ಮತ್ತೊಂದು ಪಂದ್ಯದಲ್ಲಿ ಫ್ರೀಡಮ್ ಎಫ್‌ಸಿ ತಂಡವು ಪೆನಾಲ್ಟಿ ಶೂಟೌಟ್‌ನಲ್ಲಿ ಬಾಶ್ ಎಫ್‌ಸಿ ಎದುರು ಗೆಲುವು ಸಾಧಿಸಿತು. ನಿಗದಿತ ಅವಧಿಯಲ್ಲಿ ಉಭಯ ತಂಡಗಳು ತಲಾ ಒಂದು ಗೋಲು ದಾಖಲಿಸಿದ್ದವು. ಪೆನಾಲ್ಟಿ ಶೂಟೌಟ್‌ನಲ್ಲಿ ಫ್ರೀಡಮ್ ಎಫ್‌ಸಿ ಮೂರು ಗೋಲು ಹೊಡೆದರೆ, ಬಾಶ್ ಎಫ್‌ಸಿಗೆ ಕೇವಲ ಎರಡು ಗೋಲು ದಾಖಲಿಸಲು ಸಾಧ್ಯವಾಯಿತು.

ಮಂಗಳವಾರ ನಡೆಯುವ ಪಂದ್ಯಗಳಲ್ಲಿ ಬೆಂಗಳೂರು ಏರೋಸ್ ಎಫ್‌ಸಿ–ಎಫ್‌ಸಿಎ, ವೈಟ್‌ಫೀಲ್ಡ್ ಯುನೈಟೆಡ್ ಎಫ್‌ಸಿ–ಬೆಂಗಳೂರು ಪ್ಯಾಂಥರ್ಸ್, ಗ್ಲೋಬಲ್ ಎಫ್‌ಸಿ– ಬೆಂಗಳೂರು ಅಥ್ಲೆಟಿಕ್ ಎಫ್‌ಸಿ ಸೆಣಸಲಿವೆ.

ಸ್ಕ್ವಾಷ್ ರ‍್ಯಾಂಕಿಂಗ್: 10ನೇ ಸ್ಥಾನಕ್ಕೆ ಜೋಷ್ನಾ

ಜೋಷ್ನಾ ಚಿಣ್ಣಪ್ಪ

ಲಂಡನ್ (ಪಿಟಿಐ): ಭಾರತದ ಸ್ಕ್ವಾಷ್ ತಾರೆ ಜೋಷ್ನಾ ಚಿಣ್ಣಪ್ಪ ಅವರು ಪಿಎಸ್‌ಎ ವಿಶ್ವ ರ‍್ಯಾಂಕಿಂಗ್‌ನಲ್ಲಿ ಅಗ್ರ 10ರೊಳಗಿನ ಸ್ಥಾನಕ್ಕೆ ಮರಳಿದ್ದಾರೆ. ಕಳೆದ ತಿಂಗಳು ಷಿಕಾಗೊದಲ್ಲಿ ನಡೆದ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಪ್ರೀಕ್ವಾರ್ಟರ್‌ಫೈನಲ್‌ವರೆಗೆ ತಲುಪಿದ ಕಾರಣ ಅವರ ರ‍್ಯಾಂಕಿಂಗ್‌ನಲ್ಲಿ ಏರಿಕೆಯಾಗಿದೆ.

2016ರ ಬಳಿಕ ಇದೇ ಮೊದಲ ಬಾರಿ ಅವರು 10ರೊಳಗಿನ ಸ್ಥಾನಕ್ಕೆ ಪ್ರವೇಶಿಸಿದ್ದು, ಸದ್ಯ 10ನೇ ಕ್ರಮಾಂಕದಲ್ಲಿದ್ದಾರೆ. ರ‍್ಯಾಂಕಿಂಗ್‌ನಲ್ಲಿ ಈಜಿಪ್ಟ್ ಪಾರಮ್ಯ ಸಾಧಿಸಿದೆ. ಅಗ್ರ ಕ್ರಮಾಂಕದ ನೂರ್ ಎಲ್ ಶೆರ್ಬಾನಿ ಸೇರಿದಂತೆ ಆ ದೇಶದ ಐದು ಆಟಗಾರ್ತಿಯರು ಅಗ್ರ 10ರ ಪಟ್ಟಿಯಲ್ಲಿದ್ದಾರೆ.

ಡಿ.ಸಿ ಹುದ್ದೆಗೆ ನೇಮಕ: ಅಧಿಕಾರ ಸ್ವೀಕಾರ ಮುನ್ನವೇ ಮತ್ತೊಬ್ಬರು ಪ್ರಭಾರಿ!

ಮುಖ್ಯಾಂಶಗಳು
- ರಾಜಕೀಯ ಮುಖಂಡರ ಕೈವಾಡ: ಆರೋಪ
- ಪರ್ಭಾನಿ ಕ್ಷೇತ್ರದ ಸಂಸದ ಶಿವಸೇನಾಕ್ಕೆ ಸೇರಿದವರು

ಔರಂಗಾಬಾದ್ (ಪಿಟಿಐ): ಮಹಾರಾಷ್ಟ್ರದ ಪರ್ಭಾನಿ ಜಿಲ್ಲೆಯ ಜಿಲ್ಲಾಧಿಕಾರಿಯಾಗಿ ನೇಮಕವಾಗಿರುವ ಮಹಿಳಾ ಐಎಎಸ್ ಅಧಿಕಾರಿ ಅಚಲ್ ಗೋಯೆಲ್ ಅವರು ಅಧಿಕಾರ ಸ್ವೀಕರಿಸುವ ಮುನ್ನವೇ ಆ ಸ್ಥಾನಕ್ಕೆ ಮತ್ತೊಬ್ಬರನ್ನು ಪ್ರಭಾರಿಯನ್ನಾಗಿ ನೇಮಿಸಿದ್ದು, ಇದರ ಹಿಂದೆ ಆಡಳಿತಾರೂಢ ರಾಜಕೀಯ ಮುಖಂಡರ ಕೈವಾಡವಿದೆ ಎಂಬ ಆರೋಪ ಕೇಳಿಬಂದಿದೆ.

ಪರ್ಭಾನಿ ಕ್ಷೇತ್ರದ ಸಂಸದ ಶಿವಸೇನಾಕ್ಕೆ ಸೇರಿದವರು. ಎನ್‌ಸಿಪಿ ನಾಯಕ ನವಾಬ್ ಮಲಿಕ್ ಅವರು ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದಾರೆ. ಸ್ಥಳೀಯ ಬಿಜೆಪಿ ಶಾಸಕಿ ಮೇಘನಾ ಬೋರ್ಡಿಕರ್ ಅವರು, 'ಕೆಲವು ಪಟ್ಟಭದ್ರ ರಾಜಕೀಯ ಹಿತಾಸಕ್ತಿಗಳ ಕಾರಣಕ್ಕಾಗಿ ಪರ್ಭಾನಿಯಲ್ಲಿ ಉತ್ತಮ ಅಧಿಕಾರಿಗಳು ಕೆಲಸ ಮಾಡಲು ಎಂದಿಗೂ ಸಾಧ್ಯವಾಗಿಲ್ಲ' ಎಂದು ಆರೋಪಿಸಿದ್ದಾರೆ.ಯಾವುದೇ ನಾಯಕರ ಹೆಸರನ್ನು ಉಲ್ಲೇಖಿಸದೇ ಅವರು, 'ಶಿವಸೇನಾ ಪಕ್ಷಕ್ಕೆ ಪರ್ಭಾನಿ ಜಿಲ್ಲೆಯ ಜನರು ನೀಡಿದ ಸಹಕಾರವನ್ನು ನೆನಪಿಟ್ಟುಕೊಳ್ಳಬೇಕು' ಎಂದು ಹೇಳಿದ್ದಾರೆ.

'ಸಾರ್ವಜನಿಕ ಹಿತದೃಷ್ಟಿಯಿಂದ ಐಎಎಸ್ ಅಧಿಕಾರಿ ಅಚಲ್ ಗೋಯಲ್ ಅವರಿಗೆ ತಕ್ಷಣವೇ ಜವಾಬ್ದಾರಿ ನೀಡಬೇಕು' ಎಂದು ಜಾಗೃತ್ ನಾಗರಿಕ್ ಅಘಾಡಿ ಸಂಘಟನೆ ಒತ್ತಾಯ ಮಾಡಿದೆ.

'ಜುಲೈ 31ರಂದು ಪರ್ಭಾನಿ ಜಿಲ್ಲಾಧಿಕಾರಿ ದೀಪಕ್ ಮುಗ್ಲಿಕರ್ ನಿವೃತ್ತರಾಗಿದ್ದರು. ಆ ಸ್ಥಾನಕ್ಕೆ ಐಎಎಸ್ ಅಧಿಕಾರಿ ಅಚಲ್ ಗೋಯಲ್ ಅವರನ್ನು ನೇಮಿಸಲಾಗಿದೆ ಎನ್ನುವ ಕುರಿತು ಪತ್ರಿಕೆಗಳಲ್ಲಿ ವರದಿಯಾಗಿತ್ತು. ಅಚಲ್ ಅವರು ತಮ್ಮ ಪುಟ್ಟ ಮಗುವಿನೊಂದಿಗೆ ಮುಂಚಿತವಾಗಿಯೇ ಪರ್ಭಾನಿಗೆ ಬಂದಿದ್ದರು. ಆದರೆ, ಅವರು ಅಧಿಕಾರ ಸ್ವೀಕರಿಸುವ ಮುನ್ನವೇ ದಿಢೀರನೆ ಹೆಚ್ಚುವರಿ ಜಿಲ್ಲಾಧಿಕಾರಿ ರಾಜೇಶ್ ಕಾಟ್ಕರ್ ಅವರಿಗೆ ಜಿಲ್ಲೆಯ ಉಸ್ತುವಾರಿ ನೀಡಲಾಗಿದೆ. ಇದು ಕೆಲವು ರಾಜಕಾರಣಿಗಳ ಕುತಂತ್ರವಾಗಿದ್ದು, ನಾಚಿಕೆಗೇಡಿನ ಸಂಗತಿಯಾಗಿದೆ. ಮಹಿಳಾ ಸಬಲೀಕರಣದ ಕುರಿತು ರಾಜ್ಯ ಸರ್ಕಾರದ ಪೊಳ್ಳು ಕಾಳಜಿಯನ್ನು ಇದು ತೋರಿಸುತ್ತದೆ' ಜಾಗೃತ್ ನಾಗರಿಕ್ ಅಘಾಡಿ ಅಧ್ಯಕ್ಷೆ ಮಾಧುರಿ ಕ್ಷೀರಸಾಗರ್ ಅವರು ಸುದ್ದಿಗಾರರಿಗೆ ತಿಳಿಸಿದ್ದಾರೆ.

ಈ ಕುರಿತು ಐಎಎಸ್ ಅಧಿಕಾರಿ ಅಚಲ್ ಗೋಯಲ್ ಪ್ರತಿಕ್ರಿಯೆಗೆ ಲಭ್ಯವಾಗಲಿಲ್ಲ.

ಅತ್ಯಾಚಾರವೆಸಗಿದ ವ್ಯಕ್ತಿಯೊಂದಿಗೆ ಮದುವೆ; ಅರ್ಜಿ ವಜಾಗೊಳಿಸಿದ 'ಸುಪ್ರೀಂ'

ನವದೆಹಲಿ (ಪಿಟಿಐ): ಕೇರಳದ ಕೊಟ್ಟಿಯೂರಿನಲ್ಲಿ ಮಹಿಳೆಯೊಬ್ಬರು ತನ್ನ ಮೇಲೆ ಅತ್ಯಾಚಾರವೆಸಗಿದ ವ್ಯಕ್ತಿಯನ್ನೇ ಮದುವೆಯಾಗಲು ಅನುಮತಿ ಕೋರಿ ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂಕೋರ್ಟ್ ಸೋಮವಾರ ವಜಾಗೊಳಿಸಿದೆ.

ಈ ಪ್ರಕರಣದಡಿ 20 ವರ್ಷ ಜೈಲು ಶಿಕ್ಷೆ ಅನುಭವಿಸುತ್ತಿರುವ ಮಾಜಿ ಪಾದ್ರಿ ಸಲ್ಲಿಸಿದ್ದ ಜಾಮೀನು ಅರ್ಜಿಯನ್ನು ಕೂಡ ನ್ಯಾಯಾಲಯವು ವಜಾಗೊಳಿಸಿದೆ.

'ತಾನು ಸಂತ್ರಸ್ತೆಯನ್ನು ಮದುವೆಯಾಗಬೇಕೆಂದು ಭಾವಿಸಿದ್ದೆ. ಆದರೆ ಅತ್ಯಾಚಾರದ ವೇಳೆ ಆಕೆ ಅಪ್ರಾಪ್ತ ವಯಸ್ಸಿನವಳಾಗಿದ್ದಳು. ಬಳಿಕ ಆಕೆ ಮಗುವಿಗೆ ಜನ್ಮ ನೀಡಿದಳು' ಎಂಬ ಕಾರಣ ನೀಡಿ ಮಾಜಿ ಪಾದ್ರಿಯು ಜಾಮೀನು ಅರ್ಜಿ ಸಲ್ಲಿಸಿದ್ದರು.

'ಈ ಸಂಬಂಧ ಹೈಕೋರ್ಟ್ ಪ್ರಜ್ಞಾಪೂರ್ವಕವಾಗಿ ನಿರ್ಧಾರ ಕೈಗೊಂಡಿದೆ. ನ್ಯಾಯಾಲಯವು ಅದರ ತೀರ್ಪಿನಲ್ಲಿ ಮಧ್ಯಪ್ರವೇಶಿಸಲು ಇಚ್ಛಿಸುವುದಿಲ್ಲ' ಎಂದು ನ್ಯಾಯಮೂರ್ತಿಗಳಾದ ವಿನೀತ್ ಸರನ್ ಮತ್ತು ದಿನೇಶ್ ಮಾಹೇಶ್ವರಿ ಅವರ ಪೀಠವು ಹೇಳಿದೆ.

'ಮಾಜಿ ಪಾದ್ರಿಯನ್ನು ವರಿಸುವುದಕ್ಕೆ ಸಂಬಂಧಿಸಿದಂತೆ ಸಂತ್ರಸ್ತೆಯು ವಿಚಾರಣಾ ನ್ಯಾಯಾಲಯದ ಕದ ತಟ್ಟಬಹುದು' ಎಂದೂ ಪೀಠ ಹೇಳಿದೆ.

ಪ್ರಧಾನ ಮಂತ್ರಿ ಕಚೇರಿ ಅಧಿಕಾರಿ ರಾಜೀನಾಮೆ

ನವದೆಹಲಿ (ಪಿಟಿಐ): ಪ್ರಧಾನ ಮಂತ್ರಿ ಕಚೇರಿಯ (ಪಿಎಂಒ) ಹಿರಿಯ ಅಧಿಕಾರಿ ಅಮರ್‌ಜೀತ್ ಸಿನ್ಹಾ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ ಎಂದು ಮೂಲಗಳು ಸೋಮವಾರ ತಿಳಿಸಿವೆ.

1983 ಬ್ಯಾಚ್‌ನ ಬಿಹಾರ್-ಕೇಡರ್ ಐಎಎಸ್ ಅಧಿಕಾರಿಯಾಗಿದ್ದ ಸಿನ್ಹಾ ಅವರು ಗ್ರಾಮೀಣಾಭಿವೃದ್ಧಿ ಇಲಾಖೆ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಿದ್ದರು. ನಿವೃತ್ತರಾದ ನಂತರ ಅವರು ಪ್ರಧಾನ ಮಂತ್ರಿ ಕಚೇರಿಯಲ್ಲಿ ಸಲಹೆಗಾರರಾಗಿ ನೇಮಕಗೊಂಡು, ಸಾಮಾಜಿಕ ವಲಯಕ್ಕೆ ಸಂಬಂಧಿಸಿದ ಯೋಜನೆಗಳನ್ನು ನಿರ್ವಹಿಸುತ್ತಿದ್ದರು.

ಪ್ರಧಾನ ಸಲಹೆಗಾರರಾಗಿ ಕೆಲಸ ಮಾಡಿದ್ದ ಸಂಪುಟ ದರ್ಜೆಯ ಮಾಜಿ ಕಾರ್ಯದರ್ಶಿ ಪಿ.ಕೆ.ಸಿನ್ಹಾ ಅವರು ಮಾರ್ಚ್‌ನಲ್ಲಿ ರಾಜೀನಾಮೆ ನೀಡಿದ ನಂತರ, ಅಮರಜೀತ್ ಅವರು ಇತ್ತೀಚಿನ ತಿಂಗಳುಗಳಲ್ಲಿ ಪಿಎಂಒ ತೊರೆದ ಎರಡನೇ ಉನ್ನತ ಅಧಿಕಾರಿಯಾಗಿದ್ದಾರೆ.

ಸಂಕ್ಷಿಪ್ತ ಸುದ್ದಿ

ಆಸ್ಟ್ರೇಲಿಯಾ: ಬ್ರಿಸ್ಬೇನ್‌ನಲ್ಲಿ ಲಾಕ್‌ಡೌನ್ ವಿಸ್ತರಣೆ

ಬ್ರಿಸ್ಬೇನ್ (ಎಪಿ): ಆಸ್ಟ್ರೇಲಿಯಾದಲ್ಲಿ ಕೋವಿಡ್ ಉಲ್ಬಣಗೊಳ್ಳುತ್ತಿದ್ದು, ಈ ಹಿನ್ನೆಲೆಯಲ್ಲಿ ಬ್ರಿಸ್ಬೇನ್‌ನಲ್ಲಿ ಈಗಾಗಲೇ ಹೇರಲಾಗಿರುವ ಲಾಕ್‌ಡೌನ್ ಅನ್ನು ಭಾನುವಾರದವರೆಗೆ ವಿಸ್ತರಿಸಲಾಗಿದೆ.

ಕ್ವೀನ್ಸ್‌ಲ್ಯಾಂಡ್ ರಾಜ್ಯದ ಬ್ರಿಸ್ಬೇನ್ ಮತ್ತು ಸುತ್ತಮುತ್ತಲಿನ ಕೆಲವು ಪ್ರದೇಶಗಳಲ್ಲಿ ನಾಳೆ ಲಾಕ್‌ಡೌನ್ ಅಂತ್ಯಗೊಳ್ಳಬೇಕಾಗಿತ್ತು. ಆದರೆ ಕಳೆದ 24 ಗಂಟೆಗಳಲ್ಲಿ ಡೆಲ್ಟಾ ರೂಪಾಂತರ ತಳಿಯ 13 ಪ್ರಕರಣಗಳು ವರದಿಯಾಗಿವೆ. ಈ ಹಿನ್ನೆಲೆಯಲ್ಲಿ ಲಾಕ್‌ಡೌನ್ ಅನ್ನು ಭಾನುವಾರದವರೆಗೆ ವಿಸ್ತರಿಸಲಾಗಿದೆ.

ಆಸ್ಟ್ರೇಲಿಯಾದ ನ್ಯೂ ಸೌತ್ ವೇಲ್ಸ್ ರಾಜ್ಯದಲ್ಲಿರುವ ಸಿಡ್ನಿ ಮತ್ತು ಸುತ್ತಮುತ್ತಲಿನ ನಗರದಲ್ಲಿ ಈಗಾಗಲೇ ಆರು ವಾರಗಳ ಲಾಕ್‌ಡೌನ್ ಹೇರಲಾಗಿದೆ. ನ್ಯೂ ಸೌತ್ ವೇಲ್ಸ್‌ನಲ್ಲಿ ಸ್ಥಳೀಯವಾಗಿ ಪ್ರಸರಣಗೊಂಡ 207 ಹೊಸ ಪ್ರಕರಣಗಳು ವರದಿಯಾಗಿವೆ.

ಚೀನಾ: ಭಾರತೀಯ ವಿದ್ಯಾರ್ಥಿ ಶವ ಪತ್ತೆ

ಬೀಜಿಂಗ್ (ಪಿಟಿಐ): ಚೀನಾದ ಟಿಯಾಂಜಿನ್ ನಗರದ ವಿಶ್ವವಿದ್ಯಾಲಯದಲ್ಲಿ ವ್ಯಾಸಂಗ ಮಾಡುತ್ತಿರುವ ಭಾರತದ 20 ವರ್ಷ ವಯಸ್ಸಿನ ವಿದ್ಯಾರ್ಥಿಯೊಬ್ಬ ತನ್ನ ಕೊಠಡಿಯಲ್ಲಿ ಶವವಾಗಿ ಪತ್ತೆಯಾಗಿದ್ದು, ಆತನ ಸಾವಿಗೆ ಕಾರಣ ಇನ್ನೂ ತಿಳಿದುಬಂದಿಲ್ಲ ಎಂದು ಅಧಿಕಾರಿಗಳು ಸೋಮವಾರ ತಿಳಿಸಿದ್ದಾರೆ.

ಬಿಹಾರದ ಗಯಾ ಮೂಲದ ಅಮನ್ ನಾಗ್‌ಸೇನ್, ಟಿಯಾಂಜಿನ್ ವಿದೇಶಿ ಅಧ್ಯಯನ ವಿಶ್ವವಿದ್ಯಾಲಯದಲ್ಲಿ ವ್ಯಾಪಾರ ಆಡಳಿತದ ವಿದ್ಯಾರ್ಥಿಯಾಗಿದ್ದರು. ಜುಲೈ 29 ರಂದು ಶವವಾಗಿ ಪತ್ತೆಯಾಗಿದ್ದಾರೆ. ತನಿಖೆ ನಡೆದಿದೆ ಎಂದು ತಿಳಿಸಿದ್ದಾರೆ.

'ಪೂರ್ವ ಲಡಾಖ್ ಸಮಸ್ಯೆ ಪರಿಹರಿಸಲು ಭಾರತ– ಚೀನಾ ಒಪ್ಪಿಗೆ'

ನವದೆಹಲಿ (ಪಿಟಿಐ): ಭಾರತ ಮತ್ತು ಚೀನಾ ನಡುವಿನ ಪೂರ್ವ ಲಡಾಖ್‌ನಲ್ಲಿ ಉಳಿದಿರುವ ಸಮಸ್ಯೆಗಳನ್ನು ಶೀಘ್ರವಾಗಿ ಪರಿಹರಿಸಲು ಉಭಯ ರಾಷ್ಟ್ರಗಳು ಒಪ್ಪಿಕೊಂಡಿವೆ. ತಮ್ಮ 12 ನೇ ಸುತ್ತಿನ ಮಿಲಿಟರಿ ಮಟ್ಟದ ಮಾತುಕತೆಯನ್ನು 'ರಚನಾತ್ಮಕ' ಎಂದು ಸೋಮವಾರ ಬಿಡುಗಡೆ ಮಾಡಿರುವ ಜಂಟಿ ಹೇಳಿಕೆಯಲ್ಲಿ ತಿಳಿಸಲಾಗಿದೆ.

ಭಾರತ – ಚೀನಾ ಸೇನೆಯ ಅಧಿಕಾರಿಗಳ ಮಾತುಕತೆ ನಡೆದು ಎರಡು ದಿನಗಳ ನಂತರ ಜಂಟಿ ಹೇಳಿಕೆ ಬಿಡುಗಡೆ ಮಾಡಲಾಗಿದೆ. ಪಶ್ಚಿಮ ವಲಯದ ವಾಸ್ತವ ನಿಯಂತ್ರಣ ರೇಖೆಯ (ಎಲ್‌ಎಸಿ) ಉದ್ದಕ್ಕೂ ಸಂಬಂಧಿಸಿದ ಸಮಸ್ಯೆಗಳನ್ನು ಪರಿಹರಿಸಿಕೊಳ್ಳುವ ಬಗ್ಗೆಯೂ ಉಭಯ ರಾಷ್ಟ್ರಗಳು ಹೆಚ್ಚಿನ ಆಸಕ್ತಿ ಹೊಂದಿವೆ ಎಂದು ಹೇಳಿಕೆಯಲ್ಲಿ ತಿಳಿಸಲಾಗಿದೆ.

'ಮಾತುಕತೆ ರಚನಾತ್ಮಕವಾಗಿ ನಡೆಯಿತು. ಎರಡೂ ರಾಷ್ಟ್ರಗಳ ನಡುವೆ ಉಳಿದಿರುವ ಗಡಿ ಸಮಸ್ಯೆಗಳನ್ನು ಅಸ್ತಿತ್ವದಲ್ಲಿರುವ ಒಪ್ಪಂದಕ್ಕೆ ಅನುಗುಣವಾಗಿ ತ್ವರಿತವಾಗಿ ಪರಿಹರಿಸಲು ಒಪ್ಪಿಗೆ ಸೂಚಿಸಲಾಯಿತು. ಎಲ್‌ಎಸಿ ಉದ್ದಕ್ಕೂ ಸ್ಥಿರತೆಯನ್ನು ಖಾತ್ರಿಪಡಿಸುವಲ್ಲಿ ಪರಿಣಾಮಕಾರಿ ಪ್ರಯತ್ನ ಮುಂದುವರಿಸಲು ಮತ್ತು ಶಾಂತಿಯನ್ನು ಕಾಪಾಡಿಕೊಳ್ಳಲು ಉಭಯ ರಾಷ್ಟ್ರಗಳು ಒಪ್ಪಿಕೊಂಡಿವೆ' ಎಂದು ಹೇಳಿಕೆಯಲ್ಲಿ ವಿವರಿಸಲಾಗಿದೆ.

ಕೃಷ್ಣಾ ನದಿ ವಿವಾದ: ಮಧ್ಯಸ್ಥಿಕೆಗೆ 'ಸುಪ್ರೀಂ' ಸಲಹೆ

ನವದೆಹಲಿ: ಕೃಷ್ಣಾ ನದಿ ನೀರು ಹಂಚಿಕೆ ವಿವಾದವನ್ನು ಮಧ್ಯಸ್ಥಿಕೆ ಮೂಲಕ ಆಂಧ್ರಪ್ರದೇಶ ಮತ್ತು ತೆಲಂಗಾಣ ಪರಿಹರಿಸಿಕೊಳ್ಳಬೇಕು ಎಂದು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಎನ್.ವಿ. ರಮಣ್ ಸಲಹೆ ನೀಡಿದ್ದಾರೆ.

'ಕುಡಿಯುವ ನೀರು ಮತ್ತು ನೀರಾವರಿ ಯೋಜನೆಗಳಿಗೆ ಹಂಚಿಕೆಯಾಗಬೇಕಾದ ನೀರನ್ನು ತೆಲಂಗಾಣ ಅಸಂವಿಧಾನಿಕವಾಗಿ ಮತ್ತು ಕಾನೂನುಬಾಹಿರವಾಗಿ ತಡೆಯುತ್ತಿದೆ' ಎಂದು ಆಂಧ್ರಪ್ರದೇಶ ದೂರು ಸಲ್ಲಿಸಿತ್ತು. ಈ ಪ್ರಕರಣದ ಅರ್ಜಿಯ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ, 'ನಾನು ಎರಡು ರಾಜ್ಯಗಳಿಗೆ ಸಂಬಂಧಪಟ್ಟಿದ್ದೇನೆ. ಹೀಗಾಗಿ, ಈ ವಿಷಯದ ಬಗ್ಗೆ ಕಾನೂನು ಪ್ರಕಾರ ವಿಚಾರಣೆ ನಡೆಸುವುದಿಲ್ಲ. ಮಧ್ಯಸ್ಥಿಕೆ ಮೂಲಕ ಇತ್ಯರ್ಥಗೊಳಿಸಲು ದಯವಿಟ್ಟು ಪ್ರಯತ್ನಿಸಿ. ಇದಕ್ಕೆ ನೆರವು ನೀಡಲು ಸಿದ್ಧ. ಇಲ್ಲದಿದ್ದರೆ ಈ ಪ್ರಕರಣವನ್ನು ಮತ್ತೊಂದು ಪೀಠಕ್ಕೆ ವರ್ಗಾಯಿಸುತ್ತೇನೆ' ಎಂದು ಹೇಳಿದರು.

ಈ ಬಗ್ಗೆ ಮುಂದಿನ ಸೂಚನೆ ಪಡೆಯಲು ಕಾಲಾವಕಾಶ ನೀಡಲು ಎಂದು ಆಂಧ್ರ ಸರ್ಕಾರದ ಪರ ವಕೀಲ ದುಷ್ಯಂತ್ ದಾವೆ ನ್ಯಾಯಾಲಯಕ್ಕೆ ಕೋರಿದರು.